ಮಂಗಳವಾರ, ಡಿಸೆಂಬರ್ 6, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನವ ಭಾರತಕ್ಕಾಗಿ
ನವ ಕರ್ನಾಟಕ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಏಪ್ರಿಲ್ 14, 1891 – ಡಿಸೆಂಬರ್ 6, 1956

ಭಾರತ ರತ್ನ, ಸಂವಿಧಾನ ಶಿಲ್ಪಿ, ಮಹಾಮಾನವತಾವಾದಿ ಹಾಗೂ ಸಮಾನತೆಯ ಹರಿಕಾರರಾದ

ಡಾ|| ಬಿ.ಆರ್. ಅಂಬೇಡ್ಕರ್ ಅವರಿಗೆ ಮಹಾಪರಿನಿರ್ವಾಣ ದಿನದಂದು ಗೌರವ ನಮನಗಳು

ಡಾ|| ಬಿ.ಆರ್. ಅಂಬೇಡ್ಕರ್ ಅವರು ಮಹಿಳೆಯರ ಹಕ್ಕುಗಳು ಹಾಗೂ ಸಮಾನತೆಗಾಗಿ ಮತ್ತು ಶೋಷಿತ ವರ್ಗಗಳ ಹಕ್ಕಿಗಾಗಿ ಹೋರಾಡಿದ ಮಹಾನ್ ಕ್ರಾಂತಿಕಾರಿ. ಅವರು ತೋರಿಸಿದ ಸಮಾನತೆಯ ಹಾದಿಯಲ್ಲಿ ನಡೆಯುವುದು ನಾವು ಅವರಿಗೆ ಸಲ್ಲಿಸುವ ದೊಡ್ಡ ಗೌರವವಾಗುತ್ತದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಕ್ರಮಗಳು

- SCSP/TSP ಯೋಜನೆಗಳಿಗೆ ರೂ.29,165.81 ಕೋಟಿ (SCSP–ರೂ.20,843.03 ಕೋಟಿ; TSP–ರೂ.8322.78 ಕೋಟಿ)
- ಪ್ರಸಕ್ತ ಸಾಲಿನಲ್ಲಿ ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗೆ ನೀಡಿರುವ ಒಟ್ಟು ಅನುದಾನ ರೂ.5,998.25 ಕೋಟಿ
- ಪ.ಜಾತಿ ಮೀಸಲಾತಿ ಪ್ರಮಾಣ ಶೇ.15 ರಿಂದ ಶೇ.17ಕ್ಕೆ ಹಾಗೂ ಪ.ಪಂಗಡಗಳ ಮೀಸಲಾತಿ ಪ್ರಮಾಣ ಶೇ.3 ರಿಂದ ಶೇ.7ಕ್ಕೆ ಏರಿಕೆ
- ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕೆ ಪ್ರತ್ಯೇಕ ಸಚಿವಾಲಯ
- ಪ.ಜಾತಿ/ಪ.ಪಂಗಡದವರಿಗೆ ಭೂ ಒಡೆತನ ಯೋಜನೆಯಡಿ ಘಟಕ ವೆಚ್ಚ 15 ಲಕ್ಷ ರೂ.ಗಳಿಂದ 20 ಲಕ್ಷ ರೂ.ಗಳಿಗೆ ಹೆಚ್ಚಳ
- ರೂ.58.00 ಕೋಟಿ ವೆಚ್ಚದಲ್ಲಿ ವಿಕಾಸಸೌಧದ ಮುಂಭಾಗದಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಭವನ ನಿರ್ಮಾಣಕ್ಕೆ ಶಿಲಾನ್ಯಾಸ
- ಪ.ಜಾತಿ/ಪ.ಪಂಗಡದ ನಿಗಮಗಳಿಗೆ ಸ್ವಯಂ ಉದ್ಯೋಗ, ಗಂಗಾ ಕಲ್ಯಾಣ, ಇತ್ಯಾದಿ ಕಾರ್ಯಕ್ರಮಗಳಿಗೆ ರೂ.1,000.19 ಕೋಟಿ ಅನುದಾನ (ಹೆಚ್ಚುವರಿಯಾಗಿ ರೂ.420 ಕೋಟಿ ಸೇರಿ)
- ಲೋಕೋಪಯೋಗಿ ಇಲಾಖೆಯಿಂದ SCSP/TSP ಅನುದಾನದಲ್ಲಿ ರೂ.750 ಕೋಟಿ ವೆಚ್ಚದಲ್ಲಿ 100 ಡಾ|| ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿನಿಲಯ ಹಾಗೂ 11 KRIES (ವಸತಿ ಶಾಲೆಗಳು) ಕಟ್ಟಡಗಳ ನಿರ್ಮಾಣ
- ಬೆಳಗಾವಿ, ಹುಬ್ಬಳ್ಳಿ–ಧಾರವಾಡ, ಕಲಬುರಗಿ, ಮಂಗಳೂರು ಮತ್ತು ಮೈಸೂರಿನಲ್ಲಿ ತಲಾ 1,000 ವಿದ್ಯಾರ್ಥಿ ಸಾಮರ್ಥ್ಯದ ಬಹುಮಹಡಿ ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯಗಳಿಗೆ ರೂ.250 ಕೋಟಿ
- ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮಾಸಿಕ ಭೋಜನ ವೆಚ್ಚ ರೂ.1,600/– ರಿಂದ ರೂ.1,750/–ಕ್ಕೆ ಹೆಚ್ಚಳ ಮತ್ತು ಅದೇ ರೀತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮಾಸಿಕ ಭೋಜನ ವೆಚ್ಚ ರೂ. 1,500/– ರಿಂದ ರೂ. 1,650/– ಕ್ಕೆ ಹೆಚ್ಚಳ.
- ಎಸ್‌ಸಿ/ಎಸ್‌ಟಿ ನಿರುದ್ಯೋಗಿಗಳಿಗೆ ಇ–ಕಾಮರ್ಸ್ ಯೋಜನೆಯಡಿ ವಿದ್ಯುತ್ ಹಾಗೂ ಇತರೆ ದ್ವಿಚಕ್ರ ವಾಹನಗಳನ್ನು ಖರೀದಿಸಲು ಒಟ್ಟು 22,400 ಫಲಾನುಭವಿಗಳಿಗೆ ರೂ.50,000 ದವರೆಗೆ ಸಹಾಯಧನ ಮತ್ತು ರೂ. 20,000 ಸಾಲ.
- ಸರ್ಕಾರದ ಎಲ್ಲಾ ನಿಗಮಗಳಲ್ಲಿ ಸ್ವಯಂ ಉದ್ಯೋಗಗಳಲ್ಲಿ ಎಸ್‌ಸಿ/ಎಸ್‌ಟಿ ಮಹಿಳೆಯರಿಗೆ ಶೇ.25 ಮೀಸಲಾತಿ
- 300 ಎಸ್‌ಸಿ/ಎಸ್‌ಟಿ ಮಹಿಳೆಯರಿಗೆ ಬೆಂಗಳೂರಿನ ಪ್ರತಿಷ್ಠಿತ ಐಐಎಂನಲ್ಲಿ ಉದ್ಯಮಶೀಲತಾ ತರಬೇತಿ. ಮೂರು ಬ್ಯಾಚ್‌ಗಳ ತರಬೇತಿ ಪ್ರಗತಿಯಲ್ಲಿದೆ.
- ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಪ.ಜಾತಿ/ಪ.ಪಂಗಡದವರಿಗೆ ನೀಡುವ ಮನೆ ನಿರ್ಮಾಣ ಸಹಾಯಧನ ರೂ.1.75 ಲಕ್ಷದಿಂದ ರೂ.2 ಲಕ್ಷಕ್ಕೆ ಹೆಚ್ಚಳ
- ಬಡತನ ರೇಖೆಗಿಂತ ಕೆಳಗಿರುವ ಪ.ಜಾತಿ/ಪ.ಪಂಗಡಗಳಿಗೆ ಮಾಸಿಕ 75 ಯೂನಿಟ್ ಉಚಿತ ವಿದ್ಯುತ್
- ಡಾ|| ಬಿ.ಆರ್. ಅಂಬೇಡ್ಕರ್ ಅವರು ಕರ್ನಾಟಕದಲ್ಲಿ ಭೇಟಿ ನೀಡಿದ 10 ಪ್ರಮುಖ ಸ್ಥಳಗಳ ಅಭಿವೃದ್ಧಿಗೆ ರೂ.20 ಕೋಟಿ
- ಪ್ರಬುದ್ಧ ಯೋಜನೆಯಡಿ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕಾಗಿ ಪ.ಜಾತಿಯ 70 ಹಾಗೂ ಪ.ಪಂಗಡದ 23 ವಿದ್ಯಾರ್ಥಿಗಳ ನಿಯೋಜನೆ
- ಪ.ಜಾತಿ, ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ, ಅತೀ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿಗೆ ರೂ.50 ಕೋಟಿ ಅನುದಾನ
- ಪ.ಜಾತಿ/ಪ.ಪಂಗಡದ ಉದ್ಯಮಿಗಳಿಗೆ ಶೇ.4 ಬಡ್ಡಿ ಸಹಾಯಧನ ಯೋಜನೆಗೆ ರೂ.68.87 ಕೋಟಿ ಅನುದಾನ
- ಪ.ಜಾತಿ/ಪ.ಪಂಗಡದವರಿಗೆ ಉದ್ಯಮ ಸ್ಥಾಪಿಸಲು ಕೈಗಾರಿಕಾ ನಿವೇಶನ/ಶೆಡ್‌ಗಳ ನಿರ್ಮಾಣಕ್ಕಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ರೂ.200 ಕೋಟಿ ಅನುದಾನ
- ಪ.ಜಾತಿ/ಪ.ಪಂಗಡಗಳ ಸಮುದಾಯ ಭವನಗಳು, ಕಾಲೋನಿ ಅಭಿವೃದ್ಧಿ ಮತ್ತು ಸಂಘ ಸಂಸ್ಥೆಗಳಿಗೆ ಧನಸಹಾಯಕ್ಕಾಗಿ ರೂ.177 ಕೋಟಿ ಅನುದಾನ.
- ಪೌರಕಾರ್ಮಿಕರಿಗೆ ಸಾಮಾಜಿಕವಾಗಿ ಗೌರವ, ಸೌಲಭ್ಯ ಹಾಗೂ ಸುರಕ್ಷತೆ ನೀಡುವ ಉದ್ದೇಶದಿಂದ ಸರ್ಕಾರವು ಪೌರಕಾರ್ಮಿಕರ ಸಮಸ್ಯೆಗಳಿಗೆ ಮಾನವೀಯತೆಯಿಂದ ಸ್ಪಂದಿಸಿ ಮಾಸಿಕ ರೂ. 2,000 ಸಂಕಷ್ಟ ಭತ್ಯೆ ನೀಡುತ್ತಿದೆ.
- 11,136 ಪೌರಕಾರ್ಮಿಕರ ಉದ್ಯೋಗ ಖಾಯಂಗೊಳಿಸಿ ಆದೇಶ ಹೊರಡಿಸಿದೆ.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಏರೋ ಇಂಡಿಯಾ: ಸಿದ್ಧತೆಗಳ ಪರಿಶೀಲನೆ

ಬೆಂಗಳೂರು: ರಕ್ಷಣಾ ಸಚಿವಾಲಯದ ರಕ್ಷಣಾ ಉತ್ಪಾದನಾ ಇಲಾಖೆಯು ಆಯೋಜಿಸುವ ಏರೋ ಇಂಡಿಯಾದ 14ನೇ ಆವೃತ್ತಿಗೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿಗಳು ಸೋಮವಾರ ಸಿದ್ಧತೆಗಳನ್ನು ಪರಿಶೀಲಿಸಿದರು.

ನಗರದ ಯಲಹಂಕದ ವಾಯುಪಡೆ ನಿಲ್ದಾಣದಲ್ಲಿ ಫೆ. 13ರಿಂದ 17ರವರೆಗೆ ನಡೆಸಲಿದೆ. 1996ರಿಂದ ಬೆಂಗಳೂರಿನಲ್ಲೇ ಆಯೋಜಿಸಲಾದ 13 ಯಶಸ್ವಿ ಆವೃತ್ತಿಗಳೊಂದಿಗೆ 'ಪ್ರಧಾನ ಏರೋಸ್ಪೇಸ್ ಪ್ರದರ್ಶನ' ಎಂದು ಏರೋ ಇಂಡಿಯಾ ಜಾಗತಿಕವಾಗಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ.

ಜಂಟಿ ಕಾರ್ಯದರ್ಶಿ ಅನುರಾಗ್ ಬಾಜಪೇಯ್ ಮತ್ತು ರಕ್ಷಣಾ ಪ್ರದರ್ಶನ ಸಂಸ್ಥೆಯ ಸಿಇಒ ಸಿ.ಡಿ. ಅಚಲ್ ಮಲ್ಹೋತ್ರಾ, ಎಚ್‌ಎಎಲ್ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಸಿ.ಬಿ. ಅನಂತಕೃಷ್ಣನ್ ಒಳಗೊಂಡ ರಕ್ಷಣಾ ಸಚಿವಾಲಯದ ತಂಡವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಅವರನ್ನು ಭೇಟಿ ಮಾಡಿದರು.

ನಂತರ ಈ ತಂಡವು ಯಲಹಂಕದಲ್ಲಿ ವಾಯು ಪಡೆ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲಿಸಿತು.

ಏರೋ ಇಂಡಿಯಾದ 14ನೇ ಆವೃತ್ತಿಗೆ ಬೆಂಗಳೂರನ್ನು ಮತ್ತೊಮ್ಮೆ ಸ್ಥಳವಾಗಿ ಆಯ್ಕೆ ಮಾಡಿದ್ದಕ್ಕಾಗಿ ಪ್ರಧಾನಿ, ರಕ್ಷಣಾ ಸಚಿವ ಮತ್ತು ರಕ್ಷಣಾ ಸಚಿವಾಲಯಕ್ಕೆ ಮುಖ್ಯಮಂತ್ರಿ ಅವರು ಧನ್ಯವಾದ ಸಲ್ಲಿಸಿದರು. ಈ ಆವೃತ್ತಿಯನ್ನು ಪ್ರಾರಂಭದಿಂದಲೂ ಅತಿ ದೊಡ್ಡದಾಗಿಸಲು ಆತಿಥೇಯ ರಾಜ್ಯದ ಸಂಪೂರ್ಣ ಬೆಂಬಲದ ಭರವಸೆಯನ್ನು ಮುಖ್ಯಮಂತ್ರಿ ನೀಡಿದರು.

'ಪ್ರಜಾವಾಣಿ' ಫೋನ್–ಇನ್‌ನಲ್ಲಿ ಬಂದಿದ್ದ ದೂರು ಪರಿಹರಿಸಿದ ಕೆಎಸ್‌ಆರ್‌ಟಿಸಿ

ಶೌಚಕ್ಕೂ ಸುಲಿಗೆ: ₹26 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಶೌಚಾಲಯದಲ್ಲಿ ಹೆಚ್ಚಿನ ಹಣ ಪಡೆಯುತ್ತಿದ್ದ ಏಜೆನ್ಸಿಗೆ ₹26 ಸಾವಿರ ದಂಡ, ರಸ್ತೆ ದುರಸ್ತಿಗೆ ರಾಯಚೂರು ಜಿಲ್ಲಾಧಿಕಾರಿಗೆ ಪತ್ರ, ಬೇಡಿಕೆಗೆ ತಕ್ಕಂತೆ ಹೆಚ್ಚುವರಿ ಬಸ್ ಸೇವೆ...

ಅನ್ಬುಕುಮಾರ್

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಅವರೊಂದಿಗೆ 'ಪ್ರಜಾವಾಣಿ' ನ.14ರಂದು ನಡೆಸಿದ ಫೋನ್–ಇನ್ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಬಂದ ದೂರುಗಳನ್ನು ಆಧರಿಸಿ ನಿಗಮ ಕೈಗೊಂಡಿರುವ ಕ್ರಮಗಳಿವು.

ಕೆಂಪೇಗೌಡ ಬಸ್ ನಿಲ್ದಾಣದ ಮಹಿಳಾ ಶೌಚಾಲಯದಲ್ಲಿ ಹೆಚ್ಚಿನ ಹಣ ಪಡೆಯಲಾಗುತ್ತಿದೆ ಎಂಬ ದೂರು ಆಧರಿಸಿ ಪರಿಶೀಲನೆ ನಡೆಸಿ ಶೌಚಾಲಯ ನಿರ್ವಹಣೆ ಗುತ್ತಿಗೆ ಪಡೆದಿದ್ದ ಪರಮೇಶ ಎಂಟರ್‌ಪ್ರೈಸಸ್‌ಗೆ ₹26,432 ದಂಡ ವಿಧಿಸಲಾಗಿದೆ. ಕರಾರು ಉಲ್ಲಂಘಿಸಿರುವ ಏಜೆನ್ಸಿಗೆ ನೋಟಿಸ್ ಸಹ ನೀಡಲಾಗಿದೆ ಎಂದು ವಿ. ಅನ್ಬುಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕೆಂಪೇಗೌಡ ನಿಲ್ದಾಣದಲ್ಲಿ ಮಂಗಳೂರು ಕಡೆಗೆ ಬಸ್‌ಗಳು ಹೊರಡುವ ಪ್ಲಾಟ್‌ಫಾರ್ಮ್‌ಗೆ ಸಂಚಾರ ನಿಯಂತ್ರಕರನ್ನು ನಿಯೋಜಿಸಲಾಗಿದೆ. ಈ ನಿಲ್ದಾಣದಲ್ಲಿ ವೇಶ್ಯಾವಾಟಿಕೆ ಹೆಚ್ಚುತ್ತಿರುವ ಬಗ್ಗೆ ಬಂದ ದೂರನ್ನು ಗಂಭೀರವಾಗಿ ಪರಿಗಣಿಸಿ ಸಂಚಾರ ಮೇಲ್ವಿಚಾರಕರನ್ನು ನಿಯೋಜಿಸಿ ಗಸ್ತು ಹೆಚ್ಚಿಸಲಾಗಿದೆ. ವೇಶ್ಯಾವಾಟಿಕೆ ನಿಯಂತ್ರಿಸಲು ಪೊಲೀಸ್ ವಿಭಾಗದ ಡಿಸಿಪಿ ಅವರಿಗೆ ಪತ್ರ ಬರೆಯಲಾಗಿದೆ ಎಂದು ವಿವರಿಸಿದ್ದಾರೆ.

ಚನ್ನಪಟ್ಟಣದಿಂದ ಸಾತನೂರು–ದೊಡ್ಡ ಆಲದಹಳ್ಳಿ–ಕೋಡಿಹಳ್ಳಿ ಮಾರ್ಗದಲ್ಲಿ ಹೆಚ್ಚುವರಿ ಬಸ್ ಸೇವೆ, ಕನಕಪುರ–ಕೋಟೆವೂರು ಮಾರ್ಗದ ಬಸ್ ಕಾರ್ಯಾಚರಣೆ ವೇಳೆ ಪರಿಷ್ಕರಣೆ, ಆನೇಕಲ್–ಭಾಗಮಂಡಲ–ತಲಕಾವೇರಿ ಮಾರ್ಗದ ಸಾರಿಗೆಯಲ್ಲಿ ಪಾಸ್ ಹೊಂದಿದ ಪ್ರಯಾಣಿಕರನ್ನು ಕರೆದೊಯ್ಯಲು ಕ್ರಮ, ಹರಿಹರ–ಹಲವಾಗಲು ಮಾರ್ಗದಲ್ಲಿ ವಿದ್ಯಾರ್ಥಿಗಳ ಬೇಡಿಕೆಯಂತೆ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲಾಗಿದೆ. ಕನಕಪುರ–ಕಲಾಸಿಪಾಳ್ಯ ಮಾರ್ಗಕ್ಕೆ ಕನಕಪುರ ಘಟಕದಿಂದ ಮಾತ್ರವಲ್ಲದೇ ಬೇರೆ ಘಟಕದಿಂದಲೂ 38 ಸುತ್ತುವಳಿಯಲ್ಲಿ ಬೆಂಗಳೂರು ಕಡೆಗೆ ಬಸ್‌ಗಳ ಸಂಚಾರ ಹೆಚ್ಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ದಾವಣಗೆರೆ–ಜಗಳೂರು ಮಾರ್ಗದಲ್ಲಿ ಸಂಜೆ 6 ಗಂಟೆ ನಂತರ ಬಸ್ ಇರುವುದಿಲ್ಲ ಹಾಗೂ ಅಧಿಕಾರಿಗಳು ಫೋನ್ ಕರೆ ಸ್ವೀಕರಿಸುವುದಿಲ್ಲ ಎಂಬ ದೂರು ಬಂದಿತ್ತು. ಸಂಜೆ 6.30 ಮತ್ತು 7 ಗಂಟೆಗೆ ಎರಡು ಟ್ರಿಪ್ ಬಸ್ ಕಾರ್ಯಾಚರಣೆಗೆ ವ್ಯವಸ್ಥೆ ಮಾಡಲಾಗಿದೆ. ದೂರವಾಣಿ ಕರೆ ಸ್ವೀಕರಿಸಲು ಸೂಚಿಸಲಾಗಿದೆ ಎಂದು ಹೇಳಿದ್ದಾರೆ.

ಬೆಂಗಳೂರು–ಶೃಂಗೇರಿ ಮಾರ್ಗದಲ್ಲಿ ಸಂಜೆ 7ಕ್ಕೆ ಕಾರ್ಯಾಚರಣೆ ಮಾಡುತ್ತಿದ್ದ ಬಸ್ ಸ್ಥಗಿತವಾಗಿತ್ತು. ಫೋನ್‌ಇನ್ ಕಾರ್ಯಕ್ರಮದಲ್ಲಿ ಕೋರಿಕೆ ಬಂದಿದ್ದರಿಂದ ನ.18ರಿಂದಲೇ ಕಾರ್ಯಾಚರಣೆ ಪುನರ್ ಆರಂಭಿಸಲಾಗಿದೆ. ಕಾಳೇನ–ಚಾಮರಾಜನಗರ ಮಾರ್ಗದಲ್ಲಿ ಸ್ಥಗಿತಗೊಳಿಸಿದ್ದ ಬಸ್ ಸೇವೆಯನ್ನು ಬೆಳಿಗ್ಗೆ 8 ಮತ್ತು ಮಧ್ಯಾಹ್ನ 2.30ಕ್ಕೆ ಮತ್ತೆ ಆರಂಭಿಸಲಾಗಿದೆ. ಒಟ್ಟಾರೆ ಎಲ್ಲಾ 29 ಮನವಿಗಳಿಗೆ ಸ್ಪಂದಿಸಿ ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಎಂದು ವಿವರಿಸಿದ್ದಾರೆ.

ಸಿ.ಎಂ ಗಾಗಿ ಕಾಯುತ್ತಿದೆ 'ರ್‍ಯಾಪಿಡ್ ರಸ್ತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಮಹತ್ವಾಕಾಂಕ್ಷೆಯ 'ರ್‍ಯಾಪಿಡ್ ರಸ್ತೆ' ಬಹುತೇಕ ಸಿದ್ಧಗೊಂಡಿದ್ದು, ಸಾರ್ವಜನಿಕರ ಬಳಕೆಗೆ ಮುಕ್ತವಾಗಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ನಿರೀಕ್ಷೆಯಲ್ಲಿದೆ.

ಹಳೆ ಮದ್ರಾಸ್ ರಸ್ತೆಯ ಹೊಸ ಬಿನ್ನಮಂಗಲ ವೃತ್ತದಲ್ಲಿ 500 ಮೀಟರ್ ರಸ್ತೆಯನ್ನು 'ಪ್ರೀಕಾಸ್ಟ್ ಪೋಸ್ಟ್ ಟೆನ್ಷನಿಂಗ್ ಕಾಂಕ್ರೀಟ್ ಪೇವ್‌ಮೆಂಟ್' ತಂತ್ರಜ್ಞಾನದಿಂದ 'ರ್‍ಯಾಪಿಡ್ ರಸ್ತೆ'ಯನ್ನು ಪ್ರಾಯೋಗಿಕವಾಗಿ ನಿರ್ಮಿಸಲಾಗಿದೆ. ಪ್ಯಾನಲ್ ಅಳವಡಿಕೆ ಕಾರ್ಯ ಐದು ದಿನದಲ್ಲಿ ಪೂರ್ಣಗೊಂಡಿದ್ದರೂ, ಕೇಬಲ್ ಸೌಲಭ್ಯ, ಫುಟ್‌ಪಾತ್ ನಿರ್ಮಾಣಕ್ಕೆ ಸಾಕಷ್ಟು ಸಮಯ ತೆಗೆದುಕೊಂಡಿದೆ.

ಡಿ.5ರ ಸೋಮವಾರ ಸಂಜೆಯೂ ರ್‍ಯಾಪ್ ಸೇರಿ ಕೆಲವು ಭಾಗಗಳಲ್ಲಿ ಕಾಂಕ್ರಿಟ್ ಹಾಕುವ ಕೆಲಸ ನಡೆಯುತ್ತಿತ್ತು. ಆದರೆ, ಕಾಂಕ್ರೀಟ್ ಲಾರಿಗಳನ್ನೂ ಒಳಗೊಂಡಂತೆ ಪ್ರಾಯೋಗಿಕವಾಗಿ ಭಾರಿ ವಾಹನಗಳು ಸಿದ್ಧವಾಗಿರುವ 'ರ್‍ಯಾಪಿಡ್ ರಸ್ತೆ'ಯಲ್ಲಿ ಸಂಚರಿಸಿವೆ. ದೇಶದಲ್ಲಿ ಪ್ರಥಮವಾಗಿರುವ ಈ ರಸ್ತೆಯನ್ನು ಮುಖ್ಯಮಂತ್ರಿಯವರಿಂದ ಸಂಚಾರಕ್ಕೆ ಮುಕ್ತಗೊಳಿಸಬೇಕು ಎಂದು ಬಿಬಿಎಂಪಿ ಎಂಜಿನಿಯರ್‌ಗಳು ಕಾಯುತ್ತಿದ್ದಾರೆ.

ಹಳೆ ಮದ್ರಾಸ್ ರಸ್ತೆಯ ಹೊಸ ಬಿನ್ನಿಮಂಗಲ ವೃತ್ತದಲ್ಲಿ ಸಿದ್ಧಗೊಂಡಿರುವ 'ರ್‍ಯಾಪಿಡ್ ರಸ್ತೆ'

'ನಿರೀಕ್ಷೆಯಂತೆ ಕ್ಷಿಪ್ರವಾಗಿಯೇ 'ರ್‍ಯಾಪಿಡ್ ರಸ್ತೆ'ಯನ್ನು ಮುಗಿಸಿದ್ದೇವೆ. ಕಾಂಕ್ರಿಟ್ ಹಾಕುವ ಭಾಗದಲ್ಲಿ ಪ್ಯಾನೆಲ್ ಅಳವಡಿಸುವ ಕಾರ್ಯ ಐದು ದಿನಗಳಲ್ಲಿ ಮುಗಿದಿದೆ. ಬೆಸ್ಕಾಂ ಸೇರಿ ಹಲವು ಕೇಬಲ್‌ಗಳನ್ನು ಅಳವಡಿಸಲು ನಿಧಾನವಾಗಿದೆ. ಫುಟ್‌ಪಾತ್ ನಿರ್ಮಾಣಕ್ಕೂ ಸಮಯ ತೆಗೆದುಕೊಂಡಿದೆ. ಮುಖ್ಯಮಂತ್ರಿಯವರು ಒಂದೆರಡು ದಿನದಲ್ಲಿ ರಸ್ತೆಗೆ ಚಾಲನೆ ನೀಡಲಿದ್ದಾರೆ' ಎಂದು ಬಿಬಿಎಂಪಿಯ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ತಿಳಿಸಿದರು.

ವೈಟ್ ಟಾಪಿಂಗ್ ರಸ್ತೆಗಿಂತ 'ರ್‍ಯಾಪಿಡ್ ರಸ್ತೆ'ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದರಿಂದ ಹಳೆ ಮದ್ರಾಸ್ ರಸ್ತೆಯನ್ನು ಪೂರ್ಣವಾಗಿ ಇದೇ ರೀತಿ ಅಭಿವೃದ್ಧಿಪಡಿಸುವ ಯೋಜನೆ ಇದೆ. ಅಲ್ಲದೆ, ನಗರದ ಇತರೆ ಭಾಗದಲ್ಲೂ 'ರ್‍ಯಾಪಿಡ್ ರಸ್ತೆ' ನಿರ್ಮಾಣವಾಗುವ ಸಾಧ್ಯತೆ ಇದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆದೇಶ ಕ್ಕಾಗಿ ಎಲ್ಲರೂ ಕಾಯುತ್ತಿದ್ದಾರೆ ಎನ್ನಲಾಗಿದೆ.

ದಲಿತರ ಸಾಂಸ್ಕೃತಿಕ ಪ್ರತಿರೋಧ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ದಲಿತರ ಸಾಂಸ್ಕೃತಿಕ ಪ್ರತಿರೋಧದ' ಹೆಸರಿನಲ್ಲಿ ದಲಿತ ಸಂಘಟನೆಗಳ ಐಕ್ಯತಾ ಸಮಾವೇಶ ನಗರದ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮಂಗಳವಾರ ನಡೆಯಲಿದೆ.

ರಮಾಬಾಯಿ

ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ ಅವರು ಬೆಳಿಗ್ಗೆ 10ಕ್ಕೆ ಚಾಲನೆ ನೀಡುವರು. ಮಧ್ಯಾಹ್ನ 12.30ಕ್ಕೆ ಆರಂಭವಾಗುವ ಸಮಾವೇಶವನ್ನು ಅಂಬೇಡ್ಕರ್ ಅವರ ಮೊಮ್ಮಗಳು ರಮಾಬಾಯಿ ಆನಂದ್ ತೇಲ್ತುಂಬ್ಡೆ ಉದ್ಘಾಟಿಸುವರು. ದಲಿತ ಹೋರಾಟಗಾರ ಎನ್. ವೆಂಕಟೇಶ್ ಅಧ್ಯಕ್ಷತೆ ವಹಿಸುವರು. ಇಂದೂಧರ ಹೊನ್ನಾಪುರ ಪ್ರಸ್ತಾವಿಕವಾಗಿ ಮಾತನಾಡುವರು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ವಕೀಲ ರವಿವರ್ಮಕುಮಾರ್ ಪ್ರಧಾನ ಭಾಷಣ ಮಾಡುವರು.

ದಲಿತ ಹೋರಾಟಗಾರರಾದ ಎಸ್.ಮರಿಸ್ವಾಮಿ, ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ವಿ.ನಾಗರಾಜ್, ಡಿ.ಜಿ.ಸಾಗರ್, ಲಕ್ಷ್ಮಿನಾರಾಯಣ ನಾಗವಾರ, ಅಣ್ಣಯ್ಯ, ಅರ್ಜುನ್ ಭದ್ರೆ, ಎನ್.ಮುನಿಸ್ವಾಮಿ, ಎಂ.ಸೋಮಶೇಖರ್, ಜಿಗಣಿ ಶಂಕರ್, ಎಸ್.ಆರ್.ಕೊಲ್ಲೂರು, ಕೆ.ದೊರೈ ರಾಜ್, ಕೆ.ಗಂಗಮ್ಮ ತುಮಕೂರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ತಿಳಿಸಿದೆ.

'ಕಡ್ಡಾಯ ಸರ್ಕಾರಿ ಸೇವೆ'ಯಡಿ 'ನಮ್ಮ ಕ್ಲಿನಿಕ್'ಗೆ ವೈದ್ಯರು: ಬಿಬಿಎಂಪಿ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 'ನಮ್ಮ ಕ್ಲಿನಿಕ್' ಆರಂಭಕ್ಕೆ ಸರ್ಕಾರದ ಆದೇಶವನ್ನು ನಿರೀಕ್ಷಿಸಲಾಗುತ್ತಿದೆ. ವೈದ್ಯರ ಕೊರತೆ ನೀಗಿಸಲು 'ಕಡ್ಡಾಯ ಸರ್ಕಾರಿ ಸೇವೆ'ಯಡಿ ವೈದ್ಯರನ್ನು ಸರ್ಕಾರ ನೇಮಿಸಲು ಆದೇಶಿಸಲಿ ಎಂದು ಬಿಬಿಎಂಪಿ ಬಯಸಿದೆ.

'ಸ್ನಾತಕೋತ್ತರ ಪದವಿಗೆ ನೀಟ್ ಪರೀಕ್ಷೆಗೆ ಸಿದ್ಧರಾಗುವ ಹಿನ್ನೆಲೆಯಲ್ಲಿ ಎಂಬಿಬಿಎಸ್ ಮುಗಿಸಿದ ವೈದ್ಯರು ಕೆಲಸಕ್ಕೆ ಬರುತ್ತಿಲ್ಲ. 'ಕಡ್ಡಾಯ ಸರ್ಕಾರಿ ಸೇವೆ'ಯಲ್ಲಿ ನಿಯೋಜಿಸಿದರೆ ನಮ್ಮ ಕ್ಲಿನಿಕ್‌ಗೆ ವೈದ್ಯರ ಕೊರತೆ ಉಂಟಾಗುವುದಿಲ್ಲ. ಪ್ರತಿ ವರ್ಷವೂ ಇದೇ ರೀತಿ ಮುಂದುವರಿಸಬಹುದು. ಅಲ್ಲದೆ, ಸ್ನಾತಕೋತ್ತರ ಪದವಿಯಲ್ಲೂ ಪ್ರಾಯೋಗಿಕ ತರಬೇತಿ ಕಡ್ಡಾಯವಾಗಿರುವುದರಿಂದ ಅವರನ್ನೂ 'ನಮ್ಮ ಕ್ಲಿನಿಕ್'ಗೆ ನಿಯೋಜಿಸಬೇಕು ಎಂದು ಕೋರಲಾಗಿದೆ. ಸರ್ಕಾರ ಈ ಬಗ್ಗೆ ಆದೇಶ ಹೊರಡಿಸಬೇಕಿದೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ ಚಂದ್ರ ತಿಳಿಸಿದರು.

ಪ್ರತಿ ವಾರ್ಡ್‌ಗೆ ಒಂದರಂತೆ 243 'ನಮ್ಮ ಕ್ಲಿನಿಕ್' ಆರಂಭಿಸಲು ಯೋಜಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸುಮಾರು 100 ಕ್ಲಿನಿಕ್‌ಗಳ ಕಟ್ಟಡ, ಮೂಲಸೌಕರ್ಯಗಳು ಸಿದ್ಧವಾಗಿವೆ. ಉಳಿದ ಕ್ಲಿನಿಕ್‌ಗಳ ಸೌಲಭ್ಯಗಳು ಅಂತಿಮ ಹಂತದಲ್ಲಿವೆ. ಆದರೆ, ವೈದ್ಯರು ಮಾತ್ರ ಬರುತ್ತಿಲ್ಲ.

ಬಿಬಿಎಂಪಿ ಕೆಲವು ತಿಂಗಳಿಂದ ನೇರ ನೇಮಕಾತಿ ಪ್ರಕ್ರಿಯೆ ನಡೆಸುತ್ತಿದೆ. ನರ್ಸ್ ಹಾಗೂ ಲ್ಯಾಬ್ ಟೆಕ್ನಿಷಿಯನ್‌ಗಳು ನೇಮಕವಾಗಿದ್ದಾರೆ. ಆದರೆ, ವೈದ್ಯರು ನೇಮಕಾತಿ ಆದೇಶ ಪಡೆದರೂ ಕರ್ತವ್ಯಕ್ಕೆ ಹಾಜರಾಗುತ್ತಿಲ್ಲ. ಸುಮಾರು 80 ವೈದ್ಯರಷ್ಟೇ ಕ್ಲಿನಿಕ್‌ಗೆ ಹಾಜರಾಗುವ ಭರವಸೆ ನೀಡಿದ್ದಾರೆ. ನ.28ರಂದೂ ನೇರ ನೇಮಕಾತಿಗಾಗಿ ಬಿಬಿಎಂಪಿ ಮತ್ತೆ ಪ್ರಕಟಣೆ ಹೊರಡಿಸಿತ್ತು. 10 ವೈದ್ಯರು ಮಾತ್ರ ಸಂದರ್ಶನಕ್ಕೆ ಹಾಜರಾಗಿದ್ದರು. ಹೀಗಾಗಿ, ಬಿಬಿಎಂಪಿ ಸರ್ಕಾರದ ಮುಂದೆ ಹೊಸ ಪ್ರಸ್ತಾವ ಇರಿಸಿದೆ. ಒಂದು ವರ್ಷ 'ಕಡ್ಡಾಯ ಸರ್ಕಾರಿ ಸೇವೆ' ಮಾಡಬೇಕಾದ ವೈದ್ಯರನ್ನು ಬಿಬಿಎಂಪಿಯ 'ನಮ್ಮ ಕ್ಲಿನಿಕ್'ಗಳಿಗೆ ನೇಮಕ ಮಾಡುವಂತೆ ಮನವಿ ಮಾಡಲಾ ಗಿದೆ. ಬೆಂಗಳೂರಿನಲ್ಲೇ ಹಲವು ವೈದ್ಯರು ಕೆಲಸ ಮಾಡಲು ಇಚ್ಛಿಸುತ್ತಾರೆ. ಹೀಗಾಗಿ, ಈ 'ಕಡ್ಡಾಯ ಸೇವೆ' 'ನಮ್ಮ ಕ್ಲಿನಿಕ್'ಗಳಲ್ಲೇ ಆಗಲಿ ಎನ್ನುವುದು ಬಿಬಿಎಂಪಿಯ ಕೋರಿಕೆಯಲ್ಲಿದೆ.

'ಮುಸ್ಲಿಮರನ್ನು ಸಿ.ಎಂ ಮಾಡ್ತೀರಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಮುಂದಿನ ಚುನಾವಣೆಯಲ್ಲಿ 113 ಸ್ಥಾನಗಳನ್ನು ಗೆದ್ದು ಖಂಡಿತಾ ಅಧಿಕಾರಕ್ಕೆ ಬರುವುದಿಲ್ಲ. 25 ರಿಂದ 30 ಸ್ಥಾನಗಳನ್ನು ಗೆದ್ದರೆ ಹೆಚ್ಚು. ಒಂದು ವೇಳೆ ಸಮ್ಮಿಶ್ರ ಸರ್ಕಾರ ರಚನೆಯಾದರೆ ಎಚ್.ಡಿ. ಕುಮಾರಸ್ವಾಮಿ ಅವರು ಮುಸ್ಲಿಮರನ್ನು ಮುಖ್ಯಮಂತ್ರಿ ಮಾಡಲು ಸಿದ್ಧರಿದ್ದಾರೆಯೇ ಎಂದು ಕಾಂಗ್ರೆಸ್ ಶಾಸಕ ಜಮೀರ್ ಅಹಮದ್ ಖಾನ್ ಪ್ರಶ್ನಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಸ್ವತಂತ್ರವಾಗಿ ಗೆದ್ದು ಅಧಿಕಾರ ಹಿಡಿಯಲು ಸಾಧ್ಯವಿಲ್ಲದ ಕಾರಣ ಕುಮಾರಸ್ವಾಮಿ ಈ ರೀತಿಯ ಮಾತುಗಳನ್ನು ಆಡಿದ್ದಾರೆ. ಒಂದು ವೇಳೆ ಮುಂದಿನ ಚುನಾವಣೆ ಬಳಿಕ ಸಮ್ಮಿಶ್ರ ಸರ್ಕಾರ ರಚನೆಯ ಸಂದರ್ಭ ಬಂದರೆ ಮುಸ್ಲಿಮರನ್ನೇ ಮುಖ್ಯಮಂತ್ರಿ ಮಾಡುತ್ತೇನೆ ಎಂದು ಹೇಳಲಿ ನೋಡೋಣ ಎಂದರು.

'2018 ರಲ್ಲಿ ನನ್ನನ್ನು ಸೋಲಿಸಲು ಎಲ್ಲಾ ಶಕ್ತಿಗಳು ಒಂದಾಗಿದ್ದವು. ಆಗ ಏನಾಯಿತು? ಮಾಜಿ ಪ್ರಧಾನಿ ದೇವೇಗೌಡರೇ ನನ್ನನ್ನು ಸೋಲಿಸುವುದಾಗಿ ಹೇಳಿದ್ದರು. ಆದರೆ ಅವರ ಸವಾಲು ಏನಾಯಿತು? ನನ್ನನ್ನು ಸೋಲಿಸಲು ದೇವೇಗೌಡರೇ ಮುಸ್ಲಿಂ ಆಗಲು ಹೊರಟಿದ್ದರು. ಕರ್ನಾಟಕದ ಮುಸ್ಲಿಮರು ಆಗಲ್ಲ ಎಂದರೆ ಜಮ್ಮು ಕಾಶ್ಮೀರದಿಂದ ಫಾರೂಕ್ ಅಬ್ದುಲ್ಲಾ ಅವರನ್ನು ತಂದು ನಿಲ್ಲಿಸಿ ಎಂದಿದ್ದೆ. ಆದೂ ಆಗಲ್ಲ ಎಂದರೆ ಕುಮಾರಸ್ವಾಮಿ, ರೇವಣ್ಣನ ತಂದು ನಿಲ್ಲಿಸಿ ಎಂದೆ. ಒಂದು ವೇಳೆ ನಾನು ಸೋತರೆ ನನ್ನ ತಲೆ ಕತ್ತರಿಸಿ ತಂದು ಕೊಡ್ತೀನಿ ಎಂದು ಹೇಳಿದೆ. ಆದರೆ, ನನ್ನನ್ನು ಸೋಲಿಸಲು ಆಗಲಿಲ್ಲ. ನನ್ನ ಲೀಡ್ ಜಾಸ್ತಿ ಆಯಿತು' ಎಂದರು.

ನಗರದಲ್ಲಿ ಇಂದು

ಸಂವಿಧಾನ ರಕ್ಷಿಸಿ, ಪ್ರಜಾಪ್ರಭುತ್ವ ಉಳಿಸಿ: ಉದ್ಘಾಟನೆ: ಬಿ.ಟಿ. ಶಿವಕುಮಾರ್, ಅತಿಥಿಗಳು: ಸೋರಹುಣಸೆ ವೆಂಕಟೇಶ್, ಕೋದಂಡರಾಮ್, ಎಂ. ಗೋವಿಂದ್ ರಾಜ್, ಬಿ. ಗೋಪಾಲ್, ಬಿ.ಟಿ. ಲಲಿತಾ ನಾಯಕ್, ಶ್ರೀಧರ ಕಲಿವೀರ್, ಆಯೋಜನೆ: ದಲಿತ ಸಂಘಟನೆಗಳ ಸ್ವಾಭಿಮಾನಿ ಒಕ್ಕೂಟ, ಸ್ಥಳ: ದಿ ಅಲುಮ್ನಿ ಸಭಾಂಗಣ, ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು, ಕೆ.ಆರ್. ಸರ್ಕಲ್, ಬೆಳಿಗ್ಗೆ 10.30

ಬಾಲೋತ್ಸವ ಕಾಲೇಜು ರಂಗವಲ್ಲಿ–2022: ಉದ್ಘಾಟನೆ: ಲವಕುಮಾರ್ ಟಿ.ಎಚ್., ಅಧ್ಯಕ್ಷತೆ: ಚನ್ನಕೇಶವ ಮೂರ್ತಿ ಎಂ., ಅತಿಥಿಗಳು: ತಮ್ಮಯ್ಯ ಆರ್.ಬಿ., ಬಿ. ನೀಲಮ್ಮ, ಹಿದಾಯತ್ ಅಹಮದ್, ಅಶ್ವತ್ಥನಾರಾಯಣ ಕೆ.ಪಿ., ಆಯೋಜನೆ: ಅಭಿನಯ ರಂಗ ಕೇಂದ್ರ ಕರ್ನಾಟಕ, ಸ್ಥಳ: ನಯನ ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಕಾಲ್ನಡಿಗೆ ಜಾಥಾ, ನೇತೃತ್ವ: ಎಚ್. ಮಾರಪ್ಪ, ಆಯೋಜನೆ: ದಲಿತ ಸಂಘರ್ಷ ಸಮಿತಿ, ಸ್ಥಳ: ಬನ್ನಪ್ಪ ಪಾರ್ಕ್, ಹಡ್ಸನ್ ವೃತ್ತ, ಬೆಳಿಗ್ಗೆ 11

2021ರ ಏಕಲವ್ಯ ಜೀವಮಾನ ಸಾಧನೆ

ಭಕ್ತಿ ಸಂಗೀತ–ದಾಸವಾಣಿ: ಗಾಯನ: ದಿವ್ಯಾ ಗಿರಿಧರ್, ಕೀ–ಬೋರ್ಡ್: ದುಷ್ಯಂತ್, ತಬಲಾ: ಮಧುಸೂದನ್ ಕೊಪ್ಪ, ಆಯೋಜನೆ ಮತ್ತು ಸ್ಥಳ: ಕಾಶಿ ವಿಶ್ವೇಶ್ವರಸ್ವಾಮಿ ದೇವಸ್ಥಾನದ ಆವರಣ, 11ನೇ ಮುಖ್ಯರಸ್ತೆ, ಕೆಂಪಾಪುರ ಅಗ್ರಹಾರ, ಸಂಜೆ 6

ದಿವ್ಯಾ ಗಿರಿಧರ್

ಕರ್ನಾಟಕ ಕ್ರೀಡಾ ರತ್ನ, 2022–23ರ ಕ್ರೀಡಾ ಪೋಷಕ ಪ್ರಶಸ್ತಿ, 36ನೇ ರಾಷ್ಟ್ರೀಯ ಕ್ರೀಡಾಕೂಟದ ಕ್ರೀಡಾ ಪಟುಗಳಿಗೆ ನಗದು ಪುರಸ್ಕಾರ ಪ್ರಧಾನ ಸಮಾರಂಭ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಸ್ಥಳ: ಗಾಜಿನ ಮನೆ, ರಾಜಭವನ, ಬೆಳಿಗ್ಗೆ 11.15

ಸಮಾಜ ಋಣ ಸಂದಾಯ ಜಾಗೃತಿ ಸಮಾವೇಶ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಕೋಟ ಶ್ರೀನಿವಾಸ ಪೂಜಾರಿ, ಎಂ.ಪಿ. ಕುಮಾರಸ್ವಾಮಿ, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಆಯೋಜನೆ: ದಲಿತ ಸಂಘಟನೆಗಳ ಒಕ್ಕೂಟ, ಬೆಳಿಗ್ಗೆ 10.30ಕ್ಕೆ ವಿಧಾನಸೌಧ ಮುಂಭಾಗ, ಡಾ.ಬಿ. ಆರ್. ಅಂಬೇಡ್ಕರ್ ಅವರ ಪ್ರತಿಮೆ, ನಮನ, ಸ್ಥಳ: ಅಂಬೇಡ್ಕರ್ ಭವನ, ಬೆಳಿಗ್ಗೆ 11.30

ಕನ್ನಡ ರಾಜ್ಯೋತ್ಸವ: ಅತಿಥಿಗಳು: ಪಿ. ಎಸ್. ದಿನೇಶ್ ಕುಮಾರ್, ಚಂದ್ರಶೇಖರ ಕಂಬಾರ, ವಿವೇಕ್ ಸುಬ್ಬಾರೆಡ್ಡಿ, ಕೆ. ಗಂಗಪ್ಪ, ರಮೇಶ್ ಬಾಬು ಅಧ್ಯಕ್ಷತೆ: ಜಗದೀಶ್ ಎಲ್, ಆಯೋಜನೆ: ಬೆಂಗಳೂರು ವಕೀಲರ ಸಾಹಿತ್ಯ ಕೂಟ, ಸ್ಥಳ: ವಕೀಲರ ಭವನದ ಆವರಣ, ಮಧ್ಯಾಹ್ನ 1:30


ಚಂದ್ರಶೇಖರ ಕಂಬಾರ

ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನ, ಸಮನ್ವಯ ಸಮಿತಿಯ ಸಂಸ್ಥಾಪನಾ ದಿನ, ಅಭಿನಂದನಾ ಕಾರ್ಯಕ್ರಮ: ಎಚ್. ಎನ್. ನಾಗಮೋಹನದಾಸ, ಅತಿಥಿಗಳು: ಚಂದ್ರಕಾಂತ.ಡಿ. ಶಿವಕೇರಿ, ರಾಕೇಶ್ ಕುಮಾರ್ ಕೆ., ಗಂಗೂಬಾಯಿ ರಮೇಶ್ ಮಾನಕರ್, ಸುಜಾತ ರಾಥೋಡ್ ಬಿ.ಎಲ್., ಸದಾನಂದ.ಎಸ್. ಪಾವಸ್ಕರ್, ಅಧ್ಯಕ್ಷತೆ: ಡಿ. ಶಿವಶಂಕರ್, ಸನ್ಮಾನಿತರು: ರೂಪಾ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್ಟಿ ನೌಕರರ ಸಮನ್ವಯ ಸಮಿತಿ, ಸ್ಥಳ: ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 5

'ಕಲ್ಯಾಣದ ತೇರು' ನಾಟಕ ಪ್ರದರ್ಶನ: ನಿರ್ದೇಶನ: ಅಶ್ವತ್ಥನಾರಾಯಣ ಕೆ.ಪಿ., ಉದ್ಘಾಟನೆ: ರಾಜು.ಎಂ. ತಲ್ಲೂರು, ಅತಿಥಿಗಳು: ಮುರಳೀಧರ ಹಾಲಪ್ಪ, ಬಲವಂತರಾವ್ ಪಾಟೀಲ್, ಬಿ. ಬಸವರಾಜು, ಸ್ಥಳ: ನಯನ ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಸ್ವಾಭಿಮಾನದ ಗೌರವ ನಮನ: ಅತಿಥಿಗಳು: ಕೆ.ವಿ. ಬಾಲಕೃಷ್ಣ, ಆಯೋಜನೆ: ದಲಿತ ಸಂಘರ್ಷ ಸಮಿತಿ, ಸ್ಥಳ: ಟೌನ್ ಹಾಲ್ ಮುಂಭಾಗ, ಸಂಜೆ 6.30

ಹುಣ್ಣಿಮೆ ಹಾಡು: ಗಾಯನ: ಕೆ.ಎಸ್. ಮಂಜುನಾಥ್, ಇಂಚರ ಪ್ರವೀಣ್ ಕುಮಾರ್ ತಂಡ, ಅತಿಥಿಗಳು: ಮೋಹನ್‌ರಾವ್, ಅಧ್ಯಕ್ಷತೆ: ಬಿ.ಕೆ. ಶಿವರಾಮು, ಆಯೋಜನೆ: ಕಾಡುಮಲ್ಲೇಶ್ವರ, ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ದೇವಸ್ಥಾನದ ಆವರಣ, ಮಲ್ಲೇಶ್ವರ, ಸಂಜೆ 6.30

ಗಿರೀಶ್ ಕಾರ್ನಾಡ್ ಅವರ 'ಮಾನಿಷಾದ' ನಾಟಕ ಪ್ರದರ್ಶನ: ನಿರ್ದೇಶನ: ರೇವಂತ್ ಮಾಳಿಗೆ, ಆಯೋಜನೆ: ಕರಣ ಥಿಯೇಟರ್, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಯಶಸ್ವಿ 29ನೇ ವರ್ಷದಲ್ಲಿ
ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ "ಅನುಭವಿ ಸೇವಾ ಪೂರೈಕೆದಾರ" ಮಾನ್ಯತೆ & ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ
ಅಡಿಗಾಸ್ ಯಾತ್ರಾ ®
email: care@adigasyatra.com website: www.adigasyatra.com
944 94 78 944
ಬಸವನಗುಡಿ: 080-26616678 ಮಲ್ಲೇಶ್ವರಂ: 080-23346678 ಹುಬ್ಬಳ್ಳಿ: 0836-2256678
7022259003 7022259008 7022259005
ಶುದ್ಧ ಸಸ್ಯಹಾರಿ ಉಟೋಪಹಾರ, A/c ಬಸ್, A/c ರೂಮ್.
ರೈಲು/ವಿಮಾನ ಪ್ರಯಾಣ, ಟೂರ್ ಮ್ಯಾನೇಜರ್‌ನೊಂದಿಗೆ ಗ್ರೂಪ್ ಪ್ರವಾಸಗಳು

ಪಶ್ಚಿಮ ಮತ್ತು ಮಧ್ಯ ಭಾರತ ಪ್ರವಾಸಗಳು

ಗುಜರಾತ್ ವಿಶೇಷ ಪ್ರವಾಸ
12 ದಿನಗಳು (By Train 12 Days & By Flight 9 Days)
ಅಹಮದಾಬಾದ್, ಕೆವಡಿಯಾ, ಸರ್ದಾರ್ ವಲ್ಲಭಬಾಯ್ ಪ್ರತಿಮೆ, ಭಾವನಗರ, ನಿಷ್ಕಳಂಕ ಮಹಾದೇವ್, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್ ದ್ವಾರಕ, ನಾಗೇಶ್ವರ್. ದ್ವಾರಕ, ಮಾತೃಗಯಾ (ಸಿದ್ಧಪುರ), ಮೊಧೆರಾ
DEP DATES: 2023; JAN 15, 29. FEB 5, 12. MAR 5, 12. APR 2.

ಕಚ್–ಸೌರಾಷ್ಟ್ರ–ಗಿರ್
16 ದಿನಗಳು (By Train 16 Days & By Flight 13 Days)
ಅಹಮದಾಬಾದ್, ಕೆವಡಿಯಾ, ಸರ್ದಾರ್ ವಲ್ಲಭಬಾಯ್ ಸ್ಮಾರಕ, ಭಾವನಗರ, ನಿಷ್ಕಳಂಕ ಮಹಾದೇವ್, ಗಿರ್ ನ್ಯಾಷನಲ್ ಪಾರ್ಕ್, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್ ದ್ವಾರಕ, ನಾಗೇಶ್ವರ್, ದ್ವಾರಕ, ನಾರಾಯಣ ಸರೋವರ, ಕೋಟೇಶ್ವರ್, ಮಾಂಡ್ವಿ ಬೀಚ್, ಭುಜ್, ರನ್ ಆಫ್ ಕಛ್, ಧೋರ್ಡೋ, ದಸಾಡ, ಮೊಧೇರಾ, ಪಟಾನ್.
DEP DATES: 2023; JAN 22, 29. FEB 12, 19.

ಪಂಚದ್ವಾರಕಾ ಯಾತ್ರಾ
13 ದಿನಗಳು (By Train 13 Days & By Flight 10 Days)
ಅಹಮದಾಬಾದ್, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್ ದ್ವಾರಕ, ನಾಗೇಶ್ವರ, ದ್ವಾರಕ, ಮಾತೃಗಯಾ (ಸಿದ್ಧಪುರ), ಮೊಧೆರಾ, ಕಂಕ್ರೋಲಿ, ನಾಥ್‌ದ್ವಾರ, ಉದಯಪುರ, ದಾಕೋರೆ.
DEP DATES: 2023; JAN 22. FEB 12, 19. MAR 12, 26. APR 9.

ಮಧ್ಯಪ್ರದೇಶ ಪ್ರವಾಸ
9*/ 15 ದಿನಗಳು (By Train 9/ 15 Days & By Flight 6/ 11 Days)
ಗ್ವಾಲಿಯರ್, ಭೋಪಾಲ್, ಸಾಂಚಿ, ಇಂದೋರ್, ಉಜ್ಜಯಿನಿ, ಮಾಹೇಶ್ವರ, ಮಾಂಡು, ಓಂಕಾರೇಶ್ವರ, ಖಜುರಾಹೋ, ಜಬಲ್‌ಪುರ್, ಬೇಡಾಘಾಟ್, ಪಾಚ್‌ಮಾರಿ.
DEP DATES: 2023, JAN 17, 31. FEB 7, 21, 28. MAR 7, 21 28. APR 4, 11

ಸಪ್ತ ಜ್ಯೋತಿರ್ಲಿಂಗ ದರ್ಶನ
12 ದಿನಗಳು (By Train 12 Days & By Flight 10 Days)
ಪುಣೆ, ಭೀಮಾಶಂಕರ, ನಾಸಿಕ್, ತ್ರ್ಯಂಬಕೇಶ್ವರ, ಶಿರಡಿ, ಶನಿಶಿಗ್ನಾಪುರ, ಎಲ್ಲೋರ, ಔರಂಗಬಾದ್, ಅಜಂತಾ, ಓಂಕಾರೇಶ್ವರ, ಉಜ್ಜಯಿನಿ, ಆವುಂದಾ ನಾಗನಾಥ, ಪರಲಿ ವೈದ್ಯನಾಥ.
DEP DATES : 2023; JAN 14, 28. FEB 4, 18. MAR 4, 18, 25. APR 1, 15, 29. MAY 13



ಅಷ್ಟ ವಿನಾಯಕ ಪಂಚ ಜ್ಯೋತಿರ್ಲಿಂಗ ದರ್ಶನ
10 ದಿನಗಳು (By Flight 9 Days & By Train 10 Days)
ಪುಣೆ, ನಾರಾಯಣಪುರ, ಮಹಡ್, ಪಾಲಿ, ಭೀಮಾಶಂಕರ, ಲೇನ್ಯಾದ್ರಿ, ಓಜಾರ್, ನಾಸಿಕ್, ತ್ರ್ಯಂಬಕೇಶ್ವರ, ಶಿರಡಿ, ಶನಿ ಶಿಗ್ನಾಪುರ, ಎಲ್ಲೋರ, ಘೃಷ್ಣೇಶ್ವರ, ಔರಂಗಬಾದ್, ಆವುಂದಾ ನಾಗನಾಥ, ಪರಲಿ ವೈದ್ಯನಾಥ, ಪಂಡರಾಪುರ, ಮೊರಗಾಂವ್, ತೇವೂರ್, ಸಿದ್ದಟೆಕ್, ರಂಜನಗಾಂವ್.
DEP DATES : 2023; JAN 19, 26. FEB 2, 16. MAR 2, 16.APR 6, 20, 27. MAY 11.

ಈಶಾನ್ಯ ಮತ್ತು ಪೂರ್ವ ಭಾರತ ಪ್ರವಾಸಗಳು

ಸೆವೆನ್ ಸಿಸ್ಟರ್ಸ್ ಟೂರ್
18/29 ದಿನಗಳು (By Train 18*/29 Days & By Flight 13*/23 Days)
ಗುವಾಹತಿ, ಕಾಜೀರಂಗ ನ್ಯಾಷನಲ್ ಪಾರ್ಕ್, ತೇಝ್‌ಪುರ್ (ಅಸ್ಸಾಂ), ಬಾಂಡಿಲ್ಲಾ, ತವಾಂಗ್, ಸೆಲಾ ಪಾಸ್ (ಅರುಣಾಚಲ ಪ್ರದೇಶ), ಚಿರಾಪುಂಜಿ, ದಾವ್ಕಿ, ಮಾವ್ಲಿನಾಂಗ್, ಶಿಲ್ಲಾಂಗ್ (ಮೇಘಾಲಯ), ಸಿಲ್ಚಾರ್, ಉನಕೋಟಿ, ಉದಯಪುರ, ಅಗರ್ತಲ (ತ್ರಿಪುರ), ಐಜ್ವಾಲ್ (ಮಿಜೋರಾಂ), ಲೋಕ್‌ತಕ್ ಲೇಕ್, ಇಂಫಾಲ (ಮಣಿಪುರ), ಕಿಸಾಮ, ಕೊನ್ಯೊಮ, ಕೊಹಿಮ (ನಾಗಾಲ್ಯಾಂಡ್)
DEP DATES: 2023; MAR 10*, 24*, APR 7*, 8, 21*, 24

ಪೂರ್ವ ಭಾರತ ಪ್ರವಾಸ
6/9/14/16 ದಿನಗಳು (By Train 16 Days & By Flight 13 Days)
ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಜಗನ್ನಾಥ ಪುರಿ, ಕೊನಾರ್ಕ್, ಚಿಲ್ಕಾಲೇಕ್, ದಕ್ಷಿಣೇಶ್ವರ, ಕಲ್ಕತ್ತಾ, ಗಂಗಾ ಸಾಗರ, ಹೌರಾ, ಸಿಲಿಗುರಿ, ಮಿರಿಕ್, ಡಾರ್ಜಿಲಿಂಗ್, ತ್ಸಾಂಗೋ ಸರೋವರ, ಗ್ಯಾಂಗ್‌ಟಕ್, ನವಜಲಪೈಗುರಿ.
DEP DATES :2023 ; JAN 4, 18, 25. FEB 1, 8, 22. MAR 1, 8, 22 APR 5, 12, 19. MAY 3, 17, 31. JUN 7

ನೇಪಾಳ ಮತ್ತು ಉತ್ತರ ಭಾರತ ಪ್ರವಾಸಗಳು

ಅಯೋಧ್ಯಾ–ಕಾಶಿ–ಗಯಾ
13 ದಿನಗಳು (By Train 13 Days & By Flight 9 Days)
ನೈಮಿಶಾರಣ್ಯ, ಅಯೋಧ್ಯಾ, ಪ್ರಯಾಗರಾಜ್(ತ್ರಿವೇಣಿ ಸಂಗಮ), ಚಿತ್ರಕೂಟ, ವಾರಣಾಸಿ (ಕಾಶಿ), ಸಾರನಾಥ, ಗಯಾ, ಬೋಧಗಯಾ.
DEP DATES: 2023; JAN 18. FEB 1, 15. MAR 1, 15. APR 5, 19. MAY 3, 17. JUN 7, 21

ಕಾಶಿ–ಗಯಾ ಯಾತ್ರಾ
10 ದಿನಗಳು (By Train 10 Days & By Flight 6 Days)
ಪ್ರಯಾಗರಾಜ್ (ತ್ರಿವೇಣಿ ಸಂಗಮ), ಗಯಾ, ಬೋಧಗಯಾ, ವಾರಣಾಸಿ(ಕಾಶಿ), ಸಾರನಾಥ.
DEP DATES : 2023; JAN 26. FEB 9, 23. MAR 9, 23. APR 13, 27. MAY 11, 25. JUN 15, 22.

ನೇಪಾಳ–ಕಾಶಿ–ಗಯಾ
15 ದಿನಗಳು (By Train 15 Days & By Flight 11 Days)
ಪ್ರಯಾಗರಾಜ್, ಅಯೋಧ್ಯಾ, ಸುನೌಲಿ ಬಾರ್ಡರ್, ಮನೋಕಾಮನ, ಕಠ್ಮಂಡು, ಗೋರಖಪುರ, ಲುಂಬಿನಿ, ಗಯಾ, ಬೋಧಗಯಾ, ವಾರಣಾಸಿ (ಕಾಶಿ), ಸಾರನಾಥ.
DEP DATES : 2023; JAN 15, 22. FEB 5, 19. MAR 5, 19. APR 2, 16 , M AY 7, 21, JUN 4, 18



ರಾಜಸ್ಥಾನ ವಿಶೇಷ ಪ್ರವಾಸ
14 ದಿನಗಳು (By Train 14 Days & By Flight 10 Days)
ಜೋಧಪುರ, ಜೈಸಲ್ಮೇರ್, ಸ್ಯಾಮ್ ಸ್ಯಾಂಡ್ ಡ್ಯೂನ್ಸ್, ಬಿಕಾನೇರ್, ಕರಣೀ ಮಾತಾ, ಪುಷ್ಕರ್, ಚಿತ್ತೋರಗಢ, ಉದಯಪುರ, ಜೈಪುರ.
DEP DATES 2023; JAN 5, 19. FEB 2, 16, 23. MAR 2, 16, 23 APR 13.

ಶಿಮ್ಲಾ–ಮನಾಲಿ–ವೈಷ್ಣೋದೇವಿ
17 ದಿನಗಳು By Train 17 Days & By Flight 14 Days
ನವದೆಹಲಿ, ಕುರುಕ್ಷೇತ್ರ, ಚಂಡೀಗಡ, ಶಿಮ್ಲಾ, ಕುಫ್ರಿ, ಕುಲು, ಮನಾಲಿ, ಅಟಲ್ ಟನ್ನಲ್, ಸೋಲಾಂಗ್ ವ್ಯಾಲಿ, ಬೈಜನಾಥ್, ಕಾಂಗ್ರಾ, ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಧರ್ಮಶಾಲಾ , ಕಟ್ರಾ, ವೈಷ್ಣೋದೇವಿ, ವಾಘಾ ಬಾರ್ಡರ್, ಅಮೃತಸರ
DEP DATES : 2023; JAN 16. FEB 6, 20. MAR 6, 20. APR 3, 10, 17, 24. MAY 8, 22. JUN 5, 19.

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಅನುಭವ ಮಂಟಪ
ದಾರಿ ಯಾವುದಯ್ಯಾ 'ಮೀಸಲು ಮನೆಗೆ'?

'ಬೆಳಗಾವಿ ಗಡಿ ವಿವಾದಕ್ಕೆ ಬೊಮ್ಮಾಯಿ ಕುಮ್ಮಕ್ಕು' 5
'ಮತಾಂತರ ಉದ್ದೇಶದ ದಾನ ಅಪಾಯಕಾರಿ' 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,834 ▼	18,701 ▲	₹55,550 (ಬೆಂಗಳೂರು)	₹68,000 (ಬೆಂಗಳೂರು)	81.85 ▼

ಮತಗಟ್ಟೆ ಸಮೀಕ್ಷೆಗಳ ಭವಿಷ್ಯ • ಹಿಮಾಚಲದಲ್ಲಿ ಪೈಪೋಟಿ • ದೆಹಲಿ ಪಾಲಿಕೆ ಎಎಪಿ ತೆಕ್ಕೆಗೆ

'ಗುಜರಾತ್‌ನಲ್ಲಿ ಬಿಜೆಪಿಗೆ ಗೆಲುವು'

ನವದೆಹಲಿ (ಪಿಟಿಐ): ಗುಜರಾತ್‌ನಲ್ಲಿ ಬಿಜೆಪಿಯು ಭಾರಿ ಬಹುಮತದೊಂದಿಗೆ ಸರ್ಕಾರವನ್ನು ಉಳಿಸಿಕೊಳ್ಳಲಿದೆ ಮತ್ತು ಹಿಮಾಚಲ ಪ್ರದೇಶದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ತೀವ್ರ ಪೈಪೋಟಿ ಇದೆ ಎಂದು ಮತಗಟ್ಟೆ ಸಮೀಕ್ಷೆಗಳು ಅಂದಾಜಿಸಿವೆ. ದೆಹಲಿ ಮಹಾನಗರ ಪಾಲಿಕೆಯಲ್ಲಿ ಎಎಪಿ ಜಯಭೇರಿ ಬಾರಿಸಲಿದ್ದು, 15 ವರ್ಷಗಳ ಹಿಡಿತವನ್ನು ಬಿಜೆಪಿ ಕಳೆದುಕೊಳ್ಳಲಿದೆ ಎಂದು ಈ ಸಮೀಕ್ಷೆಗಳು ಭವಿಷ್ಯ ನುಡಿದಿವೆ.

ಗುಜರಾತ್ ವಿಧಾನಸಭೆಯಲ್ಲಿ 182 ಸ್ಥಾನಗಳಿದ್ದು, ಸರ್ಕಾರ ರಚನೆಗೆ 92 ಸ್ಥಾನಗಳ ಅಗತ್ಯವಿದೆ. ಬಹುತೇಕ ಮತಗಟ್ಟೆ ಸಮೀಕ್ಷೆಗಳು ಬಿಜೆಪಿಯು 117ರಿಂದ 148 ಕ್ಷೇತ್ರಗಳಲ್ಲಿ ಗೆಲ್ಲಲಿದೆ ಎಂದು ಅಂದಾಜಿಸಿವೆ. 2017ರ ಚುನಾವಣೆಯಲ್ಲಿ ಬಿಜೆಪಿ 99 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಈ ಬಾರಿ 132 ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಿದೆ ಎಂದು ಎಲ್ಲಾ ಸಮೀಕ್ಷೆಗಳ ಸರಾಸರಿ ಹೇಳುತ್ತದೆ.

ಕಾಂಗ್ರೆಸ್ ಈ ಬಾರಿ 38 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದ್ದು, ಕಳೆದ ಬಾರಿಗೆ ಹೋಲಿಸಿದರೆ ಪಕ್ಷದ ಸಂಖ್ಯಾ ಬಲವು 40 ಸ್ಥಾನಗಳಷ್ಟು ಇಳಿಕೆಯಾಗಲಿದೆ. ಭಾರಿ ಪ್ರಚಾರ ನಡೆಸಿದ್ದ ಎಎಪಿ 7-10 ಸ್ಥಾನಗಳನ್ನು ಗೆಲ್ಲಬಹುದು ಎಂದು ಎಲ್ಲಾ ಸಮೀಕ್ಷೆಗಳು ಅಂದಾಜಿಸಿವೆ.

68 ಸ್ಥಾನಗಳಿರುವ ಹಿಮಾಚಲ ಪ್ರದೇಶದಲ್ಲಿ ಸರ್ಕಾರ ರಚಿಸಲು 35 ಸ್ಥಾನಗಳ ಅಗತ್ಯವಿದೆ. ಆಡಳಿತಾರೂಢ ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ಪ್ರಬಲ ಪೈಪೋಟಿ ಇರಲಿದೆ. ಆದರೆ, ಬಿಜೆಪಿ ಸರ್ಕಾರ ರಚಿಸುವ ಸಾಧ್ಯತೆಗಳು ಹೆಚ್ಚು ಇದ್ದು, ಅತಂತ್ರ ವಿಧಾನಸಭೆಯೂ ನಿರ್ಮಾಣವಾಗಬಹುದು. ಎಎಪಿ ಒಂದೂ ಸ್ಥಾನ ಗೆಲ್ಲುವುದಿಲ್ಲ ಎಂದು ಬಹುತೇಕ ಸಮೀಕ್ಷೆಗಳ ಫಲಿತಾಂಶ ಹೇಳುತ್ತದೆ.

ಎರಡೂ ರಾಜ್ಯಗಳ ವಿಧಾನಸಭಾ ಚುನಾವಣೆಯ ಮತ ಎಣಿಕೆ ಇದೇ ಎಂಟರಂದು ನಡೆಯಲಿದೆ.

'ಎಎಪಿ ತೆಕ್ಕೆಗೆ ದೆಹಲಿ ಮಹಾನಗರ ಪಾಲಿಕೆ': ದೆಹಲಿ ಮಹಾನಗರ ಪಾಲಿಕೆಗೆ ನಡೆದಿರುವ ಚುನಾವಣೆಯಲ್ಲಿ ಎಎಪಿ ಬಹುಮತ ಪಡೆಯಲಿದೆ ಎಂದು ಮತಗಟ್ಟೆ ಸಮೀಕ್ಷೆಗಳು ಹೇಳಿವೆ.

250 ವಾರ್ಡ್‌ಗಳಿಗೆ ಚುನಾವಣೆ ನಡೆದಿದೆ. ಮೇಯರ್ ಸ್ಥಾನ ಪಡೆಯಲು 126 ವಾರ್ಡ್‌ಗಳಲ್ಲಿ ಗೆಲುವು ಅಗತ್ಯವಿದೆ. ಎಎಪಿಯು 154 ವಾರ್ಡ್‌ಗಳಲ್ಲಿ ಗೆಲುವು ಸಾಧಿಸಲಿದೆ. ಬಿಜೆಪಿ 84 ಕ್ಷೇತ್ರಗಳಲ್ಲಷ್ಟೇ ಜಯ ಸಾಧಿಸಲಿದೆ. ಕಾಂಗ್ರೆಸ್ ಕೇವಲ ಆರು ವಾರ್ಡ್‌ಗಳಿಗೆ ತೃಪ್ತಿಪಟ್ಟುಕೊಳ್ಳಬೇಕಾಗುತ್ತದೆ ಎಂದು ಮತಗಟ್ಟೆ ಸಮೀಕ್ಷೆಗಳು ಹೇಳಿವೆ.

ಈ ಚುನಾವಣೆಯ ಮತ ಎಣಿಕೆಯು ಬುಧವಾರ ನಡೆಯಲಿದೆ.

ಇನ್ನೊಂದು ಸುದ್ದಿ 13

ಮತಗಟ್ಟೆ ಸಮೀಕ್ಷೆ

ಗುಜರಾತ್ ವಿಧಾನಸಭೆ — ಒಟ್ಟು ಕ್ಷೇತ್ರಗಳು: 182 | ಸರಳ ಬಹುಮತ: 92

ಸಮೀಕ್ಷೆ	ಬಿಜೆಪಿ	ಕಾಂಗ್ರೆಸ್+	ಎಎಪಿ
ನ್ಯೂಸ್ ಎಕ್ಸ್–ಜನ್ ಕೀ ಬಾತ್	117-140	34-51	6-13
ಟಿವಿ9 ಗುಜರಾತಿ	125-130	40-50	3-5
ರಿಪಬ್ಲಿಕ್ ಟಿ.ವಿ.–ಪಿ ಮಾರ್ಕ್	128-148	30-42	2-10
ಝೀ ನ್ಯೂಸ್–ಬಾರ್ಕ್	110-125	45-60	1-5
ಟೈಮ್ಸ್ ನೌ–ಇಟಿಜಿ	139	30	11
ಎಬಿಪಿ–ಸಿವೋಟರ್	128-140	31-43	3-11
ಆಜ್‌ತಕ್–ಆಕ್ಸಿಸ್ ಮೈ ಇಂಡಿಯಾ	129-151	16-30	9-21
ಎಲ್ಲ ಸಮೀಕ್ಷೆಗಳ ಸರಾಸರಿ	132	38	8

ಹಿಮಾಚಲ ಪ್ರದೇಶ ವಿಧಾನಸಭೆ — ಒಟ್ಟು ಕ್ಷೇತ್ರಗಳು: 68 | ಸರಳ ಬಹುಮತ: 35

ಸಮೀಕ್ಷೆ	ಬಿಜೆಪಿ	ಕಾಂಗ್ರೆಸ್	ಎಎಪಿ
ನ್ಯೂಸ್ ಎಕ್ಸ್–ಜನ್ ಕೀ ಬಾತ್	32-40	27-34	0
ರಿಪಬ್ಲಿಕ್ ಟಿ.ವಿ. –ಪಿ ಮಾರ್ಕ್	34-39	28-33	0-1
ಟೈಮ್ಸ್ ನೌ–ಇಟಿಜಿ	38	28	0
ಝೀ ನ್ಯೂಸ್–ಬಾರ್ಕ್	35-40	20-25	0-3
ಆಜ್‌ತಕ್–ಆಕ್ಸಿಸ್ ಮೈ ಇಂಡಿಯಾ	24-34	30-40	0
ಇಂಡಿಯಾ ಟಿ.ವಿ.–ಮ್ಯಾಟ್ರೈಜ್	35-40	26-31	0
ಎಲ್ಲ ಸಮೀಕ್ಷೆಗಳ ಸರಾಸರಿ	35	30	0

ದೆಹಲಿ ಮಹಾನಗರ ಪಾಲಿಕೆ — ಒಟ್ಟು ವಾರ್ಡ್: 250 | ಸರಳ ಬಹುಮತ: 126

ಸಮೀಕ್ಷೆ	ಬಿಜೆಪಿ	ಕಾಂಗ್ರೆಸ್	ಎಎಪಿ
ಆಜ್‌ತಕ್–ಆಕ್ಸಿಸ್ ಮೈ ಇಂಡಿಯಾ	69-91	3-7	149-171
ನ್ಯೂಸ್ ಎಕ್ಸ್–ಜನ್ ಕೀ ಬಾತ್	70-92	04-07	159-175
ಟೈಮ್ಸ್ ನೌ–ಇಟಿಜಿ	84-94	6-10	146-156
ಝೀ ನ್ಯೂಸ್–ಬಾರ್ಕ್	82-94	8-14	134-146
ಎಲ್ಲ ಸಮೀಕ್ಷೆಗಳ ಸರಾಸರಿ	84	6	154

ಗುಜರಾತ್: ಕೊನೆಯ ಹಂತದಲ್ಲಿ ಶೇ 61ರಷ್ಟು ಮತದಾನ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭೆಗೆ ಸೋಮವಾರ ನಡೆದ ಎರಡನೇ ಹಂತದ ಮತದಾನದಲ್ಲಿ ಶೇ 60.94ರಷ್ಟು ಮತದಾನವಾಗಿದೆ. ಕಳೆದ ಬಾರಿ ಈ ಕ್ಷೇತ್ರಗಳಲ್ಲಿ ಸರಾಸರಿ ಶೇ70ರಷ್ಟು ಮತದಾನವಾಗಿತ್ತು.

ಅಂತಿಮ ಹಂತದಲ್ಲಿ 93 ಕ್ಷೇತ್ರಗಳಿಗೆ ಮತದಾನ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ, ಅವರ ತಾಯಿ ಹೀರಾಬೆನ್, ಗೃಹಸಚಿವ ಅಮಿತ್ ಶಾ ಅವರು ಮತದಾನ ಮಾಡಿದರು.

ಡಿ.1ರಂದು ನಡೆದಿದ್ದ ಮೊದಲ ಹಂತದ ಮತದಾನದಲ್ಲಿ ಶೇ 63.31ರಷ್ಟು ಮತದಾನವಾಗಿತ್ತು.

ನೀರಿನ ಸಮಸ್ಯೆ ಬಗೆಹರಿಸಿಲ್ಲ ಎಂಬ ಕಾರಣಕ್ಕೆ ಮೆಹ್ಸಾನಾ ಜಿಲ್ಲೆಯ ಮೂರು ಗ್ರಾಮಗಳ 5,200 ಮತದಾರರು ಚುನಾವಣೆ ಬಹಿಷ್ಕರಿಸಿದ್ದರು. ಇದೇ ಅಕ್ಟೋಬರ್‌ನಲ್ಲಿ, ಪೊಲೀಸರು ಕಂಬಕ್ಕೆ ಕಟ್ಟಿ ಥಳಿಸಿದ್ದಕ್ಕೆ ಆಕ್ರೋಶಗೊಂಡಿದ್ದ ಖೇಡಾ ಜಿಲ್ಲೆಯ ಉಂಧೇಲಾ ಗ್ರಾಮದ ಮುಸ್ಲಿಮರು ಮತದಾನದಿಂದ ದೂರವುಳಿದರು.

ಮಾಲಾಧಾರಿಗಳ ಸಾಲು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಅಂಜನಾದ್ರಿ ಬೆಟ್ಟದಲ್ಲಿ ಸೋಮವಾರ ಮಾಲೆ ವಿಸರ್ಜಿಸಲು ಸಾಲಿನಲ್ಲಿ ಸಾಗಿದ ಹನುಮ ಮಾಲಾಧಾರಿಗಳು
–ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಸುದ್ದಿ 4

ಕನ್ನಡ ಸಂಘಟನೆಗಳಿಂದ ಪ್ರತಿಭಟನೆ ತೀವ್ರ

'ಮಹಾ' ಸಚಿವರ ಪ್ರವೇಶ ನಿಷೇಧ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವರಾದ ಚಂದ್ರಕಾಂತ ಪಾಟೀಲ, ಶಂಭುರಾಜ್ ದೇಸಾಯಿ ಹಾಗೂ ಮಹಾರಾಷ್ಟ್ರ ಗಡಿ ಸಲಹಾ ಸಮಿತಿ ಅಧ್ಯಕ್ಷ, ಸಂಸದ ಧೈರ್ಯಶೀಲ ಮಾನೆ ಅವರು ಡಿ.6ರಂದು ಬೆಳಗಾವಿಗೆ ಭೇಟಿ ನೀಡುತ್ತಿರುವುದಕ್ಕೆ ಕನ್ನಡ ಸಂಘಟನೆಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

ಈ ಮಧ್ಯೆ ಮಹಾರಾಷ್ಟ್ರ ಸಚಿವರು ಸೇರಿ ಮೂವರ ಪ್ರವೇಶ ನಿಷೇಧಿಸಿ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಆದೇಶ ಹೊರಡಿಸಿದ್ದಾರೆ.

'ಮೂವರು ಜಿಲ್ಲೆಯಲ್ಲಿ ಪ್ರಚೋದನಕಾರಿ ಭಾಷಣ ಮಾಡುವ ಸಾಧ್ಯತೆ ಇರುತ್ತದೆ. ಇದರಿಂದ ಭಾಷಾ ವೈಷಮ್ಯ ಬೆಳೆದು, ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗಬಹುದು. ಹೀಗಾಗಿ ಸಿಆರ್‌ಪಿಸಿ 144(3)ನೇ ಕಲಂ ಅನ್ವಯ ಪ್ರವೇಶ ನಿಷೇಧಿಸಲಾಗಿದೆ' ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಮಹಾರಾಷ್ಟ್ರ ಸಚಿವರ ನಡೆಯನ್ನು ಖಂಡಿಸಿ ಪ್ರತಿಭಟಿಸಲು, ಬೆಂಗಳೂರಿನಿಂದ ವಿವಿಧ ಕನ್ನಡ ಸಂಘಟನೆಗಳು ಬೆಳಗಾವಿಯತ್ತ ಮುಖ ಮಾಡಿವೆ. ಇಲ್ಲಿನ ರಾಣಿ ಚನ್ನಮ್ಮ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ಮಹಾರಾಷ್ಟ್ರದ ನಾಯಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಮಹಾರಾಷ್ಟ್ರದ ಸಚಿವರು, ಸಂಸದರಿಗೆ ಬೆಳಗಾವಿ ಪ್ರವೇಶಿಸಲು ನಿರ್ಬಂಧ ಹೇರಿ ಸರ್ಕಾರ ಆದೇಶ ಹೊರಡಿಸಬೇಕು' ಎಂದು ಒತ್ತಾಯಿಸಿದರು. 'ಪ್ರಾಣ ಕೊಟ್ಟೇವು. ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗಲು ಬಿಡೆವು' ಎಂದು ಘೋಷಣೆ ಕೂಗಿದರು. ಬಳಿಕ ಜಿಲ್ಲಾಧಿಕಾರಿ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

5ನೇ ಪುಟ ನೋಡಿ

'ಸಚಿವರ ಭೇಟಿ: ಶಿಂದೆ ವಿವೇಚನೆಗೆ'

ಮುಂಬೈ (ಪಿಟಿಐ): ಮಹಾರಾಷ್ಟ್ರ –ಕರ್ನಾಟಕ ಗಡಿಯ ವಿವಾದಿತ ಪ್ರದೇಶಗಳಿಗೆ ಸಚಿವರ ಭೇಟಿ ಕುರಿತಂತೆ ಮುಖ್ಯಮಂತ್ರಿ ಏಕನಾಥ ಶಿಂದೆ ಅಂತಿಮ ತೀರ್ಮಾನ ತೆಗೆದುಕೊಳ್ಳುವರು ಎಂದು ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

ಮಹಾರಾಷ್ಟ್ರ ಸಚಿವರಾದ ಚಂದ್ರಕಾಂತ ಪಾಟೀಲ, ಶಂಭುರಾಜ್ ದೇಸಾಯಿ ಅವರು ಡಿ.6ರಂದು ಕರ್ನಾಟಕದ ಬೆಳಗಾವಿಗೆ ಭೇಟಿ ನೀಡಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಪದಾಧಿಕಾರಿಗಳ ಜೊತೆಗೆ ಚರ್ಚಿಸುವ ಕಾರ್ಯಕ್ರಮವಿತ್ತು.

'ಇಬ್ಬರೂ ಸಚಿವರಿಗೆ ಡಿ.6ರಂದು ಡಾ.ಅಂಬೇಡ್ಕರ್ ಪುಣ್ಯತಿಥಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಸ್ಥಳೀಯರು ಆಹ್ವಾನಿಸಿದ್ದಾರೆ. ವಿವಾದಿತ ಸ್ಥಳಕ್ಕೆ ಭೇಟಿಯಿಂದ ಕಾನೂನು ಸಮಸ್ಯೆಯಾಗಬಾರದು ಎಂಬುದು ನಮ್ಮ ಅಭಿಪ್ರಾಯ. ಸಿ.ಎಂ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವರು' ಎಂದು ಫಡಣವೀಸ್ ತಿಳಿಸಿದರು.

ಮಹಾರಾಷ್ಟ್ರದ ಸಚಿವರು ಬೆಳಗಾವಿಗೆ ಬರುವುದು ಬೇಡ ಎಂದು ಈಗಾಗಲೇ ಹೇಳಿದ್ದೇನೆ. ಆದರೂ, ಸವಾಲು ಹಾಕಿ ಬಂದರೆ ಅಗತ್ಯ ಕಾನೂನು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ನಾವೂ ಮಹಾರಾಷ್ಟ್ರಕ್ಕೆ ಹೋಗುತ್ತೇವೆ. ಅಲ್ಲಿಯವರು ಕರ್ನಾಟಕಕ್ಕೆ ಬರುತ್ತಾರೆ. ಆದರೆ, ಅನವಶ್ಯಕವಾಗಿ ಪ್ರಚೋದನಕಾರಿ ಹೇಳಿಕೆ ನೀಡಿದರೆ ಜನರು ರೊಚ್ಚಿಗೇಳುತ್ತಾರೆ
ಹಾಲಪ್ಪ ಆಚಾರ್, ಸಚಿವ

ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಜಿಲ್ಲೆಯ ಗಡಿಗಳಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ. ಮಹಾರಾಷ್ಟ್ರ ಸಚಿವರಿಗೆ ಬೆಳಗಾವಿಗೆ ಪ್ರವೇಶಿಸಲು ಬಿಡುವುದಿಲ್ಲ
ನಿತೇಶ್ ಪಾಟೀಲ
ಜಿಲ್ಲಾಧಿಕಾರಿ

ಮಾರ್ಚ್ 31ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022–23ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಗಳನ್ನು ಮಾರ್ಚ್ 31ರಿಂದ ಏಪ್ರಿಲ್ 15ರವರೆಗೆ ನಡೆಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ನಿರ್ಧರಿಸಿದೆ.

ಮಾರ್ಚ್ 31ರಂದು ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಸಂಸ್ಕೃತ (100 ಅಂಕಗಳು), ಏ.4ರಂದು ಸಮಾಜಶಾಸ್ತ್ರ, 6ರಂದು ದ್ವಿತೀಯ ಭಾಷೆ ಇಂಗ್ಲಿಷ್, ಕನ್ನಡ, 8ರಂದು ಎಂಜಿನಿಯರಿಂಗ್, ಅರ್ಥಶಾಸ್ತ್ರ ಸೇರಿದಂತೆ ಇತರೆ ವಿಷಯಗಳು (ಜೆಟಿಎಸ್ ಶಾಲೆಯ ವಿದ್ಯಾರ್ಥಿಗಳಿಗೆ), 9ರಂದು ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, 12ರಂದು ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು (ತಲಾ 80 ಅಂಕಗಳು), ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿಷಿಯನ್ (60 ಅಂಕಗಳು) ಪರೀಕ್ಷೆಗಳು ನಡೆಯಲಿವೆ.

ಪರೀಕ್ಷೆ ಬೆಳಿಗ್ಗೆ 10.30ಕ್ಕೆ ಆರಂಭವಾಗಿ 1.45ಕ್ಕೆ ಮುಕ್ತಾಯವಾಗಲಿವೆ. ಸಂಗೀತ ಪರೀಕ್ಷೆಗಳು ಮಧ್ಯಾಹ್ನ 2ರಿಂದ ಸಂಜೆ 5.15ರವರೆಗೂ ನಡೆಯಲಿವೆ. ಏ.17ರಂದು ಜೆಟಿಎಸ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳು ನಡೆಯಲಿವೆ. ಮಾಹಿತಿಗೆ ಮಂಡಳಿಯ ಅಂತರ್ಜಾಲ www.sslc.karnataka.gov.in ಸಂಪರ್ಕಿಸಬಹುದು.

ದಾವಣಗೆರೆ: ಡಿ.24ರಿಂದ ವೀರಶೈವ ಲಿಂಗಾಯತ ಮಹಾಸಭಾ ಅಧಿವೇಶನ

ಪ್ರತ್ಯೇಕ ಧರ್ಮ, ಒಬಿಸಿಗೆ ಹಕ್ಕೊತ್ತಾಯ

ಪ್ರಜಾವಾಣಿ ವಾರ್ತೆ

ದಾವಣಗೆರೆ: ವೀರಶೈವ ಲಿಂಗಾಯತ ಸಮುದಾಯಕ್ಕೆ ಪ್ರತ್ಯೇಕ ಧರ್ಮದ ಮಾನ್ಯತೆ ನೀಡಬೇಕು, ಕೇಂದ್ರ ಸರ್ಕಾರವು ಒಬಿಸಿ ಮೀಸಲಾತಿ ನೀಡಬೇಕು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಆಗ್ರಹಪಡಿಸಿದೆ.

ಮಹಾಸಭಾದ ಮಹಾ ಅಧಿವೇಶನ ಡಿ.24ರಿಂದ ಮೂರು ದಿನ ದಾವಣಗೆರೆಯ ಬಾಪೂಜಿ ಎಂ.ಬಿ.ಎ ಕಾಲೇಜು ಮೈದಾನದಲ್ಲಿ ನಡೆಯಲಿದ್ದು, ಅಲ್ಲಿ ಈ ಸಂಬಂಧ ಹಕ್ಕೊತ್ತಾಯವನ್ನು ಮಂಡಿಸಲು ನಿರ್ಧರಿಸಿದೆ.

ಮಹಾ ಅಧಿವೇಶನ ಕುರಿತು ಸೋಮವಾರ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಯಿತು ಎಂದು ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಹಿಂದೂ ಎಂದು ಕರೆಸಿಕೊಂಡರೂ ವೀರಶೈವ–ಲಿಂಗಾಯತರು ಪ್ರತ್ಯೇಕ ಸಂಪ್ರದಾಯ, ಆಚಾರ ವಿಚಾರ ಹೊಂದಿದ್ದಾರೆ. ಹಿಂದಿನಿಂದಲೂ ಪ್ರತ್ಯೇಕ ಧರ್ಮದ ಮಾನ್ಯತೆಗಾಗಿ ಬೇಡಿಕೆ ಇದೆ' ಎಂದು ಹೇಳಿದರು.

ಅಲ್ಲದೆ, ಸಮುದಾಯದಲ್ಲಿ ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿರುವವರ ಸಂಖ್ಯೆಯೂ ಹೆಚ್ಚಿದೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಬಲವಾಗಿರುವ ಸಮುದಾಯಗಳು ಒಬಿಸಿ ಪಟ್ಟಿಯಲ್ಲಿವೆ. ನಮ್ಮ ಸಮುದಾಯಕ್ಕೂ ಒಬಿಸಿ ಮೀಸಲಾತಿ ನೀಡಬೇಕು' ಎಂದು ಪ್ರತಿಪಾದಿಸಿದರು.

'ಸಮುದಾಯದಲ್ಲಿನ ಎಲ್ಲ ಒಳಪಂಗಡಗಳು ಒಂದಾಗಬೇಕು. ಅದಕ್ಕಾಗಿ ಪರಸ್ಪರ ಹೆಣ್ಣು–ಗಂಡು ಕೊಡುಕೊಳ್ಳುವಿಕೆಯ ಮೂಲಕ ಮದುವೆ ಮಾಡಿ, ಸಂಬಂಧಗಳನ್ನು ಬಲಪಡಿಸಿ ಒಂದಾಗಬೇಕು. ಈ ಕಾರ್ಯವೂ ತ್ವರಿತವಾಗಿ ಆಗಬೇಕೆಂಬುದು ಅಧಿವೇಶನದ ಉದ್ದೇಶ' ಎಂದು ವಿವರಿಸಿದರು.

'ಇತ್ತೀಚೆಗೆ ಸ್ಥಾಪನೆಯಾಗಿರುವ ಜಾಗತಿಕ ಲಿಂಗಾಯತ ಮಹಾಸಭಾದ ಪದಾಧಿಕಾರಿಗಳು, ಸದಸ್ಯರನ್ನೂ ಅಧಿವೇಶನಕ್ಕೆ ಆಹ್ವಾನಿಸುತ್ತೇವೆ. ಎಲ್ಲ ಗುರು, ವಿರಕ್ತರನ್ನೂ ಕರೆಯುತ್ತೇವೆ' ಎಂದು ಅವರು ಸ್ಪಷ್ಟಪಡಿಸಿದರು.

ಕೋಲಾರ: ನಡುಬೀದಿಯಲ್ಲಿ ಕಾಂಗ್ರೆಸ್ ಬಣಗಳ ಕಿತ್ತಾಟ

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಸ್ಪರ್ಧೆಗೆ ಸಂಬಂಧಿಸಿದಂತೆ ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ ಹಾಗೂ ಶಾಸಕ ಕೆ.ಆರ್.ರಮೇಶ್ ಕುಮಾರ್ ಬೆಂಬಲಿಗರು ಮತ್ತೆ ನಡುಬೀದಿಯಲ್ಲಿ ಕಿತ್ತಾಡಿಕೊಂಡಿದ್ದಾರೆ.

ನಗರದ ಕಾಂಗ್ರೆಸ್ ಭವನ ಎದುರಿನ ರಸ್ತೆಯಲ್ಲಿ ಸೋಮವಾರ ಮುನಿಯಪ್ಪ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಉಭಯ ಬಣಗಳ ಕಾರ್ಯಕರ್ತರ ನಡುವೆ ವಾಗ್ವಾದ, ತಳ್ಳಾಟ ನಡೆಯಿತು. ಪರಿಸ್ಥಿತಿ ಕೈ, ಕೈ ಮಿಲಾಯಿಸುವ ಹಂತಕ್ಕೆ ಹೋಯಿತು. ಇದನ್ನು ಗಮನಿಸಿದ ಪೊಲೀಸರು ಮಧ್ಯ ಪ್ರವೇಶಿಸಿ ನಿಯಂತ್ರಣಕ್ಕೆ ತಂದರು.

'ಲೋಕಸಭೆ ಚುನಾವಣೆಯಲ್ಲಿ ನನ್ನನ್ನು ಸೋಲಿಸಿದವರು, ಸಿದ್ದರಾಮಯ್ಯ ಅವರನ್ನು ಕೋಲಾರಕ್ಕೆ ಕರೆತಂದು ಗೆಲ್ಲಿಸುವುದಾಗಿ ಹೇಳುತ್ತಿದ್ದಾರೆ. ಹಳೆ ಕಾಂಗ್ರೆಸ್ಸಿಗರನ್ನು ಬಿಟ್ಟು ಇವರೇ (ರಮೇಶ್ ಕುಮಾರ್ ಬೆಂಬಲಿಗರು) ಏಕಪಕ್ಷೀಯವಾಗಿ ಸಭೆ ನಡೆಸುತ್ತಿದ್ದಾರೆ. ಇವರಿಗೆ ಈ ಉಸಾಬರಿ ಕೊಟ್ಟವರು ಯಾರು? ಅದನ್ನು ಮೊದಲು ಬಿಟ್ಟುಬಿಡಬೇಕು. ಒಂದಿಬ್ಬರಿಂದ ಗೊಂದಲ ಸೃಷ್ಟಿಯಾಗಿದೆ' ಎಂದು ಮುನಿಯಪ್ಪ ಸಭೆಯಲ್ಲಿ ಹೇಳುತ್ತಿದ್ದಂತೆ ರಮೇಶ್ ಕುಮಾರ್ ಬಣದವರು ಸಿಡಿದೆದ್ದರು.

5ನೇ ಪುಟ ನೋಡಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಒಳ ಪುಟಗಳು

'2ಎ' ಮೀಸಲಿಗೆ ಆಗ್ರಹಿಸಿ ಬಲಿಜರ ಸತ್ಯಾಗ್ರಹ 5
ಉಕ್ರೇನ್ ಮೇಲೆ ಮತ್ತೆ ಕ್ಷಿಪಣಿ ದಾಳಿ ತೀವ್ರ: ನೀರು, ವಿದ್ಯುತ್ ವ್ಯತ್ಯಯ 12
ಅಂಗವಿಕಲರ ಅನುಕೂಲಕ್ಕೆ ಸಮಿತಿ ರಚಿಸಿದ 'ಸುಪ್ರೀಂ' 13

ತಾಜ್‌ಮಹಲ್ 'ಇತಿಹಾಸ' ಸರಿ ಮಾಡಲು ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ತಾಜ್‌ಮಹಲ್ ಕುರಿತು ಇತಿಹಾಸದ ಪುಸ್ತಕಗಳಲ್ಲಿ ನಮೂದಾಗಿರುವ 'ತಪ್ಪು ಮಾಹಿತಿ'ಗಳನ್ನು ತೆಗೆಯಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿತು.

13

ಚಿನಕುರಳಿ

ಪ್ರಕಾಶ್ ಶೆಟ್ಟಿ



ದಾವಣಗೆರೆ: ಕಳ್ಳರ ಕಾಟ ತಪ್ಪಿಸಲು ಮುನ್ನೆಚ್ಚರಿಕೆ ಕ್ರಮ

ಅಡಿಕೆ ಕಳವು ತಡೆಗೆ ಸಿ.ಸಿ.ಟಿ.ವಿ ಕ್ಯಾಮೆರಾ

• ಡಿ.ಕೆ.ಬಸವರಾಜು

ದಾವಣಗೆರೆ: ಜಿಲ್ಲೆಯಾದ್ಯಂತ ಅಡಿಕೆ ಕಳವು ಪ್ರಕರಣಗಳು ಹೆಚ್ಚುತ್ತಿವೆ. ಮುನ್ನೆಚ್ಚರಿಕೆ ಕ್ರಮವಾಗಿ ಬೆಳೆಗಾರರು ತೋಟಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಮೊರೆ ಹೋಗುತ್ತಿದ್ದಾರೆ.

ಕ್ವಿಂಟಲ್ ಅಡಿಕೆಗೆ ಸದ್ಯ ₹ 50,000ದವರೆಗೆ ಬೆಲೆ ಇದೆ. ಕಳ್ಳರ ಕಾಟ ಹೆಚ್ಚಾಗಿದ್ದು, ರೈತರಿಗೆ ತೋಟ ಕಾಯುವುದೇ ಸವಾಲಾಗಿದೆ. ಈ ಬಾರಿ ಅಧಿಕ ಮಳೆಯಿಂದ ಕೊಳೆರೋಗ ಕಾಣಿಸಿಕೊಂಡಿದ್ದು, ಅಡಿಕೆ ಉದುರಿ ಇಳುವರಿ ಕಡಿತಗೊಂಡಿದೆ. ಇನ್ನೊಂದೆಡೆ, ಕಳ್ಳರ ಕಾಟ ಹೆಚ್ಚಿರುವುದು ರೈತರನ್ನು ಕಂಗಾಲಾಗಿಸಿದೆ.

ತಾಲ್ಲೂಕಿನ ಎಲೆಬೇತೂರು ಗ್ರಾಮದ ಜಿ.ಎಂ.ಬಸವರಾಜ್ ಅವರ ಪುತ್ರ ನಂದೀಶ್ ಮೂರೂವರೆ ಎಕರೆ ಅಡಿಕೆ ತೋಟಕ್ಕೆ ₹ 30,000 ವೆಚ್ಚದಲ್ಲಿ ನಾಲ್ಕು ಅಲ್ಟ್ರಾ ಎಚ್.ಡಿ. ಸಾಮರ್ಥ್ಯದ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿದ್ದಾರೆ. ಕಳವು ಪ್ರಯತ್ನಗಳಿಂದ ಎಚ್ಚೆತ್ತುಕೊಂಡಿದ್ದು, ಕ್ಯಾಮೆರಾ ಮೊರೆ ಹೋಗಿದ್ದಾರೆ.

ದಾವಣಗೆರೆ ತಾಲ್ಲೂಕಿನ ಎಲೆಬೇತೂರಿನ ರೈತ ನಂದೀಶ್ ಅವರ ತೋಟದ ಬಳಿ ಅಳವಡಿಸಿರುವ ಸಿ.ಸಿ. ಟಿವಿ ಕ್ಯಾಮೆರಾ

ಪ್ರಜಾವಾಣಿ ವಿಶೇಷ

'ನಾವು ಅಳವಡಿಸಿರುವ ಕ್ಯಾಮೆರಾಗಳು ಫೋಕಸ್ ಲೈಟ್ ವ್ಯವಸ್ಥೆಯನ್ನೂ ಒಳಗೊಂಡಿವೆ. ರಾತ್ರಿ ವೇಳೆ ಪ್ರಖರತೆ ಇರುವುದರಿಂದ ಕಳ್ಳರು ಹೆದರುತ್ತಾರೆ. ಇತ್ತೀಚೆಗೆ ಪಕ್ಕದ ತೋಟಕ್ಕೆ ಬಂದಿದ್ದ ಕಳ್ಳರು ಲೈಟ್ ನೋಡಿ ನಮ್ಮ ತೋಟಕ್ಕೆ ಬರುವ ಧೈರ್ಯ ಮಾಡಲಿಲ್ಲ' ಎಂದು ನಂದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕ್ಯಾಮೆರಾ ಲಿಂಕ್ ಅನ್ನು ವೈಫೈ ಮೂಲಕ ಮೊಬೈಲ್ ಫೋನ್‌ಗೆ ಸಂಪರ್ಕಿಸಿ, ಮನೆಯಲ್ಲೇ ತೋಟದಲ್ಲಿನ ಆಗುಹೋಗು ವೀಕ್ಷಿಸುತ್ತೇವೆ. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಗಳನ್ನು 30 ದಿನ ಸಂಗ್ರಹಿಸಿಡಬಹುದು. ಮೊಬೈಲ್‌ನಲ್ಲಿ ಒಂದು ದಿನದ ರೆಕಾರ್ಡಿಂಗ್ ವೀಕ್ಷಿಸಬಹುದು' ಎಂದೂ ಮಾಹಿತಿ ನೀಡಿದರು.

'ಕಳ್ಳರು ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಕಳವಿಗೆ ಯತ್ನಿಸಿದ್ದರು. ಅದನ್ನು ತಪ್ಪಿಸಲೆಂದೇ ಯುಪಿಎಸ್ ಅಳವಡಿಸಿದ್ದೇವೆ. ನಮ್ಮಂತೆಯೇ ಜಿಲ್ಲೆಯ ವಿವಿಧೆಡೆ ಅನೇಕ ರೈತರು ಫಸಲು ಉಳಿಸಿಕೊಳ್ಳಲು ತೋಟಕ್ಕೆ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿದ್ದು, ಕಳ್ಳರ ಪತ್ತೆಗೆ ನೆರವಾಗುತ್ತಿವೆ' ಎಂದೂ ಅವರು ಹೇಳಿದರು.

ಚಿಲ್ಲರೆ ಖರೀದಿದಾರರ ಮೇಲೆ ನಿಗಾ: 'ಅಡಿಕೆ ಕದ್ದವರು ಚಿಲ್ಲರೆ ವ್ಯಾಪಾರಿಗಳಿಗೆ ಮಾರಾಟ ಮಾಡಿರುವ ಮೂರು ಪ್ರಕರಣಗಳು ಪತ್ತೆಯಾಗಿವೆ. ಈ ಬಗ್ಗೆ ನಿಗಾ ಇರಿಸಿದ್ದೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ತಿಳಿಸಿದರು.

ಒಣಗಿಸಲು ಇಟ್ಟಿದ್ದ ಅಡಿಕೆಯನ್ನೇ ಕದ್ದಿದ್ದರು

ಸೆಪ್ಟೆಂಬರ್‌ನಲ್ಲಿ ಚನ್ನಗಿರಿ ತಾಲ್ಲೂಕಿನ ಹಿರೇಕೋಗಲೂರು ಬಳಿ ಒಣಗಿಸಲು ಇಟ್ಟಿದ್ದ ಅಡಿಕೆಯನ್ನೇ ಕಳ್ಳರು ಹೊತ್ತೊಯ್ದಿದ್ದರು. ಮಾಯಕೊಂಡ ಸಮೀಪದ ಸುಲ್ತಾನಿಪುರದಲ್ಲಿ ತೋಟದಲ್ಲಿ ಇರಿಸಿದ್ದ 1.50 ಕ್ವಿಂಟಲ್ ಹಸಿ ಅಡಿಕೆಯನ್ನು ಕದಿಯುವಾಗ ರೈತರೇ ಕಳ್ಳರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಈ ರೀತಿ ಜಿಲ್ಲೆಯಲ್ಲಿ ಹಲವು ಕಳವು ಪ್ರಕರಣಗಳು ನಡೆದಿವೆ.

ಕಳವು ಹೆಚ್ಚಾಗಿರುವ ಮಾಯಕೊಂಡ, ಚನ್ನಗಿರಿ ಕಡೆ ನಾಕಾಬಂದಿಗೆ ಕ್ರಮ ಕೈಗೊಳ್ಳಲಾಗಿದೆ. ಆದರೂ ಒಳರಸ್ತೆಗಳ ಮೂಲಕ ಕಳ್ಳರು ನುಸುಳುವುದರಿಂದ ಕ್ಯಾಮೆರಾ ಅಳವಡಿಸಲು ಸಲಹೆ ನೀಡಲಾಗಿದೆ
ಸಿ.ಬಿ. ರಿಷ್ಯಂತ್
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಮಂಗಳವಾರದ ಉಷ್ಣಾಂಶ
28° ಗರಿಷ್ಠ 18° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ.
ಅಲ್ಲಲ್ಲಿ ಮಳೆ ಸಾಧ್ಯತೆ.

ಹವಾಮಾನ
ಬುಧವಾರ 25° 18° | ಗುರುವಾರ 24° 18° | ಶುಕ್ರವಾರ 26° 19°

'ವಿದ್ಯಾರ್ಥಿಗಳಿಂದ 17ಕ್ಕೆ ರಾಜ್ಯಮಟ್ಟದ ಬಂದ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯಾರ್ಥಿ ವೇತನ, ಸಾರಿಗೆ ವ್ಯವಸ್ಥೆ, ಫಲಿತಾಂಶ ವಿಳಂಬ, ಉಚಿತ ಬಸ್ ಪಾಸ್ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇದೇ 17ರಂದು ವಿದ್ಯಾರ್ಥಿಗಳು ರಾಜ್ಯ ಮಟ್ಟದ ಬಂದ್‌ಗೆ ಕರೆ ನೀಡಿದ್ದು, ಈ ಹೋರಾಟದ ನೇತೃತ್ವವನ್ನು ಎನ್‌ಎಸ್‌ಯುಐ ವಹಿಸಲಿದೆ' ಎಂದು ಎನ್‌ಎಸ್‌ಯುಐ ರಾಜ್ಯ ಘಟಕದ ಅಧ್ಯಕ್ಷ ಕೀರ್ತಿ ಗಣೇಶ್ ತಿಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಹಿಂದೆ ಎಲ್ಲ ಸರ್ಕಾರಗಳು ವಿದ್ಯಾರ್ಥಿ ವೇತನ, ಬ್ಯಾಂಕ್ ಸಾಲ, ಸಾರಿಗೆ ವ್ಯವಸ್ಥೆ, ಬಸ್ ಪಾಸ್ ನೀಡುತ್ತಿದ್ದವು. ಆದರೆ, ಈಗಿನ ಸರ್ಕಾರ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡದಂತೆ ನೀತಿ ರೂಪಿಸುತ್ತಿದೆ' ಎಂದು ದೂರಿದರು.

'ಪರೀಕ್ಷೆ ನಡೆದು ಒಂದು ವರ್ಷವಾದರೂ ಫಲಿತಾಂಶ ನೀಡಲು ವಿಶ್ವವಿದ್ಯಾಲಯಗಳು ತಯಾರಿಲ್ಲ. ವಿದ್ಯಾರ್ಥಿ ವೇತನ ವಿಚಾರಕ್ಕೆ ಬಂದರೆ, ಕೋವಿಡ್ ನಂತರವೂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿಲ್ಲ. ಸುಮಾರು 1 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿಲ್ಲ. ಈ ಸಮಸ್ಯೆಯಿಂದ ವಿದ್ಯಾರ್ಥಿಗಳು ಶಿಕ್ಷಣ ನಿಲ್ಲಿಸಿ ಕೆಲಸಕ್ಕೆ ಹೋಗುತ್ತಿದ್ದಾರೆ' ಎಂದು ಅವರು ಹೇಳಿದರು.

'ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಸರ್ಕಾರ, ವಿಶ್ವವಿದ್ಯಾಲಯಗಳು ಸರಿಯಾಗಿ ಸ್ಪಂದಿಸುತ್ತಿಲ್ಲ. ಹೀಗಾಗಿ, ರಾಜ್ಯದ ಎಲ್ಲ ವಿದ್ಯಾರ್ಥಿಗಳ ಅಭಿಪ್ರಾಯ ಪಡೆದು ಬಂದ್‌ಗೆ ಕರೆ ನೀಡಲಾಗುತ್ತಿದೆ' ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಯುಐ ಅಧ್ಯಕ್ಷ ಲಕ್ಷ್ಯರಾಜ್ ಮಾತನಾಡಿ, 'ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಸಮಯಕ್ಕೆ ಸರಿಯಾಗಿ ಪರೀಕ್ಷೆ ಫಲಿತಾಂಶ ನೀಡಬೇಕು. ಸರ್ಕಾರಿ ಕಾಲೇಜುಗಳಲ್ಲಿ ಶುಲ್ಕ ಏರಿಕೆ ಮಾಡಲಾಗಿದ್ದು, ಅದನ್ನು ಸರಿಪಡಿಸಬೇಕು' ಎಂದು ಅವರು ಆಗ್ರಹಿಸಿದರು.

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ)
ಸಂಖ್ಯೆ: 31/2022–23 ದಿನಾಂಕ: 30.11.2022

(ರಸ್ತೆ ಸೇತುವೆ ಕಟ್ಟಡ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1ರಂತೆ ಏಕ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ–ಲಕೋಟೆ ಪದ್ಧತಿಯಲ್ಲಿ** ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **ದಿನಾಂಕ: 02.12.2022 ರಿಂದ 09.12.2022ರ ಸಂಜೆ 4.00 ಘಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.

(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **05.12.2022 (ಸಂಜೆ 3.00 ಘಂಟೆಗೆ ಕಛೇರಿ ವೇಳೆಯಲ್ಲಿ)** (2) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 09.12.2022 (ಸಂಜೆ 4.00 ಘಂಟೆಯವರೆಗೆ)** (3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **12.12.2022 ಬೆಳಿಗ್ಗೆ 11.00 ಘಂಟೆಗೆ.** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 360/ಎಂ.ಸಿ.ಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ – 562110.
ದೂರವಾಣಿ: 080–29907088, ಇ–ಮೇಲ್: dcfrural@gmail.com

ಸಂಖ್ಯೆ: ಎ8/ಉ.ಅ.ಸ(ಬೆಗ್ರಾವಿ)/ಕಿ.ಅ.ಉ/ವಿವ–01/2022–23 ದಿನಾಂಕ: 03.12.2022

ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

2022–23ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ವಿಭಾಗದ ದೇವನಹಳ್ಳಿ, ಹೊಸಕೋಟೆ, ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ವಲಯಗಳ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ದೊರೆಯುವ ಕಿರು ಅರಣ್ಯ ಉತ್ಪನ್ನಗಳನ್ನು ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲು ಅರಣ್ಯ ಗುತ್ತಿಗೆದಾರರು ಮತ್ತು ಸಾರ್ವಜನಿಕರಿಂದ ಟೆಂಡರ್ ಕಂ ಬಹಿರಂಗ ಹರಾಜನ್ನು **ದಿನಾಂಕ: 22.12.2022** ರಂದು ಆಹ್ವಾನಿಸಲಾಗಿದೆ. ಒಂದು ವೇಳೆ ಸದರಿ ದಿನಾಂಕ ಟೆಂಡರ್ ಕಂ ಹರಾಜಿನಲ್ಲಿ ಯಾರೂ ಭಾಗವಹಿಸದೇ ಇದ್ದಲ್ಲಿ ಮರು ಟೆಂಡರ್ ಕಂ ಹರಾಜನ್ನು **ದಿನಾಂಕ: 28.12.2022** ರಂದು ನಡೆಸಲಾಗುವುದು. ಹೆಚ್ಚಿನ ವಿವರಗಳನ್ನು ವಿಭಾಗೀಯ ಕಛೇರಿಯಿಂದ ಹಾಗು ವಲಯ ಕಛೇರಿಗಳಿಂದ ಪಡೆದುಕೊಳ್ಳಬಹುದು.

ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ
ವಾಸಾಸಂಇ/ಉನಿಕ/ಮಣಿಪಾಲ್/3365/2022–23

ಪ್ರತಿ 5 ಸೆಕೆಂಡಿಗೆ ಮೈದಾನದಷ್ಟು ಮರುಭೂಮಿಯಾಗಿ ಪರಿವರ್ತನೆ: ಆತಂಕ

'ಮಣ್ಣು ರಕ್ಷಿಸದಿದ್ದರೆ ವಿನಾಶ'

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಸೋಮವಾರ ಸದ್ಗುರು ಜಗ್ಗಿ ವಾಸುದೇವ್ ಅವರು ಬೈಕ್ ರ್ಯಾಲಿ ನಡೆಸಿದರು. – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಮಣ್ಣಿನ ಫಲವತ್ತತೆ ಕುಸಿದು ಮರುಭೂಮಿಯಾಗುತ್ತಿರುವ ಈ ಸಂದರ್ಭದಲ್ಲಿ ಸರ್ಕಾರಗಳು ಸಂರಕ್ಷಣೆ ಕಾರ್ಯಕ್ಕೆ ಮುಂದಾಗಬೇಕು' ಎಂದು ಈಶಾ ಫೌಂಡೇಷನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಪ್ರತಿಪಾದಿಸಿದರು.

ವಿಶ್ವ ಮಣ್ಣು ದಿನದ ಅಂಗವಾಗಿ ಸೋಮವಾರ 'ಮಣ್ಣು ಉಳಿಸಿ' ಅಭಿಯಾನದ ಅಂಗವಾಗಿ ಕೈಗೊಂಡಿರುವ ಯೋಜನೆಗಳು ಮತ್ತು ಪ್ರಸ್ತುತ ಪರಿಸ್ಥಿತಿ ವಿವರಿಸಿದ ಅವರು, 'ಕಳೆದ 25 ವರ್ಷಗಳಲ್ಲಿ ಶೇ 10ರಷ್ಟು ಭೂಮಿ ಮರುಭೂಮಿಯಾಗಿ ಪರಿವರ್ತನೆಗೊಂಡಿದೆ. ಪ್ರತಿ ಐದು ಸೆಕೆಂಡಿಗೆ ಒಂದು ಫುಟ್‌ಬಾಲ್ ಮೈದಾನದಷ್ಟು ಜಮೀನಿನಲ್ಲಿನ ಮಣ್ಣು ಫಲವತ್ತತೆ ಕಳೆದುಕೊಂಡು ಮರುಭೂಮಿಯಾಗುತ್ತಿದೆ. ಹೀಗಾಗಿ, ಮಣ್ಣಿನ ರಕ್ಷಣೆಗೆ ಮುಂದಾಗದಿದ್ದರೆ ವಿನಾಶ ಖಂಡಿತ' ಎಂದು ಎಚ್ಚರಿಕೆ ನೀಡಿದರು.

'ಜನಾಂದೋಲನದಿಂದ ಮಾತ್ರ ಮಣ್ಣಿನ ಸಂರಕ್ಷಣೆ ಕಾರ್ಯ ಸಾಧ್ಯ. ಆಗ ಸರ್ಕಾರಗಳು ಸಹ ಮಣ್ಣು ಉಳಿಸುವ ಕಾರ್ಯಕ್ಕೆ ಮುಂದಾಗುತ್ತವೆ. ಇದುವರೆಗೆ ಕೈಗೊಂಡ ಅಭಿಯಾನದ ಪ್ರತಿಫಲವಾಗಿ 81 ರಾಷ್ಟ್ರಗಳು ಮಣ್ಣು ಉಳಿಸಿ ಕಾರ್ಯಕ್ಕೆ ನೀತಿಗಳನ್ನು ರೂಪಿಸುವುದಾಗಿ ಘೋಷಿಸಿವೆ. ಚೀನಾ ಈಗಾಗಲೇ ಮಣ್ಣಿನ ಗುಣಮಟ್ಟ ಕುರಿತು ಸಮೀಕ್ಷೆ ಆರಂಭಿಸಿದೆ' ಎಂದು ತಿಳಿಸಿದರು.

'ಕೈಗಾರಿಕೆಗಳ ದೃಷ್ಟಿಯಿಂದ ನೀತಿಗಳನ್ನು ರೂಪಿಸುವ ಬದಲು ಕೃಷಿ ಪರವಾದ ನೀತಿಗಳನ್ನು ರೂಪಿಸುವುದು ಅಗತ್ಯವಿದೆ. ಮಣ್ಣಿಗಿಂತ ಯಾವುದೂ ಮುಖ್ಯವಲ್ಲ. ಮಣ್ಣಿನ ಫಲವತ್ತತೆ ಕುಸಿದರೆ 27 ಸಾವಿರ ಪ್ರಬೇಧಗಳು ನಾಶವಾಗಬಹುದು. ಬಹುತೇಕ ಆರೋಗ್ಯ ಸಮಸ್ಯೆಗಳಿಗೆ ಮಣ್ಣು ಪ್ರಮುಖ ಕಾರಣವಾಗಿದೆ. ದೇಶದಲ್ಲಿ ಕೇವಲ ಶೇ 0.68 ಮಣ್ಣು ಫಲವತ್ತವಾಗಿ ಉಳಿದಿದೆ. ಈಗ ಲಭ್ಯವಿರುವ ಆಹಾರದಲ್ಲಿ ಪೌಷ್ಟಿಕಾಂಶಗಳ ಕೊರತೆ ಇದೆ. ಸಾವಯವ ಆಹಾರ ಎನ್ನುವುದು ಸಹ ಕೇವಲ ಮಾರುಕಟ್ಟೆ ವಸ್ತುವಾಗಿದೆ' ಎಂದು ಅಭಿಪ್ರಾಯಪಟ್ಟರು.

ಇಸ್ರೊ ಮಾಜಿ ಅಧ್ಯಕ್ಷ ಕಿರಣ್ ಕುಮಾರ್ ಹಾಗೂ ಪರಿಸರವಾದಿ ರೇವತಿ ಕಾಮತ್ ಇದ್ದರು.

ಬೈಕ್ ರ್ಯಾಲಿ: ವಿಶ್ವ ಮಣ್ಣಿನ ದಿನಾಚರಣೆ ಅಂಗವಾಗಿ ಸದ್ಗುರು ಜಗ್ಗಿ ವಾಸುದೇವ್ ಅವರು ಸೋಮವಾರ ಬೈಕ್ ರ್ಯಾಲಿ ನಡೆಸಿದರು.

ನಗರದ ಹೆಬ್ಬಾಳದಿಂದ ವಿಠಲ್ ಮಲ್ಯ ರಸ್ತೆಯಲ್ಲಿನ ಜೆ.ಡಬ್ಲ್ಯೂ. ಮಾರಿಯಟ್ ಹೋಟೆಲ್‌ವರೆಗೆ ರ್ಯಾಲಿ ನಡೆಸಿದರು. ಸದ್ಗುರು ರ್ಯಾಲಿ ಸಾಗುವ ಮಾರ್ಗದಲ್ಲಿ ಕಾರ್ಯಕರ್ತರು ಮಣ್ಣು ಉಳಿಸಿ ಕುರಿತ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

ಜ.15ಕ್ಕೆ ಪ್ರತಿಮೆ ಅನಾವರಣ

ಚಿಕ್ಕಬಳ್ಳಾಪುರ ತಾಲ್ಲೂಕಿನ ಆವಲಗುರ್ಕಿ ಗ್ರಾಮದ ಬಳಿಯ ಜಾಲಾರಿ ನರಸಿಂಹ ಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ನಿರ್ಮಿಸುತ್ತಿರುವ ಮಹಾಶಿವ ಆದಿಯೋಗಿ ಪ್ರತಿಮೆ ಜ.15ರಂದು ಅನಾವರಣಗೊಳ್ಳಲಿದೆ. ಉಪರಾಷ್ಟ್ರಪತಿ ಅವರು ಈ ಪ್ರತಿಮೆ ಅನಾವರಣಗೊಳಿಸಲಿದ್ದಾರೆ ಎಂದು ಜಗ್ಗಿ ವಾಸುದೇವ್ ತಿಳಿಸಿದರು.

'ಕಾನೂನುಬಾಹಿರ ಕಾರ್ಯ ಇಲ್ಲ'

'ಈಶಾ ಫೌಂಡೇಷನ್ ಕಾನೂನುಬಾಹಿರವಾಗಿ ಅಥವಾ ಕಾನೂನುಗಳನ್ನು ಮೀರಿ ಯಾವುದೇ ಕಾರ್ಯಗಳನ್ನು ಕೈಗೊಂಡಿಲ್ಲ' ಎಂದು ಜಗ್ಗಿ ವಾಸುದೇವ್ ಹೇಳಿದರು.

ಈಶಾ ಫೌಂಡೇಷನ್ ಕೆಲವೆಡೆ ಅರಣ್ಯ ಒತ್ತುವರಿ ಮಾಡಿ, ಕಾನೂನು ಬಾಹಿರವಾಗಿ ಕಟ್ಟಡಗಳನ್ನು ನಿರ್ಮಿಸಲಾಗಿದೆ ಎನ್ನುವ ಆರೋಪಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, 'ಕಾನೂನುಬಾಹಿರವಾಗಿ ಯಾವುದಾದರೂ ಕಾರ್ಯ ಕೈಗೊಂಡಿದ್ದರೆ ಬಹಿರಂಗಪಡಿಸಿ. ಈ ಬಗ್ಗೆ ಸಂಶೋಧನೆ ಮಾಡಿ, ನನಗೆ ತಿಳಿಸಿ. ಒಂದು ವೇಳೆ ಅಂತಹ ಕೃತ್ಯಗಳು ನಡೆದಿದ್ದರೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಅದು ಸರ್ಕಾರದ ಕರ್ತವ್ಯ' ಎಂದರು.

ಮಯೂರ ಓದಿರಿ

ಕನ್ನಡ ರಸಪ್ರಶ್ನೆ ಕಾರ್ಯಕ್ರಮ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಭಾಗವಾಗಿ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಮಂಗಳವಾರದಿಂದ ರಸಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಈ ಕಾರ್ಯಕ್ರಮವು ಕನ್ನಡದ ಕುರಿತ ಅರಿವನ್ನು ಹೆಚ್ಚಿಸುವುದರ ಜತೆಗೆ ಸಮ್ಮೇಳನಕ್ಕೆ ಪೂರಕವಾದ ವಾತಾವರಣ ಕಲ್ಪಿಸುವ ಉದ್ದೇಶ ಹೊಂದಿದೆ. ಪರಿಷತ್ತಿನ ಯುಟ್ಯೂಬ್, ಫೇಸ್‌ಬುಕ್ ಹಾಗೂ ಟ್ವಿಟರ್ ಖಾತೆಯ ಮೂಲಕ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು ಎಂದು ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

EXCLUSIVELY FOR
Retired, Sr.Citizens, VRS, Pensioner's, Entrepreneurs, Homemaker's. Opportunity to Earn Income upto 1.5 Lac p.m. Contact:- 8861561347 /9686399918

Marketing & Sales

URGENTLY REQUIRED Sales Executives For An Established UPVC Products For Bangalore Contact 7022723432

Multiple Vacancy

IMMEDIATE APPOINTMENT HRD,Administration,Accounts,Manager, Supervisor, Software,Hardware,Electronics,Mechanical,Electrical Engineers 7676760299/7676760399

INTRA LABS
WANTED Since 42 years
WHO-GMP certified company
INTRA LABS
Accounts Assistant & Sales Executive with Good Communication Skills: Hindi, English, Kannada
Contact No.: 9901333611 / 9019112223
No. 39, 1st Floor, New Timberyard Layout, Byatarayanpura, Mysore Road, Bangalore-560 026.
Ph : 080-26754892 / 93, E-Mail : feedbackintralabs@gmail.com, marketingintralabsmys@gmail.com,

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

BUSINESS

Business Offers

Finance

GREEN HERBAL 2 Lakh Investment Required Daily Collection Contact:- 8892501007/ 9606701007

NRI'S INVESTMENT
And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

Business to Business

Business

NRI INVESTMENT
and Finance Introducing new purchase finance for Buying Houses, Flats, Plots upto 100% Loan Available on Low Interest for Low & Middle Income Group Contact- 7411265189

PERSONAL

Change of Name

CHANGE OF NAME
I, **Harshitha H.U,** D/o. H.S. Umesha, Aged: 22 years, Residing at: 110, 'Shiva Sai Krupa', 1st Main, 4th Cross, Near Mother Dairy, Matru Layout, Yelahanka New Town, Bangalore - 560 064. **HARSHITHA H.U.** Passport my name is shown **HARSHITHA UMESHA.** I declare **Harshitha H.U.** and Harshitha Umesha both are name of same person. My correct name is **HARSHITHA H.U.** vide affidavit dated: 30.11.2022 sworn before Notary G.R. Ravichandra Reddy, Bangalore.

I, KANTHARAJU, S/o. Kempegowda, Residing at #16, Brundavana Layout, Dasanapura, K.G. Srikantapura, Lakshmipura, Bangalore Rural- 562162, have changed my name to KANTHARAJU PRASADIHALLI KEMPEGOWDA, vide affidavit dated 05/12/2022, notary B.V. Nagabhushana, Bangalore.

I RAJESH HARI R/a, #1404, 25th main, BSK 2nd Stage, Bangalore 560070 Have Changed my Name To IYER RAJESH HARI Vide Affidavit Dated 05/12/2022 before Notary N. Nagappa Bangalore

CHANGE OF NAME
I, **Mohammed Rafiq Azeez,** residing at No. 1/4, 3rd Cross, Jakkur Village, Behind Noorani Masjid, Yelahanka, Bangalore - 64, have changed my name to **Mohammed Rafi** vide affidavit dated: 05.12.2022, before Notary C.V. Earappa, Bangalore. Henceforth I shall be called **Mohammed Rafi** only.

CHANGE OF NAME
I, **#14412156N, Ex-Naik, Anil Kumar,** Residing at Tikath (Atroth), Post: Bisawar, Tehsil: Sadabad, Dist: Mathura, State: Uttar Pradesh, declare that my daughter's name is wrongly mentioned in my service record as **Sasi,** instead of **Kumari Sasi,** vide affidavit dated: 18.11.2022, before Notary B. Seshagiri, Bengaluru.

I, MAKHTHIYAR, Residing at #316, K.K.Road, T.Dasarahalli, Bangalore-57 have changed my name as MUKHIYAR UNNISA, vide affidavit dated 28/11/2022 before Notary V.Anjanappa, Bengaluru

I, MADHANGI MANIKANTAN R/a#G6, SLS Symphony, Sonata, Bhuvaneswari Nagar, Amruthahalli Dasarahalli, Bengaluru-560024 have changed name to MADHANGI BALASUBRAMANIAN vide affidavit 05-12-2022 before Notary Hemalatha Bangalore.

I, KESHAVA Murthy S/o Somappa, resident of Santhekallahalli Village and post, Chintamani Taluk, Chikkaballapur District. Have changed my fathers name from Somanna to Somappa to vide affidavit dated 05.12.2022 before Notary G.S. Shivaprakash Rao Chintamani Henceforth I shall be called as Keshava Murthy S/o Somappa only

Lost

I, HARISH Kumar. S, have lost my 10th Marks Card, Registration #20180664129 April 2018, Stracey Memorial High School, 12th Marks Card Registration #2018P410, year 2021 T.C. #SJPUEC/2021/0030, St.Joseph's Evening College, while travelling. Finders please contact: 8310530869.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PUBLIC NOTICE

ಸಾರ್ವಜನಿಕ ಪ್ರಕಟಣೆ

ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ("ಆರ್‌ಬಿಐ") ಇವರಿಂದ ದಿನಾಂಕ 2 ಸೆಪ್ಟಂಬರ್ 2016 ರಂದು ಹೊರಡಿಸಲಾಗಿರುವ, ನಂಬರ್ ಡಿಎನ್‌ಬಿಆರ್.ಪಿಡಿ. 009/03.10.119/2016–17 ಹೊಂದಿರುವ, ಮಾಸ್ಟರ್ ಡೈರೆಕ್ಷನ್ ಆನ್ ನಾನ್–ಬ್ಯಾಂಕಿಂಗ್ ಫೈನಾನ್ಷಿಯಲ್ ಕಂಪನಿ – ಅಕೌಂಟ್ ಅಗ್ರಿಗೇಟರ್ (ರಿಜರ್ವ್ ಬ್ಯಾಂಕ್) ಡೈರೆಕ್ಷನ್ಸ್, 2016ಕ್ಕೆ ಸಂಬಂಧಿಸಿದಂತೆ 1) **ಪರ್ಫಿಯೊಸ್ ಅಕೌಂಟ್ ಅಗ್ರಿಗೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್,** ಕಂಪನಿಗಳ ಕಾಯ್ದೆ, 2013ರ ಅಡಿಯಲ್ಲಿ ಸಂಸ್ಥಾಪಿತ, ಮತ್ತು ನಂ. 66/5–25, 5ನೇ ಮಹಡಿ, ಇಂಡಿಕ್ಯೂಬ್ ಹೆಚ್‌ಎಂ ವಿಭಾ ಬಿಲ್ಡಿಂಗ್ ಲಸ್ಕರ್, ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು, ಕರ್ನಾಟಕ – 560030, ಭಾರತ ವಿಳಾಸದಲ್ಲಿ ತನ್ನ ನೋಂದಾಯಿ ಕಚೇರಿ ಹೊಂದಿರುವ (**"ಕಂಪನಿ"**), 2) **ಐಸಿಐಸಿಐ ಬ್ಯಾಂಕ್ ಲಿಮಿಟೆಡ್,** ಕಂಪನಿಗಳ ಕಾಯ್ದೆ, 2013ರ ಅಡಿಯಲ್ಲಿ ಸಂಸ್ಥಾಪಿತ, ಮತ್ತು ಐಸಿಐಸಿಐ ಬ್ಯಾಂಕ್ ಟವರ್, ಚಾಕಲಿ ಸರ್ಕಲ್ ಹತ್ತಿರ, ಓಲ್ಡ್ ಪಾದ್ರಾ ರೋಡ್, ವಡೋದರಾ, ಗುಜರಾತ್ – 390007, ಭಾರತ ವಿಳಾಸದಲ್ಲಿ ತನ್ನ ನೋಂದಾಯಿತ ಕಚೇರಿ ಹೊಂದಿರುವ (**"ಐಸಿಐಸಿಐ"**), 3) **ಹೆಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್,** ಕಂಪನಿಗಳ ಕಾಯ್ದೆ, 2013ರ ಅಡಿಯಲ್ಲಿ ಸಂಸ್ಥಾಪಿತ, ಮತ್ತು ಹೆಚ್‌ಡಿಎಫ್‌ಸಿ ಬ್ಯಾಂಕ್ ಹೌಸ್, ಸೇನಾಪತಿ ಬಾಪಟ್ ಮಾರ್ಗ, ಲೋವರ್ ಪರೇಲ್, ಮುಂಬೈ, ಮಹಾರಾಷ್ಟ್ರ – 400013, ಭಾರತ ವಿಳಾಸದಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವ (**"ಹೆಚ್‌ಡಿಎಫ್‌ಸಿ"**) ಇವರು, 4) **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ,** ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆಕ್ಟ್, 1955 ರ ಅಡಿಯಲ್ಲಿ ಸಂಸ್ಥಾಪಿತ ಶಾಸನಬದ್ಧ ಸಂಸ್ಥೆ ಮತ್ತು ಸ್ಟೇಟ್ ಬ್ಯಾಂಕ್ ಭವನ, ಕಾರ್ಪೊರೇಟ್ ಸೆಂಟರ್, ಮ್ಯಾಡಮ್ ಕಾಮಾ ರೋಡ್, ನಾರಿಮನ್ ಪಾಯಿಂಟ್, ಮುಂಬೈ, ಮಹಾರಾಷ್ಟ್ರ – 400021, ಭಾರತ (**"ಎಸ್‌ಬಿಐ"**) ವಿಳಾಸದಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿರುವ ಇವರು, ಹಾಗೂ 5) **ಬಜಾಜ್ ಫಿನ್‌ಸರ್ವ್ ವೆಂಚರ್ಸ್ ಲಿಮಿಟೆಡ್,** ಕಂಪನಿಗಳ ಕಾಯ್ದೆ, 2013ರ ಅರ್ಥದಲ್ಲಿನ ಒಂದು ಕಂಪನಿಯಾಗಿರುವ ಮತ್ತು ಬಜಾಜ್ ಫಿನ್‌ಸರ್ವ್ ಲಿಮಿಟೆಡ್, ಸರ್ವೆ ನಂ. 208/1ಬಿ, ಲೋಹಗಾಂವ್, ವಿಮಾನನಗರ, ಪುಣೆ, ಮಹಾರಾಷ್ಟ್ರ – 411014, ಭಾರತ (**"ಬಿಎಫ್‌ಎಸ್‌ವಿ"**) ವಿಳಾಸದಲ್ಲಿ ತನ್ನ ನೋಂದಾಯಿತ ಕಚೇರಿ ಹೊಂದಿರುವ ಇವರು, ಜಂಟಿಯಾಗಿ ಸದರಿ ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

ಸದರಿ ಕಂಪನಿಯು ಒಂದು ಪ್ರೈವೇಟ್ ಲಿಮಿಟೆಡ್ ಕಂಪನಿ ಆಗಿರುತ್ತದೆ ಮತ್ತು ಇತ್ತೀಚೆಗೆ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ಆಕ್ಟ್, 1934ರ ಸೆಕ್ಷನ್ 45ಐಎ ಅಡಿಯಲ್ಲಿ ಆರ್‌ಬಿಐ ಇವರಿಂದ ದಿನಾಂಕ 9 ನವಂಬರ್ 2021ರಂದು ಹೊರಡಿಸಲಾದ ನೋಂದಣಿ ಪ್ರಮಾಣಪತ್ರದ ಪ್ರಕಾರ, ಸದರಿ ಕಂಪನಿಯು ಆರ್‌ಬಿಐ'ನಲ್ಲಿ ಸದರಿ ಕಂಪನಿಯ ಅಕೌಂಟ್ ಅಗ್ರಿಗೇಟರ್ ಎಂದು ನೋಂದಣಿ ಪಡೆದುಕೊಂಡಿರುತ್ತದೆ. ಅಗತ್ಯ ಅನುಮೋದನೆಗಳ ಮತ್ತು ಸದರಿ ಕಂಪನಿಯಿಂದ ಹೊರಡಿಸಲಾಗಿರುವ ಹಾಗೂ ಕಂಪನಿಯ ಮತ್ತು ಐಸಿಐಸಿಐ, ಹೆಚ್‌ಡಿಎಫ್‌ಸಿ, ಎಸ್‌ಬಿಐ, ಮತ್ತು ಬಿಎಫ್‌ಎಸ್‌ವಿ (**"ಇನ್ವೆಸ್ಟರ್ಸ್"**) ಇವರೊಂದಿಗಿನ ದಿನಾಂಕ 28 ಜೂನ್2022ರ ಷೇರ್ ಸಬ್‌ಸ್ಕ್ರಿಪ್ಷನ್ ಅಗ್ರೀಮೆಂಟ್ ಅಡಿಯಲ್ಲಿನ ಕೆಲವು ಪೂರ್ವಭಾವಿ ಷರತ್ತುಗಳ ತೃಪ್ತಿಯ ನಿಬಂಧನೆಗಳ ಮೇರೆಗೆ, ಪ್ರಸ್ತುತ ಸದರಿ ಕಂಪನಿಯು, ಸಬ್‌ಸ್ಕ್ರೈಬ್ ಪಡೆದುಕೊಳ್ಳಲು ಉತ್ಸುಕ ಹೂಡಿಕೆದಾರರನ್ನು ಆಕರ್ಷಿಸಲು, ತನ್ನ ಪಾವತಿಸಲಾಗಿರುವ 38.16% ಇಕ್ವಿಟಿ ಕ್ಯಾಪಿಟಲ್ (ಅಗ್ರಿಗೇಟ್‌ನಲ್ಲಿನ) ಮೌಲ್ಯದ ಇಕ್ವಿಟಿ ಷೇರುಗಳನ್ನು ಹೊರಡಿಸಲು (**"ಪ್ರಪೋಸ್ಡ್ ಟ್ರಾನ್ಸಾಕ್ಷನ್"**) ಮುಂದಾಗಿದೆ. ಹೂಡಿಕದಾರರಿಂದ ಸಂಗ್ರಹವಾಗುವ ಹೂಡಿಕೆಯನ್ನು ಕಂಪನಿಯ ವ್ಯವಹಾರಗಳಿಗೆ ಬಳಸಿಕೊಳ್ಳಬೇಕೆಂದು ಉದ್ದೇಶಿಸಲಾಗಿರುತ್ತದೆ.

ಈ ಉದ್ದೇಶಿತ ವ್ಯವಹಾರದಿಂದಾಗಿ ಷೇರುದಾರಿಕೆಯಲ್ಲಿ ಬದಲಾವಣೆ ಆಗಲಿದ್ದು, ಕಂಪನಿಯ ಪಾವತಿಸಲಾಗಿರುವ 26%ಗೂ ಅಧಿಕ ಇಕ್ವಿಟಿ ಕ್ಯಾಪಿಲ್ ಮೌಲ್ಯವರ್ಧನೆ ಉಂಟಾಗುತ್ತದೆ ಮತ್ತು ಇದಕ್ಕೆ ಆರ್‌ಬಿಐ ಡೈರೆಕ್ಷನ್ಸ್ ಮಾದರಿಯಲ್ಲಿ ಆರ್‌ಬಿಐ ಅನುಮೋದನೆ ಬೇಕಾಗುತ್ತದೆ. ಈ ಸಂದರ್ಭದಲ್ಲಿ ಕಂಪನಿಯು ತನ್ನ ಉದ್ದೇಶಿತ ವ್ಯವಹಾರವನ್ನು (ಪ್ರಸ್ತಾವಿತ ಷೇರುದಾರಿಕೆಯಲ್ಲಿನ ಬದಲಾವಣೆಯೂ ಸೇರಿದಂತೆ) ಅನುಮೋದಿಸಬೇಕೆಂದು ಕೋರುತ್ತ, ದಿನಾಂಕ 28 ಜೂನ್ 2022 ರಂದು ಅರ್ಜಿ ಸಲ್ಲಿಸಿತ್ತು ಮತ್ತು ಸದರಿ ಅರ್ಜಿಯಲ್ಲಿನ ಉದದೇಶಿತ ವ್ಯವಹಾರಕ್ಕೆ ದಿನಾಂಕ 28 ನವಂಬರ್ 2022ರ ಆರ್‌ಬಿಐ ಪತ್ರದ ಮುಖೇನ ಅನುಮೋದನೆ ಕೂಡ ಲಭಿಸಿರುತ್ತದೆ (**"ಆರ್‌ಬಿಐ ಅಪ್ರೂವಲ್"**).

ಅಂತೆಯೇ, ಕಂಪನಿಯ ಉದ್ದೇಶಿತ ವ್ಯವಹಾರಕ್ಕೆ ಸಂಬಂಧಿಸಿದಂತೆ ಷೇರು ದಾರಿಕೆಯಲ್ಲಿ ಉಂಟಾಗುವ ಪ್ರಸ್ತಾವಿತ ಬದಲಾವಣೆ ಕುರಿತಂತೆ ಸಾರ್ವಜನಿಕರ ಗಮನಕ್ಕೆ ತರುವ ಉದ್ದೇಶದಿಂದ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ. ಸದರಿ ಉದ್ದೇಶಿತ ವ್ಯವಹಾರದಿಂದಾಗಿ ಯಾವುದೇ ವ್ಯಕ್ತಿಯ ಹಿತಾಸಕ್ತಿಗೆ ಧಕ್ಕೆ ಉಂಟಾಗುವಂತಿದ್ದಲ್ಲಿ, ಅಂತಹವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 30 (ಮೂವತ್ತು) ದಿನಗಳೊಳಗೆ, ತಮ್ಮ ಯಾವುದೇ ಆಕ್ಷೇಪಣೆಗಳನ್ನು, ತಮ್ಮ ಹಿತಾಸಕ್ತಿಯ ಸ್ವರೂಪ ಮತ್ತು ಆಕ್ಷೇಣೆಯ ಹಿನ್ನಲೆಗಳನ್ನು, ಕಾಂತರಾಜು ಹೆಚ್ ಜಿ ಇವರಿಗೆ kantharaju.hg@perfios-aa.com ಅಥವಾ info@perfios-aa.com ವಿಳಾಸಕ್ಕೆ ಇಮೇಲ್ ಬರೆಯುವ ಮೂಲಕ ತಿಳಿಸಬಹುದು ಅಥವಾ ಕಂಪನಿಯ ನೋಂದಾಯಿತ ಕಚೇರಿ ವಿಳಾಸಕ್ಕೆ (ಮೇಲೆ ತಿಳಿಸಲಾಗಿರುವ) ಬರೆದು ತಿಳಿಸತಕ್ಕದ್ದು.

ಸ್ಥಳ: ಬೆಂಗಳೂರು
ದಿನಾಂಕ: 04–12–2022

CONNECT ಕ್ಲಾಸಿಫೈಡ್ಸ್

Grand Flea Market in Collaboration with Chittara Presents
ಬೆಂಗಳೂರು
ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಮೇಳ
BANGALORE
ARTS AND CRAFTS MELA
2nd Dec 2022 to 11th Dec 2022
11 AM - 7 PM
10 Days Exhibition
Karnataka Chitrakala Parishath
Kumara Krupa Road, Bengaluru
100+ Stalls | Live Performance | Much More..!
Covid19 Safety Standards are in Place | Direct from Makers | Entry is Free!
For Details Contact : 6364685716 / 9036658774 | Direct from The Artisans
Visit and experience a rare contemporary form of Arts & Crafts, Clothing, Home Decor, Furniture, Handicrafts, Traditional Apparels, Women's Wear, Jewellery, Sarees, Men's Wear, Kids Wear, Toys, Organic Product, Fashion Accessories & plenty more products direct from the makers from all across India.

Shadow Show Live
Date : 10th December 2022
Timings : 5.30 pm - 6.30 pm

The Magic Show Live
Date : 11th December 2022
Timings : 5 pm to 7 pm

100+ Shopping Stalls | Live Performance | Much More!

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಕೋಲಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ, ನ್ಯೂ ಕೋಲಾರ ಆಸ್ಪತ್ರೆ ಕಟ್ಟಡ, ಕುವೆಂಪು ನಗರ, ಕೋಲಾರ–563101
ದೂರವಾಣಿ: 08152–229225, ಇಮೇಲ್: cdpoklr@gmail.com
ಸಂ: ಶಿ.ಅ.ಕೋ./ಮೊ.ಸಾ/ಟೆಂಡರ್/2022–23 ದಿನಾಂಕ: 02.12.2022

ಇ–ಟೆಂಡರ್ ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನೆ, ಕೋಲಾರ ವ್ಯಾಪ್ತಿಯ 464 ಅಂಗನವಾಡಿ ಕೇಂದ್ರಗಳಿಗೆ ಅರ್ಹ ಸಂಸ್ಥೆಗಳಿಂದ ಕೋಳಿ ಮೊಟ್ಟೆ ಸರಬರಾಜು ಮಾಡಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೇಲಿನ ವಿಳಾಸ/ ದೂರವಾಣಿ: 08152–229225 ರವರನ್ನು ಸಂಪರ್ಕಿಸುವುದು.

(1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸ್ವೀಕರಿಸುವ ಪ್ರಾರಂಭ ದಿನಾಂಕ: **01.12.2022.** (2) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **20.12.2022.** (3) ಟೆಕ್ನಿಕಲ್ (ತಾಂತ್ರಿಕ) ಬಿಡ್ ತೆರೆಯುವ ದಿನಾಂಕ: **23.12.2022.** (4) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ: **28.12.2022.** (5) ಸಲ್ಲಿಸಬೇಕಾದ ಇ.ಎಂ.ಡಿ. ಮೊತ್ತ: **ರೂ. 2,65,000/– (ಎರಡು ಲಕ್ಷ ಆರವತ್ತೈದು ಸಾವಿರ ರೂಪಾಯಿಗಳು).** (6) ವಾರ್ಷಿಕ ಅಂದಾಜು ಟೆಂಡರ್ ಮೊತ್ತ: **ರೂ.177.19 ಲಕ್ಷಗಳು.**

ಸಹಿ/–
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 399/ಎಂ.ಸಿ.ಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನ್ಯೂ ಫೋರಂ ಮಾಲ್‌ನಲ್ಲಿ ಲುಲು ಡೈಲಿ ಮಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲುಲು ಸಮೂಹವು ಕನಕಪುರ ರಸ್ತೆಯ ಪ್ರೆಸ್ಟೀಜ್ ಫಾಲ್ಕನ್ ಸಿಟಿಯ ನ್ಯೂ ಫೋರಂ ಮಾಲ್‌ನಲ್ಲಿ 'ಲುಲು ಡೈಲಿ' ಮಳಿಗೆಯನ್ನು ತೆರೆದಿದೆ. ಬೆಂಗಳೂರಿನಲ್ಲಿ ಸಮೂಹದ ಎರಡನೇ ಮಳಿಗೆ ಇದಾಗಿದೆ. ಪ್ರೆಸ್ಟೀಜ್ ಸಮೂಹದ ಎಂ.ಡಿ. ರಿಜ್ವಾನ್ ರಜಾಕ್ ಅವರು ಈ ಮಳಿಗೆಯನ್ನು ಉದ್ಘಾಟಿಸಿದರು.

ಹಣ್ಣು, ತರಕಾರಿಗಳು, ಡೈರಿ ಉತ್ಪನ್ನಗಳು, ಮಾಂಸ, ಮೀನು, ಸಿದ್ಧ ಆಹಾರ, ಶಾಕಾಹಾರ ಮತ್ತು ಮಾಂಸಾಹಾರಕ್ಕೆ ಪ್ರತ್ಯೇಕ ಕೌಂಟರ್‌ಗಳೊಂದಿಗೆ ಲೈವ್ ಕಿಚನ್ ಅನ್ನು ಈ ಮಳಿಗೆ ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

ಲುಲು ಸಮೂಹದ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎ.ವಿ. ಅನಂತರಾಂ, ಲುಲು ಸಮೂಹದ ಭಾರತ ಮತ್ತು ಒಮಾನ್ ನಿರ್ದೇಶಕ ಎಂ.ಎ. ನಿಷಾದ್, ಲುಲು ಗ್ರೂಪ್ ಇಂಡಿಯಾದ ಸಿಇಒ ರೆಜಿತ್ ರಾಧಾಕೃಷ್ಣನ್ ಮತ್ತು ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080–27934470/27935412
E-mail: hosakote.pa@gmail.com URL: www.hoskote-tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/31/2022–23 ದಿನಾಂಕ: 05–12–2022

ಸಾರ್ವಜನಿಕ ಪ್ರಕಟಣೆ

ವಿಷಯ: **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.**

ಅರ್ಜಿದಾರರು ಹಾಗೂ ಜಮೀನಿನ ಮಾಲೀಕರಾದ **ಶ್ರೀ ರಾಜಪ್ಪ ಬಿನ್ ಅಪ್ಪಾಜಪ್ಪ** ಇವರು ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಪುರ ಗ್ರಾಮದ ಸ.ನಂ.26/1 ರ ಪೈಕಿ 01 ಎಕರೆ 39 ಗುಂಟೆ ವಿಸ್ತೀರ್ಣದ ಜಮೀನನ್ನು **ಕೃಷಿ ಉದ್ದೇಶದಿಂದ ವಸತಿ ಉದ್ದೇಶಕ್ಕೆ** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ ಪ್ರಸ್ತಾಪಿತ ಜಮೀನನ್ನು **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿದ್ದು,** ಸದರಿ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆ ಯಾಗುವುದೆಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಪ್ರಸ್ತಾಪಿತ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ/ ಸೂಚನೆ/ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ **15 ದಿನಗಳ ಒಳಗಾಗಿ** ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.
ವಾಸಾಸಂಇ/ವಾ.ಪ್ರ/3395/ಅಡ್ವರ್ಟೋರ್/2022–23

PUBLIC NOTICE

NOTICE is hereby given to the public at large that we are investigating the clear & marketable title of (1) Sri. B.N. Rakesh, S/o Sri. B.H. Narayanaswamy and (2) Smt. Shruthi, W/o Sri.B.N.Rakesh, both at No.566, 7th A Main, "A" Sector, Yelahanka New Town, Bengaluru-560064, in respect of the all that piece and parcel of commercially converted land bearing Sy.No. 7/6 measuring 0-14½ Guntas and Sy. No. 7/7 measuirng 33 Guntas situated at Chikkaballapur Taluk and the land is bounded as under:

On or towards the East	: National High way No. 7 (AH 44)
On or towards the West	: Remaining Land in Sy.No. 7/6 and 7/7 Belonging to Sri. Ramachandrappa,
On or towards the North	: Land belonging to Sri. Krishnappa.
On or towards the South	: Remaining land in Sy.No.7/7 belonging To Sri. Ramachandrappa.

ALL PERSONS including individuals, Hindu undivided family, companies, banks, financial institution(s), non-banking financial institution(s), firms, association of persons or a body of individuals, whether incorporated or not, lenders and/or creditors having any benefits, objection, demand, claim, right, title and/or interest in respect of Land or any part or portion thereof, by way of sale, exchange, mortgage, pledge, charge, gift, trust, inheritance, succession, family arrangement/ settlement, bequest, possession, lease, tenancy, maintenance, easement, memorandum of understanding, license, share, assignment, lien, attachment, development rights, partnership, right of way, lis pendens, decree or order of any judicial/quasi-judicial authority, reservation, contracts/ agreement, power of attorney, option, FSI consumption, right of first refusal, pre-emption or any liability or commitment or otherwise of any nature whatsoever are hereby requested to inform the same in writing, supported with the original documents, to the undersigned at the address mentioned below within a period of 10 (ten) days from the date of the publication of this notice, failing which, the claim or right, if any, of such person or persons shall be considered to have been waived and/or abandoned.

Dated this the 6th day of December, 2022

B.N. Prakash
Partner
M/s Lawyers Inc
No.15/2, V.S.Raju Road,
12th Block, Kumarapark West,
Bengaluru-560 020.

ಅರ್ಥಶಾಸ್ತ್ರದಲ್ಲಿ ಬಿ.ಎಚ್‌.ಚಂದ್ರಿಕಾಗೆ ಐದು ಚಿನ್ನದ ಪದಕ

ಅಕ್ಕನ ಓದಿಗೆ ನೆರವಾದ ತಮ್ಮ

ಪ್ರಜಾವಾಣಿ ವಾರ್ತೆ

ನಗರದಲ್ಲಿ ಸೋಮವಾರ ನಡೆದ ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ರ್‍ಯಾಂಕ್ ಪಡೆದ ಚೇತನ್‌ಸೂರ್ಯ, ಎಚ್‌.ಎಂ.ನಿತಿನ್ (ಹಿಂಬದಿ), ಕೆ.ಅರ್ಚನಾ, ಮಯೂರ, ಚಂದ್ರಿಕಾ ಚಿನ್ನದ ಪದಕ ಪ್ರದರ್ಶಿಸಿದರು.

ಬೆಂಗಳೂರು: ಬಡತನದ ಕಾರಣದಿಂದ ಶಿಕ್ಷಣವನ್ನು ಅರ್ಧಕ್ಕೇ ಮೊಟಕುಗೊಳಿಸಿದ ತಮ್ಮ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡು ಅಕ್ಕನ ಓದಿಗೆ ನೆರವಾಗಿದ್ದರ ಫಲವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಸ್ನಾತಕೋತ್ತರ ಪದವಿಯಲ್ಲಿ ಬಿ.ಎಚ್‌.ಚಂದ್ರಿಕಾ ಐದು ಚಿನ್ನದ ಪದಕ ಗಳಿಸಿದ್ದಾರೆ.

ಬಿಡದಿ ಸಮೀಪದ ಬನ್ನಿಗಿರಿಯ ಚಂದ್ರಿಕಾ ಅವರ ತಂದೆ ಹನುಮಯ್ಯ, ತಾಯಿ ಲಕ್ಷ್ಮಮ್ಮ ಕೂಲಿ ಕಾರ್ಮಿಕರು. ಇಬ್ಬರು ಮಕ್ಕಳಿಗೆ ಶಿಕ್ಷಣ ಕೊಡಿಸಲು ಆಗದಷ್ಟು ಬಡತನ. ತಂದೆ ತಾಯಿ ಕಷ್ಟ ನೋಡಲು ಸಾಧ್ಯವಾಗದೆ ಪಿಯು ಮುಗಿದ ನಂತರ ಶಿಕ್ಷಣಕ್ಕೆ ತಿಲಾಂಜಲಿ ಹೇಳಿ, ಖಾಸಗಿ ಕಂಪನಿಯಲ್ಲಿ ಉದ್ಯೋಗ ಪಡೆದ ಸಹೋದರ ಅಕ್ಕನ ಓದಿಗೆ ನೆರವಾಗಿದ್ದಾನೆ.

‘ಕಷ್ಟಪಟ್ಟು ಓದಿದ್ದೇನೆ. ಕುಟುಂಬದ ಶ್ರಮಕ್ಕೆ ಫಲ ಸಿಕ್ಕಿದೆ. ಮುಂದೆ ಅರ್ಥಶಾಸ್ತ್ರ ಪ್ರಾಧ್ಯಾಪಕಿಯಾಗುವೆ. ಶ್ರೇಷ್ಠ ಅರ್ಥಶಾಸ್ತ್ರಜ್ಞೆ ಆಗಬೇಕು ಎನ್ನುವ ಕನಸಿದೆ’ ಎಂದು ಚಂದ್ರಿಕಾ ಪ್ರತಿಕ್ರಿಯಿಸಿದರು.

ಬಡತನದ ಕಾರಣಕ್ಕೆ ತುಮಕೂರಿನ ಸಿದ್ದಗಂಗಾ ಮಠದಲ್ಲೇ ಇದ್ದು ಶಿಕ್ಷಣ ಪಡೆದ ಬೀದರ್ ಜಿಲ್ಲೆ ವರವಟ್ಟಿಯ ಮಯೂರ ಸಂಸ್ಕೃತ ವಿಭಾಗದಲ್ಲಿ 6 ಚಿನ್ನದ ಪದಕ ಕೊರಳಿಗೇರಿಸಿಕೊಂಡಿದ್ದಾರೆ. ತಂದೆ ಶಿವಕುಮಾರಸ್ವಾಮಿ ಮಠಪತಿ, ತಾಯಿ ಗಂಗಮ್ಮ ಅವರು ಚಿಕ್ಕಂದಿನಲ್ಲೇ ಮಠಕ್ಕೆ ತಂದು ಬಿಟ್ಟಿದ್ದರು. ಅಲ್ಲಿ ಸಂಸ್ಕೃತ ಕಲಿತು ಸ್ನಾತಕೋತ್ತರ ಪದವಿ ಪೂರೈಸಿದ್ದಾರೆ.

ರಸಾಯನ ಶಾಸ್ತ್ರದಲ್ಲಿ 7 ಚಿನ್ನದ ಪದಕ ಪಡೆದ ಕೆ.ಅರ್ಚನಾ ಅವರ ತಂದೆ ಕೃಷ್ಣಪ್ಪ ಅವರು ಗ್ರಾಮೀಣ ಬಯಲಾಟದ ಕಲಾವಿದರು. ಮೂವರು ಮಕ್ಕಳಿಗೂ ಉತ್ತಮ ಶಿಕ್ಷಣ ಕೊಡಿಸಿದ್ದಾರೆ. ಇಬ್ಬರು ವಿಜ್ಞಾನ ಪದವೀಧರರಾದರೆ, ಒಬ್ಬರು ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದಾರೆ. ಸಂಶೋಧನಾ ಕ್ಷೇತ್ರದಲ್ಲಿ ಸಾಗುವ ಬಯಕೆ ಅರ್ಚನಾ ಅವರದು.

ಬೆಂಗೂಳೂರಿನ ಲೆಕ್ಕಪರಿಶೋಧಕರ ಪುತ್ರ ಚೇತನ್‌ಸೂರ್ಯ ಭೌತ ವಿಜ್ಞಾನ ವಿಭಾಗದಲ್ಲಿ, ರಾಜಸ್ಥಾನದಿಂದ ರಾಜ್ಯಕ್ಕೆ ಬಂದು ಹಿಂದಿ ಭಾಷಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಅನಿತಾ ಭಾಟೆ, ರಂಗಭೂಮಿಯನ್ನೇ ಉಸಿರಾಗಿಸಿಕೊಂಡ ವಿಜಯಪುರದ ಮಾಧುರಿ ಅವರು ಚಿನ್ನದ ಬೇಟೆಯಾಡಿದ್ದಾರೆ.

ಯೂನಿವರ್ಸಲ್ ಸ್ಕೂಲ್‌ಗೆ 10 ರ್‍ಯಾಂಕ್: ನಗರದ ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್‌ನ ಸುಷ್ಮಾ ಎಚ್‌.ದೊಡ್ಡಬಿಲ್ಲಾ ಅವರು ಬಿ.ಎ.ಪದವಿಯಲ್ಲಿ ನಾಲ್ಕು ಚಿನ್ನದ ಪದಕ ಹಾಗೂ ಎರಡು ನಗದು ಪುರಸ್ಕಾರ ಪಡೆದಿದ್ದಾರೆ. ಇದೇ ಸಂಸ್ಥೆಯ ಒಟ್ಟು 9 ವಿದ್ಯಾರ್ಥಿಗಳು ವಿವಿಧ ರ್‍ಯಾಂಕ್‌ಗಳನ್ನು ಪಡೆದಿದ್ದಾರೆ.

ಪಿಎಚ್‌ಡಿ ಅಭ್ಯರ್ಥಿಗಳ ಅಸಮಾಧಾನ

ಬೆಂಗಳೂರು: ಘಟಿಕೋತ್ಸವದಲ್ಲಿ ರ್‍ಯಾಂಕ್ ವಿಜೇತರಿಗೆ ಪದಕ ವಿತರಿಸಿದ ರಾಜ್ಯಪಾಲರು ಹೊರಟ ನಂತರ ತಮಗೆ ಪ್ರಮಾಣಪತ್ರ ನೀಡಲಿಲ್ಲ ಎಂದು ಪಿಎಚ್‌.ಡಿ ಪದವಿಗೆ ಅರ್ಹರಾದ ಅಭ್ಯರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದರು.

‘ಶಿಷ್ಟಾಚಾರದ ಪ್ರಕಾರ ರಾಜ್ಯಪಾಲರು ಎಲ್ಲರಿಗೂ ವಿತರಿಸಲು ಸಮಯ ಸಾಲದು. ಹಾಗಾಗಿ ಉಳಿದವರು ವಿತರಿಸುವೆವು’ ಎಂದು ಸಚಿವ ಅಶ್ವತ್ಥನಾರಾಯಣ, ಯುಜಿಸಿ ಅಧ್ಯಕ್ಷ ಜಗದೇಶ ಕುಮಾರ್ ಸಮಾಧಾನಪಡಿಸಿ, 267 ಅಭ್ಯರ್ಥಿಗಳಿಗೆ ಡಾಕ್ಟರೇಟ್ ಪ್ರಮಾಣಪತ್ರ ವಿತರಿಸಿದರು.

ಕನ್ನಡ ಭಾಷಾ ವಿಷಯದಲ್ಲಿ ಏಳು ಚಿನ್ನದ ಪದಕ ಪಡೆದ ಕೀರ್ತಿ ನೇಗಿನ್ಹಾಲ್ ಅವರು ಗರ್ಭಿಣಿಯಾಗಿದ್ದಕ್ಕೆ ಘಟಿಕೋತ್ಸವಕ್ಕೆ ಗೈರುಹಾಜರಾಗಿದ್ದರು. ಇತ್ತ ಘಟಿಕೋತ್ಸವ ಮುಗಿಯುತ್ತಿದ್ದಂತೆ ಆಸ್ಪತ್ರೆಯಲ್ಲಿ ಹೆಣ್ಣುಮಗುವಿಗೆ ಜನ್ಮ ನೀಡಿದ ಸುದ್ದಿ ಬಂತು.

ರಾಷ್ಟ್ರ ನಿರ್ಮಾಣದಲ್ಲಿ ಯುವಶಕ್ತಿಯ ಸದ್ಬಳಕೆ

ಬೆಂಗಳೂರು ವಿಶ್ವವಿದ್ಯಾಲಯ ಸೋಮವಾರ ಹಮ್ಮಿಕೊಂಡಿದ್ದ ಘಟಿಕೋತ್ಸವದಲ್ಲಿ ಕಲಾವಿದ ಟಿ.ಅನಿಲ್‌ಕುಮಾರ್, ನಟ ದ್ವಾರಕೀಶ್, ಕಾನೂನು ಸಲಹೆಗಾರ ಅಮರನಾಥ್ ಗೌಡ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಯುಜಿಸಿ ಅಧ್ಯಕ್ಷ ಜಗದೇಶ್ ಕುಮಾರ್, ಉನ್ನತ ಶಿಕ್ಷಣ ಸಚಿವ ಸಿ.ಎನ್‌.ಅಶ್ವತ್ಥನಾರಾಯಣ, ಕುಲಪತಿ ಎಸ್‌.ಎಂ.ಜಯಕರ್ ಇದ್ದಾರೆ.

ಬೆಂಗಳೂರು: ಉನ್ನತ ಶಿಕ್ಷಣ ಸಂಪೂರ್ಣ ವಿದ್ಯಾರ್ಥಿಕೇಂದ್ರಿತವಾಗಬೇಕು. ರಾಷ್ಟ್ರ ನಿರ್ಮಾಣದಲ್ಲಿ ಯುವ ಶಕ್ತಿಯ ಸದ್ಬಳಕೆಯಾಗಬೇಕು ಎಂದು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಅಧ್ಯಕ್ಷ ಎಂ.ಜಗದೇಶ್ ಕುಮಾರ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಸೋಮವಾರ ಹಮ್ಮಿಕೊಂಡಿದ್ದ 57ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಕಲಿಕೆಗೆ ವಿಷಯಗಳ ಆಯ್ಕೆ ಮುಕ್ತವಾಗಿರಬೇಕು. ಯಾವುದೇ ನಿರ್ಬಂಧಗಳಿಲ್ಲದೇ ಕಲಿಯುವ ಮುಕ್ತ ವಾತಾವರಣ ಕಲ್ಪಿಸಬೇಕು. ಲಭ್ಯತೆ, ಕೈಗೆಟುಕುವಿಕೆ, ಗುಣಮಟ್ಟ, ಸಮಾನ ಅವಕಾಶ ಮತ್ತು ಉತ್ತರದಾಯಿತ್ವ ಅಂಶಗಳೇ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಆಧಾರಸ್ತಂಭ. ಇಂತಹ ಆಶಯಗಳನ್ನು ಒಳಗೊಂಡ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ದೇಶದಲ್ಲೇ ಮೊಟ್ಟಮೊದಲಿಗೆ ಅಳವಡಿಸಿಕೊಂಡ ರಾಜ್ಯ ಕರ್ನಾಟಕ ಎಂದು ಶ್ಲಾಘಿಸಿದರು.

ಭಾರತ ಜಗತ್ತಿನ ಪ್ರಬಲ ಆರ್ಥಿಕ ಶಕ್ತಿಯಾಗಿ ರೂಪುಗೊಳ್ಳುವುದರ ಹಿಂದೆ ಯುವ ಜನರ ಶ್ರಮವಿದೆ. 16ರಿಂದ 50 ವರ್ಷದ ಒಳಗಿನವರೇ ಅಧಿಕ ಸಂಖ್ಯೆಯಲ್ಲಿ ಇರುವ ರಾಷ್ಟ್ರ ಭಾರತ. ಜನಸಂಖ್ಯೆಯ ಸರಾಸರಿ ವಯಸ್ಸು 29ರಷ್ಟಿದ್ದು, ಸಾಧನೆಗೆ ಹೇಳಿಮಾಡಿಸಿದ ವಾತಾವರಣ ಸೃಷ್ಟಿಸಿದೆ ಎಂದರು.

ಪದವಿ ಮುಗಿಸಿದ ವಿದ್ಯಾರ್ಥಿಗಳ ಕಣ್ಣುಗಳಲ್ಲಿ ಭವಿಷ್ಯದ ಬಗೆಗಿನ ಆಶಾಭಾವನೆ ಮಿನುಗುತ್ತದೆ. ಶಿಕ್ಷಣ ಮುಗಿಸಿದವರು ಭವಿಷ್ಯದಲ್ಲಿ ಉನ್ನತ ಸ್ಥಾನ ಪಡೆಯಬಹುದು. ಆದರೆ, ತಮ್ಮ ಭವಿಷ್ಯ ರೂಪಿಸುವಲ್ಲಿ ನೆರವಾದ ತಂದೆ, ತಾಯಿ ಮರೆಯಬಾರದು ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌.ಅಶ್ವತ್ಥನಾರಾಯಣ, ಭಾರತೀಯ ಸಂಸ್ಕೃತಿ, ನಾಗರಿಕತೆ ಜ್ಞಾನಮಾರ್ಗದಲ್ಲೇ ಬೆಳೆದು ಬಂದಿವೆ. ವಿದ್ಯಾರ್ಥಿ ಸಮುದಾಯ ಕೂಡ ಅದೇ ಮಾರ್ಗದಲ್ಲಿ ಸಾಗಬೇಕು. ಸುಸ್ಥಿರ ಅಭಿವೃದ್ಧಿಗೆ ಗುಣಮಟ್ಟದ ಶಿಕ್ಷಣವೊಂದೇ ಮಾರ್ಗ. ಇದಕ್ಕೆ ಯಾವುದೇ ಅಡ್ಡದಾರಿಗಳಿಲ್ಲ ಎಂದು ಹೇಳಿದರು.

ಕಾನೂನು ಸಲಹೆಗಾರ ಅಮರನಾಥ್ ಗೌಡ, ನಟ ದ್ವಾರಕೀಶ್, ಕಲಾವಿದ ಟಿ.ಅನಿಲ್‌ಕುಮಾರ್ ಅವರಿಗೆ ಗೌರವ ಡಾಕ್ಟರೇಟ್, 167 ವಿದ್ಯಾರ್ಥಿಗಳಿಗೆ 300 ಬಂಗಾರದ ಪದಕಗಳು, 73 ನಗದು ಬಹುಮಾನ, 267 ಅಭ್ಯರ್ಥಿಗಳಿಗೆ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಬೆಂಗಳೂರು ವಿವಿ ಕುಲಪತಿ ಡಾ.ಎಸ್‌.ಎಂ.ಜಯಕರ, ಕುಲಸಚಿವ ಜೆ.ಟಿ. ದೇವರಾಜ್ ಪರೀಕ್ಷಾಂಗ ಕುಲಸಚಿವ ಎನ್‌.ಮಹೇಶ್ ಬಾಬು ಉಪಸ್ಥಿತರಿದ್ದರು.

ರಕ್ತ ಕ್ಯಾನ್ಸರ್: ಲಕ್ಷಣಗಳು ಮತ್ತು ಚಿಕಿತ್ಸೆ

ರಕ್ತ ಕ್ಯಾನ್ಸರ್ ನಿಂದಾಗಿ ಭಾರತದಲ್ಲಿ ಬಹುಪಾಲು ಜನ ಸಾವನ್ನಪ್ಪುತ್ತಿದ್ದಾರೆ. ಪ್ರತಿ ವರ್ಷ ಒಂದು ಲಕ್ಷಕ್ಕೂ ಹೆಚ್ಚು ಜನರು ಈ ಭಯಾನಕ ಕಾಯಿಲೆಯಿಂದ ಬಳಲುತ್ತಿದ್ದಾರೆ. ಈ ಅಂಕಿ ಅಂಶವು, ಹೆಚ್ಚಾಗಿ, ದೇಶದ ಸೌಲಭ್ಯರಹಿತ ಹಾಗೂ ಕಡಿಮೆ ಸೇವೆಯ ಭಾಗಗಳಲ್ಲಿ ಚಿಕಿತ್ಸೆ ಪಡೆಯದೇ ಹೋಗುವುದರಿಂದ, ವಾಸ್ತವಿಕವಾಗಿ ಸರಿಯಾದ ಸಂಖ್ಯೆಯನ್ನ ದಾಖಲಿಸಲಾಗಿಲ್ಲ ಸಿಕ್ಕ ಕಡಿಮೆ ಸಂಖ್ಯೆಯನ್ನ ಮಾತ್ರ ಇಲ್ಲಿ ದಾಖಲಿಸಲಾಗಿದೆ.

ಡಾ ಮಲ್ಲಿಕಾರ್ಜುನ ಕಲಶೆಟ್ಟಿ ಮತ್ತು ಡಾ ಆಶಿಶ್ ದೀಕ್ಷಿತ್, ಕನ್ಸಲ್ಟೆಂಟ್ಸ್ ಇನ್ ಹೆಮಟಾಲಜಿ, ಹೆಮಟೋ ಆಂಕೊಲಾಜಿ ಮತ್ತು ಬೋನ್ ಮ್ಯಾರೋ ಟ್ರಾನ್ಸ್‌ಪ್ಲಾಂಟೇಶನ್, ಮಣಿಪಾಲ್ ಆಸ್ಪತ್ರೆ, ಹಳೆ ವಿಮಾನ ನಿಲ್ದಾಣ ರಸ್ತೆ, **ದಿವ್ಯಶ್ರೀ** ಅವರೊಂದಿಗೆ ಈ ಸಂವಾದದಲ್ಲಿ ರಕ್ತದ ಕ್ಯಾನ್ಸರ್ ಮತ್ತು ಅದರ ಚಿಕಿತ್ಸೆಯ ಮೇಲೆ ಬೆಳಕು ಚೆಲ್ಲುತ್ತದೆ

ಡಾ ಆಶೀಶ್ ದೀಕ್ಷಿತ್ ಅವರನ್ನು ಸಂಪರ್ಕಿಸಲು QR ಕೋಡ್ ಸ್ಕ್ಯಾನ್ ಮಾಡಿ

ಡಾ. ಮಲ್ಲಿಕಾರ್ಜುನ್ ಕಲಾಶೆಟ್ಟಿ ಅವರನ್ನು ಸಂಪರ್ಕಿಸಲು QR ಕೋಡ್ ಸ್ಕ್ಯಾನ್ ಮಾಡಿ

ರಕ್ತದ ಕ್ಯಾನ್ಸರ್‌ನ ಲಕ್ಷಣಗಳೇನು?

ರಕ್ತದ ಕ್ಯಾನ್ಸರ್ ಲಕ್ಷಣಗಳು, ರೋಗಿಯು ಬಳಲುತ್ತಿರುವ ರಕ್ತದ ಕ್ಯಾನ್ಸರ್ ಪ್ರಕಾರವನ್ನ ಅವಲಂಬಿಸಿರುತ್ತದೆ. ಗಣನಿಯವಾಗಿ ತೂಕ ನಷ್ಟ, ಮೂಗೇಟುಗಳು, ಲೋಳೆಪೊರೆಯಿಂದ ರಕ್ತಸ್ರಾವ, ಊತ, ಉಸಿರಾಟದ ತೊಂದರೆ, ರಾತ್ರಿ ಬೆವರುವಿಕೆಯೊಂದಿಗೆ ಜ್ವರ, ದದ್ದು, ಮೂಳೆಗಳಲ್ಲಿ ನೋವು, ವಿಶ್ರಾಂತಿ ಅಥವಾ ನಿದ್ರೆಯಿಂದ ಸುಧಾರಿಸದ ಆಯಾಸವು ಕೆಲವು ರೋಗ ಲಕ್ಷಣಗಳಿಗೆ ಸಂಬಂಧಿಸಿದೆ. ಇವುಗಳಲ್ಲಿ ಯಾವುದಾ ದರೂ ಲಕ್ಷಣಗಳು ಕಂಡು ಬಂದರೆ ತಕ್ಷಣ ವೈದ್ಯರನ್ನ ಸಂಪರ್ಕಿಸಬೇಕು

ನೀವು ರಕ್ತದ ಕ್ಯಾನ್ಸರ್‌ಗೆ ಹೇಗೆ ಚಿಕಿತ್ಸೆ ನೀಡುತ್ತೀರಿ?

ವಯಸ್ಸು ಮತ್ತು ಆರೋಗ್ಯ ಪರಿಸ್ಥಿತಿಗಳು ಸೇರಿದಂತೆ ಹಲವು ಅಂಶಗಳನ್ನು ಅವಲಂಬಿಸಿರುವುದನ್ನ ಗಮನಿಸಿ ಚಿಕಿತ್ಸೆ ನೀಡಲಾಗುತ್ತದೆ.

ರೋಗಿಯ, ಪ್ರಕಾರ ಮತ್ತು ಕ್ಯಾನ್ಸರ್ ನ ಅಣ್ವಿಕ ಸಹಿ. ಕೀಮೋಥೆರಪಿಯು ರಕ್ತದ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ನೀಡುವ ಪ್ರಮುಖ ವಿಧಾನವಾಗಿದೆ. ಉದ್ದೇಶಿತ ಔಷಧ ಚಿಕಿತ್ಸೆಗಳು ಕ್ಯಾನ್ಸರ್ ಕೋಶಗಳಲ್ಲಿ ಇರುವ ನಿರ್ದಿಷ್ಟ ಅಸಹಜತೆಗಳ ಮೇಲೆ ಕೇಂದ್ರೀಕರಿಸುತ್ತವೆ. ಮೂಳೆ ಮಜ್ಜೆಯ ಕಸಿ ಅನಾರೋಗ್ಯಕರ ಮೂಳೆ ಮಜ್ಜೆಯನ್ನು ಬದಲಾಯಿಸುತ್ತದೆ.

ರಕ್ತದ ಕ್ಯಾನ್ಸರ್‌ಗೆ ಕಾರಣವೇನು?

ಅಸಹಜ ಕ್ಯಾನ್ಸರ್ ರಕ್ತ ಕಣಗಳು ನಿಯಂತ್ರಣವಿಲ್ಲದೆ ಹರಡಿದಾಗ ರಕ್ತದ ಕ್ಯಾನ್ಸರ್ ಉಂಟಾಗುತ್ತದೆ.

ಇದು ಸಾಮಾನ್ಯ ಕೋಶಗಳ ದುರ್ಬಲ ಉತ್ಪಾದನೆಗೆ ಕಾರಣವಾಗುತ್ತದೆ. ತೀವ್ರವಾದ ಲ್ಯುಕೇಮಿ ಯಾದಲ್ಲಿ, ಬ್ಲಾಸ್ಟ್ಸ್ ಎಂದು ಕರೆಯಲ್ಪಡುವ ಅಪಕ್ವ ಕೋಶಗಳು ತ್ವರಿತವಾಗಿ ಬೆಳೆಯುತ್ತವೆ, ಇದು ಲ್ಯುಕೇಮಿಯಾದ ಹೆಚ್ಚು ಆಕ್ರಮಣಕಾರಿ ಮತ್ತು ವೇಗವಾಗಿ-ಅಭಿವೃದ್ಧಿ ಹೊಂದುವ ರೂಪವಾಗಿದೆ. ನಿಧಾನಗತಿಯ ಪ್ರಗತಿಶೀಲ ರಕ್ತದ ಕ್ಯಾನ್ಸರ್‌ಗಳೂ ಇವೆ, ಇದನ್ನು ಇಂಡೊಲೆಂಟ್ ಲಿಂಫೋಮಾಸ್ ಎಂದು ಕರೆಯಲಾಗುತ್ತದೆ.

ಲ್ಯುಕೇಮಿಯಾ-ಮುಕ್ತ ಕಾಂಡ ಕೋಶಗಳೊಂದಿಗೆ ಆರೋಗ್ಯಕರ ಮೂಳೆ ಮಜ್ಜೆಯನ್ನು ಪುನರುತ್ಪಾದಿಸುತ್ತದೆ. ಇಮ್ಯುನೊಥೆರಪಿಯು ಕ್ಯಾನ್ಸರ್ ವಿರುದ್ಧ ಹೋರಾಡಲು ರೋಗಿಯ ಸ್ವಂತ ಪ್ರತಿರಕ್ಷಣಾ ವ್ಯವಸ್ಥೆಯನ್ನು ಬಳಸುತ್ತದೆ. ಕ್ಯಾನ್ಸರ್ ಅನ್ನು ಸಮಯೋಚಿತವಾಗಿ ಗುರುತಿಸುವುದು ಮತ್ತು ಸರಿಯಾದ ಚಿಕಿತ್ಸೆಯನ್ನು ಪ್ರಾರಂಭಿಸುವುದು ಬಹಳ ಮುಖ್ಯ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕ್ಯಾನ್ಸರ್ ಚಿಕಿತ್ಸೆಯು ತೀವ್ರವಾದ ಅಡ್ಡಪರಿಣಾಮಗಳನ್ನು ಉಂಟುಮಾಡುತ್ತದೆಯೇ?

ರಕ್ತ ಕ್ಯಾನ್ಸರ್ ಚಿಕಿತ್ಸೆಯು ವಿವಿಧ ರೀತಿಯ ಪ್ರೋಟೋಕಾಲ್, ತೀವ್ರತೆ ಮತ್ತು ವಿವಿಧ ವಿಧಾನಗಳನ್ನು ಬಳಸಬಹುದಾಗಿದೆ ಕೆಲವು ಚಿಕಿತ್ಸಾ ವಿಧಾನ ಗಳು ವಾಕರಿಕೆ, ವಾಂತಿಗೆ ಕಾರಣವಾಗ ಬಹುದು. ಬಾಯಿ ಹುಣ್ಣು, ಕೂದಲು ಉದುರುವುದು, ಬಳಸಿದ ಪ್ರೋಟೋಕಾಲ್ ಅನ್ನು ಅವಲಂಬಿಸಿ ಸಾಮಾನ್ಯ ರಕ್ತದ ಎಣಿಕೆ ಕಡಿಮೆಯಾಗುವುದು ಮುಂತಾದ ಇತರ ದುಷ್ಪರಿಣಾಮಗಳು ಇರಬಹುದು. ಹೆಚ್ಚಿನ ಸಂದರ್ಭಗಳಲ್ಲಿ ವಿಷತ್ವವನ್ನು ತಗ್ಗಿಸಲು ರೋಗಿಗಳಿಗೆ ರೋಗನಿರೋಧಕ ಔಷಧಿಗಳನ್ನು ನೀಡಲಾಗುತ್ತದೆ.

ಮೂಳೆ ಮರ ಸಾಲು, ಕಸಿಯನ್ನ ಮಾಡಲು ನೀವು ಯಾವಾಗ ಸಲಹೆ ನೀಡುತ್ತೀರಿ?

ಹಾನಿಗೊಳಗಾದ, ಕ್ರಿಯಾತ್ಮಕ ವಲ್ಲದ ಮೂಳೆ ಮಜ್ಜೆಯನ್ನು ಆರೋಗ್ಯಕರ, ಕ್ರಿಯಾತ್ಮಕ ಮೂಳೆ ಮಜ್ಜೆಯೊಂದಿಗೆ ಬದಲಾಯಿಸುತ್ತದೆ.

ರಿಲ್ಯಾಪ್ಸ್ಡ್ ರಿಫ್ರ್ಯಾಕ್ಟರಿ ಲ್ಯುಕೇಮಿಯಾ, ರಿಲ್ಯಾಪ್ಸ್ಡ್ ಲಿಂಫೋಮಾ, ಮಲ್ಟಿಪಲ್ ಮೈಲೋಮಾ, ತೀವ್ರವಾದ ಅಪ್ಲ್ಯಾಸ್ಟಿಕ್ ರಕ್ತಹೀನತೆ, ಥಲಸ್ಸೆಮಿಯಾ ಕುಡಗೋಲು ಕಣ ರೋಗ ಮತ್ತು ಪ್ರತಿರಕ್ಷಣಾ ಕೊರತೆಯ ಸಿಂಡ್ರೋಮ್‌ನಂತಹ ರಕ್ತದ ವಿವಿಧ ಹಾನಿಕರವಲ್ಲದ ಮತ್ತು ಮಾರಣಾಂತಿಕ ಅಸ್ವಸ್ಥತೆಗಳಿಗೆ ಚಿಕಿತ್ಸೆ ನೀಡಲು ಇದನ್ನು ಬಳಸಲಾಗುತ್ತದೆ.

ಕೀಮೋಥೆರಪಿಯ ಭಾರೀ ಪ್ರಮಾಣದ ಚಿಕಿತ್ಸೆಯ ನಂತರ ಮೂಳೆ ಮಜ್ಜೆಯನ್ನು ಬದಲಿಸಲು ಮತ್ತು ಸಾಮಾನ್ಯ ಕಾರ್ಯವನ್ನು ಪುನಃಸ್ಥಾಪಿಸಲು ಇದನ್ನು ಬಳಸಬಹುದು

ಅಥವಾ ವಿಕಿರಣ. ದಾನಿ ಯಾರೆಂಬುದನ್ನು ಅವಲಂಬಿಸಿ, ಹಲವಾರು ವಿಧಗಳಲ್ಲಿ ಮೂಳೆ ಮಜ್ಜೆಯ ಕಸಿ ಮಾಡಬಹುದು.

ಮೂಳೆ ಮಜ್ಜೆಯ ಕಸಿ ಹೇಗೆ ?

ಮೂಳೆ ಮಜ್ಜೆಯ ಕಸಿಯೂ ವೈದ್ಯಕೀಯ ವಿಧಾನ ವಾಗಿದೆ ಮತ್ತು ಇದು ಶಸ್ತ್ರಚಿಕಿತ್ಸೆಯಲ್ಲ. ಆಟೋಲೋಗಸ್ ಮೂಳೆ ಮಜ್ಜೆಯ ಕಸಿ ರೋಗಿಯಿಂದ ಕಾಂಡಕೋಶಗಳನ್ನು ಸಂಗ್ರಹಿಸುವುದನ್ನು ಒಳಗೊಂಡಿರುತ್ತದೆ ಮತ್ತು ಅಲೋಜೆನಿಕ್ ಮೂಳೆ ಮಜ್ಜೆಯ ಕಸಿ ಆರೋಗ್ಯಕರ ದಾನಿಯಿಂದ ಕಾಂಡ ಕೋಶಗಳನ್ನು ಸಂಗ್ರಹಿಸು ವುದನ್ನು ಒಳಗೊಂಡಿರುತ್ತದೆ.

ರೋಗಿಗಳು ಸೂಚಿಸಲಾದ ನಿರ್ಧರಿತ ಚಿಕಿತ್ಸೆ ಪಡೆಯುತ್ತಾರೆ ಮತ್ತು ಒಣಗಿದ ವಾತಾವರಣದಲ್ಲಿ ಶುಶ್ರೂಷೆ ಮಾಡು ತ್ತಾರೆ. ಅವರು ಸೋಂಕುಗಳನ್ನು ತಡೆಗಟ್ಟಲು ವಿವಿಧ ಔಷಧಿಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಹೊಸ ಆರೋಗ್ಯಕರ ಮಜ್ಜೆಯು ಕಾರ್ಯ ನಿರ್ವಹಿಸುವವರೆಗೆ ರಕ್ತ ಮತ್ತು ಪ್ಲೇಟ್ಲೆಟ್ ರೂಪಾಂತರದ ಅಗತ್ಯವಿರಬಹುದು..

ಕ್ಯಾನ್ಸರ್ ಬಗ್ಗೆ ತಪ್ಪು ಕಲ್ಪನೆಗಳಿವೆಯಲ್ಲ...

ನಿಕಟ ಸಂಪರ್ಕದಿಂದ ಕ್ಯಾನ್ಸರ್ ಹರಡಬಹುದು ಎಂದು ಜನರು ಚಿಂತಿಸುತ್ತಾರೆ ಆದರೆ ಕ್ಯಾನ್ಸರ್ ಸಾಂಕ್ರಾಮಿಕವಲ್ಲ ಮತ್ತು ಹರಡುವುದಿಲ್ಲ. ಕ್ಯಾನ್ಸರ್ ಆರೈಕೆಯಲ್ಲಿ ಪೌಷ್ಠಿಕಾಂಶವು ಮುಖ್ಯವಾಗಿದೆ, ಆದರೆ ಒಬ್ಬರು ಸೇವಿಸಬಹುದಾದ ಯಾವುದೇ ಮಾಂತ್ರಿಕ ಆಹಾರಗಳಿಲ್ಲ

ಕ್ಯಾನ್ಸರ್ ಗುಣಪಡಿಸಲು. ಕ್ಯಾನ್ಸರ್‌ಗಳು ಆನುವಂಶಿಕ ಬದಲಾವಣೆಗಳಿಂದ ಉಂಟಾಗುತ್ತವೆ ಮತ್ತು ಎಲ್ಲಾ ಕ್ಯಾನ್ಸರ್‌ಗಳು ಆನುವಂಶಿಕವಾಗಿರುವುದಿಲ್ಲ

ಸಮುದಾಯಕ್ಕೆ ನಿಮ್ಮ ಸಂದೇಶಗಳೇನು?

ಆರೋಗ್ಯಕರ ಆಹಾರ, ವ್ಯಾಯಾಮ, ಧ್ಯಾನ ಮತ್ತು ಕೆಟ್ಟ ಅಭ್ಯಾಸಗಳನ್ನು ತ್ಯಜಿಸುವ ಆರೋಗ್ಯಕರ ಜೀವನವು ಬಹಳ ಮುಖ್ಯ. ಕ್ಯಾನ್ಸರ್ನ ಪರಿಣಾಮಕಾರಿ ಮತ್ತು ಆಗಾಗ್ಗೆ ಗುಣಪಡಿಸುವ ಚಿಕಿತ್ಸೆಗಾಗಿ ಆರಂಭಿಕ ರೋಗನಿರ್ಣಯ ಅಗತ್ಯ

ಕಳೆದ ಕೆಲವು ವರ್ಷಗಳಲ್ಲಿ ರಕ್ತದ ಕ್ಯಾನ್ಸರ್‌ಗಳ ಚಿಕಿತ್ಸೆಯು ಗಮನಾರ್ಹವಾಗಿ ವಿಕಸನಗೊಂಡಿದೆ ಮತ್ತು ನಿಖರವಾದ ಔಷಧ, ಇಮ್ಯುನೊಥೆರಪಿ, ಉದ್ದೇಶಿತ ಚಿಕಿತ್ಸೆ, ಮೂಳೆ ಮಜ್ಜೆಯ ಕಸಿ, CAR T ಜೀವಕೋಶಗಳು ಮತ್ತು ಇತರ ಚಿಕಿತ್ಸಾ ಆಯ್ಕೆಗಳು ಈಗ ಹೆಚ್ಚಿನ ಕ್ಯಾನ್ಸರ್‌ಗಳಿಗೆ ಲಭ್ಯವಿರುವ ಗುಣಪಡಿಸುವ ಆಯ್ಕೆಗಳಾಗಿವೆ.

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ




ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಮಹಾಮಾನವತಾವಾದಿ,
ಸಂವಿಧಾನ ಶಿಲ್ಪಿ,
ಭಾರತರತ್ನ

ಡಾ. ಬಿ.ಆರ್. ಅಂಬೇಡ್ಕರ್ ರವರ
(ಏಪ್ರಿಲ್ 14, 1891 – ಡಿಸೆಂಬರ್ 6, 1956)

66ನೇ ಮಹಾಪರಿನಿರ್ವಾಣ ದಿನ

ಡಾ. ಬಿ.ಆರ್. ಅಂಬೇಡ್ಕರ್ ರವರ ಪ್ರತಿಮೆಗೆ
ಸನ್ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಮತ್ತು
ಮಾನ್ಯ ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ
ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಅವರಿಂದ ಮಾಲಾರ್ಪಣೆ ಮತ್ತು ಗೌರವ ಸಮರ್ಪಣೆ

“ಮನಸ್ಸಿನ ಅಭಿವೃದ್ಧಿ, ಮಾನವ ಜನಾಂಗದ ಅಂತಿಮ ಗುರಿಯಾಗಿರಬೇಕು”
–ಡಾ. ಬಿ.ಆರ್. ಅಂಬೇಡ್ಕರ್

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಮತ್ತು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು ‘ಕಲ್ಯಾಣ ಮಿತ್ರ ಏಕೀಕೃತ ಎಸ್.ಸಿ./ಎಸ್.ಟಿ. ಸಹಾಯವಾಣಿ’ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ದಿನಾಂಕ: 06.12.2022, ಸಮಯ: ಬೆಳಗ್ಗೆ 10:30 ಗಂಟೆಗೆ
ಸ್ಥಳ: ವಿಧಾನ ಸೌಧದ ಮುಂಭಾಗ (ಪೂರ್ವ ದ್ವಾರ), ಬೆಂಗಳೂರು

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

“ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು” – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ | (24/7) 9482 300 400 | comr.sw@gmail.com | wwww.sw.kar.nic.in | @SWDGoK | ವಿ.ಸೂ.: ಕೋವಿಡ್-19 ನಿಯಮಗಳನ್ನು ಪಾಲಿಸುವುದು ಮತ್ತು ಸಾಮಾಜಿಕ ಅಂತರವನ್ನು ಕಾಪಾಡುವುದು.

2021ರ ಶೈಕ್ಷಣಿಕ ಪರೀಕ್ಷೆಗಳ ಫಲಿತಾಂಶ ಪರಿಗಣಿಸಲು ಸುತ್ತೋಲೆ

ಬೆಂಗಳೂರು: ಅನುಕಂಪದ ಆಧಾರದ ನೇಮಕಾತಿ ಕೋರಿ ಅರ್ಜಿ ಸಲ್ಲಿಸಿರುವ ಪ್ರಕರಣಗಳಲ್ಲಿ ಕೋವಿಡ್ ಕಾರಣದಿಂದ ವಿಳಂಬವಾಗಿ ಪ್ರಕಟವಾಗಿರುವ ಶೈಕ್ಷಣಿಕ ಪರೀಕ್ಷೆಗಳ ಫಲಿತಾಂಶಗಳನ್ನು ಪರಿಗಣಿಸುವಂತೆ ಎಲ್ಲ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸುತ್ತೋಲೆ ಹೊರಡಿಸಿದೆ.

2019-20ನೇ ಶೈಕ್ಷಣಿಕ ವರ್ಷದಲ್ಲಿ ಪಿಯುಸಿ, ಡಿಪ್ಲೊಮಾ, ಪದವಿ, ಎಂಜಿನಿಯರಿಂಗ್ ಮತ್ತು ಇನ್ನಿತರ ತತ್ಸಮಾನ ಕೋರ್ಸ್‌ಗಳ ಫಲಿತಾಂಶ ಕೋವಿಡ್‌ನಿಂದ ವಿಳಂಬವಾಗಿತ್ತು. ಅದೇ ವರ್ಷ ಮೃತಪಟ್ಟಿದ್ದ ಸರ್ಕಾರಿ ನೌಕರರ ಅವಲಂಬಿತರು ಅನುಕಂಪದ ಆಧಾರದಲ್ಲಿ ನೇಮಕಾತಿ ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಇತ್ಯರ್ಥಪಡಿಸುವಾಗಿ ವಿಳಂಬವಾಗಿ ಪ್ರಕಟವಾಗಿದ್ದ ಪರೀಕ್ಷಾ ಫಲಿತಾಂಶಗಳನ್ನು ಪರಿಗಣಿಸುವಂತೆ 2021ರ ಸೆಪ್ಟೆಂಬರ್ 17ರಲ್ಲಿ ಆದೇಶ ಹೊರಡಿಸಲಾಗಿತ್ತು.

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ-1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560052.
ಸಂ: ಕವಶಿಸಸ/ಸಕಾಅ/ಟೆಂಡರ್–18/2022–23 ದಿನಾಂಕ: 05.12.2022

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಉತ್ತರ ಕನ್ನಡ ಜಿಲ್ಲೆ, ಬೆಳಗಾವಿ ಜಿಲ್ಲೆ ಹಾಗೂ ಕೋಲಾರ ಜಿಲ್ಲೆಯಲ್ಲಿ ಬೋರ್‌ವೆಲ್ ಕೊರೆದು ಪಂಪ್ ಅಳವಡಿಸಿ ನೀರು ಸರಬರಾಜು ಮಾಡುವುದು. **(ಟೆಂಡರ್ ಇಂಡೆಂಟ್ ಸಂಖ್ಯೆ 3021, 3022, 3023, 3024, 3025 ಮತ್ತು 3018)** ಇ–ಪೋರ್ಟಲ್ ಮುಖಾಂತರ ದಿನಾಂಕ: **06.12.2022** ಟೆಂಡರ್‌ನ್ನು ಕರೆಯಲಾಗಿದ್ದು. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **20.12.2022** ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://eproc.karnataka.gov.in** ರಲ್ಲಿ ನೋಡಬಹುದಾಗಿದೆ..
ಸೂಚನೆ : ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
DIPR/CP/3389/Yakshi/2022-23 **ಕವಶಿಸಸಂ**

ಕರ್ನಾಟಕ ಸರ್ಕಾರ
ಶಿಶು ಅಭಿವೃದ್ಧಿ ಯೋಜನಾ ಕಚೇರಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಸ್ತ್ರೀಶಕ್ತಿ ಭವನ ಕಟ್ಟಡ, ತಾಲ್ಲೂಕು ಪಂಚಾಯತ್ ಕಚೇರಿ ಆವರಣ,
ಸೋಮವಾರಪೇಟೆ, ಕೊಡಗು ಜಿಲ್ಲೆ–571236
ಇಮೇಲ್: cdpo.spt@gmail.com ದೂರವಾಣಿ : 08276 – 282281
ಸಂ:ಶಿಅಯೋಸೋ/ಅಂ.ಕೇ.ಮೊ.ಖ/2022–23 ದಿನಾಂಕ : 05.12.2022

ಅಂಗನವಾಡಿ ಕೇಂದ್ರಗಳಿಗೆ ಕೋಳಿ ಮೊಟ್ಟೆಯ ಮರು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನಾ ಕಚೇರಿ, ಸೋಮವಾರಪೇಟೆ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳಿಗೆ ದಾಖಲಾಗಿರುವ ಮಕ್ಕಳು, ಗರ್ಭಿಣಿ, ಬಾಣಂತಿಯರು ಮತ್ತು ತೀವ್ರ ಅಪೌಷ್ಠಿಕ ಮಕ್ಕಳು ಹಾಗೂ ಸಾಮಾನ್ಯ ಅಪೌಷ್ಠಿಕ ಮಕ್ಕಳಿಗೆ ಮೊಟ್ಟೆ ಖರೀದಿಸಲು ಆದೇಶ ನೀಡಿದ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅನ್ವಯಿಸುವಂತೆ 2022–23ನೇ ಸಾಲಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಅದರಂತೆ ಟೆಂಡರನ್ನು ಸಲ್ಲಿಸಲು ದಿನಾಂಕ : 12.12.2022 ರಂದು ಕೊನೆಯ ದಿನಾಂಕವಾಗಿದ್ದು, ತಾಂತ್ರಿಕ ಬಿಡ್ಡುಗಳನ್ನು ತೆರೆಯಲು ದಿನಾಂಕ : 13.12.2022 ಆಗಿರುತ್ತದೆ, ಹಾಗೂ ಆರ್ಥಿಕ ಬಿಡ್ಡು ತೆರೆಯುವ ದಿನಾಂಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾ ಕಚೇರಿ, ಸೋಮವಾರಪೇಟೆ ಇವರನ್ನು ಸಂಪರ್ಕಿಸಬಹುದು ಇ–ಪ್ರೊಕ್ಯೂರ್ ಮೆಂಟ್ ವೆಬ್‌ಸೈಟ್ http://eproc.karnataka.gov.in ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ.
ತಮ್ಮ ವಿಶ್ವಾಸಿ
ಸಹಿ/– **ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,** ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸೋಮವಾರಪೇಟೆ ತಾಲ್ಲೂಕು

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
ಸಂಖ್ಯೆ: ರಾಗಾವಿ/ಪ್ರೊಕ್/ಎಸ್‌ಟಿ.ಸಿಎಮ್/46/2022–23 ದಿನಾಂಕ: 05.12.2022

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಇವರು ವಿಶ್ವವಿದ್ಯಾಲಯಕ್ಕೆ ಲೇಖನ ಸಾಮಾಗ್ರಿಗಳು ಮತ್ತು ಮುದ್ರಣ ಲೇಖನ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	03/12/2022
ಪೂರ್ವ ಬಿಡ್ ಸಭೆಯ ದಿನಾಂಕ	08/12/2022 ಬೆಳಿಗ್ಗೆ 10:30 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	15/12/2022 ಸಂಜೆ 5:00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	16/12/2022 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.
ಸಹಿ/–
ವಾ.ಸಾ.ಸಂ.ಇ/3386/2022–23 **ಕುಲಸಚಿವರು**

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಆಯುಕ್ತರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಸಿ.ಬಿ.ಐ. ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಬೆಂಗಳೂರು – 560 024.
ದೂರವಾಣಿ: 080–23412767 ಇ–ಮೇಲ್: commissionerahvs@gmail.com
ಸಂಖ್ಯೆ: CAH/VMS/Drivers/Re-Tender/2022-23 ದಿನಾಂಕ: 03–12–2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

2022–23ನೇ ಸಾಲಿಗೆ ಆಯುಕ್ತಾಲಯ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಆಯುಕ್ತಾಲಯದಲ್ಲಿ ಖಾಲಿ ಇರುವ **21 ಮತ್ತು ಜಿಲ್ಲಾ ಪಂಚಾಯತ್ ವಲಯದಲ್ಲಿ ಖಾಲಿ ಇರುವ 172 ವಾಹನ ಚಾಲಕರುಗಳ ಸೇವೆಯನ್ನು ಮಾನವ ಸಂಪನ್ಮೂಲ ಸಂಸ್ಥೆಯಿಂದ ಪಡೆಯುವ ಸಲುವಾಗಿ** ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ **https://eproc.karnataka.gov.in** ಮೂಲಕ ಒಂದು ವರ್ಷದ ಅವಧಿಗೆ ಮರು–ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ಇಟ್ಟ ಮೊತ್ತ: ರೂ. 503.87 ಲಕ್ಷಗಳು.

ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: **03–12–2022 ರಿಂದ** ವೀಕ್ಷಿಸಬಹುದಾಗಿದ್ದು, ಟೆಂಡರುದಾರರು e-Procurement Platform ನಲ್ಲಿ ದಿನಾಂಕ: **03–12–2022 ರಿಂದ 02–01–2023 ರವರೆಗೆ ಸಾಯಂಕಾಲ 5:30 ಗಂಟೆಯೊಳಗೆ** ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ e-Procurement portal ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/–
ಉಪ ನಿರ್ದೇಶಕರು,
ಪಶುವೈದ್ಯಕೀಯ ಔಷಧಿ ಭಂಢಾರ,
ವಾಸಾಸಂಇ/ವಾಪ್ರಾ/3391/2022–23 ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತ ರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.2, ಹೂವಿನಹಡಗಲಿ, ವಿಜಯನಗರ ಜಿಲ್ಲೆ.
Ph. No. 08399-200001 e-mail:eeslid2hdl@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ONLY THROUGH "*e-Procurement*" SYSTEM)

ಉಲ್ಲೇಖ: 1. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 749/2022–23 ದಿನಾಂಕ: 30.11.2022
2. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 687/2022–23 ದಿನಾಂಕ: 21.11.2022
3. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 686/2022–23 ದಿನಾಂಕ: 21.11.2022

ಸಿಂಗಟಾಲೂರು ಏತ ನೀರಾವರಿ ಯೋಜನೆ ವ್ಯಾಪ್ತಿಯಲ್ಲಿ ಬರುವ ಎಡಭಾಗದ 2ನೇ ಮುಖ್ಯ ಕಾಲುವೆಯ ದುರಸ್ಥಿ ಕಾಮಗಾರಿಗೆ ಹಾಗೂ 2022–23ನೇ ಸಾಲಿನ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯಡಿ ಎರಡು ಕಾಮಗಾರಿಗಳನ್ನು ಉಲ್ಲೇಖ(1) ರಿಂದ ಉಲ್ಲೇಖ(3)ರವರೆಗಿನ ಅಲ್ಪಾವಧಿ ಟೆಂಡರ್ ಪ್ರಕಟಣೆಗಳಲ್ಲಿ ಸೂಚಿಸಿರುವಂತೆ, ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಗಳ ಟೆಂಡರ್‌ಗೆ ಇಟ್ಟ ಮೊತ್ತವು ಕ್ರಮವಾಗಿ ರೂ. 87.75 ಲಕ್ಷಗಳು, ರೂ. 99.35 ಲಕ್ಷಗಳು ಮತ್ತು ರೂ. 297.93 ಲಕ್ಷಗಳು ಇರುತ್ತದೆ. ಅದರಂತೆ, ಕಾಮಗಾರಿಗಳಿಗೆ ಇ.ಎಂ.ಡಿ. ಮೊತ್ತವು ಕ್ರಮವಾಗಿ ರೂ. 1.75 ಲಕ್ಷಗಳು, ರೂ. 1.98 ಲಕ್ಷಗಳು ಮತ್ತು ರೂ. 4.47 ಲಕ್ಷಗಳು ಇರುತ್ತದೆ.

ಇನ್ನುಳಿದಂತೆ, ಸದರಿ ಟೆಂಡರಿಗಳಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 05.12.2022ರ ನಂತರ "eproc.karnataka.gov.in", ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟಗಳನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ: 21.12.2022 ಎಂದು ಮತ್ತು ಟೆಂಡರ್‌ಗಳ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 23.12.2022 ಎಂದು ನಿಗದಿಪಡಿಸಲಾಗಿದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು e-procurement Helpdesk Phone Numbers: +91-80-46010000, +91-80-68948777 ನಲ್ಲಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರಿವನ್ನು ಹೊಂದಿರುತ್ತಾರೆ.
ಸಹಿ/–ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿ ಯೋಜನೆ, ನಂ. 2 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಹೂವಿನಹಡಗಲಿ. ವಿಜಯನಗರ ಜಿಲ್ಲೆ.
ಡಿಐಪಿಆರ್/ಬಳ್ಳಾರಿ/269/ಎಂಸಿಎ/2022–23

ಕರ್ನಾಟಕ ಸರಕಾರ
(ಸಣ್ಣ ನೀರಾವರಿ ಮತ್ತುಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ವಿಭಾಗ, ಕೊಪ್ಪಳ–583231 ದೂರವಾಣಿ ಸಂಖ್ಯೆ:08539:220054
ಇ.ಮೇಲ್:–eemidnkst@rediffmail.com
ಸಂಖ್ಯೆ: ಕಾನಿಇಂ/ಸನೀ&ಅಂಅವಿ/ಕೊಪ್ಪಳ/ತಾಶಾ/2022–23/ 3220 ದಿನಾಂಕ:01/12/2022

ಟೆಂಡರ್ ಮುಂದೂಡಿಕೆ ಮತ್ತು ತಿದ್ದುಪಡಿ ಪ್ರಕಟಣೆ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಐ.ಫ್.ಟಿ. 2950/2022–23 ದಿ: 07/11/2022.

ಈ ಕಛೇರಿಯಿಂದ ಉಲ್ಲೇಖದಲ್ಲಿ ಹೊರಡಿಸಿದ್ದ ಟೆಂಡರ್ ಪ್ರಕಟಣೆಯನ್ನು ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಗಿನಂತೆ ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆಯನ್ನು ನೀಡಲಾಗಿರುತ್ತದೆ, ಇನ್ನುಳಿದಂತೆ ಟೆಂಡರಿನಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.
ಟೆಂಡರ್ ದಿನಾಂಕಗಳು: 1.ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ. **ಈ ಹಿಂದೆ ಪ್ರಕಟಿಸಲಾದಂತೆ :** ದಿನಾಂಕ 02/12/2022 ರ 17.30 ಘಂಟೆ ವರೆಗೆ. **ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆಯಂತೆ:** ದಿನಾಂಕ 09/12/2022 ರ 17.30 ಘಂಟೆ ವರೆಗೆ
ಟೆಂಡರ್ ದಿನಾಂಕಗಳು: 2.ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ. **ಈ ಹಿಂದೆ ಪ್ರಕಟಿಸಲಾದಂತೆ :** ದಿನಾಂಕ 05/12/2022 ರ 11.00 ಘಂಟೆ ವರೆಗೆ. **ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆಯಂತೆ:** ದಿನಾಂಕ 12/12/2022 ರ 11.00 ಘಂಟೆ ವರೆಗೆ
ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/483/ಎಂಸಿಎ/2022–23

ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ,
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080–22255210
ಸಂ: ಕಾಅ/ಕವಿ1/ಕಿಅ–3 /37/2022–23 ದಿನಾಂಕ: 03.12.2022

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)–2ನೇ ಕರೆ

ಮೇಲ್ಕಂಡ ಇಲಾಖೆಯು ಕೆಳಕಂಡ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://eproc.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್‌ದಾರರು ಗುತ್ತಿಗೆ ಪಡೆಯಲು ಅರ್ಹತೆಗಾಗಿ ಟೆಂಡರ್‌ದಾರರಿಗೆ ಸೂಚನೆಯ ಕಲಂ 3 ರಲ್ಲಿ ವಿವರಿಸಿರುವ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಕೋರಲಾಗಿದೆ. (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ–2).
ಕಾಮಗಾರಿ ಹೆಸರು: **ಬೆಂಗಳೂರಿನಲ್ಲಿನ ಶಾಸಕರ ಭವನ–2ರ 3ನೇ ಹಂತದಲ್ಲಿರುವ ಗ್ರಂಥಾಲಯ ಕೊಠಡಿಯ ನವೀಕರಣ ಕಾಮಗಾರಿ. KPWD/2022-23/BD/WORK_INDENT 156820.** ಅಂದಾಜು ಮೊತ್ತ: **ರೂ. 56.45 ಲಕ್ಷಗಳು.** ಇಎಂಡಿ: **ರೂ.113000/–.** ದಸ್ತಾವೇಜು ಬೆಲೆ: **ಇ–ಪ್ರೊಕ್ಯೂರ್‌ಮೆಂಟ್ ನಲ್ಲಿರುವಂತೆ.** ಪೂರ್ಣಗೊಳಿಸುವ ಅವಧಿ: **4 ತಿಂಗಳು.** ಕರೆ ಸಂಖ್ಯೆ: **2ನೇ ಕರೆ.** ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ **03.12.2022 ರಿಂದ 12.12.2022 ರ ವರೆಗೆ.** ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **12.12.2022, 16.30 ಗಂಟೆಯೊಳಗೆ.** ಇ–ಪ್ರೊಕ್ಯೂರ್‌ಮೆಂಟ್ ಮಾರ್ಗಸೂಚಿಗಳ ಅನ್ವಯ ಇ–ಪೋರ್ಟಲ್‌ನಲ್ಲಿ ಟೆಂಡರ್ ತೆರೆಯುವ ದಿನಾಂಕ: **13.12.2022, 16.45 ಗಂಟೆಗೆ.** ಇತರೆ ವಿವರಗಳಿಗೆ ಟೆಂಡರ್ ದಸ್ತಾವೇಜುಗಳನ್ನು ನೋಡುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉನಿ–ಸಿ.ಪಿ/3384/ಎಂಸಿಎ/2022–23

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಗದಗ ವಿಭಾಗ, ಗದಗ
ಸಂಖ್ಯೆ/ವಾಕರಸಾ/ಗವಿ/ಸಂಚಾರ/ವಾಣಿಜ್ಯ:1738/2022 ದಿ: 05–12–2022

ಇ–ಟೆಂಡರ್ ಪ್ರಕಟಣೆ ಸಂಖ್ಯೆ : 05/2022
(ಇ–ಪ್ರಕ್ಯೂರಮೆಂಟ್ ಮೂಲಕ)

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗದಗ ವಿಭಾಗದ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ, ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಿಗೆದಾರರನ್ನು ಹಾಗೂ ಬಸ್ ನಿಲ್ದಾಣದ ಆವರಣ, ಶೌಚಾಲಯ, ಮೂತ್ರಾಲಯಗಳಿಗೆ ಸ್ವಚ್ಛತಾ ಗುತ್ತಿಗೆದಾರರನ್ನು ಆಯ್ಕೆ ಮಾಡಲು (ಕೊಟೇಷನ್) ಇ–ಪ್ರಕ್ಯೂರಮೆಂಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ ದಸ್ತಾವೇಜಗಳನ್ನು ಇ–ಪ್ರಕ್ಯೂರಮೆಂಟ್ ವೆಬ್‌ಸೈಟ್ ವಿಳಾಸ: **http/www.eproc.karnataka.gov.in** ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ನಿಗದಿತ ದಾಖಲಾತಿಗಳೊಂದಿಗೆ ದಿನಾಂಕ : **26–12–2022** ರಂದು 17:00 ಗಂಟೆಯವರೆಗೆ ಆನ್‌ಲೈನ ಅರ್ಜಿಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಇ–ಪ್ರಕ್ಯೂರಮೆಂಟ್ ಸೆಲ್‌ನಿಂದ **DSC(Digital Signature Certificate)** ಪಡೆದಿರುವ ಅಧೀಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ದಿನಾಂಕ : **28–12–2022** ರಂದು ಬೆಳಿಗ್ಗೆ 11.00 AM ಗಂಟೆಗೆ ಟೆಂಡರ ತೆರೆಯಲಾಗುವದು. (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ). ಹೆಚ್ಚಿನ ವಿವರಗಳಿಗಾಗಿ ಹೆಲ್ಪಡೆಸ್ಕ್ ಸಂಖ್ಯೆ: **080–22371090, 080–22340060** ನ್ನು ಸಂಪರ್ಕಿಸಿ ಅಥವಾ ವಿಭಾಗೀಯ ಕಛೇರಿ, ವಾ.ಕ.ರ.ಸಾ ಸಂಸ್ಥೆ ಗದಗ ವಿಭಾಗ ಗದಗ ಇವರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ : **7760991802** (ವಿಭಾಗೀಯ ಸಂಚಲನಾಧಿಕಾರಿಗಳು), **7676566873** (ವಿಷಯ ನಿರ್ವಾಹಕ) ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಇ–ಟೆಂಡರ್‌ನಲ್ಲಿ ಭಾಗವಹಿಸುವವರು ಇ–ಟೆಂಡರ್ ಪ್ರಕಟಣೆ ಸಂಖ್ಯೆ : 05/2022ರ ಮತ್ತು ಇ–ಟೆಂಡರ್ Document ನಲ್ಲಿ ನಮೂದಿಸಿದ ಷರತ್ತು ಮತ್ತು ನಿಭಂದನೆಗಳಿಗೆ ಭದ್ದರಾಗಿರತಕ್ಕದ್ದು. ಕಾರಣ ನೀಡದೇ ಇ–ಟೆಂಡರ್‌ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಆಯ್ಕೆ ಮಾಡುವ ಅಥವಾ ಇ–ಟೆಂಡರ್ ಪ್ರಕಟಣೆಯನ್ನು ಮುಂದೂಡುವ, ಮಾರ್ಪಾಡು ಮಾಡುವ ಅಥವಾ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.
ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ವಾಸಾಸಂಇ/ಗದಗ/ಎಂ.ಸಿ.ಎ/476/22–23 **ವಾ.ಕ.ರ.ಸಾ. ಸಂಸ್ಥೆ ಗದಗ ವಿಭಾಗ ಗದಗ.**

ಕರ್ನಾಟಕ ಸರ್ಕಾರ
ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘ (ರಿ.)
ಕಲಬುರಗಿ ವಿಭಾಗ ಕಲಬುರಗಿ
ಐವಾನ–ಏ–ಶಾಹಿ ರಸ್ತೆ, ಜಿಲ್ಲಾಧಿಕಾರಿಗಳ ಕಚೇರಿ ಎದಿರುಗಡೆ
Email: kksecklb@gmail.com, Ph.:08472-227712
ಸಂಖ್ಯೆಃ ಕಕಮಾಸಂಕೃಸಾಂಸಂ/ ಅಭಿವೃದ್ಧಿ/ ಸಿ.ಆರ್–138/ 2022–23
ದಿನಾಂಕಃ 03.12.2022

ಸಂಕ್ಷಿಪ್ತ ಟೆಂಡರ ಪ್ರಕಟಣೆ

ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘ, ಕಲಬುರಗಿ ವಿಭಾಗ, ಕಲಬುರಗಿ ಇವರ ಕಚೇರಿಯಿಂದ ಕೃಷಿ ಅಭಿವೃದ್ಧಿ ವಿಭಾಗದಲ್ಲಿ ಅರಣ್ಯೀಕರಣ ಮತ್ತು ಹಣ್ಣಿನ ಸಸಿಗಳನ್ನು **ರಾಯಚೂರು ಜಿಲ್ಲೆಯ** ರೈತರಿಗೆ ವಿತರಿಸುವ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.

ಮೇಲ್ನಮೂದಿಸಿದಂತೆ, ಆಸಕ್ತ ಸಂಸ್ಥೆಗಳು ತಮ್ಮ ದರಪಟ್ಟಿಯನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ದಿನಾಂಕಃ **19.12.2022 [ಸೋಮವಾರ] ಸಂಜೆಃ 4.30ಕ್ಕೆ** ಒಳಗಾಗಿ ಸಲ್ಲಿಸುವುದು. ತಾಂತ್ರೀಕ ಬಿಡ್ ತೆರೆಯುವ ದಿನಾಂಕಃ **20.12.2022 [ಮಂಗಳವಾರ] ಸಂಜೆಃ 05.00 ಕ್ಕೆ** ಹಾಗೂ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕಃ **21.12.2022 [ಬುಧವಾರ] ಬೆಳಗ್ಗೆ 11.00 ಗಂಟೆಗೆ** ಇರುತ್ತದೆ. ಟೆಂಡರ ಪ್ರಕಟಣೆಯ ಸಂಕ್ಷಿಪ್ತ ವಿವರಗಳು ಈ ಕೆಳಗಿನಂತಿರುತ್ತದೆ.

ಕ್ರಸಂ.	ವಿವರಗಳು	ಸಂಖ್ಯೆ	ಬ್ಯಾಗ ಅಳತೆ
1	2	3	4
01]	ಮಾವು (ಕೆಸರ)	1000	8x10
02]	ಸಪೋಟ (ಕ್ರಿಕೇಟ್ ಬಾಲ)	1000	7x8
03]	ತೆಂಗು (ತಿಪಟೂರ)	1000	13x13
04]	ಪೇರಲ (ಲಖನೌ–49)	1000	7x8
05]	ಲಿಂಬು (ಬಾಲಾಜಿ)	1000	5x6
06]	ಸೀತಾಫಲ (ಬಾಲನಗರ)	1000	7x8
07]	ಮಹಾಗನಿ	1000	8x10
08]	ನೇರಳೆಹಣ್ಣು	1000	8x10
	ಒಟ್ಟುಃ	8000	

ಸೂಚನೆಃ 1) ಷರತ್ತುಗಳು ಹಾಗೂ ಅರ್ಹತೆ ಮಾನದಂಡಗಳು ಬಿಡ್ ದಾಖಲೆಯಲ್ಲಿ ನಮೂದಿಸಿದಂತೆ. 2) ಜಿಲ್ಲೆಯಲ್ಲಿರುವ ಪ್ರತಿ ತಾಲ್ಲೂಕಿಗೆ ತಲಾ ಒಟ್ಟು 8000 ಸಸಿಗಳನ್ನು ಪೂರೈಸಬೇಕಾಗಿರುತ್ತದೆ. [ಟೆಂಡರ ಪುಸ್ತಕದ [Annexure – XI]ರ ವಿವರ ಅವಲೋಕಿಸುವುದು]. 3) ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಗೆ ಸಂಪರ್ಕಿಸಬಹುದು.
ಸಹಿ/– ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘ [ರಿ] ಕಲಬುರಗಿ ವಿಭಾಗ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/919/ಎಂ.ಸಿ.&ಎ/2022–23

ಅಂಜನಾದ್ರಿ: ಮಾಲಾಧಾರಿಗಳ ಸಂಭ್ರಮ

50 ಸಾವಿರಕ್ಕೂ ಹೆಚ್ಚು ಭಕ್ತರಿಂದ ಮೊಳಗಿದ 'ಜೈ ಶ್ರೀರಾಮ್' ಘೋಷಣೆ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಅಂಜನಾದ್ರಿ ಬೆಟ್ಟದಲ್ಲಿ ಸೋಮವಾರ ನಡೆದ ಹನುಮಮಾಲೆ ವಿಸರ್ಜನೆ ಕಾರ್ಯಕ್ರಮದಲ್ಲಿ 50 ಸಾವಿರಕ್ಕೂ ಹೆಚ್ಚು ಭಕ್ತರು ಪಾಲ್ಗೊಂಡಿದ್ದರು. ಅಂಜನಾದ್ರಿ ಬೆಟ್ಟ ಸಂಪೂರ್ಣವಾಗಿ ಕೇಸರಿಮಯವಾಗಿತ್ತು. ಭಗವಾಧ್ವಜಗಳು ರಾರಾಜಿಸಿದವು.

ಮಾಲೆ ವಿಸರ್ಜನೆ ವೇಳೆ ಭಕ್ತರು, 'ಜೈ ಶ್ರೀರಾಮ್' ಎಂದು ಘೋಷಣೆ ಮೊಳಗಿಸಿದರು. ರಾಮನಾಮ ಹಾಡಿ ಸಂಭ್ರಮಿಸಿದರು. ಸಂಕೀರ್ತನೆ ಯಾತ್ರೆ ಕೈಗೊಂಡು ಆಂಜನೇಯನ ದರ್ಶನ ಪಡೆದರು.

ವಿವಿಧ ಜಿಲ್ಲೆಗಳೇ ಅಲ್ಲದೇ ತಮಿಳು ನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರದಿಂದಲೂ ಮಾಲಾಧಾರಿಗಳು ಪಾಲ್ಗೊಂಡಿದ್ದರು. ಬಹುತೇಕ ಮಂದಿ ದಿ.ಪುನೀತ್ ರಾಜಕುಮಾರ್ ಅವರ ಚಿತ್ರ, ಇನ್ನೂ ಕೆಲವರು ವೀರ ಸಾವರ್ಕರ್ ಭಾವಚಿತ್ರ ಪ್ರದರ್ಶಿಸಿದರು.

ಜನಸಂದಣಿ ನಿಯಂತ್ರಿಸಲು ಭಾನುವಾರ ರಾತ್ರಿ 11ರಿಂದಲೇ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಗದಗ, ಬಳ್ಳಾರಿ, ಹೊಸಪೇಟೆ ಮತ್ತು ಕೊಪ್ಪಳ ಜಿಲ್ಲೆಗಳಿಂದ ಭಕ್ತರು ಪಾದಯಾತ್ರೆಯಲ್ಲಿ ಬಂದರು. ಅವರಿಗಾಗಿ ಕೆಲ ಸಂಘಟನೆಯವರು ಅಲ್ಲಲ್ಲಿ ಕುಡಿಯುವ ನೀರು ಹಾಗೂ ಊಟದ ವ್ಯವಸ್ಥೆ ಮಾಡಿದ್ದರು. ಬೆಟ್ಟದ ಹಿಂಭಾಗ ಊಟದ ವ್ಯವಸ್ಥೆ ಮಾಡಲಾಗಿತ್ತು. ಮುಜರಾಯಿ ಖಾತೆ ಸಚಿವ ಶಶಿಕಲಾ ಜೊಲ್ಲೆ, ಸಂಸದ ಅಣ್ಣಾಸಾಹೇಬ ಜೊಲ್ಲೆ, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ, ಸಂಸದ ಸಂಗಣ್ಣ ಕರಡಿ, ಮಾಲಾಧಾರಿಯಾಗಿದ್ದ ಶಾಸಕ ಪರಣ್ಣ ಮುನವಳ್ಳಿ, ಮಾಜಿ ಸಚಿವ ಜನಾರ್ದನ ರೆಡ್ಡಿ ಪೂಜೆ ಸಲ್ಲಿಸಿದರು.

ಹನುಮ ಮಾಲಾಧಾರಿಗಳು ಅಂಜನಾದ್ರಿವರೆಗೆ ದಿವಂಗತ ನಟ ಡಾ. ಪುನೀತ್ ರಾಜಕುಮಾರ್ ಅವರ ಭಾವಚಿತ್ರ ಹಿಡಿದು ಹೆಜ್ಜೆ ಹಾಕಿದರು –ಪ್ರಜಾವಾಣಿ ಚಿತ್ರ

ಮಾಲೆ ಹಾಕಿದ ಜಾಫರ್ ಸೈಯದ್

ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ನರಸಲಗಿ ಗ್ರಾಮದ ಇಮಾಮ್ ಜಾಫರ್ ಚಪ್ಪರಬಂದ್ ಅವರು ಮಾಲೆ ಧರಿಸಿ ಪಾಲ್ಗೊಂಡರು. 'ನನ್ನ ಕುಟುಂಬದವರು ಮೊದಲಿನಿಂದಲೂ ಹನುಮಂತನ ಭಕ್ತರು. 1994ರಲ್ಲಿ 48 ದಿನ ಅಯ್ಯಪ್ಪಸ್ವಾಮಿ ಮಾಲೆ ಹಾಕಿ, ಶಬರಿಮಲೆಗೆ ತೆರಳಿದ್ದೆ. ಇದು ನನಗೆ ಖುಷಿ ಕೊಟ್ಟಿದೆ' ಎಂದು ಅವರು ಪ್ರತಿಕ್ರಿಯಿಸಿದರು.

ಚಿಕ್ಕಮಗಳೂರು: ಇಂದಿನಿಂದ 8ರವರೆಗೆ ದತ್ತ ಜಯಂತಿ

ಚಿಕ್ಕಮಗಳೂರು: ಇದೇ 6ರಿಂದ 8ರವರೆಗೆ ದತ್ತ ಜಯಂತಿ ಜರುಗಲಿದೆ. ನಗರದ ಪ್ರಮುಖ ವೃತ್ತ, ರಸ್ತೆಗಳಲ್ಲಿ ಕೇಸರಿ ಹಾರ ಕಟ್ಟಿ ಅಲಂಕರಿಸಲಾಗಿದೆ. 6ರಂದು ಅನಸೂಯಾ ಜಯಂತಿ, 7ರಂದು ಶೋಭಾಯಾತ್ರೆ ಹಾಗೂ 8ರಂದು ದತ್ತ ಜಯಂತಿ, ಪಾದುಕೆ ದರ್ಶನ ನಡೆಯಲಿದೆ.

ಬಂದೋಬಸ್ತ್‌ಗೆ ಒಬ್ಬರು ಎಸ್ಪಿ, ನಾಲ್ವರು ಎಎಸ್ಪಿ, 17 ಡಿಎಸ್ಪಿ ಸಹಿತ ಒಟ್ಟು 3050 ಪೊಲೀಸರನ್ನು ನಿಯೋಜಿಸಲಾಗಿದೆ. ಈ ಬಾರಿ ಶ್ರೀಗುರುದತ್ತಾತ್ರೇಯ ಬಾಬಾ ಬುಡನ್‌ಸ್ವಾಮಿ ದರ್ಗಾ/ಸಂಸ್ಥೆಯಲ್ಲಿ ಪೂಜೆ ನೆರವೇರಿಸಲು ತಾತ್ಕಾಲಿಕವಾಗಿ ಇಬ್ಬರು ಅರ್ಚಕರ ನೇಮಕವಾಗಿದೆ.

ಗಿರಿಶ್ರೇಣಿಯ ತಾಣಗಳಿಗೆ ಪ್ರವಾಸಿಗರಿಗೆ ಇದೇ 9ರಂದು ಬೆಳಿಗ್ಗೆ 10 ಗಂಟೆವರೆಗೆ ನಿರ್ಬಂಧ ವಿಧಿಸಲಾಗಿದೆ. ಈಗಾಗಲೇ ಹೋಂ ಸ್ಟೆ, ರೆಸಾರ್ಟ್‌ಗಳಲ್ಲಿ ವಾಸ್ತವ್ಯಕ್ಕೆ ಬುಕ್ಕಿಂಗ್ ಮಾಡಿರುವ ಪ್ರವಾಸಿಗರಿಗೆ ನಿರ್ಬಂಧ ಅನ್ವಯಿಸಲ್ಲ ಎಂದು ಜಿಲ್ಲಾಧಿಕಾರಿ ರಮೇಶ್ ತಿಳಿಸಿದ್ದಾರೆ.

ಮದ್ಯ, ಸಿಗರೇಟು ಪೊಲೀಸರ ವಶಕ್ಕೆ

ಮುಂಬೈ: ಎಲ್ಗಾರ್ ಪರಿಷತ್ ಪ್ರಕರಣದಲ್ಲಿ ಆರೋಪಿಯಾಗಿ ಗೃಹ ಬಂಧನದಲ್ಲಿರುವ ಪತ್ರಕರ್ತ, ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಖಾ ಅವರ ಸಂಗಾತಿ, ಸಂಶೋಧಕಿ ಸಹಬಾ ಹುಸೇನ್ ಅವರು ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಆಕ್ಷೇಪ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ತಮ್ಮ ಮನೆಯಲ್ಲಿದ್ದ ಮದ್ಯದ ಬಾಟಲಿಗಳು ಹಾಗೂ ಸಿಗರೇಟ್ ಪ್ಯಾಕೇಟ್‌ಗಳನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದು ಸೋಮವಾರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2020ರ ಏಪ್ರಿಲ್‌ನಿಂದಲೂ ತಲೋಜಾ ಜೈಲಿನಲ್ಲಿದ್ದ ನವಲಖಾ ಅವರು ಅನಾರೋಗ್ಯದ ಕಾರಣಕ್ಕಾಗಿ ತಮ್ಮನ್ನು ಗೃಹ ಬಂಧನಕ್ಕೆ ವರ್ಗಾಯಿಸುವಂತೆ ಕೋರಿ ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು.

ಬೀದರ್‌ನಲ್ಲಿ ಸೋಮವಾರ ಆರಂಭವಾದ ಅಗ್ನಿಪಥ ಅಗ್ನಿವೀರ ನೇಮಕಾತಿ ರ‍್ಯಾಲಿಯಲ್ಲಿ ಪಾಲ್ಗೊಂಡ ಅಭ್ಯರ್ಥಿಗಳು.

ಎಸ್‌ಟಿ ಪಟ್ಟಿಗೆ ವಿಶ್ವಕರ್ಮ ಸಮಾಜ ಸೇರ್ಪಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ (ಗದಗ ಜಿಲ್ಲೆ): '1978ರಲ್ಲಿ ವಿಶ್ವಕರ್ಮ ಸಮಾಜವನ್ನು ಹಿಂದುಳಿದ ಪಟ್ಟಿಗೆ ಸೇರಿಸಲಾಯಿತು. ಆದರೆ ಸಾಮಾಜಿಕ ನ್ಯಾಯ ಪಡೆದುಕೊಳ್ಳಲು ಆಗುತ್ತಿಲ್ಲ' ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಕೆ.ಪಿ.ನಂಜುಂಡಿ ವಿಷಾದಿಸಿದರು.

'ವಿಶ್ವಕರ್ಮ ಸಮಾಜಕ್ಕೆ ಎಸ್‌ಟಿ ಮೀಸಲಾತಿ ನೀಡಬೇಕು' ಎಂದು ಒತ್ತಾಯಿಸಿ ಇಲ್ಲಿ ಹಮ್ಮಿಕೊಂಡಿದ್ದ ಜಾಗೃತ ಸಮಾವೇಶಕ್ಕೆ ಸೋಮವಾರ ಭೇಟಿ ನೀಡಿದ್ದ ಅವರು ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದರು.

'ವಿಶ್ವಕರ್ಮ ಸಮಾಜದವರು ಮೂಲತಃ ಗ್ರಾಮೀಣ ಪ್ರದೇಶದಿಂದ ಬಂದವರು. ಶಿಕ್ಷಣದಿಂದ ಸಾಕಷ್ಟು ಹಿಂದುಳಿದಿದ್ದಾರೆ. ಶಿಕ್ಷಣ ಪಡೆದವರಿಗೆ ಉದ್ಯೋಗ ಸಿಗುತ್ತಿಲ್ಲ. ಈ ಸಮಾಜವನ್ನು ಎಸ್‌ಟಿ ಪಟ್ಟಿಗೆ ಸೇರಿಸಬೇಕು' ಎಂದು ಆಗ್ರಹಿಸಿದರು.

'ಸಮಾಜದವರು ರಾಜಕೀಯ ಪ್ರಜ್ಞೆಯಿಂದ ದೂರ ಇದ್ದಾರೆ. ಮೀಸಲಾತಿ ಇಲ್ಲದೇ ಅಧಿಕಾರ ಸಿಗದು. ಅಧಿಕಾರ ಇಲ್ಲದೇ ಸಮಾಜ ಉದ್ಧಾರವಾಗದು. ಎಸ್‌ಟಿ ಮೀಸಲಾತಿ ನಮ್ಮ ಹಕ್ಕು. ಈ ಬಗ್ಗೆ ಜಾಗೃತಿ ಮೂಡಿಸಲು ರಾಜ್ಯದ 745 ಹೋಬಳಿಗಳಿಗೆ ಭೇಟಿ ನೀಡಿ ಸಮಾವೇಶ ಮಾಡುತ್ತಿದ್ದೇವೆ' ಎಂದು ತಿಳಿಸಿದರು.

ಮೂವರಿಗೆ ನಾಡೋಜ ಗೌರವ

ಹೊಸಪೇಟೆ (ವಿಜಯನಗರ): ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಸಾಹಿತಿ ಕೃಷ್ಣಪ್ಪ ಜಿ. ಹಾಗೂ ಲೇಖಕ ಎಸ್.ಷಡಕ್ಷರಿ ಅವರನ್ನು ಪ್ರಸಕ್ತ ಸಾಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ ಪದವಿಗೆ ಆಯ್ಕೆ ಮಾಡಲಾಗಿದೆ.

ಡಿ.8ರಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ 'ನುಡಿಹಬ್ಬ' (ಘಟಿಕೋತ್ಸವ) ನಡೆಯಲಿದೆ. ಅ ದಿನ ಮೂವರಿಗೂ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ನಾಡೋಜ ಪ್ರದಾನ ಮಾಡುವರು. ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಘಟಿಕೋತ್ಸವ ಭಾಷಣ ಮಾಡುವರು, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಡಿ.ಲಿಟ್ ಹಾಗೂ ಪಿಎಚ್.ಡಿ ಪದವಿ ಪ್ರದಾನ ಮಾಡುವರು.

ಡಾ. ಮಂಜುನಾಥ್

ಕೃಷ್ಣಪ್ಪ ಜಿ.

ಎಸ್ ಷಡಕ್ಷರಿ

ಡಾ.ಮಂಜುನಾಥ್ (ವೈದ್ಯಕೀಯ), ಕೃಷ್ಣಪ್ಪ (ಸಾಹಿತ್ಯ), ಎಸ್.ಷಡಕ್ಷರಿ (ಸಮಾಜ ಸೇವೆ) ಅವರು ತಮ್ಮ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ, ಕೊಡುಗೆಗಾಗಿ ನಾಡೋಜ ಗೌರವಕ್ಕೆ ಆಯ್ಕೆ ಮಾಡಲಾಗಿದೆ.

'ವಿಸ್ಮಯ ಕೀಟ ಪ್ರಪಂಚ'ಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಮುಸ್ಲಿಂ ಬರಹಗಾರರ ಕಲಾವಿದರ ಒಕ್ಕೂಟ ಕರ್ನಾಟಕ ಮುಸ್ಲಿಂ ಲೇಖಕರ ಸಂಘ ನೀಡಲಿರುವ ರಾಜ್ಯ ಮಟ್ಟದ 'ಮುಸ್ಲಿಂ ಸಾಹಿತ್ಯ ಪ್ರಶಸ್ತಿ'ಗೆ 2021ನೇ ಸಾಲಿಗೆ ಡಾ.ನೂರ್ ಸಮದ್ ಅಬ್ಬಲಗೆರೆಯವರ 'ವಿಸ್ಮಯ ಕೀಟ ಪ್ರಪಂಚ' ಕೃತಿ ಆಯ್ಕೆಯಾಗಿದೆ.

ಡಾ.ನೂರ್ ಸಮದ್ ಅವರು ನಾಲ್ಕು ವರ್ಷಗಳಿಂದ ಛಾಯಾಗ್ರಹಣ ಮಾಡಿ, ಕೀಟಗಳ ವಿಸ್ಮಯ ಕುರಿತು ಲೇಖನಗಳನ್ನು 'ಪ್ರಜಾವಾಣಿ' ದೈನಿಕದ 'ಸಹಪಾಠಿ' ಪುರವಣಿಗೆ ಬರೆಯುತ್ತಿದ್ದಾರೆ. ಅದರ ಪುಸ್ತಕ ರೂಪವೇ 'ವಿಸ್ಮಯ ಕೀಟ ಪ್ರಪಂಚ' ಕೃತಿ.

ವಿಸ್ಮಯ ಕೀಟ ಪ್ರಪಂಚ ಕೃತಿ

ದಿವಂಗತ ಯು.ಟಿ.ಫರೀದ್ ಸ್ಮರಣಾರ್ಥ ನೀಡುವ ಪ್ರಶಸ್ತಿ ₹10 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. 2023ರ ಜನವರಿಯಲ್ಲಿ ಮಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಮುಸ್ಲಿಂ ಲೇಖಕರ ಸಂಘದ ಅಧ್ಯಕ್ಷ ಉಮರ್ ಯು.ಎಚ್.ತಿಳಿಸಿದ್ದಾರೆ.

ದಯಾಮರಣ ಕೋರಿ ಪತ್ರ

ಮೈಸೂರು: 'ನ್ಯಾಯ ಒದಗಿಸಿ ಇಲ್ಲವೇ, ದಯಾಮರಣ ದಯಪಾಲಿಸಿ' ಎಂದು ಕೋರಿ ಶಿವಮೂರ್ತಿ ಶರಣರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತ ಬಾಲಕಿಯರ ತಾಯಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದ್ದಾರೆ.

'ನನಗೆ, ನನ್ನ ಮಕ್ಕಳಿಗೆ ನ್ಯಾಯ ಕಲ್ಪಿಸುವುದರ ಮೂಲಕ ಘನತೆಯ ಬಾಳನ್ನು ನಿರ್ಮಿಸಿ ಕೊಡಬೇಕೆಂದು ನಿಮ್ಮಲ್ಲಿ ಪ್ರಾರ್ಥಿಸುತ್ತೇನೆ. ಇಲ್ಲವಾದರೆ ಈ ನರಕದಿಂದ ಮುಕ್ತಗೊಳ್ಳಲು ದಯಾ ಮರಣವನ್ನಾದರೂ ದಯಪಾಲಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ' ಎಂದು ಕೋರಿದ್ದಾರೆ. 'ತಾಯಿಯನ್ನು ಪೊಲೀಸರು 21 ದಿನ ವಶದಲ್ಲಿರಿಸಿಕೊಂಡಿದ್ದರು' ಎಂದು ಒಡನಾಡಿ ಸಂಸ್ಥೆಯ ಎಂ.ಎಲ್. ಪರಶುರಾಂ, ಸ್ಟ್ಯಾನ್ಲಿ ಪ್ರತಿಕ್ರಿಯಿಸಿದರು.

ರೋಹಿಣಿ ಸಿಂಧೂರಿ ಪತಿ ಪಾಲುದಾರಿಕೆಯಲ್ಲಿ ಖರೀದಿಸಿದ್ದ ಜಾಗ

ಜಮೀನು ವ್ಯಾಜ್ಯ: ಪ್ರತ್ಯೇಕ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಕೆಂಚನಹಳ್ಳಿ ಬಳಿಯ ಜಮೀನು ಮಾಲೀಕತ್ವಕ್ಕೆ ಸಂಬಂಧಪಟ್ಟಂತೆ ಆರೋಪ- ಪ್ರತ್ಯಾರೋಪದಡಿ ಎರಡು ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿದ್ದು, ಈ ಬಗ್ಗೆ ಯಲಹಂಕ ನ್ಯೂ ಟೌನ್ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ತಮ್ಮ ಮಾಲೀಕತ್ವದ ಜಾಗವನ್ನು ಲಕ್ಷ್ಮೀನಾರಾಯಣ ಹಾಗೂ ಇತರರು ಒತ್ತುವರಿ ಮಾಡಿದ್ದಾರೆ. ಅದನ್ನು ಪ್ರಶ್ನಿಸಿದ್ದಕ್ಕೆ ಜೀವ ಬೆದರಿಕೆಯೊಡ್ಡಿದ್ದಾರೆ' ಎಂದು ಆರೋಪಿಸಿ ಬಾಲಿವುಡ್ ಗಾಯಕ ಮಕ್ಸೂದ್ ಮೊಹಮ್ಮದ್ ಅಲಿ ಉರುಫ್ ಲಕ್ಕಿ ಅಲಿ ದೂರು ಸಲ್ಲಿಸಿದ್ದಾರೆ.

ಇದಕ್ಕೆ ಪ್ರತಿಯಾಗಿ ದೂರು ನೀಡಿರುವ ಲಕ್ಷ್ಮೀನಾರಾಯಣ, 'ಕಾನೂನು ಬದ್ಧವಾಗಿ ಜಮೀನು ಖರೀದಿಸಲಾಗಿದೆ. ಯಾವುದೇ ಹಕ್ಕಿಲ್ಲದಿದ್ದರೂ ಲಕ್ಕಿ ಅಲಿ ಹಾಗೂ ಇತರರು, ನಮ್ಮ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ನ್ಯಾಯಾಲಯದಿಂದ ತಡೆಯಾಜ್ಞೆ ಇದ್ದರೂ ಜಮೀನಿನಲ್ಲಿ ಅಕ್ರಮವಾಗಿ ಪ್ರವೇಶಿಸುತ್ತಿದ್ದಾರೆ' ಎಂದು ಹೇಳಿದ್ದಾರೆ.

ದೂರುಗಳ ಬಗ್ಗೆ ಪ್ರತಿಕ್ರಿಯಿಸಿದ ಯಲಹಂಕ ನ್ಯೂ ಟೌನ್ ಪೊಲೀಸರು, 'ಲಕ್ಕಿ ಅಲಿ ಹಾಗೂ ಲಕ್ಷ್ಮೀನಾರಾಯಣ ಇಬ್ಬರಿಂದಲೂ ಕೆಲ ದಿನಗಳ ಹಿಂದೆ ದೂರು ಸ್ವೀಕರಿಸಲಾಗಿದೆ. ಎರಡು ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಜಮೀನು ಮಾಲೀಕತ್ವದ ವಿಚಾರ ನ್ಯಾಯಾಲಯದಲ್ಲಿದ್ದು, ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ತನಿಖೆ ಮುಂದುವರಿಸಲಾಗಿದೆ' ಎಂದರು.

'ಲಕ್ಷ್ಮೀನಾರಾಯಣ ಅವರು ಸುಧೀರ್ ರೆಡ್ಡಿ, ಮಧು ರೆಡ್ಡಿ ಹಾಗೂ ಇತರರ ಪಾಲುದಾರಿಕೆಯಲ್ಲಿ ಜಮೀನು ಖರೀದಿಸಿರುವ ಪ್ರಾಥಮಿಕ ಮಾಹಿತಿ ಲಭ್ಯವಾಗಿದೆ. ಜಮೀನು ತಮ್ಮದೆಂದು ಹೇಳಿರುವ ಲಕ್ಷ್ಮಿನಾರಾಯಣ, ಅದಕ್ಕೆ ಸಂಬಂಧಪಟ್ಟ ದಾಖಲೆ ಒದಗಿಸಿದ್ದಾರೆ. ಜಮೀನು ವ್ಯಾಜ್ಯದ ಪ್ರಕರಣ ಸಂಬಂಧ ನ್ಯಾಯಾಲಯದಲ್ಲಿ ತಾತ್ಕಾಲಿಕ ತಡೆಯಾಜ್ಞೆ ಇದ್ದು, ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಲಾಗುವುದು' ಎಂದು ಪೊಲೀಸರು ಹೇಳಿದರು.

ರೋಹಿಣಿ ಸಹಾಯ ಆರೋಪ: ಜಮೀನು ಮಾಲೀಕತ್ವದ ವಿಚಾರವಾಗಿ ಟ್ವೀಟ್ ಮೂಲಕ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ದೂರು ನೀಡಿರುವ ಬಾಲಿವುಡ್ ನಟ ಲಕ್ಕಿ ಅಲಿ, 'ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಪತಿ ಸುಧೀರ್ ರೆಡ್ಡಿ ಹಾಗೂ ಇತರರು, ನಮ್ಮ ಜಮೀನು ಒತ್ತುವರಿ ಮಾಡಿಕೊಂಡಿದ್ದಾರೆ. ಈ ಭೂ ಮಾಫಿಯಾಗೆ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಸಹಾಯ ಮಾಡಿದ್ದಾರೆ. ಪೊಲೀಸರು ಸಹ ನನ್ನ ದೂರನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಎಸಿಪಿ ಸಹ ದೂರಿಗೆ ಸ್ಪಂದಿಸುತ್ತಿಲ್ಲ' ಎಂದು ಆರೋಪಿಸಿದ್ದಾರೆ.

ದೂರಿನ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಪ್ರವೀಣ್ ಸೂದ್ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ, 'ಭೂ ಒತ್ತುವರಿ ಸಂಬಂಧ ರೋಹಿಣಿ ಸಿಂಧೂರಿ ಪತಿ ವಿರುದ್ಧ ಕೇಳಿಬಂದಿರುವ ಆರೋಪದ ಪೊಲೀಸರಿಂದ ಮಾಹಿತಿ ಪಡೆದು ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಆಧಾರರಹಿತ ಆರೋಪ'

'ಮಕ್ಸೂದ್ ಮೊಹಮ್ಮದ್ ಅಲಿ ಉರುಫ್ ಲಕ್ಕಿ ಅಲಿ ಆರೋಪ ಆಧಾರ ರಹಿತ ಹಾಗೂ ಸುಳ್ಳಾಗಿದೆ. ಇದರಿಂದ ನನಗೆ ಆಘಾತವಾಗಿದೆ' ಎಂದು ರೋಹಿಣಿ ಸಿಂಧೂರಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ಆದರೆ, ಜಮೀನು ಮಾಲೀಕತ್ವದ ವಿಚಾರದ ಬಗ್ಗೆ ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆ ಇರುವುದು ಗಮನಕ್ಕೆ ಬಂದಿದೆ. ಸಾರ್ವಜನಿಕ ಅನುಕಂಪ ಗಿಟ್ಟಿಸಲು ಈ ಆರೋಪ ಮಾಡಿದ್ದಾರೆ. ನನ್ನ ವಿರುದ್ಧ ಸುಖಾಸುಮ್ಮನೇ ಆರೋಪ ಮಾಡಿ ಹೆಸರಿಗೆ ಧಕ್ಕೆ ತಂದಿರುವುದರ ವಿರುದ್ಧ ಕಾನೂನು ಹೋರಾಟ ನಡೆಸಲು ಯೋಚಿಸುತ್ತಿದ್ದೇನೆ' ಎಂದಿದ್ದಾರೆ.

'ಎಟಿಐ ಪರಿಕರ ವಾಪಸು ನೀಡಿ'

ಮೈಸೂರು: ಇಲ್ಲಿನ ಆಡಳಿತ ತರಬೇತಿ ಸಂಸ್ಥೆಯ (ಎಟಿಐ) ಅತಿಥಿಗೃಹದಲ್ಲಿ 2020ರಲ್ಲಿ ವಾಸ್ತವ್ಯ ಹೂಡಿದ್ದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ, ಅಲ್ಲಿನ 20 ವಸ್ತುಗಳನ್ನು ಜಿಲ್ಲಾಧಿಕಾರಿ ನಿವಾಸಕ್ಕೆ ಒಯ್ದಿದ್ದು, ಅವುಗಳನ್ನು ಮರಳಿಸುವಂತೆ ಸಂಸ್ಥೆಯು ಜಿಲ್ಲಾಧಿಕಾರಿ ಕಚೇರಿಗೆ ಪತ್ರ ಬರೆದಿದೆ.

ಸಂಸ್ಥೆಯ ಜಂಟಿ ನಿರ್ದೇಶಕರ ಕಚೇರಿಯಿಂದ ನ.30ರಂದು ಪತ್ರ ಬರೆಯಲಾಗಿದೆ. ಹೀಗೆ ಪತ್ರ ಬರೆಯುತ್ತಿರುವುದು ಇದು 4ನೇ ಬಾರಿ. 2020ರ ಡಿ.16, 2021ರ ಜ.8 ಹಾಗೂ ಏ.21ರಲ್ಲೂ ಸಂಸ್ಥೆ ಪತ್ರ ಬರೆದಿತ್ತು ಎಂದು ತಿಳಿದುಬಂದಿದೆ.

'2020ರ ಅ.2ರಿಂದ 2020ರ ನ.14ರವರೆಗೆ ಆಗಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ, ಅತಿಥಿಗೃಹದಲ್ಲಿ ವಾಸ್ತವ್ಯ ಹೂಡಿದ್ದರು. ಜಿಲ್ಲಾಧಿಕಾರಿ ನಿವಾಸಕ್ಕೆ ಸ್ಥಳಾಂತರ ವೇಳೆ ಅತಿಥಿಗೃಹದ 2 ಟೆಲಿಫೋನ್ ಟೇಬಲ್, 2 ಬಟ್ಟೆ ಹ್ಯಾಂಗರ್, 2 ಬೆತ್ತದ ಕುರ್ಚಿ, 2 ಟೆಲಿಫೋನ್ ಸ್ಟೂಲ್, 2 ಟೀಪಾಯಿ, ಒಂದು ಮೈಕ್ರೋವೇವ್ ಒವನ್, ಮಂಚ, ಹಾಸಿಗೆ, 2 ಪ್ಲಾಸ್ಟಿಕ್ ಕುರ್ಚಿ, 2 ಯೋಗಾ ಮ್ಯಾಟ್, 2 ಸ್ಟೀಲ್ ಜಗ್ ಕೊಂಡೊಯ್ದಿದ್ದಾರೆ' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ರೋಹಿಣಿ ಜಿಲ್ಲಾಧಿಕಾರಿ ಆಗಿದ್ದ ವೇಳೆ ಪತ್ರ ಬರೆದಿದ್ದರೂ, ಪ್ರತಿಕ್ರಿಯೆ ಬಂದಿಲ್ಲ. ಈಗ ಮತ್ತೊಮ್ಮೆ ಕೋರಲಾಗಿದೆ. 'ಈ ವಿಷಯ ಸೋಮವಾರ ಗಮನಕ್ಕೆ ಬಂದಿದ್ದು, ಪೂರ್ಣ ಮಾಹಿತಿ ಇಲ್ಲ. ಪರಿಶೀಲಿಸುತ್ತೇನೆ' ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪ್ರತಿಕ್ರಿಯಿಸಿದರು. ಪ್ರತಿಕ್ರಿಯೆಗೆ ರೋಹಿಣಿ ಲಭ್ಯವಾಗಲಿಲ್ಲ.

ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಲು ಆಗ್ರಹ ● ಸರ್ಕಾರದ ವಿಳಂಬ ಧೋರಣೆಗೆ ಖಂಡನೆ

‘2ಎ’ ಮೀಸಲಿಗೆ ಆಗ್ರಹಿಸಿ ಬಲಿಜರ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವರ್ಗ ‘2ಎ’ ಮೀಸಲು ಸೌಲಭ್ಯಕ್ಕೆ ಆಗ್ರಹಿಸಿ ರಾಜ್ಯ ಸಮಗ್ರ ಬಲಿಜ ವೇದಿಕೆ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬಲಿಜ ಸಮುದಾಯದವರು ಸೋಮವಾರ ಉಪವಾಸ ಸತ್ಯಾಗ್ರಹ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಪ್ರತಿಭಟನಕಾರರು ಮೀಸಲಾತಿಗೆ ಆಗ್ರಹಿಸಿದರು. ಸರ್ಕಾರದ ವಿಳಂಬ ಧೋರಣೆ ಖಂಡಿಸಿದರು.

‘ನಮ್ಮಿಂದ ಕಸಿದುಕೊಂಡಿರುವ ‘ಪ್ರವರ್ಗ 2ಎ’ ಮೀಸಲಾತಿ ಸೌಲಭ್ಯವನ್ನು ಮರು ಜಾರಿಗೊಳಿಸಬೇಕು. ಸರ್ಕಾರವು ಬಹುತೇಕ ಸಮುದಾಯಗಳಿಗೆ ಪ್ರತ್ಯೇಕ ನಿಗಮ ಸ್ಥಾಪಿಸಿದೆ. ಅದೇ ಮಾದರಿಯಲ್ಲಿ ‘ಕರ್ನಾಟಕ ಬಲಿಜ ಸಮುದಾಯ ಅಭಿವೃದ್ಧಿ ನಿಗಮ’ ಸ್ಥಾಪಿಸಬೇಕು. ಬೇಡಿಕೆ ಈಡೇರದಿದ್ದರೆ ಹೋರಾಟ ತೀವ್ರಗೊಳಿಸುತ್ತೇವೆ’ ಎಂದು ವೇದಿಕೆ ಅಧ್ಯಕ್ಷ ಎನ್.ಪಿ. ಮುನಿಕೃಷ್ಣ ಎಚ್ಚರಿಸಿದರು.

‘ವೆಂಕಟಸ್ವಾಮಿ, ಚಿನ್ನಪ್ಪ ರೆಡ್ಡಿ ಹಾಗೂ ಎಲ್.ಜಿ. ಹಾವನೂರು ಆಯೋಗದ ವರದಿಯಂತೆ ‘2ಎ’ ಮೀಸಲಾತಿ ಕಲ್ಪಿಸಬೇಕು. ಹಿಂದುಳಿದ ವರ್ಗಗಳ ಆಯೋಗವು ಸಮುದಾಯದ ಸ್ಥಿತಿಗತಿ ಅಧ್ಯಯನ ನಡೆಸಿದೆ. ಆದರೆ, ವರದಿ ಇನ್ನೂ ಸರ್ಕಾರಕ್ಕೆ ಸಲ್ಲಿಕೆಯಾಗಿಲ್ಲ. ಹಿಂದುಳಿದ ವರ್ಗಗಳ ಆಯೋಗದ ವಿಳಂಬ ಧೋರಣೆಯಿಂದಾಗಿ ಬಲಿಜ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಲಭಿಸುತ್ತಿಲ್ಲ’ ಎಂದು ಆಕ್ರೋಶ ಹೊರ ಹಾಕಿದರು.

‘ಬಲಿಜ ಸಮುದಾಯದ ಜನರು ಕುಂಕುಮ, ಅರಿಶಿನ, ಬಳೆ, ಹೂವು ಹಾಗೂ ಎಲೆ, ಅಡಿಕೆಯನ್ನು ರಸ್ತೆಯ ಬದಿ ಹಾಗೂ ದೇವಸ್ಥಾನಗಳ ಎದುರು ಮಾರಾಟ ನಡೆಸಿ ಬದುಕು ಸಾಗಿಸುತ್ತಿದ್ದಾರೆ. ಜನರ ಬದುಕು ಕಷ್ಟದಲ್ಲಿದ್ದು, ಮೀಸಲಾತಿ ಸೌಲಭ್ಯ ಕಲ್ಪಿಸಬೇಕು’ ಎಂದು ಪ್ರಧಾನ ಕಾರ್ಯದರ್ಶಿ ಎಸ್.ರಮೇಶ್ ಆಗ್ರಹಿಸಿದರು.

ಬಲಿಜ ಸಮುದಾಯ ಹಾಗೂ ಅದರ ಉಪ ಪಂಗಡಗಳಾದ ಬಲಿಜಿಗ, ನಾಯ್ಡು, ತೆಲುಗು ಬಲಿಜ, ಶೆಟ್ಟಿ ಬಲಿಜ, ಕಸ್ಬನ್, ಮುನ್ನೂರು ಕಾಪು, ವಳೆ ಬಲಿಜಿಗ, ರೆಡ್ಡಿ ಬಲಿಜಿಗರು ಶೋಷಿತರಾಗಿದ್ದು ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಅತಿ ಹಿಂದುಳಿದಿದೆ. ಅವರಿಗೆ ಸರ್ಕಾರದ ಸವಲತ್ತು ಲಭಿಸಬೇಕು ಎಂದು ರಮೇಶ್ ಅವರು ಒತ್ತಾಯಿಸಿದರು.

‘ನ್ಯಾಯಾಲಯದ ಆದೇಶವಿದ್ದರೂ ಸರ್ಕಾರ ಪರಿಗಣಿಸುತ್ತಿಲ್ಲ. ಮತ್ತೊಮ್ಮೆ ಮನವಿ ಸಲ್ಲಿಸೋಣ. ಆದರೂ, ಬೇಡಿಕೆ ಈಡೇರದಿದ್ದರೆ ಕಾನೂನಾತ್ಮಕ ಹೋರಾಟ ನಡೆಸುವುದು ಒಳಿತು’ ಎಂದು ಕಾಂಗ್ರೆಸ್ ವಕ್ತಾರ ರಮೇಶ್ ಬಾಬು ಹೇಳಿದರು.

ಸ್ಥಳಕ್ಕೆ ಬಂದಿದ್ದ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಪ್ರದೀಪ್ ಅವರಿಗೆ ಮನವಿ ಸಲ್ಲಿಸಿದರು.

ಸಮಗ್ರ ಬಲಿಜ ವೇದಿಕೆಯ ಗೌರವಾಧ್ಯಕ್ಷ ಡಾ.ಎನ್.ಕೃಷ್ಣಪ್ಪ, ಸಹ ಖಜಾಂಚಿ ಆರ್.ಕೆ.ನಾಗರಾಜ್, ಸಂಚಾಲಕ ಎಂ. ಗೌತಮ್, ಉಪಾಧ್ಯಕ್ಷ ಪಿ.ಜಿ. ಜಯಕರ್, ನಿರ್ದೇಶಕ ಎಂ.ಎಂ.ಮಂಜುನಾಥ್, ನಿರ್ದೇಶಕ ಕೆ.ಪಿ.ಶಿವಪ್ಪ, ಮಾಜಿ ಶಾಸಕ ಟಿ.ಎಸ್. ಪ್ರಕಾಶ್, ಬಲಿಜ ವಕೀಲರ ಸಂಘದ ಅಧ್ಯಕ್ಷ ಪ್ರಕಾಶ ರಾಮಯ್ಯ, ಪ್ರಧಾನ ಕಾರ್ಯದರ್ಶಿ ಆನಂದ ಬಾಬು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಸಮಗ್ರ ಬಲಿಜ ವೇದಿಕೆ ವತಿಯಿಂದ ‘2ಎ’ ಮೀಸಲಾತಿ ಸೌಲಭ್ಯಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು

‘ಯಡಿಯೂರಪ್ಪಗೆ ಯೂಸುಫ್ ಖಾನ್ ಎನ್ನಬಹುದೇ?’

ಜನಸಾಮಾನ್ಯರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಬಗ್ಗೆ ಬಿಜೆಪಿ ಸರ್ಕಾರ ಚರ್ಚೆ ಮಾಡದೆ, ಭಾವನಾತ್ಮಕ ವಿಷಯಗಳ ಬಗ್ಗೆ ಮಾತನಾಡಿ ಲಾಭ ಪಡೆಯಲು ಹೊರಟಿದೆ

‘ಬೆಳಗಾವಿ ಗಡಿ ವಿವಾದಕ್ಕೆ ಬೊಮ್ಮಾಯಿ ಕುಮ್ಮಕ್ಕು’

ಬೆಂಗಳೂರು: ‘ಕರ್ನಾಟಕ, ಮಹಾರಾಷ್ಟ್ರ, ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದ್ದು, ಬೆಳಗಾವಿ ಗಡಿ ವಿವಾದ ಈ ತ್ರಿಬಲ್ ಎಂಜಿನ್ ಸರ್ಕಾರ ಮಾಡಿರುವ ಹೊಂದಾಣಿಕೆ ರಾಜಕೀಯ. ಇದರ ಹಿಂದೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಕುಮ್ಮಕ್ಕಿದೆ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆರೋಪಿಸಿದರು.


ಬಿ.ಕೆ. ಹರಿಪ್ರಸಾದ್

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಗಡಿ ತಕರಾರಿನ ಹಿಂದೆ, ಬೆಳಗಾವಿ ಅಧಿವೇಶನದಲ್ಲಿ ಬೇರೆ ವಿಷಯಗಳು ಚರ್ಚೆಯಾಗದಂತೆ ತಡೆಯುವ ಹುನ್ನಾರವಿದೆ. ಮಹಾರಾಷ್ಟ್ರದ ಸಚಿವರು ಕರ್ನಾಟಕಕ್ಕೆ ಬಂದು ಹೇಳಿಕೆ ನೀಡುತ್ತಲೇ ಇದ್ದಾರೆ. ಕಳೆದ ಬೆಳಗಾವಿ ಅಧಿವೇಶನ ಸಮಯದಲ್ಲಿ ಮಹಾರಾಷ್ಟ್ರದ ಗೃಹ ಸಚಿವರು ಬೆಳಗಾವಿಯಲ್ಲಿ ಉಳಿದುಕೊಂಡಿದ್ದರು. ಆದರೆ, ನಮ್ಮ ಗೃಹ ಸಚಿವರಿಗೆ ಈ ಬಗ್ಗೆ ಗೊತ್ತೇ ಇರಲಿಲ್ಲ’ ಎಂದರು.

ಯಡಿಯೂರಪ್ಪಗೆ ಯೂಸುಫ್ ಖಾನ್ ಎನ್ನಬಹುದೇ?: ‘ಹೆಸರುಗಳನ್ನ ಬದಲಾಯಿಸಿ ಅವಹೇಳನ ಮಾಡುವುದು ಬಿಜೆಪಿಯ ಸಂಪ್ರದಾಯ. ಈ ಹಿಂದೆ ಪ್ರಧಾನಿ ಮೋದಿಯವರೇ, ಸಿದ್ದರಾಮಯ್ಯನವರ ಹೆಸರು ಬದಲಾಯಿಸಿ ಹೇಳಿಕೆ ಕೊಟ್ಟಿದ್ದರು. ಈಗ ಅವರ ಚೇಲಾಗಳು ಹೆಸರು ಬದಲಾಯಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರಿಗೆ ಹೆಸರಿಡಲು ಸಿ.ಟಿ. ರವಿ ಯಾರು? ಹಾಗಿದ್ದರೆ, ಟಿಪ್ಪು ಟೋಪಿ ಹಾಕಿದ್ದ ಯಡಿಯೂರಪ್ಪ, ಈಶ್ವರಪ್ಪ ಅವರನ್ನು ಏನೆಂದು ಕರೆಯಬೇಕು? ಯೂಸುಫ್ ಖಾನ್ ಎಂದು ಯಡಿಯೂರಪ್ಪ ಅವರನ್ನು ಕರೆಯಬಹುದೇ’ ಎಂದು ಕುಟುಕಿದರು.

ಬೆಳಗಾವಿಯಲ್ಲಿ ವಿವಿಧ ಕನ್ನಡ ಸಂಘಟನೆಗಳ ಮುಖಂಡರು ಸೋಮವಾರ ಪ್ರತಿಭಟನೆ ನಡೆಸಿದರು

‘ಮಹಾ’ ಸಚಿವರ ಪ್ರವೇಶ ನಿಷೇಧ

ಒಂದನೇ ಪುಟದಿಂದ

‘ಮಹಾಜನ ವರದಿ ವ್ಯಾಪ್ತಿಯ ಕರ್ನಾಟಕದ ಪ್ರದೇಶಗಳಲ್ಲಿ ಮರಾಠಿ ಭಾಷಿಗರಿಗೆ ರಾಜ್ಯ ಸರ್ಕಾರ ಅಗತ್ಯ ಸೌಕರ್ಯ ಒದಗಿಸಿದೆ. ಮಹಾರಾಷ್ಟ್ರ ಸರ್ಕಾರ ತನ್ನ ನೆಲದಲ್ಲಿರುವ ಕನ್ನಡಿಗರಿಗೆ ಮೂಲಸೌಲಭ್ಯ ಒದಗಿಸದೆ ವಂಚಿಸುತ್ತಿದೆ. ಮಹಾರಾಷ್ಟ್ರ ಸಚಿವರು ಮೊದಲು ಹೊರನಾಡ ಕನ್ನಡಿಗರ ಸಮಸ್ಯೆ ಆಲಿಸಲಿ’ ಎಂದು ಆಗ್ರಹಿಸಿದರು.

ಕರ್ನಾಟಕ ಏಕೀಕರಣ ಸಮಿತಿ, ಕಸ್ತೂರಿ ಕರ್ನಾಟಕ ಜನಪರ ವೇದಿಕೆ, ಕರ್ನಾಟಕ ರಕ್ಷಣಾ ಸೇನೆ, ವೈಭವ ಕರ್ನಾಟಕ ಸಂಘಟನೆ, ಕರ್ನಾಟಕ ಸಂಘಟನೆಗಳ ಸಮಿತಿ, ಕರುನಾಡ ಸೇವಕರು, ಕರ್ನಾಟಕ ರಾಜ್ಯ ಕಟ್ಟಡ ಹಾಗೂ ಅಸಂಘಟಿತ ಕಾರ್ಮಿಕರ ಸಂಘ ಸೇರಿ ವಿವಿಧ ಸಂಘಟನೆಯವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಬೆಳಗಾವಿಯ ಕನ್ನಡ ಸಂಘಟನೆಗಳು ಅವರಿಗೆ ಬೆಂಬಲ ಸೂಚಿಸಿದವು.

ಬಿಗಿ ಭದ್ರತೆ: ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಈಗ ತಾರಕಕ್ಕೇರಿದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯೊಂದಿಗೆ (ಎಂಇಎಸ್) ಚರ್ಚಿಸಲು ಡಿ.6ರಂದು ಮಹಾರಾಷ್ಟ್ರದ ಸಚಿವರು ಬರುತ್ತಿರುವ ಹಿನ್ನೆಲೆಯಲ್ಲಿ ನಗರದ ಆಯಕಟ್ಟಿನ ಸ್ಥಳಗಳಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ.

ನಗರವನ್ನು ಸಂಪರ್ಕಿಸುವ ಪ್ರಮುಖ ಮಾರ್ಗಗಳಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಬ್ಯಾರಿಕೇಡ್ ಅಳವಡಿಸಿದ್ದಾರೆ. ವಾಹನ ಸವಾರರ ತಪಾಸಣೆ ನಡೆಸಲಾಗುತ್ತಿದೆ.

ಕೋಲಾರ: ನಡುಬೀದಿಯಲ್ಲಿ ಕಾಂಗ್ರೆಸ್ ಬಣಗಳ ಕಿತ್ತಾಟ

ಒಂದನೇ ಪುಟದಿಂದ

ನಗರಸಭೆ ಸದಸ್ಯ ಅಂಬರೀಷ್ ನೇತೃತ್ವದಲ್ಲಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸಿದ್ದರಾಮಯ್ಯ ಅವರಿಗೆ ಜೈಕಾರ ಹಾಕಿದರು. ಇನ್ನು ಕೆಲ ಕಾರ್ಯಕರ್ತರು, ‘ನಿಮ್ಮಿಬ್ಬರ ಬಣ ಜಗಳದಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಹಾಳಾಗುತ್ತಿದೆ’ ಎಂದು ಹರಿಹಾಯ್ದರು.

ಕೆಲ ಮುಸ್ಲಿಂ ಕಾರ್ಯಕರ್ತರು, ‘ಸಿದ್ದರಾಮಯ್ಯ ಅವರೇ ಈ ಕ್ಷೇತ್ರದಿಂದ ಸ್ಪರ್ಧಿಸಬೇಕು’ ಎಂದು ಪಟ್ಟುಹಿಡಿದರು. ಈ ವಿಚಾರ ಮಾತಿನ ಚಕಮಕಿಗೆ ತಿರುಗಿತು. ಎರಡೂ ಬಣದವರು ರಸ್ತೆಗೆ ಬಂದರು. ನಡು ಬೀದಿಯಲ್ಲೇ ಪರಸ್ಪರ ಕೈ ಮಿಲಾಯಿಸಲು ಮುಂದಾದರು.

ರಸ್ತೆಯಲ್ಲಿ ಜಗಳ ಜೋರಾಗುತ್ತಿದ್ದಂತೆ ಅತ್ತ ಸಭಾಂಗಣದಲ್ಲಿ ಮೈಕ್ ಕಿತ್ತುಕೊಂಡ ಮುನಿಯಪ್ಪ, ‘ಈ ರೀತಿ ಗಲಾಟೆ ಮಾಡುವವರು ಸಿದ್ದರಾಮಯ್ಯ ಅವರನ್ನು ಕರೆದುಕೊಂಡು ಬಂದು ಗೆಲ್ಲಿಸುತ್ತಾರಾ’ ಎಂದು ಪ್ರಶ್ನಿಸಿದರು.

‘ನಾನು ಹಳೆಯದ್ದನ್ನು ಮರೆತಿದ್ದೇನೆ. ಕ್ಷೇತ್ರದಲ್ಲಿ ಸ್ಪರ್ಧಿಸುವುದಾದರೆ ಸಿದ್ದರಾಮಯ್ಯನವರು ಮೊದಲು ಇಲ್ಲಿನ ಗೊಂದಲ ಸರಿಪಡಿಸಬೇಕು. ಅವರ ಸ್ಪರ್ಧೆಗೆ ನಮ್ಮ ಸ್ವಾಗತವಿದೆ. ಅವರು ಸ್ಪರ್ಧಿಸದಿದ್ದರೆ ಸ್ಥಳೀಯರಿಗೇ ಟಿಕೆಟ್ ಕೊಡಬೇಕು’ ಎಂದು ಸಮಾಧಾನಪಡಿಸಲು ಪ್ರಯತ್ನಿಸಿದರು.

ಈ ಸಂದರ್ಭದಲ್ಲಿ ಕೋಲಾರ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿರುವ ವಿ.ಆರ್.ಸುದರ್ಶನ್ ಕೂಡ ವೇದಿಕೆಯಲ್ಲಿದ್ದರು.

ಕೋಲಾರದಲ್ಲಿ ಸೋಮವಾರ ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ ಸಮ್ಮುಖದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಕಿತ್ತಾಟ ನಡೆಯಿತು. ಮುಖಂಡ ವಿ.ಆರ್.ಸುದರ್ಶನ್ ಇದ್ದಾರೆ

ಸಿದ್ದರಾಮಯ್ಯ ಅವರನ್ನು ಸಿ.ಎಂ ಮಾಡುತ್ತೇವೆ ಎನ್ನಬೇಡಿ. ಉಳಿದ ಆಕಾಂಕ್ಷಿಗಳಿಗೆ ನೋವಾಗಲ್ಲವೇ? ನೀವೊಬ್ಬರೇನಾ ಮುಖ್ಯಮಂತ್ರಿ ಮಾಡೋದು, ನಾವು ಸಿದ್ಧರಿಲ್ಲವೇ?

ಕೆ.ಎಚ್.ಮುನಿಯಪ್ಪ,
ಕಾಂಗ್ರೆಸ್ ನಾಯಕ, ಕೋಲಾರ

ಎಐಸಿಸಿ, ಕೆಪಿಸಿಸಿ ವರಿಷ್ಠರು ಮುನಿಯಪ್ಪ–ರಮೇಶ್ ಕುಮಾರ್ ಕರೆದು ಒಂದುಗೂಡಿಸಬೇಕು. ಸಿದ್ದರಾಮಯ್ಯ ಸ್ಪರ್ಧಿಸದಿದ್ದರೆ ಸ್ಥಳೀಯರಿಗೆ ಟಿಕೆಟ್ ಕೊಡಲಿ

ವಿ.ಆರ್.ಸುದರ್ಶನ್,
ಕಾಂಗ್ರೆಸ್ ಮುಖಂಡ, ಕೋಲಾರ

ನಿಜವಾದ ರೌಡಿಗಳಿಗೆ ‘ಕ್ಲೀನ್ ಚಿಟ್’ ಕೊಟ್ಟಿಲ್ಲ: ಸಿ.ಟಿ.ರವಿ

ಚಿಕ್ಕಮಗಳೂರು: ‘ಎಲ್ಲ ರೌಡಿ ಶೀಟರ್‌ಗಳೂ ರೌಡಿಗಳಲ್ಲ ಎಂದು ಹೇಳಿದ್ದೆ. ರಾಜಕೀಯ ಕಾರಣಕ್ಕೆ ಸಹಸ್ರಾರು ಜನರನ್ನು ರೌಡಿ ಪಟ್ಟಿಗೆ ಸೇರಿಸಿದ್ದರ ಕುರಿತು ಮಾತನಾಡಿದ್ದೆ. ನಿಜವಾದ ರೌಡಿಗಳಿಗೆ ‘ಕ್ಲೀನ್ ಚಿಟ್’ ಕೊಟ್ಟಿಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರತಿಕ್ರಿಯಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್‌ನವರು ರೌಡಿಗಳನ್ನು ಬೆಳೆಸಿದ್ದಾರೆ. ಆ ಪಕ್ಷದವರು ನಾನು ಹೇಳಿದ ಪ್ರತಿ ಅಂಶ ಹಾಗೂ ಅವರದೇ ಪಕ್ಷದ ಆರ್.ವಿ. ದೇವರಾಜ್, ಹರಿಪ್ರಸಾದ್ ಬಗ್ಗೆ ಅವಲೋಕನ ಮಾಡಿಕೊಳ್ಳಬೇಕು’ ಎಂದರು.

‘ನಾನು ಕೊತ್ವಲಾ ರಾಮಚಂದ್ರ ಶಿಷ್ಯನಲ್ಲ. ಗೂಂಡಾಗಿರಿ ಮಾಡಿಲ್ಲ. ವೈಯುಕ್ತಿಕ ಕಾರಣದ ಒಂದೂ ಪ್ರಕರಣ ನನ್ನ ವಿರುದ್ಧ ಇಲ್ಲ, ಇದ್ದವು ಸಾರ್ವಜನಿಕ ಹೋರಾಟದವು, ರೌಡಿಶೀಟರ್‌ಗೆ ಸೇರಿಸಿದ್ದರು. ಅದಕ್ಕೆ ನನ್ನನ್ನು ಉದಾಹರಣೆಯಾಗಿ ಕೊಟ್ಟಿದ್ದೆ’ ಎಂದು ಉತ್ತರಿಸಿದರು.

ಪಿಎಫ್‌ಐ ಪೋಸ್ಟರ್ ಅಂಟಿಸಿದವರ ವಿರುದ್ಧ ಕ್ರಮ: ಮುಖ್ಯಮಂತ್ರಿ

ಬೆಂಗಳೂರು: ಪಿಎಫ್‌ಐ ಸಂಘಟನೆ ಸೇರಿ ಎಂಬ ಪೋಸ್ಟರ್‌ಗಳನ್ನು ಶಿವಮೊಗ್ಗದಲ್ಲಿ ಅಂಟಿಸಿದ್ದು, ಈ ರೀತಿ ಪೋಸ್ಟರ್‌ಗಳನ್ನು ಅಂಟಿಸಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ಕೆಲವರ ವಿರುದ್ಧ ಈಗಾಗಲೇ ಪೊಲೀಸರು ಕ್ರಮ ಕೈಗೊಂಡಿದ್ದಾರೆ ಪಿಎಫ್‌ಐ ಮೇಲೆ ನಿಷೇಧ ಹೇರಿರುವುದರಿಂದ ಹತಾಶರಾಗಿ ಗೋಡೆ ಮೇಲೆ ಬರೆಯುವ ಕೆಲಸ ಮಾಡುತ್ತಿದ್ದಾರೆ. ಇದನ್ನು ತೀವ್ರವಾಗಿ ಖಂಡಿಸುತ್ತೇನೆ ’ ಎಂದರು.

ಗಂಗಾವತಿ: ಜನಾರ್ದನ ರೆಡ್ಡಿ ಸಕ್ರಿಯ ರಾಜಕೀಯಕ್ಕೆ?

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ‘ಮಾಜಿ ಸಚಿವ ಜನಾರ್ದನ ರೆಡ್ಡಿ ಅವರು ಗಂಗಾವತಿಯಲ್ಲಿ ಮನೆ ಖರೀದಿಸಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅವರು ಇಲ್ಲಿಂದಲೇ ಸ್ಪರ್ಧಿಸುವರು’ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ನಡೆಯುತ್ತಿದೆ.

ಬಹುಕೋಟಿ ಗಣಿ ಹಗರಣದ ಆರೋಪದಲ್ಲಿ ಬಂಧಿತರಾಗಿದ್ದ ರೆಡ್ಡಿ ಅವರಿಗೆ ಷರತ್ತುಗಳ ಅನ್ವಯ 2015ರಲ್ಲಿ ಜಾಮೀನು ನೀಡಿದ ಸುಪ್ರೀಂ ಕೋರ್ಟ್, ‘ಕರ್ನಾಟಕದ ಬಳ್ಳಾರಿ, ಆಂಧ್ರ ಪ್ರದೇಶದ ಕಡಪ, ಅನಂತಪುರಕ್ಕೆ ಭೇಟಿ ನೀಡಬಾರದು’ ಎಂಬ ಷರತ್ತು ವಿಧಿಸಿದೆ.

ಸಚಿವ ಶ್ರೀರಾಮುಲು ಬೆಂಬಲದಿಂದ ರಾಜಕೀಯ ಪ್ರವೇಶಿಸಿ, ಮತ್ತೆ ನೆಲೆ ಕಂಡುಕೊಳ್ಳಲು ಬಯಸಿರುವ ರೆಡ್ಡಿ ಅವರಿಗೆ ಬಿಜೆಪಿಯ ಭಿನ್ನ ನಿಲುವು ಅಡ್ಡಿಯಾಗಿದೆ. ಆದ್ದರಿಂದ ಕೆಲ ದಿನಗಳ ಹಿಂದೆ ರೆಡ್ಡಿ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದರು.

‘ಸದ್ಯಕ್ಕೆ ರಾಜಕೀಯದ ಮಾತು ಬೇಡ. ಭತ್ತದನಾಡು ಗಂಗಾವತಿಯಲ್ಲೇ ವಾಸವಿರಲು ಮನೆ ಖರೀದಿಸಿದ್ದೇನೆ. ಡಿಸೆಂಬರ್ ಅಂತ್ಯದಲ್ಲಿ ವಿಶೇಷ ಪೂಜೆನಡೆಸಿ, ಗೃಹ ಪ್ರವೇಶ ಮಾಡಲಾಗುವುದು’ ಎಂದು ಜನಾರ್ದನ ರೆಡ್ಡಿ ಸುದ್ದಿಗಾರರಿಗೆ ತಿಳಿಸಿದರು. ಗಂಗಾವತಿಯಲ್ಲಿ ನಡೆದ ಸಂಕೀರ್ತನಾ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಪ್ರಜಾವಾಣಿ
ಮಂಗಳವಾರ • ಡಿಸೆಂಬರ್ 6, 2022

ಮತ್ತೆ ವೇಗ ಪಡೆದ ಕಾಮಗಾರಿಗಳು: ಸ್ಮಾರ್ಟ್‌ಸಿಟಿ ಯೋಜನೆಯಡಿ ವಿವಿಧ ಕೆಲಸಗಳು ಈ ತಿಂಗಳ ಅಂತ್ಯಕ್ಕೆ ಪೂರ್ಣ

ಚಳಿಗಾಲದಲ್ಲಿ ನಳನಳಿಸುತಿದೆ ಕಬ್ಬನ್ ಉದ್ಯಾನ

• ಖಲೀಲಅಹ್ಮದ ಶೇಖ

ಬೆಂಗಳೂರು: ‘ಸಿಲಿಕಾನ್’ ಸಿಟಿ ವಾಯುವಿಹಾರಿಗಳ ಸ್ವರ್ಗ, ಪ್ರೇಮಿಗಳ ನೆಚ್ಚಿನ ತಾಣ ಕಬ್ಬನ್ ಉದ್ಯಾನಕ್ಕೆ (ಜಯಚಾಮರಾಜೇಂದ್ರ ಒಡೆಯರ್ ಉದ್ಯಾನ) ಸ್ಮಾರ್ಟ್ ಸ್ಪರ್ಶ ನೀಡಲಾಗುತ್ತಿದೆ. ‘ಸ್ಮಾರ್ಟ್‌ಸಿಟಿ’ ಯೋಜನೆಯಡಿ ಉದ್ಯಾನದಲ್ಲಿ ಎರಡು ಹಂತಗಳಲ್ಲಿ ಕೈಗೆತ್ತಿಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳು ಶೇ 90ರಷ್ಟು ಪೂರ್ಣಗೊಂಡಿದ್ದು, ಡಿಸೆಂಬರ್ ಅಂತ್ಯಕ್ಕೆ ‘ಸ್ಮಾರ್ಟ್ ಉದ್ಯಾನ’ವಾಗಲಿದೆ.

ಉದ್ಯಾನದ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುವ ಮೂಲ ಉದ್ದೇಶದೊಂದಿಗೆ ಮೂರು ವರ್ಷಗಳ ಹಿಂದೆ ಸ್ಮಾರ್ಟ್‌ಸಿಟಿ ಕಾಮಗಾರಿಗಳನ್ನು ಆರಂಭಿಸಲಾಗಿತ್ತು. 2022 ಮೇ ಒಳಗೆ ಕಾಮಗಾರಿ ಮುಗಿಯಬೇಕಾಗಿತ್ತು. ಲಾಕ್‌ಡೌನ್ ಮತ್ತು ನಿರಂತರ ಸುರಿದ ಮಳೆಯಿಂದ ಕಾಮಗಾರಿಗಳ ವೇಗ ತಗ್ಗಿತ್ತು. ಇದರಿಂದ ಗಡುವಿನೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ. ಬಹುತೇಕ ಎಲ್ಲಾ ಕಾಮಗಾರಿಗಳು ಮುಗಿದಿದ್ದು, ಉಳಿದ ಕಾಮಗಾರಿಗಳ ವೇಗ ಹೆಚ್ಚಿಸಲಾಗಿದೆ.

’ಮೊದಲ ಹಂತದ ಕಾಮಗಾರಿಯಲ್ಲಿ ಪಾದಚಾರಿ ಮಾರ್ಗ, ಕಾಲುವೆ, ಕಮಲದ ಕೊಳದ ಶುದ್ಧೀಕರಣ, ರಸ್ತೆಗಳ ಅಭಿವೃದ್ಧಿ ಮತ್ತು ಸೇತುವೆಗಳನ್ನು ನಿರ್ಮಿಸಲಾಗಿದ್ದು, ಅಂತಿಮ ಸ್ಪರ್ಶ ನೀಡುವ ಕೆಲಸಗಳಷ್ಟೇ ಬಾಕಿ ಉಳಿದಿವೆ. ಎರಡನೇ ಹಂತದ ಕಾಮಗಾರಿಯಲ್ಲಿ ಕರಗದ ಕುಂಟೆ, ಡ್ರೈ ಪಾಂಡ್, ಬಯೋ ಗ್ಯಾಸ್ ಪ್ಲಾಂಟ್, ನೂತನ ಬೆಂಚ್‌ಗಳನ್ನು ಅಳವಡಿಸುವುದು ಮತ್ತು ಟ್ರೀ ಮ್ಯಾಪಿಂಗ್ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು, ಡಿಸೆಂಬರ್ ಅಂತ್ಯದೊಳಗೆ ಮುಗಿಯಲಿವೆ’ ಎಂದು ಕಬ್ಬನ್ ಉದ್ಯಾನ ಸ್ಮಾರ್ಟ್‌ಸಿಟಿ ಯೋಜನೆಯ ಸಹಾಯಕ ಎಂಜಿನಿಯರ್ ಶ್ರೀಗೌರಿ ಮಾಹಿತಿ ನೀಡಿದರು.

ಉದ್ಯಾನದಲ್ಲಿ ನಿರ್ಮಿಸಿರುವ ಸೇತುವೆ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

₹24 ಕೋಟಿ ಸ್ಮಾರ್ಟ್‌ಸಿಟಿ ಯೋಜನೆಯ ವೆಚ್ಚ	8,837 ಉದ್ಯಾನದಲ್ಲಿರುವ ಮರಗಳು	350 ಬೀದಿ ದೀಪಗಳು / 18 ಜನ ಭದ್ರತಾ ಸಿಬ್ಬಂದಿ
197 ಎಕರೆ ಕಬ್ಬನ್ ಉದ್ಯಾನದ ವಿಸ್ತೀರ್ಣ	197 ಪಾರಂಪರಿಕ ಪ್ರಭೇದದ ಮರಗಳು	50 ಉದ್ಯಾನದಲ್ಲಿರುವ ಸಿಸಿಟಿವಿ ಕ್ಯಾಮೆರಾಗಳು

ಕಬ್ಬನ್ ಉದ್ಯಾನದಲ್ಲಿರುವ ಕಾರಂಜಿಯನ್ನು ಅಭಿವೃದ್ಧಿಗೊಳಿಸಿರುವುದು

ಕಮಲದ ಕೊಳ: ಉದ್ಯಾನದಲ್ಲಿರುವ ಕಮಲದ ಕೊಳವು ಇಲ್ಲಿನ ಪ್ರಮುಖ ಆಕರ್ಷಣೆಯಾಗಿದೆ. ಇದು 250ಕ್ಕೂ ಹೆಚ್ಚು ಬಗೆಯ ಪಕ್ಷಿಗಳ ಆವಾಸ ಸ್ಥಾನವೂ ಆಗಿತ್ತು. ಆದರೆ, 10–12 ವರ್ಷಗಳಿಂದ ಹೂಳು ತುಂಬಿಕೊಂಡು ಹದಗೆಟ್ಟ ಸ್ಥಿತಿಯಲ್ಲಿತ್ತು. ಕೊಳದ ನವೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಗೆ ಸ್ಮಾರ್ಟ್‌ಸಿಟಿ ಯೋಜನೆಯ ಮೊದಲ ಹಂತದಲ್ಲೇ ಆದ್ಯತೆ ನೀಡಲಾಗಿತ್ತು.

‘ಎರಡು ಸಲ ಕೊಳ ಸ್ವಚ್ಛಗೊಳಿಸುವ ಕಾರ್ಯಕ್ಕೆ ಮುಂದಾದರೂ ಮಳೆ ನೀರು ತುಂಬಿಕೊಂಡು, ಕಾಮಗಾರಿಗೆ ತೊಡಕಾಗಿತ್ತು. ಸದ್ಯ ಕೊಳದಲ್ಲಿ ಸಂಗ್ರಹವಾಗಿದ್ದ ಹೂಳು ತೆಗೆದು ಅಭಿವೃದ್ಧಿಗೊಳಿಸಲಾಗಿದೆ. ಸ್ಮಾರ್ಟ್‌ಸಿಟಿ ಯೋಜನೆಯಡಿ ಬಿದಿರು ಸಸಿಗಳ ನಡುವೆ ಮಳೆ ನೀರನ್ನು ನೇರವಾಗಿ ಹರಿಸಲು ಕೊಳಕ್ಕೆ ಸಂಪರ್ಕಿಸುವ ಸಣ್ಣ ಕಾಲುವೆಯೊಂದನ್ನೂ ನಿರ್ಮಿಸಲಾಗಿದೆ. ಇದನ್ನು ಮತ್ತಷ್ಟು ಅಂದಗೊಳಿಸಲು ಕಾಲುವೆಗೆ ಅಡ್ಡವಾಗಿ ಒಂದು ಕಿರುಸೇತುವೆ ನಿರ್ಮಾಣ ಮಾಡಿದ್ದು, ಕೊಳದ ಸುತ್ತಲೂ ಜನರ ಓಡಾಟಕ್ಕೆ ಪಾದಚಾರಿಮಾರ್ಗ ಹಾಗೂ ರಕ್ಷಣಾ ಬೇಲಿ ನಿರ್ಮಿಸಲಾಗಿದೆ’ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಎಚ್.ಟಿ.ಬಾಲಕೃಷ್ಣ ವಿವರಿಸಿದರು.

‘ಸುಮಾರು ₹1.5 ಕೋಟಿ ವೆಚ್ಚದಲ್ಲಿ ಕಮಲದ ಕೊಳದ ಅಭಿವೃದ್ಧಿಯನ್ನು ಕಾಂಕ್ರೀಟ್‌ಮುಕ್ತವಾಗಿ ಮಾಡಲಾಗಿದೆ. ಸಾಧ್ಯವಾದಷ್ಟೂ ನೈಸರ್ಗಿಕ ರೂಪದಲ್ಲೇ ಕೊಳದ ನವೀಕರಣ ಮಾಡಲಾಗಿದ್ದು, ಕಾಲುವೆಯ ಬದಿಗಳು ಹಾಗೂ ಕೊಳದ ಖಾಲಿ ಜಾಗದಲ್ಲಿ ಆಲಂಕಾರಿಕ ಕಲ್ಲುಗಳನ್ನು ಆಕರ್ಷಕವಾಗಿ ಜೋಡಿಸಲಾಗಿದೆ’ ಎಂದರು.

ಪಾದಚಾರಿ ಮಾರ್ಗ ಹಾಗೂ ಜಾಗಿಂಗ್ ಟ್ರ್ಯಾಕ್: ಮೊದಲ ಹಂತದಲ್ಲಿ ₹8 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದ 8 ಕಿ.ಮೀ. ಉದ್ದದ ಪಾದಚಾರಿ ಮಾರ್ಗಗಳ ನವೀಕರಣ ಕಾಮಗಾರಿಗಳು ಬಹುತೇಕ ಅಂತಿಮ ಹಂತಕ್ಕೆ ತಲುಪಿವೆ. ಬಾಲಭವನ ಮಾರ್ಗ ಹಾಗೂ ಪ್ರೆಸ್‌ಕ್ಲಬ್ ಮುಂಭಾಗದ ರಸ್ತೆಗಳಲ್ಲೂ ಹೊಸ ಪಾದಚಾರಿ ಮಾರ್ಗ ನಿರ್ಮಾಣ ಮಾಡಲಾಗಿದೆ.

ಟ್ರೀ ಮ್ಯಾಪಿಂಗ್, ಐಡೆಂಟಿಫಿಕೇಷನ್ ಆ್ಯಂಡ್ ಟ್ರೇಸಿಂಗ್: ಕಬ್ಬನ್ ಉದ್ಯಾನದಲ್ಲಿರುವ ಪ್ರತಿ ಮರದ ವಿವರಗಳನ್ನು ಜನರಿಗೆ ತಿಳಿಸುವ ಉದ್ದೇಶದಿಂದ ‘ಸ್ಮಾರ್ಟ್‌ಸಿಟಿ’ ಯೋಜನೆ ಅಡಿಯಲ್ಲಿ ₹23 ಲಕ್ಷ ವೆಚ್ಚದಲ್ಲಿ ಈ ಕಾಮಗಾರಿ ಕೈಗೊಳ್ಳಲಾಗಿತ್ತು. ಉದ್ಯಾನದ ಎಲ್ಲ ಮರಗಳ ಹೆಸರು, ಅವುಗಳ ಮೂಲ, ವೈಶಿಷ್ಟ್ಯ ಸಾರುವ ಫಲಕಗಳನ್ನು ಅಳವಡಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಕಬ್ಬನ್ ಉದ್ಯಾನದಲ್ಲಿ ವಿವಿಧ ಜಾತಿಯ 8,837 ಮರಗಳಿದ್ದು, 197ಕ್ಕೂ ಹೆಚ್ಚು ಪಾರಂಪರಿಕ ಪ್ರಭೇದಗಳಿವೆ. ಅವುಗಳ ಬಗ್ಗೆ ಸಾರ್ವಜನಿಕರಿಗೆ ಸರಿಯಾದ ಮಾಹಿತಿ ಇಲ್ಲ. ಕಬ್ಬನ್ ಉದ್ಯಾನದಲ್ಲಿ ಬಹಳ ವರ್ಷಗಳಷ್ಟು ಹಳೆಯದಾದ ಸಾವಿರಾರು ಮರಗಳಿವೆ. ಪ್ರತಿ ಮರವೂ ವಿಭಿನ್ನವಾದ ಗುಣಲಕ್ಷಣಗಳನ್ನು ಒಳಗೊಂಡಿದೆ. ಹಲವು ಅಪರೂಪದ ಹಾಗೂ ಪಾರಂಪರಿಕ ಮರಗಳೂ ಉದ್ಯಾನದಲ್ಲಿದ್ದು, ಅವುಗಳ ಸಂಪೂರ್ಣ ವಿವರ ಸಿದ್ಧವಾಗಿದೆ. ಇದರಿಂದ ವಿದ್ಯಾರ್ಥಿಗಳು, ಪ್ರವಾಸಿಗರಿಗೆ ಮತ್ತು ವಾಯುವಿಹಾರಿಗಳಿಗೆ ಅನುಕೂಲವಾಗಲಿದೆ.

ಮರಕ್ಕೆ ಹಾನಿಯಾಗದಂತೆ ಫಲಕ: ‘ಈ ಯೋಜನೆಯಡಿ ಅಳವಡಿಸುವ ಫಲಕಗಳು ಮರಗಳಿಗೆ ಯಾವುದೇ ರೀತಿಯ ಹಾನಿ ಉಂಟು ಮಾಡುವುದಿಲ್ಲ. ಮೊಳೆ ಹೊಡೆಯುವುದು, ರಾಸಾಯನಿಕ ಲೇಪನ ಸೇರಿ ಯಾವುದೇ ಅಪಾಯಕಾರಿ ವಿಧಾನಗಳನ್ನು ಬಳಸುವುದಿಲ್ಲ. ಫಲಕ ಅಳವಡಿಕೆಗೆ ಆಧುನಿಕ ವಿಧಾನ ಅನುಸರಿಸಲಾಗುವುದು. ಕಾಮಗಾರಿ ಕೈಗೊಂಡ ಸಂಸ್ಥೆ ಮರಗಳಿಗೆ ಜಿಪಿಎಸ್, ಕ್ಯೂಆರ್ ಕೋಡ್ ಅಳವಡಿಸುವ ಪ್ರಸ್ತಾವವನ್ನು ಸ್ಮಾರ್ಟ್‌ಸಿಟಿಯವರಿಗೆ ಸಲ್ಲಿಸಿದೆ. ಅದು ಮಾತುಕತೆಯ ಹಂತದಲ್ಲಿದ್ದು, ಇನ್ನೂ ಅಂತಿಮಗೊಂಡಿಲ್ಲ’ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಎಚ್.ಟಿ.ಬಾಲಕೃಷ್ಣ ಮಾಹಿತಿ ನೀಡಿದರು.

ಅಂಗವಿಕಲಸ್ನೇಹಿ ಉದ್ಯಾನಕ್ಕೆ ಒತ್ತು ಕೊಡಿ

ಸ್ಮಾರ್ಟ್‌ಸಿಟಿ ಯೋಜನೆಡಿಯಲ್ಲಿ ಕಬ್ಬನ್ ಉದ್ಯಾನದ ಪಾದಚಾರಿ ಮಾರ್ಗ, ರಸ್ತೆ ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಬಹಳ ಅಚ್ಚುಕಟ್ಟಾಗಿ ಮಾಡಿದ್ದಾರೆ. ಆದರೆ ಈ ಉದ್ಯಾನವನ್ನು ಅಂಗವಿಕಲ ಮತ್ತು ಮಕ್ಕಳ ಸ್ನೇಹಿಯನ್ನಾಗಿ ಮಾಡಬೇಕು. ವಿದ್ಯುತ್ ಚಾಲಿತ ವಾಹನಗಳ ಸೌಲಭ್ಯ ಕಲ್ಪಿಸಬೇಕು.

ದೀಪಾ, ಮರಿಯಪ್ಪನಪಾಳ್ಯದ ನಿವಾಸಿ

ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡಿ

ಕಬ್ಬನ್ ಉದ್ಯಾನ ಸಾಕಷ್ಟು ಅಭಿವೃದ್ಧಿಯಾಗಿದೆ. ಆದರೆ, ಬೆಳಗಿನ ವೇಳೆ ವಾಯುವಿಹಾರಕ್ಕೆ ಬರುವ ಮಹಿಳೆಯರ ಭದ್ರತೆಗಾಗಿ ಸಿಸಿಟಿವಿ ಕ್ಯಾಮೆರಾಗಳ ಸಂಖ್ಯೆ ಹೆಚ್ಚಿಸುವುದರ ಜೊತೆಗೆ ಭದ್ರತಾ ಸಿಬ್ಬಂದಿ ಸಂಖ್ಯೆ ಹೆಚ್ಚಿಸಬೇಕು. ಈಗ ಉದ್ಯಾನಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿರುವುದರಿಂದ ಶುದ್ಧ ಕುಡಿಯುವ ನೀರಿನ ಘಟಕಗಳು ಮತ್ತು ಶೌಚಾಲಯಗಳ ಸಂಖ್ಯೆಯನ್ನು ಹೆಚ್ಚಿಸಿದರೆ ಉದ್ಯಾನಕ್ಕೆ ಬರುವ ಹಿರಿಯ ನಾಗರಿಕರಿಗೆ ಮಕ್ಕಳಿಗೆ ಮಹಿಳೆಯರಿಗೆ ತುಂಬಾ ಅನುಕೂಲವಾಗಲಿದೆ.

ಪ್ರತಿಮಾ, ವಾಯುವಿಹಾರಿ

ವಾಹನ ಸಂಚಾರ ನಿಷೇಧಿಸಿ

‘ಸ್ಮಾರ್ಟ್‌ಸಿಟಿ ಯೋಜನೆ ಅಡಿಯಲ್ಲಿ ಬಾಲಭವನವನ್ನು ಮಾತ್ರ ಅಭಿವೃದ್ಧಿಪಡಿಸಲಾಗಿದೆ. ಆದರೆ, ಕಬ್ಬನ್ ಉದ್ಯಾನದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾಮಗಾರಿಗಳು ನಡೆದಿಲ್ಲ, ಕರಗದ ಕುಂಟೆ, ಪಾದಚಾರಿ ಮಾರ್ಗ ಸೇರಿ ಯಾವುದೇ ಕಾಮಗಾರಿಗಳು ಸರಿಯಾಗಿಲ್ಲ’ ಎಂದು ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಅಧ್ಯಕ್ಷ ಉಮೇಶ ಆರೋಪಿಸಿದರು.

ಉದ್ಯಾನದಲ್ಲಿ ವಾಹನ ದಟ್ಟಣೆ ಆಗುತ್ತಿರುವುದರಿಂದ ಪ್ರಾಣಿ-ಪಕ್ಷಿಗಳಿಗೆ ಅನನುಕೂಲವಾಗಿದ್ದು, ವಾಹನ ಸಂಚಾರವನ್ನು ಸಂಪೂರ್ಣ ನಿಷೇಧಿಸಬೇಕು ಎಂದು ಆಗ್ರಹಿಸಿದರು.

ಮೂರು ತಿಂಗಳಿಗೆ 6 ಟನ್ ಗೊಬ್ಬರ

‘ಕಬ್ಬನ್ ಉದ್ಯಾನದಲ್ಲಿ ಪ್ರತಿ ವಾರ 8–10 ಟನ್‌ಗಳಷ್ಟು ಉದುರಿದ ಎಲೆಗಳು ಸಂಗ್ರಹವಾಗುತ್ತವೆ. ಈ ಎಲೆಗಳಿಂದ ಗೊಬ್ಬರ ತಯಾರಿಸುವ ಘಟಕ ಉದ್ಯಾನದಲ್ಲೇ ಇದೆ. ಮೂರು ತಿಂಗಳಿಗೆ 6 ಟನ್‌ಗಳಷ್ಟು ಗೊಬ್ಬರ ಈ ಎಲೆಗಳಿಂದ ಸಿಗುತ್ತಿದೆ. ಅದನ್ನು ಉದ್ಯಾನದಲ್ಲಿರುವ ಗಿಡ–ಮರಗಳಿಗೆ ಮರುಬಳಕೆ ಮಾಡಲಾಗುತ್ತಿದೆ. ಹೆಚ್ಚುವರಿ ಎಲೆಗಳನ್ನು ಹುಳಿಮಾವು ಬಳಿ ಇರುವ ಜೈವಿಕ ಕೇಂದ್ರಕ್ಕೆ ಕಳುಹಿಸಿಕೊಡಲಾಗುತ್ತಿದೆ’ ಎಂದು ಎಚ್.ಟಿ.ಬಾಲಕೃಷ್ಣ ತಿಳಿಸಿದರು.

‘ಕಬ್ಬನ್ ಉದ್ಯಾನದ ಎಂಟು ಪ್ರವೇಶ ದ್ವಾರಗಳು, ಗ್ರಂಥಾಲಯ ಸೇರಿ 16 ನಿಗದಿತ ಸ್ಥಳಗಳಲ್ಲಿ ನಿಶ್ಶಬ್ದ ವಲಯ ಎಂಬ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಸೂಚನಾ ಫಲಕಗಳನ್ನು ಅಳವಡಿಸಿ ಒಂದು ತಿಂಗಳ ಕಾಲ ಜಾಗೃತಿ ಮೂಡಿಸಲಾಗುವುದು. ನಂತರ ವಾಹನ ಸವಾರರು ಈ ಸ್ಥಳಗಳಲ್ಲಿ ಹಾರ್ನ್ ಮಾಡಿ, ನಿಯಮ ಉಲ್ಲಂಘಿಸಿದರೆ ದಂಡ ಹಾಕಲಾಗುವುದು’ ಎಂದರು.

ಟ್ರೀ ಮ್ಯಾಪಿಂಗ್ ಮಾಡಿರುವುದು

- ಕಬ್ಬನ್ ಉದ್ಯಾನದ 8 ಕಿ.ಮೀ. ಪಾದಚಾರಿಮಾರ್ಗದ ಅಭಿವೃದ್ಧಿ
- 4 ಕಿ.ಮೀ. ಜಾಗಿಂಗ್ ಪಾಥ್
- ಹೊಸದಾಗಿ 300 ಬೆಂಚ್‌ಗಳ ಅಳವಡಿಕೆ
- ಕಮಲ ಕೊಳದ ಪುನರುಜ್ಜೀವನ
- 4 ಕಾರಂಜಿಗಳ ಅಭಿವೃದ್ಧಿ
- 8 ಎಕರೆ ಪ್ರದೇಶದಲ್ಲಿ ನೂತನ ಹುಲ್ಲುಹಾಸು
- 200 ವಿವಿಧ ಆಲಂಕಾರಿಕ ಕಸದ ಬುಟ್ಟಿಗಳು
- ಕರಗದ ಕುಂಟೆಯ ಅಭಿವೃದ್ಧಿ
- ಡ್ರೈ ಪಾಂಡ್ ಅಭಿವೃದ್ಧಿ
- ಬಯೋ ಗ್ಯಾಸ್ ಪ್ಲಾಂಟ್ ಸ್ಥಾಪನೆ

ದತ್ತಾತ್ರೇಯ ಹೊಸಬಾಳೆ ಹೇಳಿಕೆ : ರಾಷ್ಟ್ರೋತ್ಥಾನ ಆಸ್ಪತ್ರೆ ಉದ್ಘಾಟನೆ

‘ಸಂಘ ಪದ್ಧತಿಯಲ್ಲಿ ಸ್ಮಾರಕಕ್ಕೆ ಅವಕಾಶವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರೆಸ್ಸೆಸ್) ಪದ್ಧತಿಯಲ್ಲಿ ವ್ಯಕ್ತಿಗಳ ಸ್ಮಾರಕಕ್ಕೆ ಅವಕಾಶವಿಲ್ಲ. ಸಮಾಜಕ್ಕೆ ವ್ಯಕ್ತಿಯೊಬ್ಬರ ಸಾಧನೆ ಪ್ರೇರಣೆಯಾಗಲಿ ಎಂಬ ಉದ್ದೇಶದಿಂದ ಶಿಷ್ಟಾಚಾರ ಮೀರಿ, ಮೈ.ಚ. ಜಯದೇವ ಅವರ ಹೆಸರಿನಲ್ಲಿ ಆಸ್ಪತ್ರೆ ನಿರ್ಮಿಸಲಾಗಿದೆ’ ಎಂದು ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ತಿಳಿಸಿದರು.

ರಾಷ್ಟ್ರೋತ್ಥಾನ ಪರಿಷತ್ತು ಸೋಮವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ‘ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ’ ಉದ್ಘಾಟಿಸಲಾಯಿತು.

‘ರಾಷ್ಟ್ರೋತ್ಥಾನ ಪರಿಷತ್ತನ್ನು ಕಟ್ಟಿ ಬೆಳೆಸಿದ ಜಯದೇವ ಅವರು, ದೂರದರ್ಶಿ ಚಿಂತನೆ ಹಾಗೂ ರಾಷ್ಟ್ರ ನಿಷ್ಠ ಕರ್ತವ್ಯಪ್ರಜ್ಞೆ ಹೊಂದಿದ್ದರು. ರಾಷ್ಟ್ರೋತ್ಥಾನ ಪರಿಷತ್ತಿನ ಕಾರ್ಯಗಳಿಗೆ ಚೇತನರಾಗಿದ್ದ ಅವರು, ನೂರಾರು ಜನರ ಬದುಕಿಗೆ ಶಿಲ್ಪಿಯಾಗಿದ್ದರು. ಆದ್ದರಿಂದ ಅವರ ಹೆಸರಿನಲ್ಲಿ ಆಸ್ಪತ್ರೆ ನಿರ್ಮಿಸಲಾಗಿದೆ. ಜಗತ್ತಿಗೆ ‘ಸರ್ವೇ ಸಂತು ನಿರಾಮಯ’ ಎಂದು ಹರಸಿದ ದೇಶ ನಮ್ಮದು. ಆದ್ದರಿಂದ ಆರೋಗ್ಯ ಪೂರ್ಣ ಸಮಾಜ ನಿರ್ಮಾಣ ನಮ್ಮ ಕರ್ತವ್ಯ. ಇತ್ತೀಚಿನ ದಿನಗಳಲ್ಲಿ ಜೀವನಶೈಲಿ ಆಧಾರಿತ ಕಾಯಿಲೆಗಳು ಹೆಚ್ಚಳವಾಗುತ್ತಿವೆ. ಜೀವನಶೈಲಿ ಬದಲಾಯಿಸಿಕೊಳ್ಳದಿದ್ದರೆ ಆಸ್ಪತ್ರೆಗಳ ಸಂಖ್ಯೆ ಹೆಚ್ಚಳವಾಗುತ್ತವೆ’ ಎಂದು ದತ್ತಾತ್ರೇಯ ಹೊಸಬಾಳೆ ಹೇಳಿದರು.

ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಡಾ. ದೇವಿಪ್ರಸಾದ್ ಶೆಟ್ಟಿ ಮಾತುಕತೆ ನಡೆಸಿದರು. (ಎಡದಿಂದ) ಸುಧೀರ್ ಪೈ, ಸುಧಾ ಮೂರ್ತಿ, ದತ್ತಾತ್ರೇಯ ಹೊಸಬಾಳೆ ಮತ್ತು ಎಂ.ಪಿ. ಕುಮಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಆಸ್ಪತ್ರೆಗೆ ದಾನ ನೀಡಿ: ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾ ಮೂರ್ತಿ, ‘ರಾಷ್ಟ್ರೋತ್ಥಾನ ಪರಿಷತ್ತು ಜಾತಿ, ಮತ, ಪಂಥ, ಧರ್ಮದ ಭೇದ–ಭಾವ ಇಲ್ಲದೆಯೇ ಕಾರ್ಯನಿರ್ವಹಿಸಿ, ಸಾಮಾಜಿಕ ಸೇವೆ ಮಾಡುತ್ತಿದೆ. ಸಾಮಾನ್ಯವಾಗಿ ಮಹಿಳೆಯರು ಹಬ್ಬಗಳಲ್ಲಿ ಸೀರೆಗಳನ್ನು ಖರೀದಿಸುತ್ತಾರೆ. ಪ್ರತಿವರ್ಷ ಕನಿಷ್ಠ ಒಂದು ಸೀರೆಯ ಹಣವನ್ನು ಆಸ್ಪತ್ರೆಗೆ ದಾನವಾಗಿ ನೀಡಿದರೆ ರೋಗಿಗೆ ನೆರವಾಗಲಿದೆ. ಈ ಆಸ್ಪತ್ರೆಯ ಸಂಚಾರ ಕ್ಲಿನಿಕ್‌ಗೆ ವಾಹನವೊಂದನ್ನು ದಾನ ನೀಡುತ್ತೇನೆ’ ಎಂದು ತಿಳಿಸಿದರು.

ನಾರಾಯಣ ಹೆಲ್ತ್‌ನ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ, ‘ನಮ್ಮ ದೇಶವು ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರನ್ನು ಸೃಷ್ಟಿಸುತ್ತಿದೆ. ಇಲ್ಲಿನ ವೈದ್ಯರಿಗೆ ಜಗತ್ತಿನಾದ್ಯಂತ ಬೇಡಿಕೆಯಿದೆ. ಪ್ರತಿ ವರ್ಷ ಎರಡು ಲಕ್ಷ ಶುಶ್ರೂಷಕರನ್ನು ನಾವು ತರಬೇತಿಗೊಳಿಸುತ್ತಿದ್ದೇವೆ. ಬಡ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ಒದಗಿಸಲು ‘ಆಯುಷ್ಮಾನ್ ಭಾರತ’ ಯೋಜನೆ ಸಹಕಾರಿ. ಇಲ್ಲಿನ ಸೌಲಭ್ಯ, ಯೋಜನೆಗಳ ಬಗ್ಗೆ ಬಡ ಜನರಿಗೆ ಸಮರ್ಪಕ ಮಾಹಿತಿಯಿಲ್ಲ. ಇದರಿಂದಾಗಿ ಕೆಲವರು ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ’ ಎಂದು ಹೇಳಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

‘ಗುಣಮಟ್ಟದ ವೈದ್ಯಕೀಯ ಸೇವೆ’

‘ಆಸ್ಪತ್ರೆಯಲ್ಲಿ 19 ಸಾಮಾನ್ಯ ವಾರ್ಡ್‌ಗಳು, 72 ಸೆಮಿ ಪ್ರೈವೇಟ್ ವಾರ್ಡ್‌ಗಳು, 17 ಪ್ರೈವೇಟ್ ವಾರ್ಡ್‌ಗಳು ಹಾಗೂ 11 ತುರ್ತುಚಿಕಿತ್ಸಾ ವಾರ್ಡ್‌ಗಳು ಇವೆ. ಒಟ್ಟು 160 ಹಾಸಿಗೆಗಳಿದ್ದು, ಸಮಗ್ರ ಆಧುನಿಕ ವೈದ್ಯಕೀಯ ಮೂಲ–ಸೌಕರ್ಯಗಳನ್ನು ಹೊಂದಿದೆ. ತಜ್ಞ ವೈದ್ಯರು ಹಾಗೂ ಸೇವಾ ಮನೋಭಾವದ ವೈದ್ಯಕೀಯ ಸಿಬ್ಬಂದಿಯನ್ನು ಹೊಂದಿದೆ. ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸುವುದು ಆಸ್ಪತ್ರೆಯ ಗುರಿಯಾಗಿದೆ’ ಎಂದು ಆಸ್ಪತ್ರೆಯ ಆಡಳಿತ ಮಂಡಳಿ ಅಧ್ಯಕ್ಷ ಸುಧೀರ್ ಪೈ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್, ‘ವಿಜ್ಞಾನ ಕ್ಷೇತ್ರದ ಆವಿಷ್ಕಾರಗಳಿಂದ ಗುಣಮಟ್ಟದ ವೈದ್ಯಕೀಯ ಸೇವೆ ಸಾಧ್ಯವಾಗಿದೆ. ಆದರೆ, ತಂತ್ರಜ್ಞಾನದ ಖರ್ಚು ಭರಿಸಲು ಸಾಮಾನ್ಯ ಜನರಿಗೆ ಕಷ್ಟವಾಗುತ್ತಿದೆ. ಹೀಗಾಗಿ ಗುಣಮಟ್ಟದ ವೈದ್ಯಕೀಯ ಸೇವೆಯನ್ನು ಕಡಿಮೆ ದುಡ್ಡಿನಲ್ಲಿ ನೀಡಲು ನಿರ್ಧರಿಸಿದ್ದೇವೆ’ ಎಂದರು.

ಬ್ರಿಟನ್ ಪ್ರಯಾಣಿಕರಿಗೆ ಮತ್ತೆ ‘ಇ–ವೀಸಾ’

ಲಂಡನ್ (ಪಿಟಿಐ): ಬ್ರಿಟನ್‌ನಿಂದ ಭಾರತಕ್ಕೆ ಬರುವ ಪ್ರಯಾಣಿಕರಿಗಾಗಿ ‘ಇ- ವೀಸಾ’ ವ್ಯವಸ್ಥೆಯನ್ನು ಮತ್ತೆ ಆರಂಭಿಸುವುದಾಗಿ ಲಂಡನ್‌ನಲ್ಲಿರುವ ಭಾರತೀಯ ಹೈ ಕಮಿಷನ್ ಸೋಮವಾರ ತಿಳಿಸಿದೆ.

ಶೀಘ್ರ ಈ ಸೇವೆ ಪುನರಾರಂಭವಾಗಲಿದೆ ಎಂದು ಬ್ರಿಟನ್‌ನಲ್ಲಿರುವ ಭಾರತೀಯ ಹೈಕಮಿಷನರ್ ವಿಕ್ರಮ್ ದೊರೈಸ್ವಾಮಿ ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿದ ವಿಡಿಯೊದಲ್ಲಿ ತಿಳಿಸಿದ್ದಾರೆ.

ಈ ವಾರದಿಂದಲೇ ‘ಇ–ವೀಸಾ’ಗಳಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಬಹುದು. ಸಿಸ್ಟಮ್ ಅನ್ನು ಮೇಲ್ದರ್ಜೆಗೇರಿಸುವ ಪ್ರಕ್ರಿಯೆ ನಡೆಯುತ್ತಿದ್ದು, ‘ಇ–ವೀಸಾ’ಗಳಿಗಾಗಿ ಅರ್ಜಿಗಳನ್ನು ಸ್ವೀಕರಿಸಲು ಭಾರತೀಯ ವೀಸಾ ವೆಬ್‌ಸೈಟ್ ಶೀಘ್ರವೇ ಸಿದ್ಧವಾಗಲಿದೆ ಎಂದು ಹೈಕಮಿಷನ್ ಅಧಿಕಾರಿಗಳು ತಿಳಿಸಿದ್ದಾರೆ.

‘ಶಾಲಾ ಹಂತದಲ್ಲೇ ಕ್ರೀಡೆಯ ಒಲವು ಮೂಡಲಿ’

ಕೆ.ಆರ್.ಪುರ: ‘ಮಕ್ಕಳು ಶಾಲಾ ದಿನಗಳಿಂದಲೇ ಕ್ರೀಡೆಯ ಬಗ್ಗೆ ಒಲವು ಮೂಡಿಸಿಕೊಳ್ಳಬೇಕಿದೆ’ ಎಂದು ಬೆಂಗಳೂರು ನಗರ ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ ಉಪಾಧ್ಯಕ್ಷ ಜಿ.ಆರ್. ಬಾಬುಕುಮಾರ್ ಹೇಳಿದರು.

ಕೆ.ಆರ್.ಪುರದ ಐಟಿಐನ ಡಾ.ಬಿ. ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಕ್ಯಾಪಿಟಲ್ ಪಬ್ಲಿಕ್ ಶಾಲೆಯ ಕ್ಯಾಸ್ಪರ್-2022 ರ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದರು.

ಕ್ರೀಡೆ ನಮ್ಮ ಜೀವನದ ಭಾಗವಾಗಿದ್ದು ಇದು ದೈಹಿಕವಾಗಿ ಮತ್ತು ಮಾನಸಿಕವಾಗಿ ಅಭಿವೃದ್ಧಿಯ ಮೂಲವಾಗಿದೆ. ಯಶಸ್ವಿ ವ್ಯಕ್ತಿಯಾಗಲು ಶಾಲಾ ದಿನಗಳಿಂದಲೇ ಕ್ರೀಡೆ ಬಗ್ಗೆ ಒಲವು ತೋರಬೇಕು. ನಮ್ಮ ದೇಹವನ್ನು ಶಕ್ತಿಯುತಗೊಳಿಸಲು ಕ್ರೀಡೆ ಸಹಕಾರಿಯಾಗಿದೆ ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆಯ ಉಪಾಧ್ಯಕ್ಷ ಜಿ.ಆರ್.ಬಾಬು ಕುಮಾರ್ ಕ್ರೀಡೆಯಲ್ಲಿ ಸಾಧನೆ ಮಾಡಿದ ಮಕ್ಕಳಿಗೆ ನೆನಪಿನ ಕಾಣಿಕೆ ವಿತರಿಸಿದರು. ಶಾಲಾ ಅಧ್ಯಕ್ಷ ಆರ್.ಕೆ.ರಮೇಶ್, ನಿರ್ದೇಶಕಿ ಸುಷ್ಮಾ ರಮೇಶ್ ಇದ್ದರು.

ಶಾಲೆಯ ಅಧ್ಯಕ್ಷ ಆರ್.ಕೆ.ರಮೇಶ್, ಶಾಲಾ ಹಂತದಲ್ಲಿಯೇ ಕ್ರೀಡೆಯ ಬಗ್ಗೆ ಹೆಚ್ಚು ಆಸಕ್ತಿ ಮೂಡಿಸುವ ಉದ್ದೇಶದಿಂದ ವಾರ್ಷಿಕ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ ಎಂದರು. ವಿದ್ಯಾರ್ಥಿಗಳಿಗಾಗಿ ಶಾಟ್‌ಪಟ್, ವಾಲಿಬಾಲ್, ಥ್ರೋ ಬಾಲ್, ಕ್ರಿಕೆಟ್ ಹಾಗೂ ಇನ್ನಿತರ ಆಟಗಳನ್ನು ಏರ್ಪಡಿಸಲಾಗಿತ್ತು.

ಚಿತ್ರಾವಳಿ

ಬೆಂಗಳೂರಿನ ಶ್ರೀ ಕೃಷ್ಣದೇವರಾಯ ಕಲಾ ಮಂದಿರದಲ್ಲಿ ಶನಿವಾರ ನಡೆದ ನೃತ್ಯಾರ್ಚನೆ ಕಾರ್ಯಕ್ರಮದಲ್ಲಿ ಜತಿನ್ ಅಕಾಡೆಮಿ ಆಫ್ ಡಾನ್ಸ್‌ನ ಗೌರಿ ಸ್ತುತಿ ಪ್ರಸಾದ್, ಆದ್ಯಾ ಬಿ.ವಿ. ಪ್ರಯುಷಿ ಮಧು, ಹರಿಣಿ ಮೋಹನ್ ಕುಮಾರ್ ಮತ್ತು ಸಮನ್ವಿತಾ ಆರ್ ನಂದನ್ ಭರತನಾಟ್ಯ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಹನುಮ ಜಯಂತಿ ಅಂಗವಾಗಿ ಹನುಮಂತನಗರದ ಗುಡ್ಡದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ವಿಶೇಷ ಪೂಜೆ ನಡೆಯಿತು –ಪ್ರಜಾವಾಣಿ ಚಿತ್ರ

ನಾಗಸಂದ್ರದ ವಿನಾಯಕನಗರ ಹಾಗೂ ವಿಕಾಸನಗರ ಬಡಾವಣೆಯಲ್ಲಿ ಕನಕ ದಾಸರ 535ನೇ ಜಯಂತಿಯನ್ನು ಭಾನುವಾರ ಸರಳವಾಗಿ ಆಚರಿಸಲಾಯಿತು

ಕನ್ನಡದ ಹಾಸ್ಯ ನಟ ಮನ್‌ದೀಪ್ ರಾಯ್‌ಗೆ ಹೃದಯಾಘಾತ

ಬೆಂಗಳೂರು: ಕನ್ನಡ ಚಿತ್ರರಂಗದ ಹಾಸ್ಯ ನಟ ಮನ್‌ದೀಪ್ ರಾಯ್ ಅವರಿಗೆ ಸೋಮವಾರ ಹೃದಯಾಘಾತವಾಗಿದೆ. ಅವರನ್ನು ನಗರದ ಶೇಷಾದ್ರಿಪುರದಲ್ಲಿರುವ ಅಪೊಲೊ ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಎರಡು ದಿನಗಳ ಹಿಂದೆ ಲಘು ಹೃದಯಾಘಾತವಾಗಿತ್ತು. ಸದ್ಯ ಚಿಕಿತ್ಸೆ ಮುಂದುವರಿದಿದ್ದು, ಆರೋಗ್ಯ ಸ್ಥಿರವಾಗಿದೆ’ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಮನ್‌ದೀಪ್, 500ಕ್ಕೂ ಅಧಿಕ ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ನಾಲ್ಕು ದಶಕಗಳ ಸಿನಿ ಪಯಣದಲ್ಲಿ ಡಾ.ರಾಜ್‌ಕುಮಾರ್ ಸೇರಿದಂತೆ ಕನ್ನಡ ಚಿತ್ರರಂಗದ ದಿಗ್ಗಜರು ಹಾಗೂ ಹಲವು ಯುವ ಕಲಾವಿದರೊಂದಿಗೂ ತೆರೆ ಹಂಚಿಕೊಂಡಿದ್ದಾರೆ.

ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದಿಂದ ಪ್ರತಿಭಟನೆ

‘ಪ್ಯಾಕೇಜ್ ಬೇಡ: ತುಂಡು ಗುತ್ತಿಗೆ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ಯಾಕೇಜ್ ಗುತ್ತಿಗೆ’ಯ ಬದಲಿಗೆ ತುಂಡು ಗುತ್ತಿಗೆ ನೀಡುವುದೂ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ನೇತೃತ್ವದಲ್ಲಿ ನೂರಾರು ಗುತ್ತಿಗೆದಾರರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ರಾಜ್ಯದಲ್ಲಿ 30 ಸಾವಿರಕ್ಕೂ ಅಧಿಕ ಗುತ್ತಿಗೆದಾರರಿದ್ದು, 10 ಲಕ್ಷ ಮಂದಿ ಇವರನ್ನೇ ಆಶ್ರಯಿಸಿದ್ದಾರೆ. ತುಂಡು ಗುತ್ತಿಗೆ ನೀಡದಿರುವ ಕಾರಣಕ್ಕೆ ತೊಂದರೆ ಉಂಟಾಗುತ್ತಿದೆ. ₹ 1 ಲಕ್ಷದಿಂದ ₹ 5 ಲಕ್ಷದ ತನಕ ತುಂಡು ಗುತ್ತಿಗೆ ನೀಡಬೇಕು. ಪ್ಯಾಕೇಜ್ ಮಾಡುವುದರಿಂದ ಸಣ್ಣ ಗುತ್ತಿಗೆದಾರರಿಗೆ ಸಮಸ್ಯೆ ಆಗುತ್ತಿದೆ ಎಂದು ಅಳಲು ತೋಡಿಕೊಂಡ ಪ್ರತಿಭಟನಕಾರರು ವಿದ್ಯುತ್ ಮೀಟರ್, ಉಪಕರಣ ಹಾಗೂ ಕೇಬಲ್ ಪ್ರದರ್ಶಿಸಿದರು.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸೋಮವಾರ ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರು ಡಿಜಿಟಲ್ ಮೀಟರ್ ಮತ್ತು ತಂತಿ ಹಿಡಿದು ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ರೈತರ ಕೃಷಿ ಪಂಪ್‌ಸೆಟ್‌ಗಳಿಗೆ (ತತ್ಕಾಲ್ ಯೋಜನೆ) ವಿದ್ಯುತ್ ಯೋಜನೆಗೆ ಒಂದು ವರ್ಷದಿಂದ ಅನುದಾನ ಬಿಡುಗಡೆ ಆಗಿಲ್ಲ. ಇದರಿಂದ ಲಕ್ಷಾಂತರ ರೈತರಿಗೆ ತೊಂದರೆಯಾಗಿದ್ದು, ಕೂಡಲೇ ಅನುದಾನ ನೀಡಬೇಕು ಎಂದು ಗೌರವಾಧ್ಯಕ್ಷ ಸಿ.ರಮೇಶ್ ಹೇಳಿದರು.

ಸಂಘಕ್ಕೆ 100 ವರ್ಷಗಳ ಇತಿಹಾಸವಿದೆ. ವಿದ್ಯುತ್ ಗುತ್ತಿಗೆದಾರರ ಸಂಕಷ್ಟ ಹಾಗೂ ಸಮಸ್ಯೆಗಳಿಗೆ ಸ್ಪಂದಿಸುತ್ತಿದೆ. ಈಗ ಗುತ್ತಿಗೆದಾರರಿಗೆ ಸರ್ಕಾರ ತೊಂದರೆ ಆಗುತ್ತಿದೆ ಎಂದು ಹೇಳಿದರು.

ಸಣ್ಣ ಸಣ್ಣ ಕಾಮಗಾರಿ ಕ್ರೋಡೀಕರಿಸಿ ಬೃಹತ್ ಟೆಂಡರ್ ಕರೆದಿರುವುದನ್ನು ರದ್ದುಪಡಿಸಬೇಕು. ₹ 5 ಲಕ್ಷದ ವರೆಗೆ ಇರುವ ಗುತ್ತಿಗೆಯನ್ನು ಸ್ಥಳೀಯ ಗುತ್ತಿಗೆದಾರರಿಗೆ ಕೊಡಬೇಕು. ‘ಬೆಳಕು’ ಯೋಜನೆ ಕಾಮಗಾರಿ ನಿರ್ವಹಿಸಿರುವ ಬಿಲ್‌ಗಳಿಗೆ ಹಣ ಪಾವತಿಸಬೇಕು. ಅನಧಿಕೃತ ಬಡಾವಣೆಗಳಿಗೆ ಐಎಫ್‌ಎಸ್‌ಸಿ (ಅಭಿವೃದ್ಧಿ ಶುಲ್ಕ) ಹೆಚ್ಚುವರಿಯಾಗಿ ಎಸ್ಕಾಂಗಳು ಸಂಗ್ರಹಿಸುತ್ತಿವೆ. ಹಿಂದಿನ ಆದೇಶದಂತೆ ಶುಲ್ಕ ಸಂಗ್ರಹಿಸಬೇಕು ಎಂದು ಕೋರಿದರು.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಾಂತೇಶ ಬೀಳಗಿ ಅವರಿಗೆ ಮನವಿ ಸಲ್ಲಿಸಲಾಯಿತು.

ಪದಾಧಿಕಾರಿಗಳಾದ ಎಂ.ಎನ್. ರಮೇಶ್, ಊರ್ಬನ್ ಪಿಂಟೊ, ಚಂದ್ರಬಾಬು, ಅನ್ವರ್ ಮಿಯಾ, ಶಿವಾನಂದ್ ಬಾಲಪ್ಪನವರ್, ಚಂದ್ರಬಾಬು ಪಾಲ್ಗೊಂಡಿದ್ದರು.

ಪಾರ್ಶ್ವವಾಯುವಿನಿಂದ ಬಳಲುತ್ತಿದ್ದ ಶಿವಮ್ಮ: ಪತಿ ಶಂಕರಪ್ಪ ಬಂಧನ

ಮಲಗಿದ್ದಲ್ಲೇ ಮಲ, ಮೂತ್ರ: ಪತ್ನಿ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಎರಡು ವರ್ಷದಿಂದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಶಿವಮ್ಮ (50) ಅವರನ್ನು ನೀರಿಗೆ ಎಸೆದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಪತಿ ಶಂಕರಪ್ಪ (60) ಅವರನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿಯ ಶಿವಮ್ಮ ಹಾಗೂ ಶಂಕರಪ್ಪ, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ತಲಘಟ್ಟಪುರದ ಶೆಡ್‌ನಲ್ಲಿ ವಾಸವಿದ್ದರು. ಇವರಿಗೆ ಮಗ ಹಾಗೂ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಇಬ್ಬರು ಮಕ್ಕಳು ಮಾತ್ರ ಜೊತೆಯಲ್ಲಿದ್ದರು. ಇನ್ನೊಬ್ಬ ಮಗಳು ವಿಜಯಪುರದಲ್ಲಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಶಂಕರಪ್ಪ, ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು. ಶಿವಮ್ಮ ಹಾಗೂ ಮಗಳು ಕೂಲಿ ಕೆಲಸ ಮಾಡುತ್ತಿದ್ದರು. ಮಗ, ಮನೆಯಲ್ಲಿರುತ್ತಿದ್ದ' ಎಂದು ತಿಳಿಸಿದರು.

ದೇಹದ ಸ್ವಾಧೀನ ಕಳೆದುಕೊಂಡ ಪಾರ್ಶ್ವವಾಯು: 'ಎರಡು ವರ್ಷದ ಹಿಂದೆಯಷ್ಟೇ ಶಿವಮ್ಮ ಅವರು ಪಾರ್ಶ್ವವಾಯುವಿಗೆ ತುತ್ತಾಗಿದ್ದರು. ಇದರಿಂದಾಗಿ ಕೈ-ಕಾಲು ಸೇರಿದಂತೆ ದೇಹದ ಶೇ 80ರಷ್ಟು ಸ್ವಾಧೀನ ಕಳೆದುಕೊಂಡಿದ್ದರು. ತವರಲ್ಲೂ ಸಾಧ್ಯವಾಗದೇ ಮಲಗಿದ್ದಲ್ಲೇ ಮಲಗುತ್ತಿದ್ದರು. ಅದೇ ಸ್ಥಳದಲ್ಲೇ ಊಟ, ಮಲ, ಮೂತ್ರ ವಿಸರ್ಜನೆ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಪತಿ ಶಂಕರಪ್ಪ ಹಾಗೂ ಮಕ್ಕಳು, ಶಿವಮ್ಮ ಅವರ ಆರೈಕೆ ಮಾಡುತ್ತಿದ್ದರು. ಪತ್ನಿ ಯಾತನೆ ಕಂಡು ಶಂಕರಪ್ಪ ಮರುಗುತ್ತಿದ್ದ. ಪತ್ನಿ ಬದುಕಿದ್ದರೆ ಮತ್ತಷ್ಟು ನರಳುತ್ತಾರೆಂದು ತಿಳಿದು ಕೊಲೆ ಮಾಡಲು ತೀರ್ಮಾನಿಸಿದ್ದ. ಈ ಸಂಬಂಧ ಆರೋಪಿಯೇ ಹೇಳಿಕೆ ನೀಡಿದ್ದಾನೆ' ಎಂದು ತಿಳಿಸಿದರು.

ನಿರ್ಮಾಣ ಹಂತದ ಕಟ್ಟಡದ ಗುಂಡಿಗೆ ಎಸೆದಿದ್ದ: 'ಭಾನುವಾರ (ಡಿ.4) ಬೆಳಿಗ್ಗೆ ಮಗಳು ಕೆಲಸಕ್ಕೆ ಹೋಗಿದ್ದರು. ಮಧ್ಯಾಹ್ನ ಮಗ ಸಹ ಅಂಗಡಿಗೆ ಹೋಗಿದ್ದರು. ಅದೇ ಸಂದರ್ಭದಲ್ಲಿ ಆರೋಪಿ ಶಂಕರಪ್ಪ, ಪತ್ನಿ ಶಿವಮ್ಮ ಅವರನ್ನು ಎತ್ತಿಕೊಂಡು ಹೊರಕ್ಕೆ 80 ಅಡಿ ರಸ್ತೆಯಲ್ಲಿರುವ ನಿರ್ಮಾಣ ಹಂತದ ಕಟ್ಟಡಕ್ಕೆ ಹೋಗಿದ್ದರು. ಕಟ್ಟಡದ ಕೆಳಭಾಗದ ಗುಂಡಿಯಲ್ಲಿ ಸಂಗ್ರಹವಾಗಿದ್ದ ನಾಲ್ಕು ಅಡಿಯಷ್ಟು ನೀರಿನಲ್ಲಿ ಪತ್ನಿಯನ್ನು ಎಸೆದಿದ್ದರು' ಎಂದು ಪೊಲೀಸರು ಹೇಳಿದರು.

'ನೀರಿನಲ್ಲಿ ಮುಳುಗಿ ಪತ್ನಿ ಮೃತಪಟ್ಟಿದ್ದರು. ವಿಷಯ ಗೊತ್ತಾಗುತ್ತಿದ್ದಂತೆ ಮಗ, ಸಮೀಪದಲ್ಲಿದ್ದ ಗ್ಯಾರೇಜ್‌ಗೆ ಹೋಗಿ ಜನರನ್ನು ಕರೆತಂದು ಮೃತದೇಹವನ್ನು ಹೊರಗೆ ತೆಗೆದಿದ್ದ. ನಂತರ, ಠಾಣೆಗೆ ಮಾಹಿತಿ ನೀಡಿದ್ದ. ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಮಗನ ಹೇಳಿಕೆ ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ತಿಳಿಸಿದರು.

'ನರಳಾಟ ನೋಡಲಾಗದೇ ಕೊಲೆ'

'ಪತ್ನಿ ಬದುಕಿದ್ದೂ ಸತ್ತಂತೆ ಇದ್ದಳು. ಆಕೆಯ ನರಳಾಟ ನೋಡಲಾಗುತ್ತಿರಲಿಲ್ಲ. ನಾನು ಹಾಗೂ ಮಕ್ಕಳು ನಿತ್ಯವೂ ಆಕೆಯನ್ನು ನೆನೆದು ಕಣ್ಣೀರು ಹಾಕುತ್ತಿದ್ದೆವು. ಪತ್ನಿ ಬದುಕಿದ್ದರೆ ಮತ್ತಷ್ಟು ಕಷ್ಟಪಡಬೇಕಾಗುತ್ತದೆ ಎಂದು ತಿಳಿದು ಆಕೆಯನ್ನು ಕೊಲೆ ಮಾಡಿದೆ' ಎಂದು ಆರೋಪಿ ಶಂಕರಪ್ಪ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ.

ಪೊಲೀಸರು, 'ಶಿವಮ್ಮ ತೀವ್ರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು. ಮರಣೋತ್ತರ ಪರೀಕ್ಷೆ ವೇಳೆ ಮೃತದೇಹದ ತೂಕ ಕೇವಲ 20 ಕೆ.ಜಿ. ಇತ್ತು. ಪರೀಕ್ಷೆ ನಂತರ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ' ಎಂದರು.

ತಂಡ ಕಟ್ಟಿಕೊಂಡು ಕಳ್ಳತನ: ಮೂವರ ಬಂಧನ

ಬೆಂಗಳೂರು: ದ್ವಿಚಕ್ರ ವಾಹನ, ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ಕೆಂಪೇಗೌಡ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಾಮೋಹಳ್ಳಿ ವಿನಾಯಕನಗರದ ನಾಗರಾಜು ಅಲಿಯಾಸ್ ಚೇತು (19), ಮೆಜೆಸ್ಟಿಕ್‌ನ ರವಿ ಅಲಿಯಾಸ್ ಮಾದು (29) ಹಾಗೂ ಕೆ.ಆರ್. ಮಾರ್ಕೆಟ್‌ನ ಮಹಮ್ಮದ್ ಸಾದಿಕ್ (26) ಬಂಧಿತರು. ಇವರಿಂದ ₹ 5 ಲಕ್ಷ ದ್ವಿಚಕ್ರ ವಾಹನ, 2 ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನವೊಂದನ್ನು ಆರೋಪಿಗಳು ಕಳ್ಳತನ ಮಾಡಿದ್ದರು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು. ನಗರದಲ್ಲಿ ಸುತ್ತಾಡಿ ಕೃತ್ಯ ಎಸಗುತ್ತಿದ್ದರು' ಎಂದು ತಿಳಿಸಿದರು.

ಪುಟ್ಟೇನಹಳ್ಳಿ ಕೆರೆ: ಮೀನು ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆರೆಗಳಲ್ಲಿ ಕಲ್ಮಶದಿಂದ ಮೀನುಗಳು ಸಾಯುತ್ತಿರುವುದು ಸಾಮಾನ್ಯವಾಗುತ್ತಿರುವ ಸಂದರ್ಭದಲ್ಲಿ, ಪಕ್ಷಿಗಳಿಗಾಗಿಯೇ ಮೀಸಲಾಗಿರುವ ಮೀನುಗಳನ್ನು ಕಳವು ಮಾಡಲಾಗುತ್ತಿದೆ.

ಯಲಹಂಕದಲ್ಲಿರುವ ಪುಟ್ಟೇನಹಳ್ಳಿ ಕೆರೆಯಲ್ಲಿ ರಾತ್ರೋರಾತ್ರಿ ಮೀನುಗಳನ್ನು ಕಳವು ಮಾಡುವುದನ್ನು ಸ್ಥಳೀಯರು ಸಾಕ್ಷಿ ಸಮೇತ ಹಿಡಿದಿದ್ದಾರೆ. ಆದರೆ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಲ್ಲಿ ಕೆರೆಯ ಉಸ್ತುವಾರಿ ಹೊಂದಿರುವ ಅರಣ್ಯ ಇಲಾಖೆ ವಿಫಲವಾಗಿದೆ.

ಪುಟ್ಟೇನಹಳ್ಳಿ ಕೆರೆ 37 ಎಕರೆ 14 ಗುಂಟೆ ವಿಸ್ತೀರ್ಣದಲ್ಲಿದ್ದು, ಪ್ರಮುಖವಾದ ಡಾರ್ಟರ್, ಪೈಂಟೆಡ್ ಸ್ಟಾರ್ಕ್, ಬ್ಲಾಕ್ ಕ್ರೌನ್ಡ್ ನೈಟ್ ಹೆರಾನ್ ಸೇರಿದಂತೆ 127 ಜಾತಿಯ ಪಕ್ಷಿಗಳಿವೆ. ಹಿಮಾಲಯ ಹಾಗೂ ಸೈಬೀರಿಯಾದಿಂದ ಪಕ್ಷಿಗಳು ವಲಸೆ ಬರುತ್ತವೆ. ಅಲ್ಲದೆ, ಇಲ್ಲಿ ಹಲವು ವಿಶಿಷ್ಟ ಜಾತಿ ಗಿಡ–ಮರಗಳಿವೆ. ಹೀಗಾಗಿ 2015ರಲ್ಲೇ ಪುಟ್ಟೇನಹಳ್ಳಿ ಕೆರೆಯನ್ನು 'ಪಕ್ಷಿ ಸಂರಕ್ಷಣೆ ಮೀಸಲು' ಎಂದು ಸರ್ಕಾರ ಆದೇಶಿಸಿದೆ. ಅರಣ್ಯ ಇಲಾಖೆ ಇದರ ಮೇಲ್ವಿಚಾರಣೆ ಹೊಂದಿದೆ.

'ಕೆಲವು ತಿಂಗಳಿಂದ ಹಕ್ಕಿಗಳ ವಾಸ ಹಾಗೂ ಆಗಮನ ಕೆರೆಯಲ್ಲಿ ಕಡಿಮೆಯಾಗುತ್ತಿತ್ತು. ಇದರ ಬಗ್ಗೆ ನಾವೆಲ್ಲ ಸಾಕಷ್ಟು ಆತಂಕಗೊಂಡಿದ್ದೆವು. ಕಲ್ಮಶ ಹೆಚ್ಚಾಯಿತೇ ಎಂಬ ಬಗ್ಗೆ ಯೋಚಿಸುತ್ತಿದ್ದೆವು. ಆದರೆ ಕಾರಣ ಬೇರೆಯೇ ಆಗಿತ್ತು. ಪಕ್ಷಿಗಳಿಗಾಗಿಯೇ ಮೀಸಲಾಗಿರುವ ಮೀನುಗಳನ್ನು ಇಲ್ಲಿ ರಾತ್ರಿ ಹಿಡಿಯಲಾಗುತ್ತಿತ್ತು. ರಾತ್ರಿ 11ರ ನಂತರ ಬಲೆ ಹಾಕಿ, 3 ಗಂಟೆಯ ವೇಳೆಗೆ ಕೊಂಡೊಯ್ಯಲಾಗುತ್ತಿತ್ತು. ನಾವೆಲ್ಲ ಸ್ಥಳೀಯರು ಸೇರಿಕೊಂಡು ಇದನ್ನು ವಿಡಿಯೊ, ಫೋಟೊಗಳ ಸಾಕ್ಷಿ ಸಹಿತ ವಾಹನವನ್ನು ಹಿಡಿದೆವು' ಎಂದು ಸ್ಥಳೀಯ ಪಕ್ಷಿಪ್ರೇಮಿ ರಮೇಶ್ ಹೇಳಿದರು.

'ಪಕ್ಷಿ ಸಂರಕ್ಷಿತ ಮೀಸಲು ಕೆರೆಯಲ್ಲಿ ಮೀನುಗಳನ್ನು ಹಿಡಿಯುವಂತಿಲ್ಲ. ಬದಲಿಗೆ ಪಕ್ಷಿಗಳಿಗೆ ಅಗತ್ಯವಾದ ಮೀನುಗಳನ್ನು ಸಾಕಬೇಕು. ಆದರೆ, ಇದರ ಬಗ್ಗೆ ಅರಣ್ಯ ಇಲಾಖೆ ಯಾವುದೇ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದೆ. ಜೊತೆಗೆ ಮೀನುಗಳ್ಳರಿಗೆ ಬೆನ್ನೆಲುಬಾಗಿ ನಿಂತಿದೆ. ಅರಣ್ಯ ಇಲಾಖೆಯ ಅಧಿಕಾರಿಗಳ ಬೆಂಬಲ ಇಲ್ಲದೆ ಈ ರೀತಿ ಕಳವು ಸಾಧ್ಯವಿಲ್ಲ' ಎಂದು ಸ್ಥಳೀಯರು ದೂರಿದರು.

'ಅರಣ್ಯ ಅಧಿಕಾರಿಗಳಿಗೆ ಹಣ ನೀಡಿ ಅನುಮತಿ ಪಡೆದಿದ್ದೇವೆ. ನೀವು ಯಾರು ಕೇಳುವುದಕ್ಕೆ ಎಂದು ಮೀನು ಹಿಡಿಯುವವರು ಅಬ್ಬರಿಸುತ್ತಾರೆ' ಎಂದು ಸ್ಥಳೀಯರು ಆರೋಪಿಸಿದರು.

ಎಚ್ಚರಿಕೆ ಕ್ರಮ: 'ಮೂರ್ನಾಲ್ಕು ದಿನದಿಂದ ಸ್ಥಳೀಯರು ಮೀನು ಹಿಡಿಯುತ್ತಿರುವ ಬಗ್ಗೆ ಸಮಗ್ರ ಹೇಳಿದರು. ಆ ರೀತಿ ಇದ್ದರೆ ಕ್ರಮ ಕೈಗೊಳ್ಳಲಾಗುತ್ತದೆ. ರಾತ್ರಿಯೆಲ್ಲ ತಪಾಸಣೆ ಮಾಡಲು ಸಿಬ್ಬಂದಿಗೆ ಸೂಚಿಸಲಾಗಿದೆ' ಎಂದು ವಲಯ ಅರಣ್ಯ ಸಂರಕ್ಷಣಾಧಿಕಾರಿ ಹನುಮಂತ ಪಾಟೀಲ್ ತಿಳಿಸಿದರು.

ಮೈದಾನ ಅಭಿವೃದ್ಧಿ ವಿಚಾರ: ಮಾತಿನ ಚಕಮಕಿ

ಬೆಂಗಳೂರು: ಬಸವನಗುಡಿಯ ಶ್ರೀನಗರದ ಮದ್ದೂರಮ್ಮ ಮೈದಾನ ಅಭಿವೃದ್ಧಿ ಹಾಗೂ ಕಾಲೇಜು ಕಟ್ಟಡ ನಿರ್ಮಾಣ ಕುರಿತಂತೆ ಶಾಸಕ ರವಿ ಸುಬ್ರಮಣ್ಯ ಹಾಗೂ ಕೆಪಿಸಿಸಿ ವಕ್ತಾರ ಡಾ. ಶಂಕರ್ ಗುಹಾ ನಡುವೆ ಸೋಮವಾರ ಮಾತಿನ ಚಕಮಕಿ ನಡೆಯಿತು.

ಮೈದಾನದ ಅಭಿವೃದ್ಧಿ ಹಾಗೂ ಪಕ್ಕದಲ್ಲಿರುವ ಬಿಬಿಎಂಪಿ ಜಾಗದಲ್ಲಿ ಪದವಿ ಕಾಲೇಜು ನಿರ್ಮಾಣಕ್ಕೆ ರವಿ ಸುಬ್ರಮಣ್ಯ ಅವರು ಸೋಮವಾರ ಬೆಳಿಗ್ಗೆ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ 'ಮೈದಾನದಲ್ಲಿ ಕಟ್ಟಡ ಕಟ್ಟುವುದು ಬೇಡ' ಎಂದು ಶಂಕರ್ ಆಗ್ರಹಿಸಿದರು. ಮಾತಿನ ಚಕಮಕಿ ನಡೆದು, ಪೊಲೀಸರು ಶಂಕರ್ ಅವರನ್ನು ಮೈದಾನದಿಂದ ಹೊರಕ್ಕೆ ಕಳುಹಿಸಿದರು.

'ಬಸವನಗುಡಿಯ ಈ ಭಾಗದಲ್ಲಿ ಪದವಿ ಕಾಲೇಜು ಇಲ್ಲ. ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದ್ದು, ಬಿ.ಕಾಂ ಹಾಗೂ ಬಿಸಿಎ ಪದವಿ ಕಾಲೇಜು ಆರಂಭಿಸಲಾಗುತ್ತಿದೆ. ಶಾಲೆಯ ಕಟ್ಟಡದಲ್ಲಿ ಈ ತರಗತಿಗಳು ನಡೆಯುತ್ತಿವೆ. ಅದರ ಬದಲು ಮೈದಾನದ ಪಕ್ಕದಲ್ಲೇ ಇರುವ ಬಿಬಿಎಂಪಿ ಜಾಗದಲ್ಲಿ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. ಜೊತೆಗೆ ಈ ಮೈದಾನವನ್ನು ಅತ್ಯಾಧುನಿಕವಾಗಿ ಅಭಿವೃದ್ಧಿ ಮಾಡಲಾಗುತ್ತಿದೆ' ಎಂದು ರವಿಸುಬ್ರಮಣ್ಯ ವಿವರ ನೀಡಿದರು.

'ಮಕ್ಕಳು ಆಟ ಆಡುತ್ತಿರುವ ಮೈದಾನದಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಗುದ್ದಲಿ ಪೂಜೆ ನೆರವೇರಿಸಿದ್ದಾರೆ. ಆಟದ ಮೈದಾನವನ್ನು ಬಿಟ್ಟು ಬೇರೆ ಕಡೆ ಕಟ್ಟಡ ಕಟ್ಟಬಹುದಲ್ಲ ಎಂದಿದ್ದಕ್ಕೆ ಶಾಸಕರು ಸಿಟ್ಟಾದರು. ಜೆಸಿಬಿಯನ್ನು ತರಿಸಿ ಮೈದಾನದ ಗಿಡಮರಗಳನ್ನು ಕೀಳಲು ಪ್ರಾರಂಭಿಸಿದರು. ಸ್ಥಳೀಯರಿಗೆ ಸುತ್ತಮುತ್ತಲೂ ಯಾವುದೇ ಮೈದಾನ ಇಲ್ಲದಿರುವುದರಿಂದ ಇದೊಂದೇ ಮೈದಾನವನ್ನು ಅವಲಂಬಿಸಿದ್ದಾರೆ' ಎಂದು ಶಂಕರ್ ಹೇಳಿದರು.

'ನಾವು ಅವರ ಬೆದರಿಕೆಗಳಿಗೆ ಬಗ್ಗುವುದಿಲ್ಲ. ಸಾರ್ವಜನಿಕರಿಗಾಗಿ ನಮ್ಮ ಹೋರಾಟ ಮುಂದುವರೆಯುತ್ತದೆ. ಅಗತ್ಯ ಬಿದ್ದರೆ ನ್ಯಾಯಾಲಯದ ಮೆಟ್ಟಿಲನ್ನು ಏರುತ್ತೇವೆ' ಎಂದರು.

ಅಂಗವಿಕಲತೆ, ಅಕಾಲಿಕ ಸಾವು ತಡೆಗೆ ಆರೋಗ್ಯ ಇಲಾಖೆ ಯೋಜನೆ

ಪಾರ್ಶ್ವವಾಯುಗೆ ತುರ್ತು ಚಿಕಿತ್ಸೆ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಪಾರ್ಶ್ವವಾಯುವಿನಿಂದ ಉಂಟಾಗುತ್ತಿರುವ ಅಂಗವಿಕಲತೆ ಹಾಗೂ ಅಕಾಲಿಕ ಸಾವು ತಡೆಯಲು ಆರೋಗ್ಯ ಇಲಾಖೆ ಯೋಜನೆ ರೂಪಿಸಿದ್ದು, ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಸಹಯೋಗದಲ್ಲಿ ತುರ್ತು ಚಿಕಿತ್ಸೆ ಒದಗಿಸಲಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) 'ಸ್ಟೆಮಿ' ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆ. ಬೆಂಗಳೂರಿನ ನಿಮ್ಹಾನ್ಸ್ ಹಾಗೂ ಧಾರವಾಡದ ಡಿಮಾನ್ಸ್ ನೋಡಲ್ ಕೇಂದ್ರಗಳಾಗಿ ಕಾರ್ಯನಿರ್ವಹಿಸಲಿದ್ದು, ಜಿಲ್ಲಾ ಸೇರಿ ವಿವಿಧ ಆಸ್ಪತ್ರೆಗಳ ಜತೆಗೆ ಸಂಪರ್ಕ ಸಾಧಿಸಲಿವೆ. ಯೋಜನೆಯಡಿ ತಜ್ಞ ಮನೋವೈದ್ಯರು ಕಾರ್ಯನಿರ್ವಹಿಸಲಿದ್ದಾರೆ. ಇದರಿಂದಾಗಿ ರಾಜ್ಯದ ಯಾವುದೇ ಮೂಲೆಯಲ್ಲಿ ವ್ಯಕ್ತಿ ಪಾರ್ಶ್ವವಾಯುವಿಗೆ ಒಳಗಾದರೂ ಸ್ಥಳೀಯ ಆಸ್ಪತ್ರೆಗಳಲ್ಲಿಯೇ ತುರ್ತು ಚಿಕಿತ್ಸೆ ದೊರೆಯಲಿದೆ.

ಈ ಯೋಜನೆಗೆ ಕೇಂದ್ರ ಸರ್ಕಾರವೇ ಅನುದಾನ ಒದಗಿಸಲಿದ್ದು, ಈಗಾಗಲೇ ತಮಿಳುನಾಡಿನಲ್ಲಿ ಪ್ರಾರಂಭಿಸಲಾಗಿದೆ. ಅದೇ ಮಾದರಿಯಲ್ಲಿ ರಾಜ್ಯದಲ್ಲಿಯೂ ಯೋಜನೆ ಪ್ರಾರಂಭಿಸಲು ಕಾರ್ಯಯೋಜನೆ ರೂಪಿಸಲಾಗಿದೆ. ನಿಮ್ಹಾನ್ಸ್ ಮಾಹಿತಿ ಪ್ರಕಾರ ರಾಜ್ಯದಲ್ಲಿ ಪ್ರತಿವರ್ಷ 70 ಸಾವಿರದಿಂದ 80 ಸಾವಿರ ಜನರು ಪಾರ್ಶ್ವವಾಯು ಪೀಡಿತರಾಗುತ್ತಿದ್ದಾರೆ. ರಾಜ್ಯದಲ್ಲಿ ಸದ್ಯ 6 ಲಕ್ಷ ಮಂದಿ ಪಾರ್ಶ್ವವಾಯು ಪೀಡಿತರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ವಾರ್ಷಿಕ ಒಂದು ಲಕ್ಷ ಪಾರ್ಶ್ವವಾಯು ರೋಗಿಗಳ ಪೈಕಿ 73 ಜನರು ಮರಣ ಹೊಂದುತ್ತಿದ್ದಾರೆ.

ತುರ್ತು ಚಿಕಿತ್ಸೆ: ನಿಮ್ಹಾನ್ಸ್‌ನಲ್ಲಿ ತುರ್ತು ಚಿಕಿತ್ಸೆಗೆ ದಾಖಲಾಗುವ ರೋಗಿಗಳಲ್ಲಿ ಶೇ 25ರಷ್ಟು ರೋಗಿಗಳು ಪಾರ್ಶ್ವವಾಯು ಪೀಡಿತರಾಗಿದ್ದಾರೆ. ತಿಂಗಳಿಗೆ 200ರಿಂದ 250 ರೋಗಿಗಳು ಈ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಸಂಸ್ಥೆಗೆ ಬರುತ್ತಿದ್ದಾರೆ.

'ಪಾರ್ಶ್ವವಾಯುವಿನಿಂದ ಅಂಗಾಂಗ ವೈಫಲ್ಯ ಹಾಗೂ ಮರಣ ಸಂಭವಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಪಾರ್ಶ್ವವಾಯು ಆದಾಗ ಸಮಯಪ್ರಜ್ಞೆ ಬಹಳ ಮುಖ್ಯ. ಆರೈಕೆ ಹಾಗೂ ಚಿಕಿತ್ಸೆ ಸರಿಯಾದ ಕ್ರಮದಲ್ಲಿ ಮತ್ತು ಸರಿಯಾದ ಸಮಯಕ್ಕೆ ಸಿಕ್ಕರೆ ವ್ಯಕ್ತಿ ಬೇಗ ಗುಣಮುಖವಾಗಲು ಸಾಧ್ಯ. ಆದ್ದರಿಂದ ಸ್ಟೆಮಿ ಯೋಜನೆಯನ್ನು ಪರಿಚಯಿಸಲಾಗುತ್ತಿದೆ' ಎಂದು ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ಉಪ ನಿರ್ದೇಶಕ ಡಾ.ಜಿ. ಶ್ರೀನಿವಾಸ್ ತಿಳಿಸಿದರು.

ಹೃದಯ ಸಮಸ್ಯೆಗೆ ಶೀಘ್ರ ಚಿಕಿತ್ಸೆ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಹೃದಯ ಸಮಸ್ಯೆಗಳಿಗೆ ತುರ್ತು ಚಿಕಿತ್ಸೆ ಒದಗಿಸಲು 'ಸ್ಟೆಮಿ' ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ಘಟಕವನ್ನು ಕಾರ್ಯಾಚರಣೆಯ ಕೇಂದ್ರಗಳನ್ನಾಗಿ ಬಳಸಿಕೊಂಡು, ಸೇವೆ ನೀಡಲಾಗುತ್ತದೆ. ವಿವಿಧೆಡೆ ಕಾರ್ಯನಿರ್ವಹಿಸುತ್ತಿರುವ ಹೃದ್ರೋಗ ತಜ್ಞರ ನೆರವು ಪಡೆದುಕೊಳ್ಳಲಾಗುತ್ತದೆ. ಕಳೆದ ವರ್ಷವೇ ಅನುಷ್ಠಾನಗೊಳ್ಳಬೇಕಾದ ಈ ಯೋಜನೆ, ಕೋವಿಡ್‌ನಿಂದಾಗಿ ಹಿನ್ನಡೆ ಅನುಭವಿಸಿತ್ತು. ಈಗ ಇಲಾಖೆ ಅನುಷ್ಠಾನಕ್ಕೆ ಸಿದ್ಧತೆ ಮಾಡಿಕೊಂಡಿದೆ.

ಆ್ಯಪ್ ಮೂಲಕ ಬೆಟ್ಟಿಂಗ್: ನಾಲ್ವರ ಬಂಧನ, ₹10 ಲಕ್ಷ ವಶ

ಬೆಂಗಳೂರು: ಮೊಬೈಲ್ ಆ್ಯಪ್ ಮೂಲಕ ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ನಾಲ್ವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಮಹದೇವಪುರ ಠಾಣೆ ವ್ಯಾಪ್ತಿಯ ಎರಡು ಸ್ಥಳಗಳಲ್ಲಿ ಡಿ. 3ರಂದು ಕಾರ್ಯಾಚರಣೆ ನಡೆಸಿ, ನಾಲ್ವರನ್ನು ಬಂಧಿಸಲಾಗಿದೆ. ಒಬ್ಬ ಪರಾರಿಯಾಗಿದ್ದಾನೆ. ಬಂಧಿತರಿಂದ ₹ 10.50 ಲಕ್ಷ ನಗದು ಹಾಗೂ ಮೂರು ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಬೆಟ್ಟಿಂಗ್‌ಗಾಗಿ ಮೊಬೈಲ್ ಆ್ಯಪ್ ಬಳಸುತ್ತಿದ್ದ ಆರೋಪಿಗಳು, ಯೂಸರ್ ನೇಮ್ ಹಾಗೂ ಪಾಸ್‌ವರ್ಡ್ ಸೃಷ್ಟಿಸಿಕೊಂಡಿದ್ದರು. ಅದರ ಮೂಲಕವೇ ಹಲವರನ್ನು ಸಂಪರ್ಕಿಸಿ, ಕ್ರಿಕೆಟ್ ಪಂದ್ಯಗಳ ಸೋಲು–ಗೆಲುವು ಲೆಕ್ಕಾಚಾರದಲ್ಲಿ ಹಣ ಕಟ್ಟಿಸಿಕೊಳ್ಳುತ್ತಿದ್ದರು. 'ಡಿ. 1ರಂದು ನಡೆದಿದ್ದ ಇಂಗ್ಲೆಂಡ್, ಪಾಕಿಸ್ತಾನ ನಡುವಿನ ಕ್ರಿಕೆಟ್ ಪಂದ್ಯಗಳ ಮೇಲೂ ಬೆಟ್ಟಿಂಗ್ ಕಟ್ಟಿಸಿ ಕೊಂಡಿದ್ದರು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಗಿತ್ತು' ಎಂದರು.

ಕೃಷಿ ವಿಶ್ವವಿದ್ಯಾಲಯದಲ್ಲಿ 'ವಿಶ್ವ ಮಣ್ಣು ದಿನಾಚರಣೆ'

'ಫಲವತ್ತತೆ ಕುಸಿಯುವ ಆತಂಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಡೀ ವಿಶ್ವದಲ್ಲಿ ಮಣ್ಣಿನ ಫಲವತ್ತತೆ ಶೇ 33ರಷ್ಟು ಕುಸಿದಿದ್ದು, 2050ರ ವೇಳೆಗೆ ಶೇ 50ರಷ್ಟು ಫಲವತ್ತತೆ ಕುಸಿಯುವ ಆತಂಕ ಎದುರಾಗಿದೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ವಿ.ಸುರೇಶ್ ಕಳವಳ ವ್ಯಕ್ತಪಡಿಸಿದರು.

ವಿಶ್ವವಿದ್ಯಾಲಯದ ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ವಿಜ್ಞಾನ ವಿಭಾಗ ಸೋಮವಾರ ಆಯೋಜಿಸಿದ್ದ 'ವಿಶ್ವ ಮಣ್ಣು ದಿನಾಚರಣೆ'ಯಲ್ಲಿ ಮಾತನಾಡಿದರು.

ಮಣ್ಣು ಸವಕಳಿ, ಮಾಲಿನ್ಯ ಮತ್ತು ಪೋಷಕಾಂಶದ ಕೊರತೆ ಆಹಾರ ಭದ್ರತೆಗೆ ಬಹುದೊಡ್ಡ ಧಕ್ಕೆ ತರುತ್ತಿದೆ. ರೈತರ ಬಡತನಕ್ಕೂ ಪರೋಕ್ಷ ಕಾರಣವಾಗುತ್ತದೆ' ಎಂದು ಎಚ್ಚರಿಸಿದರು.

ವಿಶ್ವವಿದ್ಯಾಲಯವು ಮಣ್ಣಿನ ಆರೋಗ್ಯ ಕಾಪಾಡಲು ನಿರಂತರ ಸಂಶೋಧನೆ ನಡೆಸುತ್ತಿದೆ. ಜೊತೆಗೆ, ಸಮಗ್ರ ಪೋಷಕಾಂಶಗಳ ನಿರ್ವಹಣೆ ಕೋರ್ಸ್ ಆರಂಭಿಸಿದೆ ಎಂದು ಹೇಳಿದರು.

ಮಣ್ಣುಪೋಷಕಾಂಶಗಳ ಸಮರ್ಪಕ ಪೂರೈಕೆ, ಆರೋಗ್ಯಕ್ಕೆ ಒತ್ತುಕೊಟ್ಟು ಕೃಷಿಯಲ್ಲಿ ನಿರ್ವಹಣಾ ಕ್ರಮಗಳಾದ ಬೆಳೆ ಬದಲಾವಣೆ, ಸಮಗ್ರ ಪೋಷಕಾಂಶಗಳ ನಿರ್ವಹಣೆ, ನೀರಿನ ಸಂರಕ್ಷಣೆ ಹಾಗೂ ಹವಾಮಾನಕ್ಕೆ ತಕ್ಕಂತೆ ಬೆಳೆ ಬದಲಾವಣೆ ಮಾಡುವುದರಿಂದ ನಾವು ಮಣ್ಣಿನ ಆರೋಗ್ಯ ಕಾಪಾಡಬಹುದು ಎಂದು ಸಲಹೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ವಿಜ್ಞಾನ ವಿಭಾಗ ಸೋಮವಾರ ಆಯೋಜಿಸಿದ್ದ 'ವಿಶ್ವ ಮಣ್ಣು ದಿನಾಚರಣೆ'ಯನ್ನು ಕುಲಪತಿ ಡಾ.ಎಸ್‌ವಿ.ಸುರೇಶ್ ಉದ್ಘಾಟಿಸಿದರು

ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿ ಡಾ.ಜಿ.ಎಸ್. ದಾಸೋಗ್ ಮಾತನಾಡಿ, 'ಶೇ 95ರಷ್ಟು ಆಹಾರ ಮಣ್ಣಿನ ಮೂಲದಿಂದ ಬರುತ್ತದೆ. ಒಂದು ಸೆಂಟಿಮೀಟರ್ ಮಣ್ಣು ನಿರ್ಮಾಣವಾಗಲು ಒಂದು ಸಾವಿರ ವರ್ಷ ಬೇಕಾಗುತ್ತದೆ. ಒಂದು ಚಮಚ ಮಣ್ಣಿನಲ್ಲಿ 90 ಲಕ್ಷ ಸೂಕ್ಷ್ಮಾಣು ಜೀವಿಗಳಿರುತ್ತವೆ. ಪಂಚಭೂತಗಳಲ್ಲಿ ಒಂದಾದ ಮಣ್ಣನ್ನು ಸಂರಕ್ಷಿಸಿ ಮಾನವ ಕಲ್ಯಾಣಕ್ಕೆ ನಾಂದಿಯಾಗಬೇಕು' ಎಂದು ಕೋರಿದರು.

ಕೃಷಿ ವಿಶ್ವವಿದ್ಯಾಲಯದ ಡೀನ್ ಡಾ.ಎನ್.ಬಿ.ಪ್ರಕಾಶ್, ಶಿಕ್ಷಣ ನಿರ್ದೇಶಕ ಡಾ.ಕೆ.ಸಿ.ನಾರಾಯಣಸ್ವಾಮಿ, ವಿಸ್ತರಣಾ ನಿರ್ದೇಶಕ ಡಾ.ಕೆ.ನಾರಾಯಣಗೌಡ, ಸಂಶೋಧನಾ ನಿರ್ದೇಶಕ ಡಾ.ಕೆ.ಬಿ. ಉಮೇಶ್, ಡೀನ್ (ಸ್ನಾತಕೋತ್ತರ) ಡಾ.ಎಚ್.ಸಿ.ಪ್ರಕಾಶ್ ಹಾಜರಿದ್ದರು.

> ವಾಯು ಮಾಲಿನ್ಯ, ಜಲ ಮಾಲಿನ್ಯ ಕಣ್ಣಿಗೆ ಕಾಣಿಸುತ್ತದೆ. ಆದರೆ, ಮಣ್ಣಿನ ಮಾಲಿನ್ಯ ಕಣ್ಣಿಗೆ ಕಾಣಿಸುವುದಿಲ್ಲ. ಮಣ್ಣು ಪ್ರತಿ ಜೀವಸಂಕುಲಕ್ಕೂ ಅಗತ್ಯವಾಗಿದ್ದು ಅದರ ಸಂರಕ್ಷಣೆ ತುರ್ತಾಗಿ ನಡೆಯಬೇಕಿದೆ.
> **ಡಾ.ಎಸ್.ವಿ.ಸುರೇಶ್,** ಕುಲಪತಿ

ಪಾದರಾಯನಪುರ ರಸ್ತೆ ವಿಸ್ತರಣೆ ಶೀಘ್ರ: ಸೋಮಣ್ಣ

ಬೆಂಗಳೂರು: ಸಿರ್ಸಿ ವೃತ್ತದಿಂದ ವಿಜಯನಗರ ಪೈಪ್‌ಲೈನ್‌ವರೆಗಿನ 1.85 ಕಿ.ಮೀ. ಉದ್ದದ ಪಾದರಾಯನಪುರ ರಸ್ತೆ ವಿಸ್ತರಣೆ ಯೋಜನೆಯನ್ನು ಆದಷ್ಟು ಬೇಗನೆ ಅನುಷ್ಠಾನಗೊಳಿಸಲಾಗುವುದು ಎಂದು ವಸತಿ ಮತ್ತು ಮೂಲಸೌಕರ್ಯ ಸಚಿವ ವಿ.ಸೋಮಣ್ಣ ಹೇಳಿದರು.

ಪಾದರಾಯನಪುರ ರಸ್ತೆ ವಿಸ್ತರಣೆ ಸಂಬಂಧ ಬಿಬಿಎಂಪಿ, ಪೊಲೀಸ್ ಇಲಾಖೆ ಮತ್ತು ಚಾಮರಾಜಪೇಟೆ ಶಾಸಕ ಜಮೀರ್ ಅಹಮದ್ ಜತೆ ಸಭೆ ನಡೆಸಿದ ನಂತರ ಮಾಧ್ಯಮಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಈ ಭಾಗದಲ್ಲಿ ಮೂಲಸೌಕರ್ಯದ ಅಭಿವೃದ್ಧಿಗಾಗಿ ರಸ್ತೆ ವಿಸ್ತರಣೆ ಆಗಬೇಕಿದೆ. ಇದರಿಂದ ವಾಣಿಜ್ಯ ಚಟುವಟಿಕೆಗೂ ಅನುಕೂಲವಾಗಲಿದೆ. ರಸ್ತೆ ವಿಸ್ತರಣೆಗಾಗಿ 1,63,190 ಚದರಡಿ ಜಾಗದ ಅಗತ್ಯವಿದೆ.

ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ₹140 ಕೋಟಿ ಪರಿಹಾರ ಹಣ ನೀಡಿ 140 ಖಾಸಗಿ ಆಸ್ತಿಗಳನ್ನು ಸ್ವಾಧೀನ ಪಡಿಸಲಾಗುವುದು. ಯೋಜನೆಗೆ ಸರ್ಕಾರಿ ಮತ್ತು ಖಾಸಗಿಯದ್ದು ಸೇರಿ ಒಟ್ಟು 292 ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ ಎಂದು ಸೋಮಣ್ಣ ಹೇಳಿದರು.

ಗುಂಡಿಮುಕ್ತ ರಸ್ತೆ: ನಾಗರಿಕರಿಗೆ 'ಎಫ್‌ಎಂಎಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಸ್ತೆ ಗುಂಡಿಗಳಿದ್ದರೆ ಅದನ್ನು ಕ್ಷಿಪ್ರಗತಿಯಲ್ಲಿ ದುರಸ್ತಿಗೊಳಿಸಲು ಬಿಬಿಎಂಪಿ 'ಫಿಕ್ಸ್ ಮೈ ಸ್ಟ್ರೀಟ್' ಆ್ಯಪ್ ಅನ್ನು ನಾಗರಿಕರಿಗೆ ಪರಿಚಯಿಸುತ್ತಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳು ಕಂಡುಬಂದರೆ 'ಫಿಕ್ಸ್ ಮೈ ಸ್ಟ್ರೀಟ್' ಆ್ಯಪ್ ಮೂಲಕ ನಾಗರಿಕರು ದೂರು ಸಲ್ಲಿಸಬಹುದು. ಜಿಐಎಸ್ ಆಧಾರಿತವಾದ ಚಿತ್ರವನ್ನು ಇದರಲ್ಲಿ ಅಪ್‌ಲೋಡ್ ಮಾಡಬೇಕು. ಇದನ್ನು ಸಂಬಂಧಪಟ್ಟ ಎಂಜಿನಿಯರ್‌ಗಳು ಪರಿಶೀಲಿಸುತ್ತಾರೆ. ಸ್ಥಳಕ್ಕೆ ಹೋಗಿ ಅದರ ದುರಸ್ತಿ ಬಗ್ಗೆ ಕ್ರಮ ಕೈಗೊಳ್ಳುತ್ತಾರೆ. ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನೂ ಚಿತ್ರ ಸಹಿತ ಮಾಹಿತಿಯನ್ನು ಆ್ಯಪ್‌ನಲ್ಲೇ ಅಪ್‌ಲೋಡ್ ಮಾಡುತ್ತಾರೆ ಎಂದು ಬಿಬಿಎಂಪಿಯ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯಪುರ ತಿಳಿಸಿದರು.

ಬಿಬಿಎಂಪಿ 'ಫಿಕ್ಸ್ ಮೈ ಸ್ಟ್ರೀಟ್' ಆ್ಯಪ್ ಡಿಸೆಂಬರ್ 15ರಿಂದ ನಾಗರಿಕರಿಗೆ ಲಭ್ಯವಾಗುತ್ತದೆ ಎಂದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಗುರುತಿಸಲು ಹಾಗೂ ದುರಸ್ತಿ ಮಾಡಲು 'ಫಿಕ್ಸ್ ಮೈ ಸ್ಟ್ರೀಟ್' (ಎಫ್‌ಎಂಎಸ್) ಸಾಫ್ಟ್‌ವೇರ್ ಚಾಲನೆಯಲ್ಲಿದೆ. ಇದು ಬಿಬಿಎಂಪಿಯ ಎಂಜಿನಿಯರ್‌ಗಳ ಮಟ್ಟದಲ್ಲಿದೆ. ಪ್ರಧಾನ ಎಂಜಿನಿಯರ್ ಸಿ.ಎಸ್. ಪ್ರಹ್ಲಾದ್ ನೇತೃತ್ವದ ಕಾರ್ಯಪಡೆ ಇದರ ಮೇಲ್ವಿಚಾರಣೆ ನಡೆಸುತ್ತಿದೆ.

ಪ್ರತಿ ವಲಯದ ಎಂಜಿನಿಯರ್‌ಗಳೊಂದಿಗೆ ಸಮನ್ವಯ ಸಾಧಿಸಿ, ದುರಸ್ತಿಗೆ ಬೇಕಿರುವ ಸಾಮಗ್ರಿಗಳ ಖರೀದಿ ಹಾಗೂ ವಿತರಣೆಯ ಜವಾಬ್ದಾರಿಯನ್ನು ಈ ಕಾರ್ಯಪಡೆ ಹೊಂದಿದೆ. ಎಫ್‌ಎಂಎಸ್ ಮೂಲಕ ಕಾರ್ಯ ಪಡೆಯಿಂದ ಆದೇಶ ಪಡೆದ ಕೂಡಲೆ 27 ವಲಯವಾರು ಕಾರ್ಯಪಾಲಕ ಎಂಜಿನಿಯರ್‌ಗಳು ಹಾಗೂ ರಸ್ತೆ ಮೂಲಸೌಕರ್ಯದ ಕಾರ್ಯಪಾಲಕ ಎಂಜಿನಿಯರ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ. ರಸ್ತೆ ಗುಂಡಿಗಳ ದುರಸ್ತಿ ಕಾಮಗಾರಿಯ ವಿವರವನ್ನು ಎಫ್‌ಎಂಎಸ್ ಮೂಲಕ ಅಂದೇ ವರದಿ ಮಾಡುತ್ತಿದ್ದಾರೆ. ಇದೀಗ ನಾಗರಿಕರು ಈ ಆ್ಯಪ್ ಬಳಸಿ ತಮ್ಮ ದೂರುಗಳನ್ನು ದಾಖಲಿಸಬಹುದು.

ನಕಲಿ ಚಾಲನಾ ಪರವಾನಗಿ: ಸಾಬೀತು ಹೊಣೆ ವಿಮಾ ಕಂಪನಿಯದ್ದು: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪಘಾತಕ್ಕೆ ಕಾರಣವಾದ ವಾಹನದ ಚಾಲಕ ಹೊಂದಿದ ಚಾಲನಾ ಪರವಾನಗಿಯು (ಡ್ರೈವಿಂಗ್ ಲೈಸೆನ್ಸ್) ನಕಲಿ ಎಂಬುದನ್ನು ಸಾಬೀತುಪಡಿಸುವ ಜವಾಬ್ದಾರಿ ವಿಮಾ ಕಂಪನಿಯ ಮೇಲಿರುತ್ತದೆ. ಲೈಸೆನ್ಸ್ ನಕಲಿ ಎನ್ನುವುದು ಸಾಬೀತಾಗುವವರೆಗೆ ಪರಿಹಾರ ನೀಡುವ ಹೊಣೆಗಾರಿಕೆಯನ್ನು ವಾಹನದ ಮಾಲೀಕನ ಮೇಲೆ ಹೊರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಹೈಕೋರ್ಟ್ ಹೇಳಿದೆ.

ಪ್ರಕರಣವೊಂದರಲ್ಲಿ ಪರಿಹಾರ ಪಾವತಿಸುವ ಹೊಣೆಗಾರಿಕೆಯನ್ನು ವಿಮಾ ಕಂಪನಿಗೆ ವಹಿಸಿದ್ದ ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿಯ ಕ್ರಮವನ್ನು ಪ್ರಶ್ನಿಸಿ ಯುನೈಟೆಡ್ ಇನ್ಶೂರೆನ್ಸ್ ಇಂಡಿಯಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಈ ಪ್ರಕರಣದಲ್ಲಿ ಒದಗಿಸಲಾಗಿರುವ ದಾಖಲೆ ನಕಲಿ ಎನ್ನುವುದನ್ನು ವಿಮಾ ಸಂಸ್ಥೆ ಸಾಬೀತುಪಡಿಸದ ಹೊರತು ಪರಿಹಾರ ಪಾವತಿಸುವ ಹೊಣೆಗಾರಿಕೆಯನ್ನು ವಾಹನದ ಮಾಲೀಕನಿಗೆ ವರ್ಗಾಯಿಸುವ ಸನ್ನಿವೇಶವೇ ಉದ್ಭವಿಸುವುದಿಲ್ಲ. ನ್ಯಾಯಮಂಡಳಿಯ ಆದೇಶದಲ್ಲಿ ಮಧ್ಯಪ್ರವೇಶಿಸುವ ಅವಶ್ಯಕತೆ ಕಂಡುಬರುತ್ತಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಮಂಡ್ಯದ ಅಬಲವಾಡಿಯಲ್ಲಿ 2010ರ ಡಿ. 26ರಂದು ತಮ್ಮ ಮನೆಯ ಮುಂದೆ ನಿಂತಿದ್ದ ತರುಣ್ ಗೌಡ (ಘಟನೆ ನಡೆದಾಗ 8 ವರ್ಷ) ಎಂಬ ಬಾಲಕನಿಗೆ ವೇಗವಾಗಿ ಬಂದ ಟಾಟಾ ಏಸ್ ಗಾಡಿ ಡಿಕ್ಕಿ ಹೊಡೆದಿತ್ತು. ಪರಿಹಾರ ಕೋರಿ ತರುಣ್ ಪರವಾಗಿ ಆತನ ತಂದೆ ಸಲ್ಲಿಸಿದ್ದ ಅರ್ಜಿಯನ್ನು 2014ರಲ್ಲಿ ಮಾನ್ಯ ಮಾಡಿದ್ದ ನ್ಯಾಯಮಂಡಳಿ ಪರಿಹಾರ ಪಾವತಿಸುವ ಹೊಣೆಗಾರಿಕೆಯನ್ನು ವಿಮಾ ಕಂಪನಿಗೆ ಹೊರಿಸಿತ್ತು. ವಿಮಾ ಸಂಸ್ಥೆ ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿತ್ತು.

ತಾಲ್ಲೂಕು ಕಚೇರಿ ಬಳಿ ಶವ ಸಂಸ್ಕಾರಕ್ಕೆ ಯತ್ನ!

ಚನ್ನಪಟ್ಟಣ: ತಾಲ್ಲೂಕಿನ ಕೋಡಂಬಹಳ್ಳಿ ಗ್ರಾಮದಲ್ಲಿ ಸೋಮವಾರ ನಿಧನರಾದ ಪರಿಶಿಷ್ಟ ಜಾತಿಯ ಜಯಣ್ಣ (47) ಎಂಬುವರ ಅಂತ್ಯ ಸಂಸ್ಕಾರಕ್ಕೆ ಗ್ರಾಮದ ಕೆಲವು ಸವರ್ಣೀಯರು ಅವಕಾಶ ನೀಡಲಿಲ್ಲ ಎಂದು ಶವವನ್ನು ಚನ್ನಪಟ್ಟಣಕ್ಕೆ ಕೊಂಡೊಯ್ದ ಕುಟುಂಬ ಸದಸ್ಯರು ಮತ್ತು ಪರಿಶಿಷ್ಟ ಸಮುದಾಯದವರು ತಾಲ್ಲೂಕು ಕಚೇರಿ ಎದುರು ಇಟ್ಟು ಪ್ರತಿಭಟನೆ ನಡೆಸಿದರು.

ಸಮುದಾಯದ ಕೆಲವು ಯುವಕರು ಶವವನ್ನು ಕಚೇರಿಯ ಆವರಣದಲ್ಲೇ ಸಂಸ್ಕಾರ ಮಾಡಲು ಗುಂಡಿ ತೋಡಲು ಪ್ರಯತ್ನಿಸಿದರು. ಅವರನ್ನು ಪೊಲೀಸರು ತಡೆದರು. ಅಧಿಕಾರಿಗಳ ಮನವೊಲಿಕೆಗೆ ಮಣಿಯದ ಕುಟುಂಬಸ್ಥರು ರಾತ್ರಿಯಾದರೂ ಮೃತದೇಹವನ್ನು ಕಚೇರಿ ಬಳಿಯಿಂದ ತೆರವುಗೊಳಿಸಲಿಲ್ಲ. ಪ್ರತ್ಯೇಕ ಸ್ಮಶಾನ ಜಾಗ ಸಿಗುವರೆಗೂ ಪ್ರತಿಭಟನೆ ಹಿಂಪಡೆಯಲ್ಲ ಎಂದು ಪಟ್ಟು ಹಿಡಿದರು.

ಬಿಎಂಟಿಸಿ ಬಸ್ ಚಕ್ರ ಸ್ಫೋಟ: ಒಬ್ಬರಿಗೆ ಗಾಯ

ಬೆಂಗಳೂರು: ವಿದ್ಯಾರಣ್ಯಪುರ ಬಳಿ ಚಲಿಸುತ್ತಿದ್ದ ಬಿಎಂಟಿಸಿ ಬಸ್ಸಿನ ಚಕ್ರ ಸ್ಫೋಟಗೊಂಡಿದ್ದು, ಇದರಿಂದಾಗಿ ಪ್ರಯಾಣಿಕ ದುರ್ಗಪ್ಪ ಎಂಬುವರು ಗಾಯಗೊಂಡಿದ್ದಾರೆ.

'ಬಾಗಲಕೋಟೆಯ ದುರ್ಗಪ್ಪ, ಕಾರು ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಕೆಲಸ ನಿಮಿತ್ತ ಮಹಾಲಕ್ಷ್ಮಿ ಲೇಔಟ್‌ನಿಂದ ಯಲಹಂಕಕ್ಕೆ ಹೋಗಲು ಬಸ್ ಹತ್ತಿದ್ದಾಗ ಈ ಅವಘಡ ಸಂಭವಿಸಿದೆ. ಗಾಯಗೊಂಡಿರುವ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಜಾಲಹಳ್ಳಿ ಸಂಚಾರ ಪೊಲೀಸರು ಹೇಳಿದರು.

ಶಾಸಕರ ಕೊಲೆ ಸಂಚಿನ ಮರು ತನಿಖೆ: ಆರೋಪಿ ವಶಕ್ಕೆ

ಬೆಂಗಳೂರು: ಯಲಹಂಕ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಆರ್. ವಿಶ್ವನಾಥ್ ಕೊಲೆಗೆ ಸಂಚು ರೂಪಿಸಿದ್ದ ಬಗ್ಗೆ 2021ರಲ್ಲಿ ದಾಖಲಾಗಿದ್ದ ಪ್ರಕರಣದ ಮರು ತನಿಖೆ ಕೈಗೊಂಡಿರುವ ರಾಜಾನುಕುಂಟೆ ಪೊಲೀಸರು, ಆರೋಪಿ ಕುಳ್ಳ ದೇವರಾಜ್ ಎಂಬುವರನ್ನು ವಶಕ್ಕೆ ಪಡೆದಿದ್ದಾರೆ.

'ಕೊಲೆ ಸಂಚಿನ ಬಗ್ಗೆ ಶಾಸಕ ವಿಶ್ವನಾಥ್ ದೂರು ನೀಡಿದ್ದರು. ಇದರನ್ವಯ ದಾಖಲಾಗಿದ್ದ ಎಫ್‌ಐಆರ್ ಪ್ರಶ್ನಿಸಿ ಆರೋಪಿಗಳು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯ ಎಫ್‌ಐಆರ್ ರದ್ದುಪಡಿಸಿತ್ತು. ಈ ಕ್ರಮ ಪ್ರಶ್ನಿಸಿ ವಿಶ್ವನಾಥ್, ಪುನಃ ನ್ಯಾಯಾಲಯಕ್ಕೆ ಖಾಸಗಿ ಮೊಕದ್ದಮೆ ಹೂಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಶ್ವನಾಥ್ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಾಲಯ, ಮರು ತನಿಖೆ ನಡೆಸುವಂತೆ ಆದೇಶಿಸಿದೆ. ಅದರನ್ವಯ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ಆರಂಭಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಸಾಜ್‌ಗೆ ಹೋಗಿದ್ದವನ ₹ 15 ಸಾವಿರ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಸಾಜ್ ಮಾಡಿಸಲೆಂದು ಸ್ಪಾಗೆ ಹೋಗಿದ್ದ ರ‍್ಯಾಪಿಡೊ ಬೈಕ್ ಸವಾರರೊಬ್ಬರ ಜೇಬಿನಲ್ಲಿದ್ದ ₹ 15 ಸಾವಿರ ಕಳ್ಳತನ ಮಾಡಲಾಗಿದ್ದು, ಈ ಸಂಬಂಧ ತಿಲಕ್‌ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನ್ಯೂ ತಿಪ್ಪಸಂದ್ರ ನಿವಾಸಿಯಾಗಿರುವ 24 ವರ್ಷದ ಯುವಕ, ಕಳ್ಳತನದ ಬಗ್ಗೆ ದೂರು ನೀಡಿದ್ದಾರೆ. ತಿಲಕ್‌ನಗರದ ಮುಖ್ಯರಸ್ತೆಯಲ್ಲಿರುವ ಸ್ಪಾದಲ್ಲಿ ಕೆಲಸ ಮಾಡುವ ಮಹಿಳೆ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ರ‍್ಯಾಪಿಡೊ ಬೈಕ್ ಸವಾರರಾಗಿ ಕೆಲಸ ಮಾಡುತ್ತಿದ್ದ ಯುವಕ, ಆರ್ಥಿಕ ಕಷ್ಟದಲ್ಲಿದ್ದರು. ಹೀಗಾಗಿ, ಮಹಿಳೆಯೊಬ್ಬರ ಬಳಿ ನ. 15ರಂದು ₹ 15 ಸಾವಿರ ಸಾಲ ಪಡೆದುಕೊಂಡಿದ್ದರು. ಅದನ್ನು ಜೇಬಿನಲ್ಲಿಟ್ಟುಕೊಂಡು ಅದೇ ದಿನ ಸಂಜೆ ದೇಹದ ಮಸಾಜ್ ಮಾಡಿಸಲೆಂದು ಸ್ಪಾಗೆ ಹೋಗಿದ್ದರು. ಮಸಾಜ್‌ಗಾಗಿ ₹ 1,800 ಪಾವತಿಸಿದ್ದರು.'

'ಸ್ಪಾದಲ್ಲಿದ್ದ ಮಹಿಳೆಯೊಬ್ಬರು ಯುವಕನನ್ನು ಕೊಠಡಿಗೆ ಕರೆದೊಯ್ದು ಬಟ್ಟೆ ಬಿಚ್ಚಿ ದೇಹದ ಮಸಾಜ್ ಮಾಡಿದ್ದರು. ಮಸಾಜ್ ಬಳಿಕ ಬಟ್ಟೆಗಳನ್ನು ಕೊಠಡಿಯಲ್ಲಿ ಇರಿಸಿದ್ದ ಯುವಕ, ಸ್ಪಾದಲ್ಲಿದ್ದ ಬಾತ್‌ರೂಮ್‌ನಲ್ಲೇ ಸ್ನಾನ ಮಾಡಿದ್ದರು. ಸ್ನಾನದ ಬಳಿಕ ಹೊರಬಂದು ಬಟ್ಟೆ ಹಾಕಿಕೊಂಡಿದ್ದರು. ಬಟ್ಟೆಯ ಜೇಬಿನಲ್ಲಿ ನೋಡಿದಾಗ, ₹ 15 ಸಾವಿರ ಹಣ ಇರಲಿಲ್ಲ' ಎಂದು ತಿಳಿಸಿದರು.

ಚಿತ್ರಾವಳಿ

ಬೆಂಗಳೂರು ಉತ್ತರ ರೌಂಡ್ ಟೇಬಲ್ ಟ್ರಸ್ಟ್ ಹಾಗೂ ಎಂಬೆಸ್ಸಿ ಸಮೂಹದಿಂದ ರಾಜಾನುಕುಂಟೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನೂತನ ಕಟ್ಟಡಕ್ಕೆ ಚಾಲನೆ ನೀಡಿದ ಬಳಿಕ ಯಲಹಂಕದ ಶಾಸಕ ಎಸ್‌ಆರ್‌ವಿಶ್ವನಾಥ್ ಹಾಗೂ ಎಂಬೆಸ್ಸಿ ಸಮೂಹದ ಜಿತು ವೀರವಾಣಿ ಹಸ್ತಲಾಘವ ನೀಡಿದರು

ಮಹಾಲಕ್ಷ್ಮೀಪುರಂ ವಾರ್ಡ್‌ನ ಜೆ.ಸಿ.ನಗರದಲ್ಲಿ ಸ್ಫೂರ್ತಿ ಯುವಕರ ವೇದಿಕೆ ವತಿಯಿಂದ ಆರೋಗ್ಯ ಮತ್ತು ನೇತ್ರ ತಪಾಸಣಾ ಉಚಿತ ಶಿಬಿರ ಆಯೋಜಿಸಲಾಗಿತ್ತು. ಕಾಂಗ್ರೆಸ್ ಮುಖಂಡರಾದ ಡಾ. ವಿ.ನಾರಾಯಣಸ್ವಾಮಿ, ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕ ಎಂ.ಶಿವರಾಜು, ಮಾಜಿ ಸದಸ್ಯ ಎಸ್‌ಕೇಶವಮೂರ್ತಿ, ಯುವ ಕಾಂಗ್ರೆಸ್ ಉಪಾಧ್ಯಕ್ಷ ಎಚ್‌ಎಸ್‌ಮಂಜುನಾಥ್ ಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಪರಿಸರ ರಾಮಕೃಷ್ಣ, ಸುಧೀಂದ್ರ ನಟರಾಜ್ ಉಪಸ್ಥಿತರಿದ್ದರು.

ಆರು ದಿನ ಕಳೆದರೂ ಪತ್ತೆಯಾಗದ ಚಿರತೆ, ತೀರದ ಆತಂಕ

ಚಿರತೆ ಸೆರೆಗೆ ಮುಂದುವರಿದ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಆತಂಕ ಹುಟ್ಟಿಸಿ ಕಣ್ಮರೆಯಾಗಿರುವ ಚಿರತೆ ಆರು ದಿನ ಕಳೆದರೂ ಪತ್ತೆಯಾಗಿಲ್ಲ. ತುರಹಳ್ಳಿ ಅರಣ್ಯ ವಲಯದ ಜನರ ಆತಂಕ ಹೆಚ್ಚಿಸಿದೆ.

ತುರಹಳ್ಳಿ ಅರಣ್ಯ ವಲಯಾಧಿಕಾರಿ ಗೋವಿಂದರಾಜು ಒಟ್ಟು 22 ಸಿಬ್ಬಂದಿಯ ಎರಡು ತಂಡಗಳು ಕಾರ್ಯಾಚರಣೆ ನಡೆಸುತ್ತಿದ್ದರೂ ಚಿರತೆ ಸೆರೆ ಸಾಧ್ಯವಾಗಿಲ್ಲ.

ಕೋಡಿಪಾಳ್ಯ, ಹೆಮ್ಮಿಗೆಪುರ, ಗಾಣಕಲ್ ಹಾಗೂ ಬನಶಂಕರಿ 6ನೇ ಹಂತ ಸೇರಿದಂತೆ ತುರಹಳ್ಳಿ ಅರಣ್ಯ ವಲಯದ ಜನರು ರಾತ್ರಿ ವೇಳೆ ಎಂದಿನಂತೆ ಸುತ್ತಾಡಲು ಹಿಂದೇಟು ಹಾಕುತ್ತಿದ್ದಾರೆ.

ಅರಣ್ಯ ಇಲಾಖೆ ಸಿಬ್ಬಂದಿ ಸೋಮವಾರವೂ ಚಿರತೆ ಸೆರೆಗಾಗಿ ಶೋಧನೆ ನಡೆಸಿದರು. ಚಿರತೆ ಸೆರೆ ಹಿಡಿಯುವವರೆಗೆ ಜಾಗೃತವಾಗಿ ಇರುವಂತೆ ಸೂಚನೆ ನೀಡಲಾಗಿದೆ.

ಚಿರತೆ ಭಯಕ್ಕೆ ಗಾಬರಿಗೊಂಡಿರುವ ಗ್ರಾಮಸ್ಥರು ಒಬ್ಬೊಬ್ಬರೇ ತಿರುಗಾಡಲು ಹಿಂದಡಿ ಇಡುತ್ತಿದ್ದಾರೆ. ಶಾಲಾ ಮಕ್ಕಳು ಬೇರೆ ರಸ್ತೆಗಳನ್ನು ನೆಚ್ಚಿಕೊಂಡಿದ್ದಾರೆ. ಚಿರತೆ ಸಿಗುವವರೆಗೆ ಮನೆಯ ಬಳಿಯೇ ವಾಕಿಂಗ್ ಮಾಡಲು ನಿರ್ಧರಿಸಿದಂತಿರುವ ವಾಯುವಿಹಾರಿಗಳು ತುರಹಳ್ಳಿ ಅರಣ್ಯ ವಲಯಕ್ಕೆ ಸೋಮವಾರವೂ ಕಾಲಿಡಲಿಲ್ಲ. ಇದರ ನಡುವೆ ಸಾಮಾಜಿಕ ಜಾಲತಾಣಗಳಲ್ಲಿ ಬರುತ್ತಿರುವ ನಕಲಿ ವಿಡಿಯೊ ಜನರನ್ನು ಮತ್ತಷ್ಟು ಭಯಭೀತಗೊಳಿಸಿದೆ.

ತುರಹಳ್ಳಿ ಅರಣ್ಯ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಚಿರತೆಗಳು ಒಂದೆಡೆಯಿಂದ ಮತ್ತೊಂದೆಡೆಗೆ ಆಹಾರಕ್ಕಾಗಿ ಸಂಚರಿಸುವುದು ಸಾಮಾನ್ಯ. ಹೀಗಾಗಿ, ಚಿರತೆ ಸೆರೆ ವಿಳಂಬವಾಗಿದೆ. ತುರಹಳ್ಳಿ ವ್ಯಾಪ್ತಿಯಲ್ಲಿ ಆಹಾರ ಕೊರತೆ ಇಲ್ಲ. ನೂರಾರು ಬೀದಿ ನಾಯಿಗಳಿವೆ. ಆಹಾರದ ಅಭಾವ ಕಂಡುಬಂದಾಗ ಮಾತ್ರ ಪ್ರಾಣಿಗಳು ಮನುಷ್ಯನ ಮೇಲೆ ಎರಗುತ್ತವೆ. ಚಿರತೆಗಳು ಮನುಷ್ಯರನ್ನು ಬಾಧಿಸುವ ಸಾಧ್ಯತೆ ಕಡಿಮೆ. ಜನ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ ಎಂದು ಕಗ್ಗಲೀಪುರ ಅರಣ್ಯ ವಲಯಾಧಿಕಾರಿ ಗೋವಿಂದರಾಜು ತಿಳಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕ್ಷೇಮ ಕುಶಲ



ಸರಿಯಾದ ನಿರ್ಧಾರಗಳು

ಡಾ. ಕಿರಣ್ ವಿ. ಎಸ್.

ನಿರ್ಧಾರಗಳು ಬದುಕಿನ ಅವಿಭಾಜ್ಯ ಅಂಗ. ಹಲವಾರು ಸಣ್ಣ-ದೊಡ್ಡ ನಿರ್ಧಾರಗಳನ್ನು ದಿನವೂ ಮಾಡುತ್ತಿರುತ್ತೇವೆ. ಯಾವುದು 'ಸರಿಯಾದ ನಿರ್ಧಾರ' ಎನ್ನುವುದು ಭವಿಷ್ಯದಲ್ಲಿ ಆಯಾ ಕೆಲಸದ ಪರಿಣಾಮಗಳಿಂದ ತಿಳಿಯುತ್ತದೆ. ಕೆಲಸಕ್ಕೆ ಮುನ್ನವೇ 'ಸರಿಯಾದ ನಿರ್ಧಾರ' ಕೈಗೊಳ್ಳಲು ಯಾವ ಸಿದ್ಧಸೂತ್ರವೂ ಇಲ್ಲ. ನಿರ್ಧಾರ ಕೈಗೊಳ್ಳುವ ಮುನ್ನ ಅನೇಕ ಆಯಾಮಗಳನ್ನು ವಿವೇಚಿಸಿ, ಪರಿಣಾಮಗಳನ್ನು ಆಲೋಚಿಸಿ, ಅತ್ಯಂತ ಸೂಕ್ತವೆನಿಸುವ ಆಯ್ಕೆಯನ್ನು ಪಾಲಿಸಬೇಕಾಗುತ್ತದೆ. ನಿರ್ಧಾರಗಳು ಬದುಕಿನ ಹಾದಿಯನ್ನು ಬದಲಿಸಬಲ್ಲವು. ನಿರ್ಧಾರದ ಪ್ರಕ್ರಿಯೆಯನ್ನು ತರ್ಕಬದ್ಧವಾಗಿ ಮಾಡುವುದು 'ಸರಿಯಾದ ನಿರ್ಧಾರ'ದ ಹಾದಿಯಲ್ಲಿ ಮಹತ್ವದ ಹೆಜ್ಜೆ. 'ಯಾವುದೇ ನಿರ್ಧಾರದಿಂದ ಆಗಬಹುದಾದ ಅತ್ಯಂತ ದೊಡ್ಡ ಸಮಸ್ಯೆಗೆ ಮನಸ್ಸನ್ನು ಸಜ್ಜುಗೊಳಿಸಬೇಕು' ಎಂದು ಮನಃಶಾಸ್ತ್ರಜ್ಞರು ಹೇಳುತ್ತಾರೆ. ವಿಶ್ವೇಶ್ವರಯ್ಯನವರಂತಹ ಮುತ್ಸದ್ದಿಗಳು ಅಧಿಕಾರಿಗಳೊಂದಿಗಿನ ಸಮಾಲೋಚನೆಗಳಲ್ಲಿ 'What is the worst?' ಎಂದು ಕೇಳುತ್ತಿದ್ದರು. ನಿರ್ಧಾರದ ಬಗೆಗಿನ ಭೀತಿಗಳನ್ನು ಬರೆದಿಟ್ಟುಕೊಳ್ಳುವುದು ಉತ್ತಮ. ಹಲವು ಭೀತಿಗಳಿಗೆ ಯಾವ ಆಧಾರವೂ ಇರುವುದಿಲ್ಲ. ಭೀತಿಗಳನ್ನು ಬರವಣಿಗೆಯ ಮೂಲಕ ಸ್ಪಷ್ಟಪಡಿಸುವುದು ಪರಿಣಾಮಗಳ ಕುರಿತಾಗಿ ಆಲೋಚಿಸಲು ಸಹಾಯಕ.

ನಿರ್ಧಾರಗಳನ್ನು ಮಾಡುವ ಮುನ್ನ ಮಾಹಿತಿ ಸಂಗ್ರಹಿಸುವುದು ಸೂಕ್ತ. ವಿಚಾರ ಸ್ಪಷ್ಟತೆ ಸಮಂಜಸ ನಿರ್ಧಾರಗಳಿಗೆ ಸಹಕಾರಿ. ಪ್ರಸ್ತುತ ಜಾಲತಾಣಗಳು ಮಾಹಿತಿಯ ಮಹಾಪೂರವನ್ನೇ ಹರಿಸಬಲ್ಲವು. ಇದರಲ್ಲಿ ಕಾಳು-ಜೊಳ್ಳುಗಳ ವಿವೇಚನೆ ಇರಬೇಕು. ತಜ್ಞರ ಸೋಗು ಹಾಕಿ ದಾರಿ ತಪ್ಪಿಸಬಲ್ಲ ವ್ಯಕ್ತಿಗಳು ಜಾಲತಾಣಗಳಲ್ಲಿ ದೊರೆಯುತ್ತಾರೆ. ಹೀಗಾಗಿ, ಯಾವುದೇ ಮಾಹಿತಿ ಹುಡುಕುವಾಗ ಅಧಿಕೃತ ಸ್ರೋತಗಳ ತಿಳಿವಳಿಕೆ ಮುಖ್ಯ. ಕೋರಾ, ರೆಡಿಟ್ ಮೊದಲಾದ ಜಾಲತಾಣಗಳು ಜನರ ವೈಯಕ್ತಿಕ ಅನುಭವಗಳನ್ನು ದಾಖಲಿಸುತ್ತವೆ. ನಮ್ಮನ್ನು ಸದ್ಯಕ್ಕೆ ಕಾಡುತ್ತಿರುವ ಸಮಸ್ಯೆಯನ್ನು ಈಗಾಗಲೇ ಸಫಲವಾಗಿ ಪರಿಹರಿಸಿಕೊಂಡವರ ಅನುಭವಗಳು ಹೊಸ ಹೊಳಹುಗಳನ್ನು ನೀಡಬಲ್ಲವು. ಇಂತಹ ಸಲಹೆಗಳನ್ನು ಯಥಾವತ್ತಾಗಿ ಪಾಲಿಸುವುದಕ್ಕಿಂತಲೂ, ನಮ್ಮ ಸಂದರ್ಭಗಳಿಗೆ ಅವುಗಳನ್ನು ಹೊಂದಿಸಿಕೊಳ್ಳುವುದು ಸಮಂಜಸ.

ನಿರ್ಧಾರಗಳನ್ನು ಕೈಗೊಳ್ಳುವಾಗ ಸಂಬಂಧಿಸಿದ ವ್ಯಕ್ತಿಗಳ ಜೊತೆಗೆ ಚರ್ಚಿಸುವುದು ಸಮಸ್ಯೆಯನ್ನು ಹಗುರವಾಗಿಸುತ್ತದೆ. ಚರ್ಚೆಗೆ ಮುನ್ನ ನಿರ್ಧಾರದ ಆಯಾಮಗಳ ತಿಳಿವಳಿಕೆ ಇರಬೇಕು. ಚರ್ಚೆಯ ನಂತರ ಅಂತಿಮ ನಿರ್ಧಾರಕ್ಕೆ ಸ್ವಲ್ಪ ಸಮಯ ನೀಡಬೇಕು. ತೀರಾ ಆಪ್ತರಾದ, ನಂಬಿಕೆಗೆ ಅರ್ಹರಾದ, ವಿಷಯದ ಅನುಭವವಿರುವ ಬೆರಳೆಣಿಕೆಯ ಮಂದಿಯ ಜೊತೆಗೆ ಮಾತ್ರ ಚರ್ಚಿಸುವುದು ಸೂಕ್ತ. ಇಂತಹ ಚರ್ಚೆಗಳಿಂದಲೂ ನಿರ್ಧಾರ ಆಗಲಿಲ್ಲವೆನಿಸಿದರೆ, ಮೂರನೆಯ ವ್ಯಕ್ತಿಯ ದೃಷ್ಟಿಯಿಂದ ವಿವೇಚಿಸಬಲ್ಲ ತಜ್ಞರ ಸಲಹೆ ಪಡೆಯಬಹುದು. ಉದಾಹರಣೆಗೆ, ಆಸ್ತಿ ಖರೀದಿಯ ವಿಚಾರದಲ್ಲಿ 'ನಮ್ಮ ಆದಾಯದ ಮಟ್ಟವನ್ನು ಅನುಸರಿಸಿ ಅದಕ್ಕೆ ಕೈ ಹಾಕಬಹುದೇ' ಎನ್ನುವ ನಿರ್ಧಾರವನ್ನು ತೆಗೆದುಕೊಳ್ಳುವುದು ಸುಲಭವಲ್ಲ. ಇಂತಹ ಸಂದರ್ಭದಲ್ಲಿ ಹಣಕಾಸು ತಜ್ಞರ ಸಲಹೆ ನೆರವಾಗಬಲ್ಲದು.

ಯಾವುದಾದರೂ ನಿರ್ಧಾರ ಕೈಗೊಂಡರೆ, ಅದನ್ನು ಬದಲಿಸಬಹುದಾದ ಸಾಧ್ಯತೆಗಳ ಬಗ್ಗೆಯೂ ತಿಳಿದಿರಬೇಕು. ಉದಾಹರಣೆಗೆ, ಹೆಚ್ಚಿನ ಆದಾಯದ ಆಲೋಚನೆಯಿಂದ ಸಂಜೆಯ ವೇಳೆ ಅರೆಕಾಲಿಕ ನೌಕರಿಗೆ ಸೇರಬಹುದು. ಇದರಿಂದ ಆದಾಯ ಹೆಚ್ಚುತ್ತದೆಯಾದರೂ, ಕುಟುಂಬದ ಜೊತೆ ಕಳೆಯುವ ಸಮಯ ಕಡಿಮೆಯಾಗುತ್ತದೆ. ಇದು ಕೌಟುಂಬಿಕ ಸಂಬಂಧಗಳ ಮೇಲೆ ಪರಿಣಾಮ ಬೀರಬಹುದು. ಈಗ ಎರಡೂ ಪರಿಣಾಮಗಳು ಸ್ಪಷ್ಟವಾಗಿರುವುದರಿಂದ, ಈ ವಿಷಯದ ಕುರಿತಾಗಿ ಮತ್ತೊಮ್ಮೆ ಆಲೋಚಿಸಿ, ಸೂಕ್ತವೆನಿಸುವ ನಿರ್ಧಾರ ಮಾಡಬಹುದು.

'ಹಸಿವು, ಕೋಪ, ಮತ್ತು ದುಃಖದ ಸಂದರ್ಭಗಳಲ್ಲಿ ನಿರ್ಧಾರಗಳನ್ನು ಮಾಡಬಾರದು' ಎನ್ನುವ ಮಾತಿದೆ. ತರ್ಕಬದ್ಧವಾಗಿ ನಿರ್ಧರಿಸಬೇಕಾದ ವಿಷಯವನ್ನು ಭಾವನಾತ್ಮಕವಾಗಿ ಆಲೋಚಿಸಿ ಪೇಚಿಗೆ ಈಡಾದವರಿದ್ದಾರೆ. ಸಣ್ಣದಾಗಲಿ, ದೊಡ್ಡದಾಗಲಿ ನಿರ್ಧಾರಗಳನ್ನು ಕೈಗೊಳ್ಳುವಾಗ ಶಾಂತ ಮನಃಸ್ಥಿತಿಯಲ್ಲಿ ಇರಬೇಕಾದ್ದು ಮುಖ್ಯ. ಉದ್ವಿಗ್ನ ಮನಸ್ಸು ಹಲವಾರು ಸೂಕ್ಷ್ಮಗಳಿಗೆ ಕುರುಡಾಗಿರುತ್ತದೆ. ಶಾಂತ ವಾತಾವರಣದಲ್ಲಿ, ಕೆಲನಿಮಿಷಗಳ ದೀರ್ಘವಾಗಿ ಉಸಿರಾಡಿದರೆ ಮನಸ್ಸು ನಿರಾಳವಾಗಿ, ಆಲೋಚನೆಗಳು ಸ್ಪಷ್ಟವಾಗುತ್ತವೆ. ಉತ್ತಮ ನಿರ್ಧಾರಗಳನ್ನು ಕೈಗೊಳ್ಳುವ ಹಲವಾರು ಮಂದಿ ಇಂತಹ ಪದ್ಧತಿಗಳನ್ನು ಅನುಸರಿಸುತ್ತಾರೆ.

ನಿರ್ಧಾರಗಳಿಗೆ ಮುನ್ನ 'ಇದನ್ನು ಏಕೆ ಮಾಡುತ್ತಿದ್ದೇನೆ' ಎನ್ನುವ ಪ್ರಶ್ನೆಯನ್ನು ನಾಲ್ಕೈದು ಬಾರಿ ಮನನ ಮಾಡಿದರೆ ಸರಿಯಾದ ಹಿನ್ನೆಲೆ ಒದಗುತ್ತದೆ. ಪರಸ್ಪರ ಸಂಬಂಧವಿಲ್ಲದ ವಿಷಯಗಳು ತಲೆಯಲ್ಲಿ ಮೂಡಿ ಗೌಜಿ ಎಬ್ಬಿಸಬಹುದು. ಇವುಗಳಲ್ಲಿ ನಿರ್ಧಾರಗಳಿಗೆ ಪೂರಕವಲ್ಲದ ಆಲೋಚನೆಗಳೂ ಇರುತ್ತವೆ. ಅವು ನಿರ್ಧಾರದ ದಾರಿಯನ್ನು ಮಬ್ಬಾಗಿಸಬಹುದು. ಕ್ರಮಬದ್ಧವಿಧಾನದಲ್ಲಿ ಆಲೋಚಿಸಿದಾಗ ಅಪ್ರಸ್ತುತವಾದ ವಿಷಯಗಳು ಚಿಂತನೆಯ ಹಾದಿಯಿಂದ ದೂರಾಗುತ್ತವೆ. ಸರಿಯಾದ ದಿಶೆಯಲ್ಲಿ ಗಮನ ಹರಿದಾಗ ನಿರ್ಧಾರಗಳು ಸುಲಭವಾಗುತ್ತವೆ.

ನಿರ್ಧಾರಗಳ ವೇಳೆ ನಮ್ಮ ಆಯ್ಕೆಗಳನ್ನು ಬರೆದಿಟ್ಟುಕೊಳ್ಳುವುದು ಸೂಕ್ತ. ಕೆಲವೊಮ್ಮೆ ಪ್ರಬಲವೆನಿಸಿದ ಆಯ್ಕೆಗಿಂತಲೂ ಪಟ್ಟಿಯಲ್ಲಿನ ಮತ್ತೊಂದು ಉತ್ತಮ ಅನಿಸಬಹುದು. ಆಯ್ಕೆಗಳು ಒಂದೆಡೆ ಮೂಡಿದಾಗ ಪ್ರಾಬಲ್ಯ-ದೌರ್ಬಲ್ಯಗಳ ವಿವೇಚನೆ ಬರುತ್ತದೆ. ಸಮಂಜಸವಲ್ಲವೆನಿಸಿದ ಆಯ್ಕೆಯನ್ನು ತೆಗೆದುಹಾಕುವ ಕೆಲಸವನ್ನು ಮನಸ್ಸಿನಲ್ಲಿ ಮಾಡುವುದು ಕಷ್ಟ. ಚಿಂತನೆಯ ಅವಗಾಹನೆಗೆ ಬಾರದಿದ್ದ ಆಯ್ಕೆಗಳು ಪಟ್ಟಿಯನ್ನು ನೋಡುವಾಗ ತೋಚಬಹುದು. ಆರಂಭಿಕ ಪಟ್ಟಿ ದೊಡ್ಡದಿದ್ದರೆ, ಅನಗತ್ಯ ಆಯ್ಕೆಗಳನ್ನು ತ್ವರಿತವಾಗಿ ನಿವಾರಿಸಿಕೊಂಡು, ಪ್ರಾಯೋಗಿಕವಾದುದ್ದನ್ನು ಮಾತ್ರ ಉಳಿಸಿಕೊಳ್ಳಬೇಕು.

ಎರಡು-ಮೂರು ಆಯ್ಕೆಗಳ ಪೈಕಿ ಯಾವೊಂದನ್ನೂ ನಿರ್ಧರಿಸಲು ಸಾಧ್ಯವಾಗುತ್ತಿಲ್ಲವೆನಿಸಿದಾಗ, ಒಂದೊಂದು ಆಯ್ಕೆಯ ಲಾಭ-ನಷ್ಟಗಳನ್ನು ಪಟ್ಟಿ ಮಾಡಬೇಕು. ಲಾಭವೆನಿಸಿದ ಅಂಶಕ್ಕೆ ಅಂಕಗಳನ್ನು ನೀಡಬಹುದು; ನಷ್ಟವೆನಿಸಿದ ಅಂಶಕ್ಕೆ ಋಣ-ಅಂಕಗಳನ್ನು ನೀಡಬಹುದು. ಅಂಕಗಳನ್ನು ನೀಡುವಾಗ ಮುಕ್ತಮನಸ್ಸಿನಿಂದ ಪ್ರಾಮಾಣಿಕವಾಗಿ ವರ್ತಿಸುವುದು ಮುಖ್ಯ. ಅಂತಿಮವಾಗಿ ಯಾವ ಆಯ್ಕೆಯ ಅಂಕಗಳು ಅಧಿಕವೋ, ಅದನ್ನು ಪರಿಗಣಿಸಬಹುದು. ಪ್ರಮುಖ ನಿರ್ಧಾರಗಳಿಗೆ ಸಾಕಷ್ಟು ಕಾಲಾವಕಾಶ ನೀಡಬೇಕು. ಹಠಾತ್ ನಿರ್ಧಾರಗಳು ಅಪರೂಪಕ್ಕೆ ಮಾತ್ರ ಸರಿಯಾಗಿರುತ್ತವೆ. ತಾರ್ಕಿಕ ಆಲೋಚನೆಯಿಂದ ಮೂಡಿದ ನಿರ್ಧಾರಗಳು ಸಮಂಜಸವಾಗಿರುವ ಸಾಧ್ಯತೆಗಳು ಅಧಿಕ.

ನಿರ್ಧಾರ ಮಾಡಿ ಮುನ್ನಡೆದಾಗ ಯಾವುದಾದರೂ ಕಾರಣಕ್ಕೆ ಕೆಲಸ ಕೈಗೂಡದಿದ್ದರೆ, ನಂತರದ ಒಳ್ಳೆಯ ಆಯ್ಕೆ ಯಾವುದು ಎಂಬ ಆಲೋಚನೆ ಒಳಿತು. ನಿಯಂತ್ರಣದಲ್ಲಿ ಇಲ್ಲದಿರುವ ಪ್ರಭಾವಗಳು ಕೆಲಸ ಕೆಡಿಸಬಹುದು. ಆಗ ಹಿನ್ನಡೆಯುವುದಕ್ಕಿಂತಲೂ, ಸ್ವಲ್ಪ ಕಡಿಮೆ ಪರಿಣಾಮದ ಆಯ್ಕೆಯನ್ನು ಒಪ್ಪಿಕೊಳ್ಳುವುದು ಕೆಲಸದ ದೃಷ್ಟಿಯಿಂದ ಸೂಕ್ತ. ನಿರ್ಧಾರ ಮಾಡಿದ ಅದರ ಯಾವುದೇ ಪರಿಣಾಮವನ್ನೂ ಒಗ್ಗಿಸಿಕೊಳ್ಳುವ ಮನಃಸ್ಥಿತಿ ಬೆಳೆಯಬೇಕು. ಪ್ರತಿಯೊಂದು ಒಳ್ಳೆಯ ನಿರ್ಧಾರವೂ ನಮ್ಮ ಆತ್ಮವಿಶ್ವಾಸ ವೃದ್ಧಿಸಿದರೆ, ಪ್ರತಿ ತಪ್ಪು ನಿರ್ಧಾರವೂ ನಮ್ಮ ಜೀವನಕ್ಕೆ ಒಳಿತಿನ ಪಾಠವನ್ನು ಕಲಿಸುತ್ತದೆ ಎನ್ನುವ ಸತ್ಯವನ್ನು ಮನಗಾಣುವುದೇ ಅರಿವಿನ ವಿಸ್ತಾರ.

❖

ಶಿಶುವಿನ ಚರ್ಮದ ಮರ್ಮಗಳು

ಡಾ. ಕುಶ್ವಂತ್ ಕೋಳಿಬೈಲು

ಈಗಷ್ಟೇ ಕಣ್ಣುಬಿಡುತ್ತಿರುವ ಹಸುಗೂಸಿಗೆ ಎದೆಹಾಲುಣಿಸಿದ ನಂತರ ಮಗುವಿನ ತಾಯಿಯನ್ನು ಕಾಡುವ ಅತ್ಯಂತ ಸಹಜ ಪ್ರಶ್ನೆ ಮಗುವಿಗೆ ಸ್ನಾನ ಮಾಡಿಸುವ ಕುರಿತಾಗಿರುತ್ತದೆ. ವಿವಿಧ ಪ್ರದೇಶದ ಜನರಲ್ಲಿ ಅವರವರ ಸಂಸ್ಕೃತಿ ಮತ್ತು ಕಟ್ಟುಪಾಡುಗಳಿಗೆ ಅನುಗುಣವಾಗಿ ಮಗುವಿಗೆ ಸ್ನಾನ ಮಾಡಿಸುವ ಕ್ರಮಗಳು ರೂಪಿತವಾಗಿವೆ. ಮಗುವಿನ ತ್ವಚೆಗೆ ಬಳಸುವ ಉತ್ಪನ್ನಗಳ ವಿಚಾರಕ್ಕೆ ಬಂದಾಗಲೂ ಕೆಲವೊಂದಕ್ಕೆ ವೈಜ್ಞಾನಿಕ ಆಧಾರಗಳಿದ್ದರೆ, ಉಳಿದವುಗಳನ್ನು ಜನರು ತಮ್ಮ ನಂಬಿಕೆ ಅನುಸಾರವಾಗಿ ಪಾಲಿಸಿಕೊಂಡು ಬರುತ್ತಿದ್ದಾರೆ.

ದೇಹದ ಆರೋಗ್ಯ ರಕ್ಷಣೆಯಲ್ಲಿ ತ್ವಚೆಯ ಪಾತ್ರ ಪ್ರಮುಖವಾದದ್ದು. ಅದರ ಕರ್ತವ್ಯವು ಬಾಹ್ಯಸೌಂದರ್ಯವನ್ನು ಹೆಚ್ಚಿಸುವುದಕ್ಕೆ ಮಾತ್ರ ಸೀಮಿತವಾಗಿರದೆ ದೇಹದ ತಾಪಮಾನ ಮತ್ತು ನೀರಿನಾಂಶದ ನಿಯಂತ್ರಣ, ಸೂಕ್ಷ್ಮಾಣುಜೀವಿಗಳಿಂದ ರಕ್ಷಣೆ, ವಿಟಮಿನ್ ಡಿ ಉತ್ಪಾದನೆ – ಹೀಗೆ ತ್ವಚೆಗೆ ಬಹುಮುಖ ಜವಾಬ್ದಾರಿಗಳಿವೆ. ನವಜಾತ ಶಿಶುಗಳ ತ್ವಚೆಯು ವಯಸ್ಕರ ತ್ವಚೆಗಿಂತ ಸೂಕ್ಷ್ಮವಾಗಿರುತ್ತದೆ. ಆದುದರಿಂದ ನಾವು ಬಳಸುವ ರಾಸಾಯನಿಕಗಳು ಶಿಶುಗಳ ತ್ವಚೆಗೆ ಹಾನಿ ಮಾಡಬಹುದು; ಜೊತೆಗೆ ಮಗುವಿನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ವಯಸ್ಕರ ತ್ವಚೆಗೆ ಹೋಲಿಸಿದಾಗ ಶಿಶುಗಳ ತ್ವಚೆಯ ರಕ್ಷಣಾ ಕವಚವಾದ ಎಪಿಡರ್ಮಿಸ್ ಪದರವು ತೆಳುವಾಗಿರುತ್ತದೆ ಮತ್ತು ತ್ವಚೆಯಲ್ಲಿ ಮೆಲನಿನ್ ಪ್ರಮಾಣವೂ ಕಡಿಮೆಯಿರುತ್ತದೆ. ಈ ಕಾರಣಗಳಿಂದ ಶಿಶುಗಳ ತ್ವಚೆಗೆ ತಿಕ್ಕಾಟ ಮತ್ತು ಯುವಿ ವಿಕರಣಗಳಿಂದ ಹೆಚ್ಚು ಹಾನಿಯಾಗುವ ಸಂಭವವಿರುತ್ತದೆ. ಮಗುವಿನ ತ್ವಚೆಯ ಮೇಲೆ ಯಾವುದೇ ಬ್ಯಾಕ್ಟೀರಿಯಾ ಬೆಳೆಯದಿರಲಿ ಎಂಬ ಕಾರಣಕ್ಕೆ ಪ್ರಕೃತಿಯು ಅದರ ಪಿಎಚ್ ಆಮ್ಲೀಯವಾಗಿರುವಂತೆ (Acidic) ನೋಡಿಕೊಂಡಿದೆ.

ನವಜಾತ ಶಿಶುವಿನ ಜನನವಾದ ತಕ್ಷಣ ಪ್ರಕೃತಿಯು ಆ ಮಗುವಿನ ತ್ವಚೆಯ ಮೇಲೆ 'ವರ್ನಿಕ್ಸ್ ಕೇಸಿಯೋಸಾ' ಎಂಬ ಎಣ್ಣೆಯಂಶ ಹೆಚ್ಚಾಗಿರುವ ಪದರವನ್ನು ನೀಡಿರುತ್ತದೆ. ಶಿಶುವಿನ ದೇಹದ ತಾಪಮಾನ ನಿಯಂತ್ರಣ ಮತ್ತು ಮಗುವಿನ ತ್ವಚೆಯಿಂದ ನೀರಿನಾಂಶ ಹೆಚ್ಚು ಸೋರುವುದನ್ನು ತಡೆಯುವಲ್ಲಿ ಇದು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಕಾರಣ, ಮಗುವು ಆಸ್ಪತ್ರೆಯಿಂದ ಮನೆಗೆ ತೆರಳುವ ತನಕ ಸ್ನಾನವನ್ನು ಮಾಡಿಸದಿದ್ದರೂ ಮಗುವಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ.

ಮನೆಯಲ್ಲಿ ನವಜಾತ ಶಿಶುವಿಗೆ ಸ್ನಾನ ಮಾಡಿಸುವಾಗ ಕೆಲವೊಂದು ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕು. ಸ್ನಾನಕ್ಕೆ ಉಗುರುಬೆಚ್ಚಗಿನ ನೀರನ್ನೇ ಬಳಸಬೇಕು. ಶಿಶುವನ್ನು ವಿವಸ್ತ್ರಗೊಳಿಸಿದ ನಂತರ ಮಗುವಿನ ದೇಹದ ತಾಪಮಾನವು ಶೀಘ್ರವಾಗಿ ಕಡಿಮೆಯಾಗುವ ಕಾರಣದಿಂದ ಸ್ನಾನದ ಕಾರ್ಯವನ್ನು ಐದು ನಿಮಿಷಕ್ಕಿಂತ ಕಡಿಮೆ ಅವಧಿಯಲ್ಲಿ ಮಾಡಿ ಮುಗಿಸಬೇಕು. ಮಗುವಿನ ತಲೆಯು ಮಗುವಿನ ದೇಹ ಅತಿ ದೊಡ್ಡ ಭಾಗವಾಗಿರುವ ಕಾರಣದಿಂದ ಅದನ್ನು ಹೆಚ್ಚು ಸಮಯ ಒದ್ದೆಯಾಗಿಟ್ಟಲ್ಲಿ ಮಗುವಿನ ದೇಹದ ತಾಪಮಾನವು ವೇಗವಾಗಿ ಕಡಿಮೆಯಾಗಬಹುದು. ಹಾಗಾಗಿ ಮಗುವಿನ ತಲೆಯನ್ನು ಕೊನೆಯಲ್ಲಿ ತೊಳೆಯುವುದು ಮತ್ತು ಶೀಘ್ರವಾಗಿ ಒಣಗಿಸುವುದು ಉತ್ತಮ. ಮಗುವಿಗೆ ತನ್ನ ನಾಸಿಕವನ್ನು ನೀರು ಬಂದಾಗ ಮುಚ್ಚಿಕೊಳ್ಳುವ ಸಾಮರ್ಥ್ಯವಿಲ್ಲದ ಕಾರಣದಿಂದ ಸ್ನಾನ ಮಾಡಿಸುವಾಗ ಮಗುವಿನ ನಾಸಿಕದ ಮೂಲಕ ಅದರ ಶ್ವಾಸಕೋಶದೊಳಗೆ ನೀರು ಪ್ರವೇಶಿಸದಂತೆ ಎಚ್ಚರ ವಹಿಸಬೇಕು. ಮಗುವಿನ ಹೊಕ್ಕಳ ಬಳ್ಳಿಯು ಒಂದೆರಡು ವಾರದಲ್ಲಿ ಒಣಗಿ ಬೀಳುವುದರಿಂದ ಅದರ ಸ್ವಚ್ಛತೆಯ ಬಗ್ಗೆಯೂ ಗಮನ ಇರಬೇಕು.

ಮಾರುಕಟ್ಟೆಯಲ್ಲಿರುವ ಹೆಚ್ಚಿನ ಸಾಬೂನುಗಳು ಮತ್ತು ಹ್ಯಾಂಡ್ ವಾಶ್‌ಗಳು ಕ್ಷಾರೀಯ ಗುಣವನ್ನು (Alkaline) ಹೊಂದಿರುತ್ತದೆ. ಇದರಿಂದ ಆಮ್ಲೀಯತೆಯಿರುವ ಶಿಶುವಿನ ತ್ವಚೆಗೆ ಹಾನಿಯಾಗುತ್ತದೆ. ಅಂತಹ ಸಾಬೂನುಗಳು ಶಿಶುಗಳ ತ್ವಚೆಯಲ್ಲಿರುವ ಎಣ್ಣೆಯಂಶವನ್ನು ಹೀರಿ ತ್ವಚೆಯನ್ನು ಶುಷ್ಕವಾಗಿಸುತ್ತದೆ. ಈ ರಾಸಾಯನಿಕ ಕ್ರಿಯೆಗಳಿಂದ ಶಿಶುಗಳ ತ್ವಚೆಯು ಪಿಎಚ್ ಬದಲಾಗಿ ಅದು ಕ್ಷಾರಗುಣದತ್ತ ತಿರುಗಿದಲ್ಲಿ ಆ ತ್ವಚೆಯು ಕೆಲವು ಅಪಾಯಕಾರಿ ಬ್ಯಾಕ್ಟೀರಿಯಾದ ಬೆಳವಣಿಗೆಗೆ ಸಹಕಾರಿಯಾಗಬಲ್ಲದು. ಈ ಕಾರಣಗಳಿಂದಾಗಿ ಜಾಹಿರಾತು ಪ್ರಪಂಚದ ಮೇಲಾಟಗಳಿಗೆ ಮಾರುಹೋಗದೆ ಶಿಶುಗಳ ತ್ವಚೆಯ ಮೇಲೆ ಯಾವುದೇ ಸೌಂದರ್ಯವರ್ಧಕ ಉತ್ಪನ್ನಗಳನ್ನು ವೈದ್ಯರ ಸಲಹೆ ಪಡೆಯದೆ ಬಳಸಬಾರದು.

ಮಗುವಿನ ತ್ವಚೆಯು ತನ್ನಲ್ಲಿರುವ ಸೂಕ್ಷ್ಮರಂಧ್ರಗಳ ಮೂಲಕ ಉಸಿರಾಡುವುದರಿಂದ ಮಗುವಿನ ತ್ವಚೆಯ ಮೇಲೆ ಪೌಡರ್ ಬಳಸುವುದರಿಂದ ಆ ರಂಧ್ರಗಳು ಮುಚ್ಚಿಕೊಂಡು ಬೊಕ್ಕೆಗಳು ಏಳಬಹುದು. ಸುಗಂಧ ದ್ರವ್ಯಗಳನ್ನು ಇಷ್ಟಪಡುವ ಹಿರಿಯರು ಅದನ್ನು ಮಗುವಿಗೆ ಹಚ್ಚಿ ಸಂತೋಷ ಪಡುವ ತಪ್ಪು ಕೆಲಸವನ್ನು ಮಾಡುತ್ತಾರೆ. ದುರದೃಷ್ಟವಶಾತ್ ಮಗುವಿನ ನಾಸಿಕಕ್ಕೆ ಈ ಮಾದರಿಯ ಗಾಢವಾದ ಪರಿಮಳಗಳಿಂದ ವಿಪರೀತ ಕಿರಿಕಿರಿಯಾದರೂ ಮಗುವಿಗೆ ಅದನ್ನು ಅಭಿವ್ಯಕ್ತಿಗೊಳಿಸಲು ಸಾಧ್ಯವಿಲ್ಲ. ಹುಬ್ಬುಗಳಿಗೆ ಹಚ್ಚುವ ಕಾಡಿಗೆಯೂ ಆದಷ್ಟು ತೆಳುವಾಗಿರದಿದ್ದರೆ ಅದು ಕಣ್ಣಿನ ಸಂಪರ್ಕಕ್ಕೆ ಬಂದು ಮಗುವಿನ ಕಣ್ಣುಗಳಿಗೆ ಹಾನಿಯನ್ನು ಮಾಡಬಹುದು.

ಇತ್ತೀಚಿನ ವರ್ಷಗಳಲ್ಲಿ ಡೈಪರ್ ಬಳಕೆಯೂ ಹೆಚ್ಚಾಗಿರುವುದರಿಂದ ಡೈಪರ್ ಬಳಸುವ ಜಾಗದ ತ್ವಚೆಯಲ್ಲಿ ಉರಿಯೂತ ಕಾಣಿಸಿಕೊಳ್ಳುತ್ತದೆ. ಮಗುವಿನ ಮಲ–ಮೂತ್ರಗಳು ಕ್ಷಾರಗುಣವನ್ನು ಹೊಂದಿರುವುದರಿಂದ ಸದಾ ಕಾಲ ಡೈಪರ್ ಧರಿಸಿರುವ ಮಗುವಿನ ತ್ವಚೆಗೆ ಹಾನಿಯುಂಟಾಗುತ್ತದೆ. ಮನೆಯಲ್ಲಿರುವಾಗ ಮಗುವಿಗೆ ಡೈಪರ್ ರೆಸ್ಟ್ ಕೊಡುವುದರಿಂದ ಡೈಪರ್ ಕಾರಣದಿಂದ ಬರುವ ತ್ವಚೆಯ ಸಮಸ್ಯೆಗಳನ್ನು ತಪ್ಪಿಸಬಹುದು. ಶಿಶುಗಳ ದೇಹಕ್ಕೆ ಎಣ್ಣೆ ಹಚ್ಚಿ ಮಸಾಜ್ ಮಾಡುವುದು ಭಾರತದಲ್ಲಿ ಸರ್ವೇಸಾಮಾನ್ಯವಾಗಿದೆ. ಹೆಚ್ಚಿನ ಗ್ರಾಮೀಣ ಭಾಗದಲ್ಲಿ ಸಾಂಪ್ರದಾಯಿಕವಾಗಿ ತೆಂಗಿನ ಎಣ್ಣೆಯನ್ನು ಹಚ್ಚಿ ಮಸಾಜ್ ಮಾಡಿಸಿದ ನಂತರ ಮಗುವಿಗೆ ಸ್ನಾನ ಮಾಡಿಸುತ್ತಾರೆ. ತೆಂಗಿನ ಎಣ್ಣೆಯು ತ್ವಚೆಯ ಶುಷ್ಕತೆಯನ್ನು ಕಡಿಮೆಮಾಡುವ ಕಾರಣದಿಂದ ಮತ್ತು ತ್ವಚೆಗೆ ಅಲರ್ಜಿಯನ್ನು ಉಂಟುಮಾಡುವ ಸಂಭವವು ತೆಂಗಿನ ಎಣ್ಣೆಯಲ್ಲಿ ಅತಿ ಕಡಿಮೆಯಿರುವ ಕಾರಣದಿಂದ ಮಕ್ಕಳ ತ್ವಚೆಗೆ ಇದು ಹೆಚ್ಚು ಸೂಕ್ತವಾಗಿದೆ.

ಮಗುವಿನ ತ್ವಚೆಯ ಆರೋಗ್ಯವು ಮಗುವಿನ ಸಮಗ್ರ ಆರೋಗ್ಯ ಮತ್ತು ಉತ್ತಮ ಬೆಳವಣಿಗೆಯ ಪ್ರತಿಬಿಂಬವಾಗಿರುತ್ತದೆ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಎಸ್ಸೆಸ್ಸೆಲ್ಸಿ

ಮಾದರಿ ಪ್ರಶ್ನೋತ್ತರ–

17) ABCD ಚತುರ್ಭುಜದಲ್ಲಿ $\frac{AO}{BO}=\frac{CO}{DO}$ ಆಗುವಂತೆ ಕರ್ಣಗಳು ಪರಸ್ಪರ O ಬಿಂದುವಿನಲ್ಲಿ ಛೇದಿಸುತ್ತವೆ. ಆದರೆ ABCD ಯು ಒಂದು ತ್ರಾಪಿಜ್ಯ ಎಂದು ಸಾಧಿಸಿ.



ABCD ಯು ಒಂದು ತ್ರಾಪಿಜ್ಯ ಎಂದು ಸಾಧಿಸಬೇಕಿದೆ. ಇಲ್ಲಿ O ಬಿಂದುವಿನಿಂದ AD ಗೆ ಒಂದು ರೇಖೆಯನ್ನು ಎಳೆಯಲಾಗಿದೆ. ಅದು E ಬಿಂದುವಿನಲ್ಲಿ ಸಂಧಿಸುತ್ತಿದೆ.

EO || DC || AB

ΔDAB ದಲ್ಲಿ, EO || AB

ಮೂಲ ಸಮಾನುಪಾತತೆಯ ಪ್ರಮೇಯದಂತೆ

$$\frac{DE}{EA}=\frac{DO}{OB}\text{..............(1)}$$

$$\frac{AO}{BO}=\frac{CO}{DO}.$$

$$\Rightarrow \frac{AO}{CO}=\frac{BO}{DO}$$

$$\Rightarrow \frac{CO}{AO}=\frac{DO}{BO}$$

$$\Rightarrow \frac{DO}{OB}=\frac{CO}{AO}\text{......................(2)}$$

ಸಮೀಕರಣ 1 ಮತ್ತು 2ರಿಂದ,

DE/EA = CO/AO

ಮೂಲ ಸಮಾನುಪಾತತೆಯ ಪ್ರಮೇಯದಂತೆ ಅದರಂತೆಯೇ

EO || DC ಅದರಂತೆಯೇ **EO || AB**

⇒ AB || DC.

ಹೀಗಾಗಿ ABCD ಚತುರ್ಭುಜವು ಒಂದು ತ್ರಾಪಿಜ್ಯವಾಗಿದೆ.

ಅಥವಾ

ಯೂಕ್ಲಿಡ್‌ನ ಭಾಗಾಕಾರ ಸಿದ್ಧಾಂತ ಪ್ರತಿಜ್ಞೆಯನ್ನು ಉಪಯೋಗಿಸಿ, ಯಾವುದೇ ಧನಸಂಖ್ಯೆಯ ವರ್ಗವು 3m ಅಥವಾ 3m + 1 ರೂಪದಲ್ಲಿರುತ್ತದೆಂದು ಮತ್ತು 3m + 2 ರೂಪದಲ್ಲಿರುವುದಿಲ್ಲ ಎಂದು ತೋರಿಸಿ. ಇಲ್ಲಿ m ಒಂದು ಪೂರ್ಣಾಂಕ.

ಪರಿಹಾರ:–'a'ಯು ಒಂದು ಧನಪೂರ್ಣಾಂಕವಾರಲಿ. ಆಗ ಅದು 3q (or) 3q+1 (or) 3q+2 ರೂಪದಲ್ಲಿರುತ್ತದೆ.

ಆಗ ಈ ಪ್ರಕಾರದಲ್ಲಿರಬಹುದು

ಪ್ರಕಾರ 1: a = 3q ಆದಾಗ,

$a^2 = (3q)^2 = 9q^2 = 3q\,(3q) = 3m$ ಇಲ್ಲಿ $m = 3q^2$

ಪ್ರಕಾರ 2 : a = 3q + 1 ಆದಾಗ

$\Rightarrow a^2 = (3q+1)^2 = (3q)^2 + 2\,(3q)(1)+(1)^2 = 3q\,(3q+2)+1$

$= 3m + 1$ ಇಲ್ಲಿ $m = q\,(3q+2)$

ಪ್ರಕಾರ 3: a = 3q + 2 ಆದಾಗ

$\Rightarrow a^2 = (3q+2)^2 = (3q)^2 + 2\,(3q)\,(2) + (2)^2$

$= 9q^2 + 12q + 4 = 9q^2 + 12q + 3 + 1$

$= 3(3q^2 + 4q + 1) + 1$

$= 3m + 1$ ಇಲ್ಲಿ

$m = 3q^2 + 4q + 1$

ಆದ್ದರಿಂದ 'a' ಯು 3m ಅಥವಾ 3m+1 ಆಗಿದೆ.

18) ಅಪವರ್ತನ ವಿಧಾನದಿಂದ $2x^2-5x+3=0$ **ಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ.**

ಪರಿಹಾರ:– ಮೊದಲು ಮಧ್ಯಪದ $-5x$ ನ್ನು $-2x-3x$ ಎಂಬುದಾಗಿ ವಿಭಜಿಸೋಣ. ಏಕೆಂದರೆ $(-2x)\times(-3x)=6x^2=(2x^2)\times 3]$

$\therefore\ 2x^2-5x+3 = 2x^2-2x-3x+3$

$= 2x\,(x-1)-3(x-1)$

$= (2x-3)(x-1)$

ಈಗ, $2x^2-5x+3=0$ ಯನ್ನು $(2x-3)(x-1)=0$ ಎಂದು ಬರೆಯಬಹುದು.

ಹೀಗೆ, $2x^2-5x+3=0$ ಇದರ 'x'ನ ಬೆಲೆಗಳು ಮತ್ತು $(2x-3)(x-1)=0$ ಇದರ 'x'ನ ಬೆಲೆಗಳು ಒಂದೇ ಆಗಿವೆ.

ಅಂದರೆ $2x-3=0$ ಅಥವಾ $x-1=0$

$x = 32$ ಅಥವಾ $x = 1$

$\therefore x = 32$ ಮತ್ತು $x = 1$ಇವು ದತ್ತ ಸಮೀಕರಣದ ಪರಿಹಾರಗಳಾಗಿವೆ.

ಅಥವಾ 1 ಮತ್ತು 32 ಇವು $2x^2-5x+3=0$ ಸಮೀಕರಣದ ಮೂಲಗಳಾಗಿವೆ.

ಅಥವಾ

ಕೆಳಗಿನ ಚಿತ್ರದಲ್ಲಿ AB ಮತ್ತು CD ಜ್ಯಾಗಳು P ಬಿಂದುವಿನಲ್ಲಿ ಪರಸ್ಪರ ಛೇದಿಸುತ್ತವೆ. ಆದರೆ ΔAPC ~ Δ DPB ಎಂದು ಸಾಧಿಸಿ



ಪರಿಹಾರ:– ಮೊದಲು CBಅನ್ನು ಸೇರಿಸಿ

ΔAPC ಮತ್ತು ΔDPB ದಲ್ಲಿ ಲಂಬವಾಗಿ ವಿರುದ್ಧ ಕೋನಗಳು

∠APC = ∠DPB (ಲಂಬವಾಗಿ ವಿರುದ್ಧ ಕೋನಗಳು)

∠CAP=∠BDP

ΔAPC ~ ΔDPB (ಕೋ ಕೋ ಸಿದ್ಧಾಂತ)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ಗಣಿತವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ

ಪಿಯುಸಿ

ಭೌತಶಾಸ್ತ್ರ

13) ಅಯಸ್ಕಾಂತೀಯ ಕ್ಷೇತ್ರದ ರೇಖೆಗಳ ಲಕ್ಷಣಗಳನ್ನು ತಿಳಿಸಿ

ಉತ್ತರ: ಅಯಸ್ಕಾಂತೀಯ ಕ್ಷೇತ್ರದ ರೇಖೆಗಳು ಕಾಂತಕ್ಷೇತ್ರದ ದೃಶ್ಯ ಮತ್ತು ಅಂತದೃಷ್ಟಿಯ ಸಾಕ್ಷಾತ್ಕಾರವಾಗಿವೆ.ಅವುಗಳ ಗುಣಲಕ್ಷಣಗಳೆಂದರೆ

(i) ಅಯಸ್ಕಾಂತ (ಅಥವಾ ಸಾಲೆನಾಯ್ಡ್) ದ ಕಾಂತಕ್ಷೇತ್ರದ ರೇಖೆಗಳು ನಿರಂತರ ಮುಚ್ಚಿದ ಕುಣಿಕೆಗಳನ್ನು ರೂಪಿಸುತ್ತವೆ. ಇದು ವಿದ್ಯುತ್ ಕ್ಷೇತ್ರದ ದ್ವಿಧ್ರುವಿಗಿಂತಲೂ ಭಿನ್ನವಾಗಿರುತ್ತದೆ, ಈ ಕ್ಷೇತ್ರದಲ್ಲಿ ರೇಖೆಗಳು ಧನಾತ್ಮಕ ಆವೇಶದಿಂದ ಪ್ರಾರಂಭವಾಗುತ್ತವೆ. ಮತ್ತು ಋಣಾತ್ಮಕ ಆವೇಶದಲ್ಲಿ ಕೊನೆಗೊಳ್ಳುತ್ತವೆ ಅಥವಾ ಅನಂತದ ಕಡೆ ಸೇರುತ್ತವೆ.

(ii) ಕ್ಷೇತ್ರ ರೇಖೆಯ ಒಂದು ನಿರ್ದಿಷ್ಟ ಬಿಂದುವಿನಲ್ಲಿ ಎಳೆದ ಸ್ಪರ್ಶಕವು ಆ ಬಿಂದುವಿನಲ್ಲಿ ನಿವ್ವಳ ಕಾಂತಕ್ಷೇತ್ರದ Bನ ದಿಕ್ಕನ್ನು ಪ್ರತಿನಿಧಿಸುತ್ತದೆ.

(iii) ಏಕಪ್ರಮಾಣದ ಪ್ರದೇಶವನ್ನು ದಾಟುವ ಕ್ಷೇತ್ರರೇಖೆಗಳು ಅಧಿಕವಾಗಿದ್ದಲ್ಲಿ ಕಾಂತಕ್ಷೇತ್ರ Bನ ಪರಿಮಾಣವೂ ಬಲವಾಗಿರುತ್ತದೆ.

(iv) ಕಾಂತಕ್ಷೇತ್ರದ ರೇಖೆಗಳು ಛೇಧಿಸುವುದಿಲ್ಲ, ಹಾಗೆ ಅವು ಮಾಡಿದಲ್ಲಿ, ಛೇದಿಸಲ್ಪಟ್ಟ ಆ ಬಿಂದುವಿನಲ್ಲಿ ಕಾಂತಕ್ಷೇತ್ರದ ದಿಕ್ಕು ಅನನ್ಯವಾಗಿರುವುದಿಲ್ಲ.

14) ಭೂಮಿಯ ಕಾಂತೀಯತೆ ಸಂಬಂಧಿಸಿದಂತೆ ಡೈನಮೋ ಎಫೆಕ್ಟ್ ಬಗ್ಗೆ ತಿಳಿಸಿ

ಉತ್ತರ: ಭೂಮಿಯ ಹೊರಗರ್ಭದ ಲೋಹೀಯ ದ್ರವಗಳ (ಹೆಚ್ಚಾಗಿ ಕರಗಿದ ಕಬ್ಬಿಣ ಮತ್ತು ನಿಕ್ಕಲ್‌ಅನ್ನು ಒಳಗೊಂಡಿರುವ) ಸಂವಹನ ಚಲನೆಯಿಂದ ಉಂಟಾದ ವಿದ್ಯುತ್ ಪ್ರವಾಹಗಳಿಂದ ಬರುತ್ತದೆಯೆಂದು ಯೋಚಿಸಲಾಗಿದೆ. ಇದನ್ನು **ಡೈನಮೋ ಎಫೆಕ್ಟ್** ಎಂದು ತಿಳಿಯಲಾಗಿದೆ.

15) ಪ್ಯಾರಾಕಾಂತೀಯ ವಸ್ತುಗಳಿಗೆ ಉದಾಹರಣೆ ಕೊಡಿ

ಉತ್ತರ: ಅಲ್ಯೂಮಿನಿಮ್, ಸೋಡಿಮ್, ಕ್ಯಾಲ್ಸಿಯಮ್, ಆಮ್ಲಜನಕ (STP ನಲ್ಲಿ) ಮತ್ತು ಕಾಪರ್ (ತಾಮ್ರದ) ಕ್ಲೋರೈಡ್.

16) ಫರ್ರೋಕಾಂತೀಯನ್ನು ಹೊಂದಿರುವ ಪದಾರ್ಥಗಳ ಬಗ್ಗೆ ಬರೆಯಿರಿ

ಉತ್ತರ: ಬಾಹ್ಯ ಕಾಂತಕ್ಷೇತ್ರದಲ್ಲಿರಿಸಿದಾಗ ಪ್ರಬಲವಾಗಿ ಕಾಂತೀಕರಣಗೊಳ್ಳುವವೇ ಫರ್ರೋಕಾಂತೀಯ ಪದಾರ್ಥಗಳು. ದುರ್ಬಲ ಕಾಂತಕ್ಷೇತ್ರದಿಂದ ಪ್ರಬಲ ಕಾಂತಕ್ಷೇತ್ರದ ಕಡೆಗೆ ಚಲಿಸುವ ಬಲವಾದ ಪ್ರವೃತ್ತಿಯನ್ನು ಅವು ಹೊಂದಿವೆ. ಅಂದರೆ, ಅವು ಅಯಸ್ಕಾಂತದ ಕಡಗೆ ಬಲವಾಗಿ ಆಕರ್ಷಿತವಾಗುತ್ತವೆ. ಉದಾ:- ಕಬ್ಬಿಣ, ಅಲ್ಯೂಮಿನಿಯಂ, ನಿಕ್ಕಲ್, ಕೋಬಾಲ್ಟ್ ಮತ್ತು ತಾಮ್ರದ ಮಿಶ್ರಲೋಹ ಆಲ್ನಿಕೊ (Alnico)

17) ಯಾವುದನ್ನು ಶಾಶ್ವತ ಅಯಸ್ಕಾಂತಗಳು ಎಂದು ಕರೆಯುತ್ತಾರೆ?

ಉತ್ತರ: ಕೊಠಡಿಯ ತಾಪಮಾನದಲ್ಲಿ ಅವುಗಳ ಫರ್ರೋಕಾಂತೀಯ ಗುಣವನ್ನು ದೀರ್ಘ ಕಾಲದವರೆಗೆಉಳಿಸಿಕೊಳ್ಳುವ ಪದಾರ್ಥಗಳನ್ನು '**ಶಾಶ್ವತ ಅಯಸ್ಕಾಂತಗಳು**' ಎಂದು ಕರೆಯಲಾಗುತ್ತದೆ.

18) ಭೂಮಿಯ ಕಾಂತಕ್ಷೇತ್ರವನ್ನು ಅದರ ಮೇಲ್ಮೈಯಲ್ಲಿ ವಿವರಿಸಲು ಮೂರು ಪರಿಮಾಣಗಳ ಅಗತ್ಯವಿರುತ್ತದೆ. ಅವು ಯಾವುವು?

ಉತ್ತರ: ಭೂಮಿಯ ಕಾಂತಕ್ಷೇತ್ರವನ್ನು ಅದರ ಮೇಲ್ಮೈಯಲ್ಲಿ ವಿವರಿಸಲು ಮೂರು ಪರಿಮಾಣಗಳ ಅಗತ್ಯವಿರುತ್ತದೆ-ಸಮತಲ ಅಂಶ, ಕಾಂತೀಯ ದಿಕ್ಪಾತ ಮತ್ತು ಕಾಂತೀಯ ನಮನ (ಅನತಿ). ಇವುಗಳು ಭೂಮಿಯ ಕಾಂತಕ್ಷೇತ್ರದ ಅಂಶಗಳಾಗಿವೆ.

19) ಎಡ್ಡಿ ವಿದ್ಯುತ್ ಹರಿವು ಎಲ್ಲೆಲ್ಲಿ ಉಪಯೋಗಿಸುವರು?

ಉತ್ತರ: ಎಡ್ಡಿ ವಿದ್ಯುತ್ ಹರಿವು ಈ ಕೆಳಗಿನಡೆ ಉಪಯೋಗಿಸುವರು:-

(i) **ರೈಲಿನ ಕಾಂತೀಯ ಬ್ರೇಕಿಂಗ್** : ವಿದ್ಯುತ್ ಶಕ್ತಿಯ ರೈಲುಗಳ ಹಳಿಗಳ ಮೇಲೆ ಶಕ್ತಿಯುತ ವಿದ್ಯುತ್ ಕಾಂತಗಳನ್ನು ಇಡಲಾಗುತ್ತದೆ. ವಿದ್ಯುತ್ ಕಾಂತಗಳನ್ನು ಸಕ್ರಿಯಗೊಳಿಸಿದರೆ ತಕ್ಷಣ ಹಳಿಗಳಲ್ಲಿ ಎಡ್ಡಿ ವಿದ್ಯುತ್ ಹರಿವು ಪ್ರೇರಣೆಯಾಗುತ್ತದೆ. ಇದು ರೈಲಿನ ಚಲನೆಯನ್ನು ತಡೆಯುತ್ತದೆ. ಯಾಂತ್ರಿಕವಾಗಿ ಯಾವುದೇ ಸಂಪರ್ಕವಿಲ್ಲದ ಕಾರಣ ಬ್ರೇಕಿಂಗ್ ಪರಿಣಾಮ ನಯವಾಗಿರುತ್ತದೆ.

(ii) **ವಿದ್ಯುತ್ ಕಾಂತೀಯ ತಗ್ಗುವಿಕೆ:** ಕೆಲವೊಂದು ಗ್ಯಾಲ್ವನೋಮೀಟರ್‌ಗಳಲ್ಲಿ ಅಕಾಂತೀಯ ಲೋಹದ ವಸ್ತುವಿನಿಂದ ಮಾಡಿದ ಕೋರ್‌ಗಳನ್ನು ಅಳವಡಿಸಲಾಗುತ್ತದೆ. ಸುರುಳಿ ಚಲಿಸಿದಾಗ ಎಡ್ಡಿ ವಿದ್ಯುತ್ ಹರಿವುಂಟಾಗಿ ಕೋರ್‌ನ ಚಲನೆಯನ್ನು ತಡೆಯುತ್ತದೆ ಮತ್ತು ಸುರುಳಿಯು ಸ್ಥಿರತೆಗೆ ಬರುವಂತಾಗುತ್ತದೆ.

(iii) **ಚೋದನ ಕುಲುಮೆ :** ಲೋಹಗಳನ್ನು ಕರಗಿಸಿಮಿಶ್ರಲೋಹಗಳನ್ನು ತಯಾರು ಮಾಡಲು ಹಾಗೂ ಅತಿ ಹೆಚ್ಚು ಉಷ್ಣತೆಯನ್ನು ಪಡೆಯಲು ಈ ಚೋದನ ಕುಲುಮೆ ಉಪಯುಕ್ತವಾಗಿದೆ. ಅತಿ ಹೆಚ್ಚು ಆವರ್ತನ ವಿದ್ಯುತ್ ಪ್ರವಾಹವನ್ನು ಲೋಹವನ್ನು ಬಲಸಿದ ಸುರುಳಿಯ ಮೂಲಕ ಹರಿಸಿದಾಗ ಲೋಹವು ಕರಗುತ್ತದೆ. ಎಡ್ಡಿ ವಿದ್ಯುತ್ ಹರಿವು ಲೋಹವು ಕರಗಲು ಬೇಕಾಗುವ ಉಷ್ಣತೆಯನ್ನು ಒದಗಿಸುತ್ತದೆ.

(iv) **ವಿದ್ಯುತ್ ಸಾಮರ್ಥ್ಯ ಮೀಟರ್ (ಮಾಪಕ):** ಎಡ್ಡಿ ವಿದ್ಯುತ್ ಹರಿವಿನಿಂದಾಗಿ ವಿದ್ಯುತ್ ಸಾಮರ್ಥ್ಯ ಮಾಪಕದ ಸಾಕ್ರಶ್ಯ ರೂಪದ ಹೊಳೆಯುವ ತಟ್ಟೆ ತಿರುಗುತ್ತದೆ. ಸೈನೋಸೈಡಲ್ ಆಗಿ ವ್ಯತ್ಯಾಸವಾಗುವ ವಿದ್ಯುತ್ ಹರಿವಿನಿಂದಾಗಿ ಉತ್ಪತ್ತಿಯಾಗುವ ಬರಲಾಗುವ ಕಾಂತಕ್ಷೇತ್ರಗಳಿಂದಾಗಿ ಎಡ್ಡಿ ವಿದ್ಯುತ್ ಹರಿವು ಲೋಹದ ತಟ್ಟೆಯಲ್ಲಿ ಉತ್ಪತ್ತಿಯಾಗುತ್ತದೆ. ನಮ್ಮ ಮನೆಗಳಲ್ಲಿರುವ ವಿದ್ಯುತ್ ಸಾಮರ್ಥ್ಯ ಮೀಟರ್/ಮಾಪಕ ತಿರುಗುವ ಹೊಳೆಯುವ ತಟ್ಟೆಯನ್ನು ನಾವು ಗಮನಿಸುತ್ತೇವೆ

20) ಕಮಲಳು ನಿಂತಿರುವ ಬೈಸಿಕಲ್ ತುಳಿಯುತ್ತಾಳೆ. ಸೈಕಲ್‌ನ ಪೆಡಲ್‌ಗಳು 100 ಸುತ್ತುಗಳು 0.10 ವಿಸ್ತೀರ್ಣದ ಸುರುಳಿಗೆ ಸಂಪರ್ಕವನ್ನು ಹೊಂದಿದೆ. ಸುರುಳಿಯು ಸುತ್ತು ವೇಗದಲ್ಲಿ ತಿರುಗುತ್ತಿದೆ ಮತ್ತು ಇದನ್ನು 0.01T ಕಾಂತಕ್ಷೇತ್ರದಲ್ಲಿ ಲಂಬವಾದ ಅಕ್ಷದಲ್ಲಿ ತಿರುಗುತ್ತಿದೆ. ಇಲ್ಲಿ ಉತ್ಪತ್ತಿಯಾಗುವ ಗರಿಷ್ಠ ವಿದ್ಯುತ್ ವಿಭವಾಂತರದ ಪ್ರಮಾಣ ಎಷ್ಟು?

ಪರಿಹಾರ : V = 0.5 Hz;

N = 100,

A = 0.1 m^2 ಮತ್ತು B = 0.01 T

$\varepsilon_0 = NBA\,(2\pi\nu)$

$= 100 \times 0.01 \times 0.1 \times 2 \times 3.14 \times 0.5$

$= 0.314$ V

ಗರಿಷ್ಠ ವಿಭವ 0.314 V.

21) ವಿಕಿರಣಶಕ್ತಿ ಘಟಕ ಎಂದು ಕರೆಯುತ್ತೇವೆ ?

ಉತ್ತರ:- ವಿದ್ಯುತ್ ಉತ್ಸರ್ಜನೆಯು ನಿರಂತರ ಶಕ್ತಿಯ ಹೀರುವಿಕೆಯಿಂದ ಸಂಭವಿಸಲಾರದು. ವಿಕಿರಣಶಕ್ತಿಯು ವಿಘಟಿತ ಘಟಕಗಳಿಂದ ನಿರ್ಮಿಸಲ್ಪಟ್ಟಿದೆ. ಅದನ್ನು ವಿಕಿರಣಶಕ್ತಿ ಘಟಕ ಎಂದು ಕರೆಯುತ್ತೇವೆ

22) ಯಾವ ವಿಲಕ್ಷಣ ಸತ್ಯವನ್ನುದ್ಯುತಿವಿದ್ಯುತ್ ಪರಿಣಾಮವು ಪ್ರಮಾಣೀಕರಿಸಿದೆ?

ಉತ್ತರ: ಬೆಳಕು ಯಾವುದೇ ವಸ್ತುವಿನ ಜತೆ ಪರಸ್ಪರ ಕ್ರಿಯೆಯಲ್ಲಿ ವರ್ತಿಸುವಾಗ ಅದು ಕ್ವಾಂಟ ಅಥವಾ ಶಕ್ತಿಯ ಘಟಕ (**packets**) (ಪ್ರತಿ ಘಟಕದ ಶಕ್ತಿಯು h v ಆಗಿದೆ) ಗಳಿಂದ ಮಾಡಲ್ಪಟ್ಟಿದೆ ಎಂಬAತೆ ವರ್ತಿಸುತ್ತದೆ ಎಂಬ ವಿಲಕ್ಷಣ ಸತ್ಯವನ್ನು ದ್ಯುತಿವಿದ್ಯುತ್ ಪರಿಣಾಮವು ಪ್ರಮಾಣೀಕರಿಸಿದೆ.

ಪ್ರಜಾವಾಣಿ ನೋಡಿಯೊ

ಪಿಯುಸಿ ಗಣಿತವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನಿಮ್ಮ ಕನಸುಗಳನ್ನು ಬೆನ್ನಟ್ಟುವ ಧೈರ್ಯ ನಿಮಗಿದ್ದರೆ ನಿಮ್ಮ ಎಲ್ಲ ಕನಸುಗಳೂ ನನಸಾಗಬಹುದು.

–ವಾಲ್ಟ್ ಡಿಸ್ನಿ

ಜನರೊಂದಿಗೆ ವನ್ಯಜೀವಿಗಳ ಮುಖಾಮುಖಿ ಬೇಕಿದೆ ಸಮತೋಲನದ ನೀತಿ

ವನ್ಯಜೀವಿಗಳ ಸಂರಕ್ಷಣೆಯ ವಿಷಯದಲ್ಲಿ ನಾವೆಲ್ಲ ಹೆಮ್ಮೆಪಡುವಂತೆ ಕನ್ನಡನಾಡು ಭಾರತದಲ್ಲೇ ಮುಂಚೂಣಿ ಸ್ಥಾನದಲ್ಲಿದೆ. ಆನೆ ಮತ್ತು ಹುಲಿಗಳ ಸಂಖ್ಯೆಯನ್ನು ಪರಿಗಣಿಸಿದರೆ ಕ್ರಮವಾಗಿ ಮೊದಲನೆಯ ಹಾಗೂ ಎರಡನೆಯ ಸ್ಥಾನ ಕರ್ನಾಟಕದ್ದೇ ಆಗಿದೆ. ರಾಜ್ಯದಲ್ಲಿ ಚಿರತೆಗಳ ಸಂಖ್ಯೆಯೂ ಗಣನೀಯವಾಗಿದೆ. ಆದರೆ ಈ ಸಮೃದ್ಧಿಯ ಜೊತೆಜೊತೆಗೆ ಆತಂಕವೂ ಹೆಚ್ಚುತ್ತಿದೆ. ಆನೆಯ ತುಳಿತಕ್ಕೆ, ಹುಲಿಯ ಬಾಯಿಗೆ, ಚಿರತೆಯ ದಾಳಿಗೆ ಸಿಕ್ಕು ಅಸುನೀಗುವವರ ಸಂಖ್ಯೆಯಲ್ಲಿ ನಿರಂತರ ಏರಿಕೆ ಆಗುತ್ತಿದೆ. ಪ್ರವಾಸಿಗರನ್ನು ಆಕರ್ಷಿಸಬಹುದಾದ ವನ್ಯತಾಣಗಳ ಸಂಖ್ಯೆ ಹೆಚ್ಚುತ್ತಿದ್ದಂತೆ ಬೃಂದಾವನ ಉದ್ಯಾನದಂಥ ಪ್ರವಾಸಿ ತಾಣವನ್ನೇ ಚಿರತೆಯ ದೆಸೆಯಿಂದಾಗಿ ದೀರ್ಘಕಾಲ ಮುಚ್ಚಬೇಕಾದ ವಿಪರ್ಯಾಸದ ಸಂದರ್ಭವೂ ಎದುರಾಗಿತ್ತು. ಅರಣ್ಯ ಇಲಾಖೆಯ ದಾಖಲೆಗಳ ಪ್ರಕಾರ, ಹಿಂದಿನ ನಾಲ್ಕು ವರ್ಷಗಳಿಗೆ ಹೋಲಿಸಿದರೆ 2021-22ರಲ್ಲಿ ವನ್ಯಜೀವಿಗಳೊಂದಿಗೆ ಮನುಷ್ಯ ಸಂಘರ್ಷದ ಅತ್ಯಧಿಕ ಅಂದರೆ 36,982 ಘಟನೆಗಳು ಸಂಭವಿಸಿವೆ. ಬೆಳೆಹಾನಿ, ಜಾನುವಾರು ಬಲಿ, ಜನರ ಸಾವುನೋವಿಗೆ ಪರಿಹಾರ ರೂಪದಲ್ಲಿ ₹ 27.42 ಕೋಟಿ ಸಂದಾಯವಾಗಿದೆ. ಹಾಸನ, ಕೊಡಗು, ಚಾಮರಾಜನಗರ ಮತ್ತು ರಾಮನಗರ ಜಿಲ್ಲೆಗಳಲ್ಲಿ ವನ್ಯಜೀವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹೊಲಕ್ಕೆ ನುಗ್ಗುತ್ತಿರುವುದು ವರದಿಯಾಗುತ್ತಿದೆಯಾದರೂ ಪಶ್ಚಿಮ ಘಟ್ಟಗಳ ಬಹುತೇಕ ಎಲ್ಲ ತಾಲ್ಲೂಕುಗಳಲ್ಲೂ ಕಾಡುಹಂದಿ, ಕೋತಿ, ಕಾಟಿಗಳೊಂದಿಗೆ ನಿತ್ಯವೂ ಎಂಬಂತೆ ಗ್ರಾಮೀಣ ಜನರ ಮುಖಾಮುಖಿ ಅದೆಷ್ಟಿದೆಯೆಂದರೆ, ಮನೆಯಂಗಳದಲ್ಲೂ ತರಕಾರಿ ಬೆಳೆಗಳ ರಕ್ಷಣೆ ಅಸಂಭವ ಎನ್ನುವಂತಾಗಿದೆ. ಸಾಲದ್ದಕ್ಕೆ ಈಚಿನ ವರ್ಷಗಳಲ್ಲಿ ಬೆಂಗಳೂರು, ಕೋಲಾರ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲೂ ಕಾಡುಪ್ರಾಣಿಗಳ ಹೆಜ್ಜೆಗುರುತು ಹೆಚ್ಚುತ್ತಿದ್ದು, ಒಂದು ವಾರದಿಂದ ಬೆಂಗಳೂರಿನ ಸರಹದ್ದಿನಲ್ಲಿ ಚಿರತೆಗಳ ಓಡಾಟ ಸಿ.ಸಿ. ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದ್ದು ಆತಂಕವನ್ನು ಹೆಚ್ಚಿಸಿದೆ.

ವನ್ಯಜೀವಿಗಳ ನಿರ್ವಹಣೆ ಗಂಭೀರ ವಿಷಯವಾಗುತ್ತಿರುವುದರಿಂದ, ಈ ಕುರಿತು ನಮ್ಮ ಈಗಿನ ಧೋರಣೆಯನ್ನು ಬದಲಿಸಬೇಕಾಗಿದೆ

ಹೀಗೆ ದಿನೇ ದಿನೇ ಮನುಷ್ಯರ ಮತ್ತು ವನ್ಯಜೀವಿಗಳ ಸಂಘರ್ಷದ ಪ್ರಸಂಗಗಳು ಹೆಚ್ಚುತ್ತಿರಲು ಕಾರಣಗಳು ಒಂದೆರಡಲ್ಲ. ಮೂಲ ಸಂಗತಿ ಏನೆಂದರೆ ವನ್ಯಜೀವಿಗಳು ಸಂಚರಿಸುವ ಪ್ರದೇಶದಲ್ಲಿ ಮನುಷ್ಯರ ಅತಿಕ್ರಮಣ ಜಾಸ್ತಿಯಾಗಿದೆ. ಕಾಡುಪ್ರಾಣಿಗಳಿಗೆಂದೇ ಸಂರಕ್ಷಿತ ಪ್ರದೇಶಗಳ ಸಂಖ್ಯೆಯನ್ನು ಹೆಚ್ಚಿಸುತ್ತಿರುವುದು ಶ್ಲಾಘನೀಯವೇ ಆದರೂ ಅವುಗಳ ಉಸ್ತುವಾರಿಯಲ್ಲಿ ಲೋಪಗಳೂ ತೀವ್ರವಾಗುತ್ತಿವೆ. ನಮೀಬಿಯಾದಿಂದ ಚೀತಾಗಳನ್ನು ತರಲೆಂದು ಅಷ್ಟೆಲ್ಲ ಪ್ರಚಾರೋತ್ಸಾಹವನ್ನು ಮೆರೆದ ಕೇಂದ್ರ ಸರ್ಕಾರವು ಕರ್ನಾಟಕದ ಹುಲಿ ಯೋಜನೆಗೆ ಹಣ ಬಿಡುಗಡೆ ಮಾಡದೇ ಸತಾಯಿಸುತ್ತಿರುವುದು ಈಚೆಗಷ್ಟೇ ವರದಿಯಾಗಿತ್ತು. ಸಂರಕ್ಷಿತ ವನ್ಯಧಾಮಗಳಲ್ಲಿ ಲಂಟಾನಾ, ಯುಪಟೋರಿಯಂನಂತಹ ಕಳೆಸಸ್ಯಗಳು ಎಲ್ಲೆಡೆ ವ್ಯಾಪಿಸುತ್ತಿರುವುದರಿಂದ ಸಸ್ಯಾಹಾರಿ ಪ್ರಾಣಿಗಳು ಆಹಾರಕ್ಕಾಗಿ ಆಚೀಚೆ ಅಲೆಯುವಂತಾಗಿದೆ. ಅವು ಹಾಗೆ ತಮ್ಮ ಗಡಿ ದಾಟಿ ಹೊರಬರದಂತೆ ಬೇಲಿ, ಕಂದಕಗಳ ನಿರ್ಮಾಣವಾಗಿದ್ದರೂ ಅದೆಷ್ಟೋ ಕಡೆ ಗ್ರಾಮೀಣ ಜನರೇ ದನಕರುಗಳನ್ನು ಮೇಯಿಸಲೆಂದು ಅಂಥ ಕಂದಕಗಳಿಗೆ ಮಣ್ಣು ತುಂಬಿ, ಬೇಲಿ ಮುರಿದು ಹಾಕಿದ್ದೂ ಇದೆ. ಅನುಕೂಲಸ್ಥರು ತಮ್ಮ ಹೊಲಕ್ಕೆ ಅನಧಿಕೃತವಾಗಿ ವಿದ್ಯುತ್ ಬೇಲಿಯನ್ನು ಹಾಕಿ ವನ್ಯಜೀವಿಗಳ ಪ್ರಾಣಕ್ಕೆ ಎರವಾದ ಪ್ರಸಂಗಗಳೂ ಬೇಕಾದಷ್ಟಿವೆ. ಈ ಮುಗ್ಧ ಜೀವಿಗಳು ನೀರು ಮತ್ತು ಆಹಾರಕ್ಕೆಂದು ಅತ್ತ ಹೋದರೆ ಗ್ರಾನೈಟ್ ಕ್ವಾರಿ, ಇತ್ತ ಬಂದರೆ ವಿದ್ಯುತ್ ಬೇಲಿ, ಆ ಕಡೆ ಹೆದ್ದಾರಿ, ಈ ಕಡೆ ರೆಸಾರ್ಟು ಎದುರಾಗುತ್ತವೆ. ಅನಿವಾರ್ಯವಾಗಿ ಅವು ಮನುಷ್ಯರ ಜೊತೆ ಮುಖಾಮುಖಿ ಆಗಬೇಕಾಗುತ್ತದೆ.

ವನ್ಯಜೀವಿಗಳ ನಿರ್ವಹಣೆ ಗಂಭೀರ ವಿಷಯವಾಗುತ್ತಿರುವುದರಿಂದ ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಎಂಬ ಈಗಿನ ಧೋರಣೆಯನ್ನು ಬದಲಿಸಬೇಕಾಗಿದೆ. ನಮ್ಮ ದೇಶದ ವನ್ಯಸಂರಕ್ಷಣಾ ಧೋರಣೆಯೇ ಜನವಿರೋಧಿ, ನಿಸರ್ಗವಿರೋಧಿ ಹಾಗೂ ವಿಜ್ಞಾನವಿರೋಧಿಯಾಗಿದ್ದು, ಕಾನೂನನ್ನು ಆಮೂಲಾಗ್ರ ಬದಲಿಸಬೇಕೆಂದು ಡಾ. ಮಾಧವ ಗಾಡ್ಗೀಳ್ ಅವರಂಥ ತಜ್ಞರು ಒತ್ತಾಯಿಸುತ್ತಿದ್ದಾರೆ. ಕಾನೂನಿನಲ್ಲಿ ಇರಬಹುದಾದ ಲೋಪ, ಮಿತಿಗಳ ಬಗ್ಗೆ ಪರಿಶೀಲನೆ ಆಗಬೇಕಿದೆ. ಹಿಮಾಚಲ ಪ್ರದೇಶದಲ್ಲಿ ಮಂಗಗಳಿಗೆ ಸಂತಾನ ನಿಯಂತ್ರಣ ವ್ಯವಸ್ಥೆ ಇರುವ ಹಾಗೆ, ಪಶ್ಚಿಮಘಟ್ಟ ಪ್ರದೇಶಗಳ ಎಲ್ಲೆಡೆ ಕೃಷಿ ಚಟುವಟಿಕೆಗಳಿಗೆ ಹಾವಳಿಯಾಗಿ ಪರಿಣಮಿಸಿರುವ ಕೆಲವು ವನ್ಯಜೀವಿಗಳಿಗೆ ವನ್ಯತಜ್ಞರ ಕಟ್ಟುನಿಟ್ಟಿನ ನಿಗಾದಲ್ಲಿ ಜನನ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸುವುದು ಸಾಧ್ಯವೇ ಎಂಬುದರ ಕುರಿತು ಪರಿಶೀಲಿಸಬೇಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ, ವನ್ಯಜೀವಿಗಳೊಂದಿಗೆ ಸಂಘರ್ಷ ಹೆಚ್ಚುತ್ತಿರುವ ಪ್ರದೇಶಗಳನ್ನು ಗುರುತಿಸಿ, ಅಲ್ಲಿ ತರಬೇತಿ ಪಡೆದ ಸ್ಥಳೀಯರನ್ನೇ ಜನಜಾಗೃತಿ ಮತ್ತು ಭದ್ರತೆಗೆಂದು ನಿಯೋಜಿಸಬೇಕಾಗಿದೆ. ರಕ್ಷಣೆ ವನ್ಯಜೀವಿಗಳಿಗೂ ಬೇಕು, ಕಾಡಂಚಿನ ಜನರಿಗೂ ಬೇಕು. ಈ ಸೂಕ್ಷ್ಮ ಸಮತೋಲನವನ್ನು ನಿಭಾಯಿಸುವ ಕೆಲಸ ಅರಣ್ಯಭವನದಿಂದ ಮಾತ್ರವೇ ಅಲ್ಲ, ನಿಸರ್ಗದ ಮಧ್ಯೆಯೂ ನಡೆಯಬೇಕಿದೆ.

ಪ್ರಾಮಾಣಿಕತೆಯ ರೂಪ ಒಂದೇ, ಭ್ರಷ್ಟಾಚಾರದ ಮಾರ್ಗಗಳು ನೂರೆಂಟು

ಈ ಲೋಕದಲ್ಲಿರಲು ತೆರಬೇಕಾದುದು...

ವಿಶ್ಲೇಷಣೆ

ಜಿ.ಎಸ್.ಜಯದೇವ, ಕೃಷ್ಣಮೂರ್ತಿ ಹನೂರು

ನಮ್ಮ ಎಲ್ಲ ರಾಜಕೀಯ ಪಕ್ಷಗಳ ನೇತಾರರು ಚುನಾವಣೆಯ ಈ ಹೊತ್ತಿನಲ್ಲಿ, ಇನ್ನೇನು ಕೆಲವೇ ತಿಂಗಳಲ್ಲಿ ತಮತಮಗೇ ದೊರಕಿಬಿಡಬಹುದಾದ ಅಧಿಕಾರದಿಂದ ರಾಮರಾಜ್ಯವನ್ನು ಸ್ಥಾಪಿಸಿಬಿಡುವ ಉತ್ಸಾಹದ ಮಾತಾಡುತ್ತಿರುವ ಈ ದಿನಗಳಲ್ಲಿ; ಅದನ್ನೆಲ್ಲ ಬಿಟ್ಟು ದೊರಕಿರುವ ಅವಕಾಶಗಳಲ್ಲಿ ಅದೆಷ್ಟು ಕೆಲಸ ಮಾಡಿದ್ದೇವೆ ಅಥವಾ ನಮ್ಮ ಸುತ್ತ ಅಂಥದ್ದೇನಾದರೂ ಕಾಯಕ ನಡೆಯುತ್ತಿದೆಯೇ ಎಂಬುದರತ್ತ ಗಮನ ಹರಿಸುವುದು ಸೂಕ್ತ ಅನಿಸುತ್ತದೆ.

ಹೀಗೆ ಸರ್ಕಾರಿ ಸೇವೆಯಲ್ಲಿದ್ದು, ತನ್ನ ಕೈ ಅಳತೆಯಲ್ಲಿ ಏನು ಮಾಡಲು ಸಾಧ್ಯ ಎಂದು ಪ್ರಾಮಾಣಿಕವಾಗಿ ಯೋಚಿಸುವವನಿಗೆ ಎದುರಾಗಲೂಬಹುದಾದ ತೊಡರುಗಾಲು ಅಂದರೆ, ದೊಡ್ಡವರೆನಿಸಿಕೊಂಡವರು ವೇದಿಕೆಯಲ್ಲಿ ಆಡುವ ಹುಸಿ ಭರವಸೆಯ ಮಾತು, ಆಮೇಲೆ ಕತ್ತಲ ಸಂದಿಯಲ್ಲಿ ನಡೆಸುವ ಭ್ರಷ್ಟಾಚಾರ!

ಈ ಮುಸುಕಿನ ವ್ಯವಹಾರವು ಇನ್ನೆತ್ತಲೋ ಹಸಿರ ಮರೆಯಲ್ಲಿ ಪ್ರಾಮಾಣಿಕವಾಗಿ ಸರ್ಕಾರಿ ದೇವರ ಕೆಲಸ ಮಾಡಬಯಸುವವನಿಗೆ ಅದೆಷ್ಟು ಕೈ ಕಟ್ಟಿ ಹಾಕುತ್ತದೆಂದರೆ, ಆತ ಅಮಾನತುಗೊಳ್ಳಲು ಸಿದ್ಧ ಆದರೆ ನಿಷ್ಠೆಯ ಕಾಯಕ ಬಿಡಲು ತಯಾರಿಲ್ಲ ಎಂದದ್ದಿದೆ.

ಸದ್ಯಕ್ಕೆ ನಮ್ಮ ದೇಶ ಎದುರಿಸುತ್ತಿರುವ ಮುಖ್ಯ ಸಮಸ್ಯೆಗಳಲ್ಲಿ ಶಿಕ್ಷಣವೂ ಸೇರಿಕೊಂಡಿದೆ ಎಂಬುದು ಲಾಗಾಯ್ತಿನಿಂದ ಹೇಳಿಕೊಂಡು ಬಂದ ಮಾತು. ಯಾವುದೇ ಪ್ರಯೋಗವು ಸದುದ್ದೇಶದ ಹಿನ್ನೆಲೆಯಲ್ಲಿ ಜಾರಿಗೆ ಬಂದರೆ ತಾನೇ ಅದರ ಸಾರ್ಥಕ್ಯ. ಇದೀಗ ಪಟ್ಟಣದಲ್ಲಿ ಇರುವವರಿಗಿಂತ ಅಕ್ಷರ ಕಲಿಯಬೇಕಾಗಿರುವುದು ಗ್ರಾಮಾಂತರ ಪ್ರದೇಶದ ಮಕ್ಕಳೇ. ಹಳ್ಳಿಗಾಡಿನ ಮಕ್ಕಳ ಸಮೂಹಕ್ಕೆ ಖಾಸಗಿಯವರು ತಮ್ಮ ಶಾಲೆಗಳನ್ನು ಕೊಂಡೊಯ್ಯುವುದಿಲ್ಲ. ಅವರ ಶಿಕ್ಷಣ ವ್ಯವಹಾರ ವೇನಿದ್ದರೂ ದೊಡ್ಡದೊಡ್ಡ ಪಟ್ಟಣಗಳಲ್ಲಿ. ಆದರೆ ಸ್ವಾತಂತ್ರ್ಯಪೂರ್ವದಿಂದಲೂ ತದನಂತರವೂ ಕರ್ನಾಟಕದ ಬಹುತೇಕ ಸಣ್ಣಪುಟ್ಟ ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳು ಸ್ಥಾಪನೆಯಾಗಿ ಅವು ಬಹು ದೊಡ್ಡ ಸೇವೆಗೈದಿವೆ. ಆದರೆ ಅಲ್ಲಿರಬಹುದಾದ ಸಮಸ್ಯೆಗಳೂ ವರ್ಷಗಟ್ಟಲೆಯಷ್ಟು ಹಳೆಯದಾದುವು. ಇನ್ನೇನು ಚಾವಣಿಯೂ ಗೋಡೆಯೂ ಕುಸಿಯುತ್ತಿದೆ ಎಂಬುದರಿಂದ ಹಿಡಿದು ಅಧ್ಯಾಪಕರಿಲ್ಲ, ಶೌಚಾಲಯವೇ ಇಲ್ಲ ಎಂಬುದರವರೆಗೆ ದೂರುಗಳು ಇದ್ದೇ ಇವೆ. ಇದಾದದ್ದು ಶಾಲೆಗೆ ಹೋಗುವ ಮಕ್ಕಳಿಗೆ ಅಲ್ಲಿರುವ ವೇಳೆ ನೀರು ಕುಡಿಯಲು ಎಚ್ಚರಿಸಿ ಮೂರು ಸರ್ತಿ ಬೆಲ್ ಹೊಡೆಯಬೇಕು ಎಂಬ ನಿಯಮ ಹೊರಟದ್ದರಿಂದ. ಇದು ಖಾಸಗಿ ಶಾಲೆಯ ಮಕ್ಕಳ ಸಮಸ್ಯೆಯೇನಲ್ಲ. ಗ್ರಾಮಾಂತರ ಮಕ್ಕಳ ಕಷ್ಟದ ವಿಚಾರ. ಮೂರು ಸಲ ಬೆಲ್ ಹೊಡೆದು ನೀರು ಕುಡಿದಲ್ಲಿ ಮುಂದಿನ ದೇಹಪ್ರಕೃತಿಯ ಕರೆಗೆ ಜಾಗ ಎಲ್ಲಿಯದು?

ಎಲ್ಲದಕ್ಕೂ ಸರ್ಕಾರದ ಸಹಾಯಕ್ಕೆ ಕಾಯದೆ ಇದ್ದುದರಲ್ಲೇ ಅಧ್ಯಾಪಕರು ಮನಸ್ಸು ಮಾಡಿದಲ್ಲಿ ಶಾಲೆಯನ್ನೇ ಸುಂದರ ತೋಟವನ್ನಾಗಿ ಪರಿವರ್ತಿಸಿಬಿಡಬಹುದು ಎಂಬುದಕ್ಕೆ ಕರ್ನಾಟಕದಲ್ಲಿ ಇರಬಹುದಾದ ಹಲ ಕೆಲವು ಉದಾಹರಣೆಗಳ ನಡುವೆ ಇಲ್ಲಿ ಪ್ರಸ್ತಾಪಿಸಬಹುದಾದ ಒಂದು ಶಾಲೆ ಇದೆ. ಅದು ಯಥಾವಿಧಿಯಾಗಿ, ಹಿಂದುಳಿದ ಗಡಿನಾಡ ಪ್ರದೇಶ ಎಂದು ಎಲ್ಲರೂ ರೂಢಿಗತ ಮಾತಿನಿಂದ ಕರೆಯುವ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಆಚೆ ಅರಣ್ಯ ಭಾಗದಲ್ಲಿರುವ ಹೊಂಗಳ್ಳಿ ಗ್ರಾಮದ ಒಂದು ಪುಟ್ಟ ಶಾಲೆ. ಈ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇರುವುದು ಒಂದೇ ಬಸ್ಸು ಹೋಗಿಬರುವ ಕಿರು ಅರಣ್ಯದ ಸರಹದ್ದಿನಲ್ಲಿ. ಶಾಲೆ ಗೋಡೆಯ ಮೇಲೆ ಎಲ್ಲ ಕಡೆ ಇರುವಂತೆ ನೀತಿ ಬರಹಗಳಿವೆ. ಶಾಲೆಗೆ ಎಪ್ಪತ್ತೈದು ವರ್ಷ ತುಂಬಿದೆ. ಆದರೂ ನೋಡಲು ಸ್ವಚ್ಛ, ಸುಂದರ. ಕಾಂಪೌಂಡ್ ಒಳಗಿರುವ ಗಿಡ ಮರಗಳಲ್ಲಿ ಅಕ್ಕಿ, ರಾಗಿಯುಳ್ಳ ತಟ್ಟೆ ತೂಗಾಡುತ್ತದೆ. ಪಕ್ಕದಲ್ಲೇ ನೀರು ತುಂಬಿದ ಮಡಕೆ. ಇದು ಹಕ್ಕಿ ಪಕ್ಷಿಗಳಿಗಾದರೆ ಇನ್ನೊಂದು ಮರದಲ್ಲಿ ದಾಸೋಹದ ಪುಟ್ಟಿ. ಬಿಸಿಯೂಟಕ್ಕಿಂತ ಮಿಗಿಲಾಗಿ ಮನಸ್ಸು ಇದ್ದವರು ಏನಾದರೂ ಕೊಡುವುದಿದ್ದರೆ ಇಲ್ಲಿ ದವಸಧಾನ್ಯ ಮತ್ತು ಮಕ್ಕಳ ಪುಸ್ತಕವನ್ನೂ ಹಾಕಬಹುದು. ಹೀಗಾಗಿ ಮಕ್ಕಳಿಗೆ ತಿಂಗಳಿಗೆ ಹತ್ತು ಸಲ ಸಿಹಿ ಮಾಡಿ ನೀಡಲಾಗುತ್ತದೆ, ಹಾಲನ್ನೂ ಕೊಡಲಾಗುತ್ತದೆ.

ಅಕ್ಕಿ, ರಾಗಿ, ನೀರು ಇದ್ದರೆ ಹಕ್ಕಿ ಪಕ್ಷಿ ಬರುವಂತೆ, ಅಕ್ಷರ ಕಲಿಸುತ್ತ ಸಿಹಿ ನೀಡುವುದಾದರೆ ಮಕ್ಕಳು ಯಾಕೆ ಬರುವುದಿಲ್ಲ ಎಂಬುದು ತಲೆಗೆ ಟೋಪಿ, ಖಾದಿ ಸಮವಸ್ತ್ರ ತೊಟ್ಟ ಮುಖ್ಯೋಪಾಧ್ಯಾಯರ ಪ್ರಶ್ನೆ. ಶಾಲಾ ಮಕ್ಕಳೂ ಚಿಟ್ಟೆಯಂತೆ, ದುಂಬಿಯಂತೆ, ಪಕ್ಷಿಗಳಂತೆ ನಗುಮುಖದಲ್ಲಿದ್ದವು. ಹುಟ್ಟಿದ ಹಬ್ಬಕ್ಕೆ ಚಾಕೊಲೇಟ್, ಕೇಕ್ ತರುವಂತಿಲ್ಲ. ಇದರ ಮೇಲೆ ಆ ಹಳ್ಳಿಯಲ್ಲಿ ಬೇಕರಿ ಇದ್ದಂತೆ ಕಾಣಲಿಲ್ಲ.

ಗಿಡ ಮರ ದಾಟಿ ಶಾಲೆಯ ಮುಂಭಾಗಕ್ಕೆ ಬಂದರೆ ಅಲ್ಲೇ ಕಿಟಕಿಯ ಬಳಿ ಒಂದು ಕಾಸಿನ ಡಬ್ಬಿ, ಅದರ ಪಕ್ಕದಲ್ಲೇ ಬಣ್ಣ ಬಣ್ಣದ ಪೆನ್ಸಿಲ್, ಪೆನ್ನಿನ ಪೆಟ್ಟಿಗೆ ಇದೆ. ಮಕ್ಕಳು ತಮಗೆ ಪೆನ್ ಬೇಕಾದಲ್ಲಿ ಡಬ್ಬಿಗೆ ಮೂರು ರೂಪಾಯಿ ಹಾಕಿ ತೆಗೆದುಕೊಳ್ಳಬಹುದು. ಇಲ್ಲಿ ನೆನಪಾದುದೆಂದರೆ, ಅಮೆರಿಕದ ಬಾಸ್ಟನ್ನಿನ ಬಳಿಯ ಅರಣ್ಯ ಪ್ರದೇಶದಲ್ಲಿರುವ ಸಂತ ಹೆನ್ರಿ ಡೇವಿಡ್ ಥೋರೊನ ಆಶ್ರಮದಿಂದ ಇನ್ನಷ್ಟು ಮುಂದಕ್ಕೆ ಮಸಾಚುಸೆಟ್ಸ್ ವಿಶ್ವವಿದ್ಯಾಲಯದ ದಾರಿಯಲ್ಲಿ ಒಂದು ಗುಡಿಸಲು ಅಂಗಡಿ ಇದೆ. ಅಲ್ಲಿ ಪೆಟ್ಟಿಗೆಯಲ್ಲಿ ಜೋಡಿಸಿಟ್ಟ ಬೇರೆ ಬೇರೆ ತರಕಾರಿ ರಾಶಿ. ಆದರೆ, ಮಾರಾಟಗಾರನೇ ಇಲ್ಲ! ನಿರ್ಜನ ಅರಣ್ಯ ಪ್ರದೇಶ. ಅಂಗಡಿಯ ಯಾವುದೋ ಮೂಲೆಯಲ್ಲಿ 'You will pay for it' ಎಂಬ ಫಲಕವಿದೆ. ಹೊಂಗಳ್ಳಿ ಶಾಲೆಯಲ್ಲೂ ಖರ್ಚಾದ ಪೆನ್ಸಿಲ್, ಪೆನ್ನು ಮತ್ತು ಡಬ್ಬಿಯ ಕಾಸು ಲೆಕ್ಕ ಹಾಕಿದರೆ ಒಂದೆರಡು ರೂಪಾಯಿ ಜಾಸ್ತಿ ಇರುತ್ತದೆಯೇ ವಿನಾ ಕಾಸು ಕಮ್ಮಿ ಇರುವುದಿಲ್ಲ.

ಪ್ರಾಮಾಣಿಕತೆಯ ರೂಪ ಒಂದೇ, ಭ್ರಷ್ಟಾಚಾರದ ಮಾರ್ಗಗಳು ನೂರೆಂಟು. ಮಕ್ಕಳ ಈ ಕ್ರಮ ಸಣ್ಣದೆನ್ನಬಹುದೇ? ಆನೆ ದೊಡ್ಡದೇ, ಆಡು ಚಿಕ್ಕದೆ. ಆಮೇಲೆ ಶಾಲೆಯಲ್ಲಿ ಯಾರು ಏನೇ ಕಳೆದುಕೊಂಡರೂ ಅದನ್ನು ಇನ್ನೊಂದು ಪ್ರಾಮಾಣಿಕ ಪೆಟ್ಟಿಗೆಯಲ್ಲಿ ಹಾಕಿ ಮರುದಿನ ಪ್ರಾರ್ಥನೆಯ ವೇಳೆ ಸಂಬಂಧಪಟ್ಟ ವಿದ್ಯಾರ್ಥಿಗೆ ತಲುಪಿಸಬೇಕು.

ಶಾಲೆ ಗೋಡೆಯ ಬಳಿ ಕುಡಿಯುವ ನೀರಿನ ಐದಾರು ಕ್ಯಾನುಗಳು. ಅದರ ಮುಂದೆ ತೊಳೆದಿಟ್ಟ ಲೋಟ. ಮಧ್ಯಾಹ್ನ ಬಿಸಿಯೂಟದ ನಂತರ ತಟ್ಟೆ ತೊಳೆದ ನೀರನ್ನು ಗಿಡದ ಪಾತಿಗೆ ಹಾಕಬೇಕು. ಮುಂದಿನ ಮುಖ್ಯ ಸಂಗತಿ, ಶಾಲೆಯ ಹಿಂದೆ ಶೌಚಾಲಯ ಶುದ್ಧವಾಗಿರುವುದು ಮಾತ್ರವಲ್ಲ ಅಲ್ಲಿ ಕನ್ನಡಿ, ಬಾಚಣಿಗೆ, ಟವೆಲ್ ಇವೆ. ಇದಕ್ಕೆ ಭಾರಿ ವೆಚ್ಚವೇನೂ ಆಗಿಲ್ಲ, ಮಾಡಬೇಕು ಎಂಬ ಮನವಿದೆ, ಅಷ್ಟೆ.

26 ವರ್ಷಗಳಿಂದ, ಹೋದ ಶಾಲೆಯಲ್ಲೆಲ್ಲ ಇದೇ ಕಾಯಕ ಮಾಡಿಕೊಂಡು ಬಂದ ಮುಖ್ಯೋಪಾಧ್ಯಾಯರು ಅಧಿಕಾರಿಗಳ, ಮಿತ್ರರ ಅಪಹಾಸ್ಯಕ್ಕೆ, ಕಿರುಕುಳಕ್ಕೆ ಸಿಕ್ಕಲಿಲ್ಲವೇ ಅಂದರೆ, ಅಮಾನತಾದುದೂ ಉಂಟು.

ಅಧಿಕಾರದ ಮುಖ ದೊಡ್ಡಸ್ತಿಕೆಯದು. ಅದನ್ನು ಮೆಚ್ಚಿ ಹಿಂಬಾಲಿಸುವ ಅನುಯಾಯಿಗಳೂ ಅಸಂಖ್ಯ. ಅಲ್ಲಲ್ಲಿ ರಾಜಕಾರಣಿಗಳಿಗೆ ಹೊಯ್‌ಕೈ ಆಗಿ ಅಧಿಕಾರದಲ್ಲಿ ತುದಿ ಮುಟ್ಟಿದ ಕೆಲವರು, ನಿವೃತ್ತಿಯ ನಂತರ ಚುನಾವಣೆಗೆ ನಿಂತರೆ ಈಗಾಗಲೇ ಇರುವ ಜನಪ್ರಿಯತೆ ಅಥವಾ ತಮ್ಮ ಜಾತಿ ಸಮೂಹ ಗೆಲ್ಲಿಸಬಹುದೇ, ಕಳೆದ ಅಧಿಕಾರವನ್ನು ನವೀಕರಿಸಿ ಜನಸೇವೆಯನ್ನು ಮುಂದುವರಿಸಬಹುದೇ ಎಂಬ ಮೋಹದಲ್ಲಿರುವುದುಂಟು. ಆದರೆ ಸಮಾಜ ಉದ್ಧಾರದ ಕಾಯಕ ಈ ನಾಡಿನ ಯಾವ್ಯಾವುದೋ ಮೂಲೆಯಲ್ಲಿ ಸದ್ದಿಲ್ಲದೆ ನಡೆಯುತ್ತಲೇ ಇದೆಯಲ್ಲ!

ನಮ್ಮ ಸಂತೋಷ, ಕಾಯಕ ಮತ್ತು ಬದುಕು ಈ ಮಕ್ಕಳಿಂದಲೇ ವಿನಾ ಅಧಿಕಾರದಿಂದ ಅಲ್ಲ, ಅದು ಸರ್ಕಾರಿ ಚಕ್ರದ ನಿಮಿತ್ತವಷ್ಟೇ ಎಂಬುದು ಹೊಂಗಳ್ಳಿಯ ಶಾಲಾ ಉಪಾಧ್ಯಾಯರ ಮಾತು. ಸುರೇಶ್ ಕುಮಾರ್ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿದ್ದಾಗ ಶಾಲೆಗೆ ಭೇಟಿ ಕೊಟ್ಟು, ತಮ್ಮ ನಾಲ್ಕು ಜನ ಉಪಾಧ್ಯಾಯರ, ಮಕ್ಕಳ ಬೆನ್ನು ತಟ್ಟಿ ಮೆಚ್ಚಿದ್ದನ್ನು ಮುಖ್ಯೋಪಾಧ್ಯಾಯ ಮಹದೇಶ್ವರ ಸ್ವಾಮಿ ನೆನೆಯುತ್ತಾರೆ. ಇದಕ್ಕೆ ಗ್ರಾಮದ ಶಾಲಾ ಮಂಡಳಿಯವರ ತುಂಬು ಪ್ರೋತ್ಸಾಹವೂ ಇದೆ.

ಚುರುಮುರಿ



ಸುಮ್ಮನಿದ್ರೆ ಸಾಕು!

• ಲಿಂಗರಾಜು ಡಿ.ಎಸ್.

ಎಲ್ಲ ಪಕ್ಷಗಳ ರಾಜಕಾರಣಿಗಳೂ ರಹಸ್ಯವಾಗಿ ಒಂದೆಡೆ ಸೇರಿದ್ದರು. 'ಜನ ಅದು ಮಾಡಿಲ್ಲ, ಇದು ಮಾಡಿಲ್ಲ ಅಂತ ನಮ್ಮನ್ನ ತಾರಾಮಾರ ಉಗೀತಿರತರೆ. ಒಂದಷ್ಟು ದಿನ ರಾಜಕೀಯ ಮಾಡದೇ ಸುಮ್ಮಗಿರುಮಾ. ಆಮೇಲೆ ನಾವಿಲ್ದೆ ದೇಶದ ಸ್ಥಿತಿ ಏನಾಯ್ತದೆ ಅಂತ ಗೊತ್ತಾಗಲಿ!' ಅಂತ ಒಬ್ಬ ನಾಯಕರು ವಿಚಾರ ಮಂಡಿಸಿದರು. ಎಲ್ಲರಿಗೂ ಇದು ಸರಿ ಅನ್ನಿಸಿತು.

'ನಾಳಿಂದ ರಾಜಕಾರಣ ಬಂದ್' ಅಂತ ತೀರ್ಮಾನ ತಗಂಡರು. ಪಕ್ಷಗಳ ಕಚೇರಿಗೆ ಬೀಗ ಬಿತ್ತು.

ಅರಾಜಕತೆ ತೊಲಗಿ ಸರ್ಕಾರದ ಸವಲತ್ತುಗಳು ಪೂರ್ತಿಯಾಗಿ ಜನರಿಗೆ ಸೇರತೊಡಗಿದವು. ನಲವತ್ತು ಪರ್ಸೆಂಟ್ ಉಳಿದಿದ್ದರಿಂದ ಗುತ್ತಿಗೆದಾರರು ನ್ಯಾಯವಾಗಿ ಕೆಲಸ ಮಾಡತೊಡಗಿದರು. ತ್ಯಾಗಜೀವಿಗಳಿಲ್ಲದೇ ರೆಸಾರ್ಟುಗಳು ಬಿಕೋ ಎನ್ನತೊಡಗಿದವು. ಪುಢಾರಿಗಳು ಮೈಬಗ್ಗಿಸಿ ದುಡಿಯುವ ಕೆಲಸಕ್ಕೆ ಒಗ್ಗಿಕೊಂಡರು. ಪಾದಯಾತ್ರೆಗಳು ಇಲ್ಲದ ಕಾರಣ ಟ್ರಾಫಿಕ್ ಕಿರಿಕಿರಿ ತಪ್ಪಿ ಜನ ನಿರಾಳರಾದರು.

ರೈತರ ಬೆಳೆಗೆ ಒಳ್ಳೆ ಬೆಲೆ ಸಿಗತೊಡಗಿದ್ದರಿಂದ ಬೇಸಾಯಕ್ಕೆ ಕಾರ್ಪೊರೇಟ್ ಲುಕ್ ಬಂದಿತು. ಡಾಲರ್ ಬೆಲೆ ಇಳಿದು ಜನರ ಕೈಯಲ್ಲಿ ಹಣ ಹೆಚ್ಚಿತು. ಬ್ಯಾಂಕುಗಳು ಒಳ್ಳೆ ಬಡ್ಡಿ ದರ ಕೊಡಲಾರಂಭಿಸಿದವು. ಕೋಟಿ ಸಾಲ ಪಡೆದು ಬ್ಯಾಂಕಿಗೆ ನಾಮತೇಯುತ್ತಿದ್ದ ಸಾಲವಾದಿಗಳು ನಿರಾಶರಾದರು. ರಾಜಕಾರಣಿಗಳ ಬೆಂಬಲವಿಲ್ಲದೇ ಅಧಿಕಾರಿಗಳು ಭ್ರಷ್ಟಾಚಾರವನ್ನು ತೊರೆದರು. ಲ್ಯಾಂಡು ರೋಗಿಗಳು ವಿತ್ತಭ್ರಮೆಗೊಳಗಾದರು. ಉಗಿಯುವುದು ತಪ್ಪಿದ್ದರಿಂದ ಕೋರ್ಟುಗಳು ನಿರಾಳವಾದವು. ಉಡಾಳರ ಕೈಯ್ಯಲ್ಲಿ ಕಾಸು ಇಲ್ಲದೇ ಡ್ರಗ್ಸ್ ಪೆಡ್ಲರುಗಳು ನಿರುದ್ಯೋಗಿಗಳಾದರು.

ಜನರಿಗೆ ಆರ್ಥಿಕ ನೆಮ್ಮದಿ ಸಿಕ್ಕಿದ ಕಾರಣ ಜಿಡಿಪಿ ಮತ್ತು ತಲಾದಾಯ ಏರಿತ್ತು. ರಾಜಕಾರಣಿಗಳು ಅಧಿಕಾರವಿಲ್ಲದೇ, ಖರ್ಚಿಗೆ ಕಾಸಿಲ್ಲದೇ ಬೇಸತ್ತು ಸಭೆ ನಡೆಸಿ, ರಾಜಕೀಯದಲ್ಲಿ ತೊಡಗುವುದೇ ತಮ್ಮ ಆರೋಗ್ಯಕ್ಕೆ ಮದ್ದು ಎಂದು ತೀರ್ಮಾನಿಸಿದರು.

ರಾಜಕೀಯದ ಕತ್ತೆ ವರಸೆಯು ಲಂಚ, ಪರ್ಸೆಂಟೇಜು, ಭ್ರಷ್ಟಾಚಾರ, ಬೈದಾಟಗಳ ರೂಪದಲ್ಲಿ ಮತ್ತೆ ವಾಪಸಾಗಿದ್ದರಿಂದ ಬೇಸತ್ತ ಜನ 'ನೀವು ಸುಮ್ಮನಿದ್ದಾಗ್ಲೇ ಚೆನ್ನಾಗಿತ್ತು' ಅಂದುಕೊಂಡರು.

ದಿನದ ಟ್ವೀಟ್

ಮಣ್ಣಿಗಾಗಿ ಒಂದಾಗೋಣ

ವಿಶ್ವ ಮಣ್ಣಿನ ದಿನದ ಈ ಸಂದರ್ಭದಲ್ಲಿ, ಭೂಮಿ ಬರಡಾಗದಂತೆ ಹಾಗೂ ಸವಕಳಿಗೆ ಗುರಿಯಾಗದಂತೆ ನೋಡಿಕೊಳ್ಳಲು ಧ್ವನಿ ಎತ್ತುವುದಕ್ಕೆ ಸ್ವಲ್ಪ ಸಮಯ ಕೊಡಿ. ಮಣ್ಣಿನ ಸಂರಕ್ಷಣೆಗಾಗಿ ಜಗತ್ತು ಒಂದಾಗಬೇಕಿದೆ.

ಕುಶ್ ಸರೀನ್

ಕಿಡಿನುಡಿ



ತಮಿಳುನಾಡಿನಲ್ಲಿ ಡಿಎಂಕೆ ಪಕ್ಷವನ್ನು ವಿರೋಧಿಸುವವ ನಾನು ಮಾತ್ರ ಅನಿಸುತ್ತಿದೆ. ತಮಿಳುನಾಡಿನ ಬಿಜೆಪಿಯಲ್ಲಿ ಇರುವವರೆಲ್ಲ ಬೆಕ್ಕುಗಳಂತಿದ್ದಾರೆ. ಸ್ಟಾಲಿನ್ ಗರ್ಜಿಸಿದಾಗಲೆಲ್ಲ ಅವರು ಮಿಯಾಂವ್ ಅನ್ನುತ್ತಿರುತ್ತಾರೆ. ಸಿನಿಮಾ ಸಂಸ್ಕೃತಿಯು ತಮಿಳುನಾಡು ಬಿಜೆಪಿಯನ್ನು ಹಾಳುಮಾಡಿದೆ.

ಸುಬ್ರಮಣಿಯನ್ ಸ್ವಾಮಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 6-12-1997

• **ಕಾಂಗ್ರೆಸ್ಸಿಗೆ ಬಂಗಾರಪ್ಪ ರಾಜೀನಾಮೆ**

ನವದೆಹಲಿ, ಡಿ. 5– ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರ ಬಗ್ಗೆ ಇತ್ತೀಚೆಗೆ ತೀವ್ರ ಅಸಮಾಧಾನಗೊಂಡಿದ್ದ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಮತ್ತು ವಿಸರ್ಜಿತ ಲೋಕಸಭೆಯ ಸದಸ್ಯ ಎಸ್. ಬಂಗಾರಪ್ಪ ಅವರು ನಿರೀಕ್ಷೆಯಂತೆ ಇಂದು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ಕಾಂಗ್ರೆಸ್ ತ್ಯಜಿಸಿರುವ ಬಂಗಾರಪ್ಪ ಅವರು 'ಕರ್ನಾಟಕ ವಿಕಾಸ ಪಕ್ಷ' ಎಂಬ ಹೆಸರಿನಲ್ಲಿ ಮತ್ತೆ ಹೊಸದೊಂದು ಪಕ್ಷವನ್ನು ರಚಿಸುವುದಾಗಿ ಪ್ರಕಟಿಸಿದ್ದಾರೆ.

ಆದರೆ ಈ ಬಗೆಗೆ ಇನ್ನೂ ಅಂತಿಮ ವಿಧಿ ವಿಧಾನಗಳು ಆಗಿಲ್ಲ ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

• **ಶಿವರಾಮ ಕಾರಂತ ಅಸ್ವಸ್ಥ; ತೀವ್ರ ನಿಗಾ ಘಟಕಕ್ಕೆ**

ಮಂಗಳೂರು, ಡಿ. 5– ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಕೋಟ ಶಿವರಾಮ ಕಾರಂತರು ತೀವ್ರ ಅಸ್ವಸ್ಥರಾಗಿದ್ದು ಅವರನ್ನು ಮಣಿಪಾಲದ ಕಸ್ತೂರಬಾ ಮೆಡಿಕಲ್ ಕಾಲೇಜಿನ ಆಸ್ಪತ್ರೆಗೆ ಸೇರಿಸಲಾಗಿದೆ.

ಅರೆಪ್ರಜ್ಞಾವಸ್ಥೆಯಲ್ಲಿರುವ ಅವರ ಸ್ಥಿತಿ ಕಳವಳಕಾರಿಯಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ಅವರ ರಕ್ತದ ಒತ್ತಡ ಸುಧಾರಿಸುತ್ತಿದ್ದು, ಅವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ಆದರೆ ಅವರ ಮೆದುಳಿನ ಕೋಶಗಳು ನಾಶವಾಗಿದ್ದು, ಅವರ ಸ್ಥಿತಿ ಚಿಂತಾಜನಕ ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಆಸ್ಪತ್ರೆಯ ಹಿರಿಯ ವೈದ್ಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 6-12-1972

• **ತಮಿಳುನಾಡು ವಿಧಾನಸಭೆ ಘಟನೆಗಳ ಅಧಿಕೃತ ವರದಿಗೆ ಕೇಂದ್ರದ ಕರೆ**

ನವದೆಹಲಿ, ಡಿ. 5– ತಮಿಳುನಾಡು ವಿಧಾನಸಭೆಯಲ್ಲಿ ಶನಿವಾರ ಒಂದೇ ಬಾರಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ನಡೆಸಿದ ಕಾರ್ಯಕಲಾಪಗಳ ಬಗೆಗೆ ಅಧಿಕೃತ ವರದಿಯನ್ನು ಕೇಂದ್ರ ಸರ್ಕಾರ ಕೇಳಿದೆಯೆಂದು ಗೃಹಶಾಖೆ ರಾಜ್ಯ ಸಚಿವ ಕೆ.ಸಿ. ಪಂತ್ ಅವರು ಇಂದು ರಾಜ್ಯಸಭೆಗೆ ತಿಳಿಸಿದರು.

ತಮಿಳುನಾಡಿನಲ್ಲಿ ಉದ್ಭವಿಸಿರುವುದೆಂದು ಕೆಲವರು ಸದಸ್ಯರು ವರ್ಣಿಸಿದ 'ಸಂವಿಧಾನ ಬಿಕ್ಕಟ್ಟು' ಕುರಿತು ಕೇಂದ್ರ ಸರ್ಕಾರ ಒಂದು ನಿಲುವಿಗೆ ಕಟ್ಟುಬೀಳುವಂತೆ ಒಗ್ಗಟ್ಟಾಗಿ ನಡೆಸಿದ ಪ್ರಯತ್ನವನ್ನು ಪಂತ್ ಅವರು ಪ್ರತಿರೋಧಿಸಿದರು.

• **ವೇತನ ಭತ್ಯೆ ಹೆಚ್ಚಳಕ್ಕಿಂತ ನ್ಯಾಯಬೆಲೆಗೆ ವಸ್ತುಗಳು**

ಬೆಂಗಳೂರು, ಡಿ. 5– ವೇತನ, ಭತ್ಯೆಗಳ ಪರಿಷ್ಕರಣಕ್ಕಿಂತ ಸರ್ಕಾರಿ ನೌಕರರು ಅಗತ್ಯ ವಸ್ತುಗಳನ್ನು ನ್ಯಾಯಬೆಲೆಗೆ ಪಡೆಯುವ ಮಾರ್ಗ ಅನುಸರಿಸಲೆಂದು ಹಣಕಾಸು ಸಚಿವ ಶ್ರೀ ಎಂ.ವೈ. ಘೋರ್ಪಡೆ ಅವರು ಇಂದು ವಿಧಾನಸಭೆಯಲ್ಲಿ ಕರೆಯಿತ್ತರು.

ರಾಜ್ಯದ ಆದಾಯದಲ್ಲಿ ನೌಕರರ ಸಂಬಳ ಸಾರಿಗೆಗಳಿಗೆ ಈಗ ಖರ್ಚು ಮಾಡುತ್ತಿರುವ ಹಣ ಶೇ 37ರಷ್ಟು ಆಗಿದೆಯೆಂದು ಅವರು ತಿಳಿಸಿ 'ಇದಕ್ಕೂ ಮಿತಿಮೀರಿ ಮಾಡಿದರೆ ಪ್ರಗತಿಗೆ ಧಕ್ಕೆ ಆಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಸಂಗತ

ಪೋಷಕರ ಜವಾಬ್ದಾರಿ ಹೆಚ್ಚು

ಕೆಲವು ಮಕ್ಕಳು ಯಾವುದೋ ಮೋಡಿಗೆ ಒಳಗಾದವರಂತೆ ಹಾದಿ ತಪ್ಪಿ ನಡೆಯುತ್ತಿದ್ದಾರೆ. ನಾವು ನಾಟಕ ನೋಡುವಂತೆ ನೋಡುತ್ತಾ ಕೂತಿದ್ದೇವೆ

• ಸದಾಶಿವ್ ಸೊರಟೂರು

ಇದು ನನ್ನ ಶಿಕ್ಷಕ ಮಿತ್ರರು ಹೇಳಿದ ಅವರದೇ ಅನುಭವ. ಅವರು ಪಾಠ ಮಾಡುವಾಗ ಕೊನೆಯ ಬೆಂಚಿನಲ್ಲಿ ಕೂತ ವಿದ್ಯಾರ್ಥಿಯೊಬ್ಬ ಚಿತ್ರವೊಂದನ್ನು ಬಿಡಿಸುತ್ತಿದ್ದನಂತೆ. ಹುಡುಗನ ಗಮನ ಪಾಠದ ಕಡೆ ಇಲ್ಲದಿರುವುದನ್ನು ಗಮನಿಸಿದ ಶಿಕ್ಷಕರು ಹೋಗಿ ನೋಡಿ, ಬೆಚ್ಚಿಬಿದ್ದಿದ್ದಾರೆ. ಅಲ್ಲಿಯೇ ಏನನ್ನೂ ಹೇಳದೆ ಅವನನ್ನು ಪ್ರತ್ಯೇಕವಾಗಿ ಕರೆದು, ಮುಖ್ಯ ಶಿಕ್ಷಕರ ಬಳಿ ಕೂರಿಸಿಕೊಂಡು ಆತ್ಮೀಯವಾಗಿ ಮಾತಾಡಿದ್ದಾರೆ. ಮಗು ಹೇಳಿದ ಸುದ್ದಿ ಕೇಳಿ ಆತಂಕಗೊಂಡಿದ್ದಾರೆ.

ಹುಡುಗನ ತಂದೆಗೆ ಮೊಬೈಲ್‌ನಲ್ಲಿ ಅಶ್ಲೀಲ ಸಿನಿಮಾ ನೋಡುವ ಖಯಾಲಿ. ನೋಡಿದ ಬಳಿಕ 'ಬ್ರೌಸರ್ ಹಿಸ್ಟರಿ' ಅಳಿಸದೆ ಬಿಟ್ಟಿದ್ದಾರೆ. ಹೋಂವರ್ಕ್ ಬರೆಯಲು ಮಗುವಿಗೆ ಮೊಬೈಲ್ ಸಿಕ್ಕಿದೆ, ಅದರ ಜೊತೆಗೆ ಅಚಾನಕ್ಕಾಗಿ ವಿಡಿಯೊಗಳು ಸಿಕ್ಕಿವೆ. ಹೋಂವರ್ಕ್ ನೆವದಲ್ಲಿ ಹುಡುಗ ನಿತ್ಯ ಅಶ್ಲೀಲ ಸಿನಿಮಾ ನೋಡಿದ್ದಾನೆ. ತರಗತಿಯಲ್ಲಿ ಕೂತು ಅಶ್ಲೀಲ ಚಿತ್ರ ಬರೆದಿದ್ದಾನೆ. ಸಮಾಜ ಮಗುವನ್ನು ದೂರುತ್ತದೆ. ಆದರೆ ದೂರಬೇಕಿರುವುದು ಇಂತಹ ಜವಾಬ್ದಾರಿಹೀನ ಹೆತ್ತವರನ್ನು.

ನನ್ನ ಶಾಲೆಯ ಎಂಟನೇ ತರಗತಿ ವಿದ್ಯಾರ್ಥಿಯ ಬ್ಯಾಗಿನಲ್ಲಿ ಸಿಗರೇಟು ತುಂಡುಗಳು, ಗುಟಕಾ ಪ್ಯಾಕ್ ಅಚಾನಕ್ಕಾಗಿ ಸಿಕ್ಕಿದ್ದವು. ಪೋಷಕರು ಮಗನ ತಪ್ಪನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಯಾರೋ ತಮ್ಮ ಮಗುವಿನ ಬ್ಯಾಗಿನಲ್ಲಿ ಬಚ್ಚಿಟ್ಟು ಇವನನ್ನು ಸಿಲುಕಿಸಿರಬಹುದೆಂದು ವಾದಿಸಿದರು. ನಾವು ಮತ್ತೆ ಮಾತಾಡಲಿಲ್ಲ.

ವಿದ್ಯಾರ್ಥಿನಿಯನ್ನು ತರಗತಿಯಲ್ಲಿ ನಿಲ್ಲಿಸಿ ಹೋಂವರ್ಕ್ ಕೇಳಿದ್ದಕ್ಕೆ ಮರುದಿನ ಅವಳು ತನ್ನ ತಂದೆಯೊಂದಿಗೆ ಬಂದಿದ್ದಳು. ತರಗತಿಯ ಎಲ್ಲಾ ಮಕ್ಕಳ ಮುಂದೆ ತನ್ನನ್ನು ಹೋಂವರ್ಕ್ ಕೇಳಿದರು ಎಂಬುದು ಅವಳ ದೂರು. ವಿಚಾರವೆಂದರೆ, ಅವಳು ಹೋಂವರ್ಕ್ ಬರೆದಿರಲಿಲ್ಲ. ಪೋಷಕರು ತಮ್ಮ ಮಗುವಿನ ಪರ ವಹಿಸಿಕೊಂಡು ಮಾತನಾಡಿ ಎದ್ದು ಹೋದರು. ಮಕ್ಕಳ ಮೇಲಿನ ಅತೀ ವ್ಯಾಮೋಹ ಇನ್ನೇನು ಮಾಡಿಸೀತು?

ಪ್ರೌಢದೇವರಾಯನ ಮಂತ್ರಿ ಲಕ್ಷ್ಮೀಧರನ ತಾಯಿ ತನ್ನ ಮಗುವಿಗೆ ಮೊಲೆಯುಣಿಸುವಾಗ 'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಂ ಮಾಡಿಸು...' ಎನ್ನುತ್ತಿದ್ದಳು ಎಂದು ಶಾಸನ ಹೇಳುತ್ತದೆ. ಕನ್ನಡ ಜನಪದ ತಾಯಂದಿರು 'ಆಚಾರಕ್ಕರಸಾಗು, ನೀತಿಗೆ ಪ್ರಭುವಾಗು, ಮಾತಿನಲಿ ಚೂಡಾಮಣಿಯಾಗು- ನನಕಂದ, ಜ್ಯೋತಿಯೇ ಆಗು ಜಗಕೆಲ್ಲ' ಎಂದು ಮಕ್ಕಳಿಗೆ ಹೇಳುತ್ತಿದ್ದರು. ಈಗ ಪೋಷಕರು ಮಕ್ಕಳಿಗೆ ಹೇಳುವುದು ಒಂದೇ ಮಾತು 'ಎಷ್ಟು ಮಾರ್ಕ್ಸ್ ಬಂದಿದೆ?' ಶಾಲೆಗೆ ಬರುವ ಪ್ರತೀ ಪೋಷಕರದು ಏಕೈಕ ವಿಚಾರಣೆ 'ನಮ್ಮ ಮಗು ಹೇಗೆ ಓದ್ತಾ ಇದೆ?' ಅಷ್ಟೆ. ಅವನ ವರ್ತನೆ ಹೇಗಿರುತ್ತದೆ ಎಂಬುದನ್ನು ಕೇಳುವವರೇ ಇಲ್ಲ!

ಬಹುತೇಕ ಪೋಷಕರು ಮಕ್ಕಳನ್ನು ತಮ್ಮ ನಾಳೆಗಳಿಗೆ ಹೂಡಿಕೊಂಡಿರುವ ಬಂಡವಾಳದಂತೆ ನೋಡುತ್ತಿದ್ದಾರೆ. ನಾಳೆ ಏನಾದರೂ ಆಗು ಆದರೆ ಮನುಷ್ಯನಾಗು ಎಂದು ಹೇಳುವ ಪೋಷಕರನ್ನು ದುರ್ಬೀನು ಹಾಕಿಕೊಂಡು ಹುಡುಕಬೇಕಿದೆ. 'ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುತ್ತವೆ' ಎನ್ನುತ್ತಾರೆ. ಕೆಲವು ಮಕ್ಕಳ ವರ್ತನೆಗಳನ್ನು ನೋಡಿದರೆ ನಾವು ಅವರ ಎದೆಯೊಳಗೆ ಎಂತಹ ಬೀಜ ಹಾಕಿದ್ದೇವೆ ಎಂದು ಯೋಚಿಸಬೇಕಾಗುತ್ತದೆ.

ಕೌಟುಂಬಿಕ ಮೌಲ್ಯಗಳು ಸಂಪೂರ್ಣ ಕುಸಿದಿವೆ. ಅಮ್ಮ ಧಾರಾವಾಹಿ ನೋಡುತ್ತಾ ಹೋಂವರ್ಕ್ ಬರೆಸುತ್ತಾಳೆ. ಅಪ್ಪ ಬ್ರೇಕಿಂಗ್ ನ್ಯೂಸ್ ನೋಡುತ್ತಾ ಮೈಮರೆಯುತ್ತಾನೆ. ಅದನ್ನು ನೋಡಿದ ಮಗುವಿನ ತಲೆಯೊಳಗೆ ಯುದ್ಧಗಳೇಳುತ್ತವೆ. ಅಪ್ಪ, ಅಮ್ಮ, ಮಕ್ಕಳೊಟ್ಟಿಗೆ ಊಟಕ್ಕೆ ಕೂತು ಅವರ ಮಾತುಗಳಿಗೆ ಕಿವಿಯಾದ ಉದಾಹರಣೆಗಳೆಷ್ಟು?

ಮಕ್ಕಳಿಗೆ ಪಾಲಕರು ಮಾನಸಿಕವಾಗಿ ಅಲಭ್ಯರಾಗುತ್ತಿದ್ದಾರೆ. ಆ ಕೊರತೆಯ ಒಂಟಿತನವನ್ನು ಈಗ ಮೊಬೈಲ್, ಟಿ.ವಿ, ಸಿನಿಮಾಗಳು ಆವರಿಸಿವೆ. ದೃಶ್ಯಮಾಧ್ಯಮಗಳಲ್ಲಿ ವಿಜೃಂಭಿಸುವ ಹಿಂಸೆ-ಕ್ರೌರ್ಯ-ಅಶ್ಲೀಲತೆ ಸುಲಭವಾಗಿ ಮಕ್ಕಳನ್ನು ಆಕರ್ಷಿಸಿವೆ. ಮಗು ತನಗೇ ಗೊತ್ತಿಲ್ಲದಂತೆ ತಪ್ಪುಹಾದಿ ಹಿಡಿಯುತ್ತದೆ. ಅಂತಹ ಸಂದರ್ಭದಲ್ಲಿ ಒದಗುವ ಸ್ನೇಹಿತರ ಒಡನಾಟ, ಪ್ರೀತಿ ಪ್ರೇಮದ ಕಪಟಗಳನ್ನು ಅರಿಯದೆ ತಾತ್ಕಾಲಿಕವಾಗಿ ಭಾವೋದ್ರೇಕಗೊಳಿಸುವ, ಮನರಂಜನೆ ನೀಡಬಹುದಾದ ಮಾದಕ ವ್ಯಸನಗಳ ಸೆಳೆತಕ್ಕೆ ಬಿದ್ದು ಸುಂದರ ಬದುಕನ್ನು ಹಾಳು ಮಾಡಿಕೊಳ್ಳುತ್ತದೆ. ಕೆಲವು ಶಿಕ್ಷಕರ ವಿಚಿತ್ರ ವರ್ತನೆಗಳು ಮತ್ತು ಶಾಲೆಯ ವಾತಾವರಣ ಮಗುವನ್ನು ಪ್ರಭಾವಿಸಿದ ಉದಾಹರಣೆಗಳು ಕೂಡ ಇವೆ. ಇಷ್ಟೊಂದು ವ್ಯತಿರಿಕ್ತವಾದ ಕಾಲದಲ್ಲೂ ಕೆಲವು ಪೋಷಕರು, ಶಿಕ್ಷಕರು ಮಕ್ಕಳನ್ನು ಅಷ್ಟೇ ಜತನವಾಗಿ ಕಾಪಾಡುತ್ತಿದ್ದಾರೆ. ಅದು ಆ ಮಕ್ಕಳ ಅದೃಷ್ಟ. ಕೆಲವು ಮಕ್ಕಳು ಯಾವುದೋ ಮೋಡಿಗೆ ಒಳಗಾದವರಂತೆ ಹಾದಿ ತಪ್ಪಿ ನಡೆಯುತ್ತಿದ್ದಾರೆ. ನಾವು ನಾಟಕ ನೋಡುವಂತೆ ನೋಡುತ್ತಾ ಕೂತಿದ್ದೇವೆ.

ಇಷ್ಟಪಟ್ಟ ಬಟ್ಟೆ, ರುಚಿಯಾದ ಊಟ, ವಸತಿ, ಬೇಕಾದ ವಸ್ತುಗಳನ್ನು ಕೊಟ್ಟು ಒಳ್ಳೆಯ ಶಾಲೆಗೆ ಕಳುಹಿಸುವುದರಿಂದ ಮಾತ್ರ ಮಕ್ಕಳು ಉತ್ತಮವಾಗಿ ಬೆಳೆಯುವುದಿಲ್ಲ. ಬರೀ ಉತ್ತಮ 'ಸಂಸ್ಕೃತಿ-ಸಂಸ್ಕಾರ' ಕಲಿಸಿದೆ ಅನ್ನುವುದೂ ಮಗುವಿಗೆ ಕೊಟ್ಟ ದೊಡ್ಡ ಕಾಣಿಕೆಯಲ್ಲ. ಒಂದು ಮಗುವಿನ ದೈಹಿಕ, ಮಾನಸಿಕ, ಸಾಮಾಜಿಕ, ಭಾವನಾತ್ಮಕ, ಲೈಂಗಿಕ ಬದಲಾವಣೆಗಳನ್ನು ಪೋಷಕರು ತಿಳಿದುಕೊಂಡು ಅದರಂತೆ ಮಕ್ಕಳನ್ನು ನಡೆಸಿಕೊಳ್ಳಬೇಕು. ಅದು ಮಗುವನ್ನು ಬೆಳೆಸುವ ಪರಿ.

ವಾಚಕರ ವಾಣಿ

ವ್ಯವಸ್ಥೆಯನ್ನು ಪ್ರಶ್ನಿಸಬೇಕಿದೆ

ಬೈಕ್ ಹಿಂದಿಕ್ಕಿದ ಕಾರಣಕ್ಕೆ ಪ್ರಬಲ ಜಾತಿಗೆ ಸೇರಿದ ಯುವಕರಿಂದ ಹಲ್ಲೆ, ಜಾತಿ ನಿಂದನೆಗೆ ಒಳಗಾದ ಕೋಲಾರ ಜಿಲ್ಲೆಯ ಒಬ್ಬ ದಲಿತ ಯುವಕ ಆತ್ಮಹತ್ಯೆಗೆ ಶರಣಾಗಿದ್ದು ಆಘಾತಕಾರಿ. ಆದರೆ ಈ ಪ್ರಕರಣದಲ್ಲಿ ಮೃತ ಯುವಕನ ಧೈರ್ಯವನ್ನು ಪ್ರಶ್ನಿಸುವುದು ಉಚಿತವಲ್ಲ. ಆ ಯುವಕನಿಗೆ ಆದಂತಹ ಅವಮಾನವನ್ನು ನಮ್ಮಲ್ಲಿನ ಬಹುತೇಕರು ಅನುಭವಿಸಿರುವ ಸಾಧ್ಯತೆ ಕಡಿಮೆ. ಆತನ ನೋವು, ಹತಾಶೆಯ ತೀವ್ರತೆಯನ್ನು ಯಾರೂ ಊಹಿಸಲು ಸಾಧ್ಯವಿಲ್ಲ. ಹೀಗಿರುವಾಗ ಆತ ಹೆದರಿದನೆಂದು ಭಾವಿಸುವುದು ಸರಿಯಲ್ಲ. ಮೃತ ಯುವಕ ಧೈರ್ಯವಂತ ಆಗಿದ್ದಿರಬಹುದು ಅಥವಾ ಆಗಿಲ್ಲದೆಯೂ ಇರಬಹುದು. ಗೌರವಯುತವಾಗಿ ಬದುಕುವುದು ಆತನ ಹಕ್ಕಾಗಿತ್ತು. ಆ ಹಕ್ಕನ್ನು ಕಸಿದುಕೊಂಡಿದ್ದು ನಮ್ಮ ಸಮಾಜ. ದೂಷಿಸಬೇಕಿರುವುದು ನಮ್ಮ ಸಮಾಜವನ್ನೇ ವಿನಾ ಅದಕ್ಕೆ ಬಲಿಪಶುವಾದ ಯುವಕನನ್ನಲ್ಲ.

ಸುನೀಲ ನಾಯಕ, ಬೆಂಗಳೂರು

ದುಸ್ಸಾಹಸ ಬೇಡ, ಪರಿವರ್ತಕ ಸ್ಥಳಾಂತರಿಸಿ

ಮೊಳಕಾಲ್ಮುರು ತಾಲ್ಲೂಕಿನ ಗುಂಡ್ಲೂರು ಕೆರೆಯ ಮಧ್ಯದಲ್ಲಿರುವ ವಿದ್ಯುತ್ ಪರಿವರ್ತಕವು ಕೆಟ್ಟುಹೋದ ಕಾರಣಕ್ಕಾಗಿ ಲೈನ್‌ಮ್ಯಾನ್ ಸುನಿಲ್ ಕುಮಾರ್ ತಮ್ಮ ಪ್ರಾಣಾಪಾಯವನ್ನು ಲೆಕ್ಕಿಸದೆ ಸುಮಾರು ದೂರ ಕೆರೆಯಲ್ಲಿ ಈಜಿಕೊಂಡು ಹೋಗಿ ದುರಸ್ತಿಪಡಿಸಿರುವುದು (ಪ್ರ.ವಾ., ಡಿ. 5) ನಿಜಕ್ಕೂ ಶ್ಲಾಘನೀಯ. ಆದರೆ ಅವರು ಇಂತಹ ದುಸ್ಸಾಹಸಕ್ಕೆ ಕೈ ಹಾಕಬಾರದಿತ್ತು. ಅಕಸ್ಮಾತ್ ಅವಘಡ ಸಂಭವಿಸಿದ್ದರೆ ಪ್ರಸ್ತುತ ಅವರನ್ನು ವೈಭವೀಕರಿಸುತ್ತಿರುವ ಸಾಮಾಜಿಕ ಜಾಲತಾಣಗಳು ಇಡೀ ವ್ಯವಸ್ಥೆಯನ್ನು ತರಾಟೆಗೆ ತೆಗೆದುಕೊಂಡು, ಸರ್ಕಾರವನ್ನು ಪೇಚಿಗೆ ಸಿಲುಕಿಸುತ್ತಿದ್ದವು. ಪೊಲೀಸ್ ಇಲಾಖೆಗೂ ಮಸಿ ಬಳಿಯುತ್ತಿದ್ದವು.

ಬೆಸ್ಕಾಂ ಅಧಿಕಾರಿಗಳು ಕೆರೆಯ ನೀರಿನಲ್ಲಿರುವ ವಿದ್ಯುತ್ ಪರಿವರ್ತಕವನ್ನು ಸ್ಥಳಾಂತರಿಸಿ, ತಮ್ಮ ಇಲಾಖೆ ಸಿಬ್ಬಂದಿಯು ಅಪಾಯಕ್ಕೆ ಒಡ್ಡಿಕೊಳ್ಳುವುದನ್ನು ತಪ್ಪಿಸಲು ಕಾರ್ಯಪ್ರವೃತ್ತರಾಗಬೇಕು.

ಪ.ಚಂದ್ರಕುಮಾರ ಗೌನಹಳ್ಳಿ, ಚಿತ್ರದುರ್ಗ

ಆಟದ ಮೈದಾನ ಖಾಲಿ ನಿವೇಶನವಲ್ಲ

ಬೆಂಗಳೂರಿನ ಬಸವನಗುಡಿ ವಿಧಾನಸಭಾ ಕ್ಷೇತ್ರದ ಶ್ರೀನಗರ ವಾರ್ಡ್ ವ್ಯಾಪ್ತಿಯ ಮದ್ದೂರಮ್ಮ ಮೈದಾನದಲ್ಲಿ ಶಾಲೆ ನಿರ್ಮಾಣವಾಗುತ್ತಿರುವುದರ ಕುರಿತು ಸ್ಥಳೀಯರಿಂದ ವಿರೋಧ ವ್ಯಕ್ತವಾಗಿರುವುದು ವರದಿಯಾಗಿದೆ (ಪ್ರ.ವಾ., ಡಿ. 4). ಇದು ಒಳ್ಳೆಯ ಬೆಳವಣಿಗೆ. ಏಕೆಂದರೆ ಬೆಂಗಳೂರಿನಲ್ಲಿ ಕ್ರೀಡೆಗಳಿಗೆಂದು ಮೀಸಲಿಟ್ಟ ಮೈದಾನಗಳು ಅನ್ಯ ಉದ್ದೇಶಗಳಿಗೆ ಧಾರಾಳವಾಗಿ ಬಳಕೆಯಾಗುತ್ತಿವೆ. ಸಭೆ, ಸಮಾರಂಭಗಳಿಗಾಗಿ ಆಟದ ಮೈದಾನಗಳ ಅತಿಕ್ರಮಣ ತಾತ್ಕಾಲಿಕ ಸ್ವರೂಪದ್ದಾದರೆ, ಸರ್ಕಾರದ ಕಚೇರಿಗಾಗಿ, ಶಾಲೆಗಳಿಗಾಗಿ, ಶುದ್ಧ ನೀರಿನ ಘಟಕಕ್ಕಾಗಿ, ಇಂದಿರಾ ಕ್ಯಾಂಟೀನ್‌ಗಾಗಿ ಕಟ್ಟಡಗಳನ್ನು ನಿರ್ಮಾಣ ಮಾಡುವುದು ಶಾಶ್ವತ ಅತಿಕ್ರಮಣವಾಗಿದೆ. ಆಟದ ಮೈದಾನಗಳು ಕೆಲವು ಸಾರ್ವಜನಿಕರಿಗೆ ಮತ್ತು ಸರ್ಕಾರಕ್ಕೆ ವ್ಯರ್ಥವಾಗಿ ಬಿದ್ದಿರುವ ಖಾಲಿ ನಿವೇಶನಗಳಂತೆ ಕಾಣುತ್ತಿರಬಹುದು.

ಶಾಲಾಕಾಲೇಜುಗಳು ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಎಷ್ಟು ಮುಖ್ಯವೋ ಹಾಗೆಯೇ ಆಟದ ಮೈದಾನಗಳು ಅವರ ಶರೀರದ ಸದೃಢ ಬೆಳವಣಿಗೆಗೆ ಅಷ್ಟೇ ಮುಖ್ಯ ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಒಂದು ಕಡೆ ಮೊಬೈಲ್ ಗೀಳಿನಲ್ಲಿ ಸಿಕ್ಕಿಹಾಕಿಕೊಂಡಿರುವ ಮಕ್ಕಳಿಗೆ ತಮ್ಮ ಶರೀರಕ್ಕೆ ವ್ಯಾಯಾಮ ಬೇಕು ಅನಿಸುತ್ತಿಲ್ಲ. ಇನ್ನೊಂದು ಕಡೆ, ಆಟಕ್ಕೆ ಮೀಸಲಿಟ್ಟ ಆಟದ ಮೈದಾನಗಳು ಅನ್ಯ ಉದ್ದೇಶಕ್ಕೆ ಎಗ್ಗಿಲ್ಲದೆ ಬಳಕೆಯಾಗುತ್ತಿವೆ. ಆರೋಗ್ಯವಂತ ಸಮಾಜ ನಿರ್ಮಾಣದ ದೃಷ್ಟಿಯಿಂದ, ಮನೆಯಲ್ಲಿ ಪೋಷಕರು ಮತ್ತು ಶಾಲೆಗಳಲ್ಲಿ ಶಿಕ್ಷಕರು ಮಕ್ಕಳಿಗೆ ಆಟದ ಮಹತ್ವದ ಅರಿವನ್ನು ಮೂಡಿಸುವ ಅಗತ್ಯವಿದೆ. ಹಾಗೆಯೇ ಆಟಕ್ಕೆ ಮೀಸಲಿಟ್ಟ ಮೈದಾನಗಳನ್ನು ಅನ್ಯ ಉದ್ದೇಶಗಳಿಗೆ ಬಳಸಬಾರದೆಂಬ ಎಚ್ಚರ ಸಾರ್ವಜನಿಕರಿಗೆ ಮತ್ತು ಸರ್ಕಾರಕ್ಕೆ ಮೂಡಬೇಕಿದೆ. ಒಂದು ವೇಳೆ ಆಟದ ಮೈದಾನಗಳನ್ನು ಅತಿಕ್ರಮಿಸುವ ಪ್ರಯತ್ನಗಳು ನಡೆದರೆ ಅದನ್ನು ವಿರೋಧಿಸುವ ಛಾತಿಯನ್ನು ಸಾರ್ವಜನಿಕರು ಬೆಳೆಸಿಕೊಳ್ಳಬೇಕಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ವಿದೇಶದಲ್ಲಿ ಓದು: ವ್ಯಾಮೋಹ ಬೇಡ

ಗೂಗಲ್ ಮತ್ತು ಆಲ್ಫಾಬೆಟ್ ಸಿಇಒ, ಭಾರತ ಮೂಲದ ಸುಂದರ್ ಪಿಚೈ ಅವರಿಗೆ ಈ ಬಾರಿ ಸಂದಿರುವ ಪದ್ಮಭೂಷಣ ಪ್ರಶಸ್ತಿಯನ್ನು ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ಭಾರತದ ರಾಯಭಾರಿ ಅವರು ಕೊಡಮಾಡಿದ್ದನ್ನು (ಪ್ರ.ವಾ., ಡಿ. 4) ಓದಿ ಬಹಳ ಸಂತಸಪಟ್ಟವರಲ್ಲಿ ನಾನೂ ಒಬ್ಬ. ತಮಿಳುನಾಡಿನ ಒಂದು ಹಳ್ಳಿಯಲ್ಲಿ ಜನಿಸಿ, ಖರಗ್‌ಪುರದ ಐಐಟಿಯಲ್ಲಿ ಉನ್ನತ ವಿದ್ಯಾಭ್ಯಾಸ ಪೂರೈಸಿದ ಅವರು, ಗೂಗಲ್ ಸಂಸ್ಥೆಯ ಉನ್ನತ ಹುದ್ದೆಯನ್ನು ಅಲಂಕರಿಸಿರುವುದು ಭಾರತೀಯರ ಹೆಮ್ಮೆ. ಇದೇ ತರಹ ನೂರಾರು ಮಂದಿ ಭಾರತದಲ್ಲಿ ಉನ್ನತ ವ್ಯಾಸಂಗ ಮುಗಿಸಿದವರು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದ್ದಾರೆ. ಇದಕ್ಕೆ ಕಾರಣ ನಮ್ಮ ಭಾರತದ ವಿದ್ಯೆಯ ಶ್ರೇಷ್ಠ ಮಟ್ಟ. ಇನ್ನಾದರೂ ನಮ್ಮವರು ವಿದೇಶಗಳಿಗೆ ಓದಲು ಹೋಗುವ ವ್ಯಾಮೋಹವನ್ನು ಬಿಡಲಿ. ಎಲ್ಲೇ ಕೆಲಸ ಮಾಡಿದರೂ ಭಾರತಕ್ಕೆ ಗೌರವವನ್ನು ತರಲಿ.

ರಾ.ಬಾ.ವರದರಾಜನ್, ಬೆಂಗಳೂರು

ಕಾಂಗ್ರೆಸ್‌ನಲ್ಲಿ ಕಸುವು ಉಳಿದಿರಬಹುದು!

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಪದಾಧಿಕಾರಿಗಳಿಗೆ ನೀಡಿರುವ 'ಹೊಣೆ ನಿರ್ವಹಿಸಿ, ಇಲ್ಲಾ ದಾರಿ ಬಿಡಿ' ಎಂಬ ಕರೆ (ಪ್ರ.ವಾ., ಡಿ. 5), ಪಕ್ಷದಲ್ಲಿ ಇನ್ನೂ ಕಸುವು ಉಳಿದಿರಬಹುದು ಎಂಬುದಕ್ಕೆ ಸೂಚನೆ ನೀಡುವಂತಿದೆ! ದೇಶದ ಪ್ರಸಕ್ತ ರಾಜಕೀಯವು ಗತಿ ಮತ್ತು ಆಕೃತಿಗಳನ್ನು ಕಳೆದುಕೊಂಡಂತಿದೆ. ವ್ಯಕ್ತಿಗತ ಅಧಿಕಾರ ಲಾಲಸೆಗೆ ಮಾತಿನ ಮೋಡಿಯ ಮುಸುಕುಹಾಕಿ ಅದನ್ನು ಮುನ್ನೂಕುವ ಚಾಲಾಕೇ ದೇಶವನ್ನಾಳುವ ಸಾಮರ್ಥ್ಯ ಎಂದು ಆಲಸಿ ಮಹಾಜನತೆಯನ್ನು ನಂಬಿಸಲಾಗಿದೆ. ಹಾಗಾಗಿ ಮಹಾಜನತೆ ವೈಚಾರಿಕತೆಯನ್ನು ಬದಿಗೊತ್ತಿ ನಿದ್ದೆಗೆ ಜಾರಿದೆ.

ಜನಜಾಗೃತಿ ಎಂಬುದು ಇಂದಿನ ತುರ್ತು ಅಗತ್ಯ. ಖರ್ಗೆಯವರ ಈ ಮಾತು ಅಷ್ಟನ್ನಾದರೂ ಮಾಡುವಲ್ಲಿ ಯಶಸ್ವಿಯಾದರೆ, ಪ್ರತಿಪಕ್ಷವೆನಿಸಿರುವ ಕಾಂಗ್ರೆಸ್ ತನ್ನ ಆ ಸ್ಥಾನಕ್ಕೆ ಸಾರ್ಥಕತೆ ಕಲ್ಪಿಸಿದಂತೆ ಆಗುತ್ತದೆ!

ಆರ್.ಕೆ.ದಿವಾಕರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಾರಿ ಯಾವುದಯ್ಯಾ 'ಮೀಸಲು ಮನೆಗೆ'?



ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿ ಪಡೆಯಲು ಆರ್ಥಿಕವಾಗಿ ದುರ್ಬಲರಾಗಿರುವ ಮೇಲ್ವರ್ಗದ ಜನಾಂಗಗಳನ್ನು ಒಳಗೊಂಡು ಎಲ್ಲರೂ 'ಮೀಸಲಾತಿಯ ಮನೆ'ಗೆ ನುಗ್ಗುವ ಪೈಪೋಟಿಯಲ್ಲಿದ್ದಾರೆ. ಮೀಸಲು ಮನೆ ಇಕ್ಕಟ್ಟಾಗಿದೆ ಮತ್ತು ಮೀಸಲು ಮನೆಯ ದಾರಿಯನ್ನೂ ಮುಚ್ಚಲಾಗಿದೆ. 1990ರ ನಂತರ ಭಾರತದ ಪ್ರಭುತ್ವ ಅನುಸರಿಸುತ್ತಿರುವ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣ ನೀತಿಗಳಿಂದ ನಮ್ಮ ದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ ತಳಪಾಯವೇ ಬದಲಾಗುತ್ತಿದೆ

• ಡಾ.ಸಿದ್ಧನಗೌಡ ಪಾಟೀಲ

ಭಾರತದಲ್ಲಿ 'ಮೀಸಲಾತಿ' ಎಂಬುದು ಹೊಸ ವ್ಯಾಖ್ಯಾನಗಳಿಗೆ ಒಳಗಾಗುತ್ತಿದೆ. ಒಂದು ಕಾಲದಲ್ಲಿ ಮೀಸಲಾತಿಯನ್ನು ವಿರೋಧಿಸುತ್ತಿದ್ದ ಸಮಾಜದ ಮೇಲ್ಪದರಿನಲ್ಲಿರುವ ಜಾತಿ, ವರ್ಗಗಳ ಜನರೂ ಇಂದು ತಮಗೂ ಮೀಸಲಾತಿ ಬೇಕು ಎಂದು ಬೀದಿಗಿಳಿದಿದ್ದಾರೆ. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಹೊರತಳ್ಳಲ್ಪಟ್ಟ ಜನರನ್ನು ಒಳಗೊಳ್ಳುವ ಕಾರಣಕ್ಕಾಗಿ ರೂಪುಗೊಂಡ ಮೀಸಲಾತಿ ವ್ಯವಸ್ಥೆ ಇಂದು ರಾಜಕೀಯ ಕಾರಣಕ್ಕಾಗಿ ತನ್ನ ಮೂಲ ಆಶಯವನ್ನೇ ಕಳೆದುಕೊಂಡಿದೆ. ಸಾಮಾಜಿಕ ವ್ಯವಸ್ಥೆಯಲ್ಲಿರುವ ಅಸಮಾನತೆಯ ನಿವಾರಣೆಗಾಗಿ ರೂಪುಗೊಂಡ ವ್ಯವಸ್ಥೆ ಇಂದು ಆರ್ಥಿಕ ಅಸಮಾನತೆಯ ನಿವಾರಣೆಯ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಲ್ಪಡುತ್ತಿದೆ. ಸ್ವಾತಂತ್ರ್ಯ ಬಂದು ಎಪ್ಪತ್ತೈದು ವರ್ಷ ಕಳೆದರೂ ನಿರುದ್ಯೋಗ, ಬಡತನದಂತಹ ಸಮಸ್ಯೆಗಳನ್ನು ಪರಿಹಾರ ಮಾಡಲಾಗದ ಪ್ರಭುತ್ವ ತನ್ನ ವೈಫಲ್ಯಗಳನ್ನು ಮರೆಮಾಚಲು ಸಾಮಾಜಿಕ ಕ್ಷೇತ್ರದಲ್ಲಿ ಇಂಥ ಗೊಂದಲಗಳನ್ನು ಹುಟ್ಟು ಹಾಕುತ್ತಿದೆ.

ಸಾಮಾಜಿಕ ಅಸಮಾನತೆ ಹಾಗೂ ಆರ್ಥಿಕ ಅಸಮಾನತೆಯನ್ನು ಪರಿಹಾರ ಮಾಡಲು ಪ್ರಭುತ್ವವು ಪ್ರತ್ಯೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಅದಕ್ಕೆ ಸೂಕ್ತ ಮಾರ್ಗದರ್ಶನವನ್ನೂ ನಮ್ಮ ಸಂವಿಧಾನ ಕೊಟ್ಟಿದೆ. ಆರ್ಥಿಕ ಅಸಮಾನತೆಯ ಬೆಂಕಿಯಲ್ಲಿ ಬೆಂದವರು, ಅದಕ್ಕೆ ಕಾರಣವಾದ ಪ್ರಭುತ್ವದ ನೀತಿಯನ್ನು ಪ್ರಶ್ನಿಸದೇ ಸಾಮಾಜಿಕ ಸಮಾನತೆಗಾಗಿ ಜಾರಿಯಾದ ಮೀಸಲಾತಿ ವ್ಯವಸ್ಥೆಯನ್ನು ಪ್ರಶ್ನಿಸುವುದು ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗುತ್ತದೆ. ಮೀಸಲಾತಿ ಇನ್ನೆಷ್ಟು ದಿನ ಎಂದು ಪ್ರಶ್ನಿಸುವವರು, ಅಸ್ಪೃಶ್ಯತೆ ಇನ್ನೆಷ್ಟು ದಿನ ಎಂಬ ಪ್ರಶ್ನೆಯನ್ನೂ ಹಾಕಿಕೊಳ್ಳಬೇಕು.

ಸಂವಿಧಾನದ 17ನೇ ವಿಧಿ, 'ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸಲಾಗಿದೆ ಮತ್ತು ಯಾವುದೇ ರೂಪದಲ್ಲಿ ಅದರ ಆಚರಣೆಯನ್ನು ನಿಷೇಧಿಸಲಾಗಿದೆ' ಎಂದು ಘೋಷಿಸುತ್ತದೆ. ಈ ಆಶಯ ಜಾರಿಯಾಗಿದೆಯೇ ಎಂದು ಪ್ರಶ್ನಿಸಿಕೊಂಡರೆ ಅಸ್ಪೃಶ್ಯತೆ ಕುರಿತು ಇಂದಿಗೂ ನಡೆಯುತ್ತಿರುವ ಅಮಾನವೀಯ ಆಚರಣೆಗಳು ನಮ್ಮ ಸಾಮಾಜಿಕ ಸಮಾನತೆಯ ಗುರಿಯ ವೈಫಲ್ಯಗಳನ್ನೇ ತೋರಿಸುತ್ತವೆ. ಇಂಥ ವೈಫಲ್ಯಗಳನ್ನು ಸರಿಪಡಿಸುವ ಗುರಿಯೊಂದಿಗೇ ಹುಟ್ಟಿಕೊಂಡಿದ್ದು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಜನರಿಗಾಗಿ ಮೀಸಲಾತಿ ನೀತಿ. ಸ್ವಾತಂತ್ರ್ಯ ಪೂರ್ವದಿಂದಲೂ ಭಾರತದಲ್ಲಿ ಮೀಸಲಾತಿ ವ್ಯವಸ್ಥೆ ಇತ್ತು. ಕೊಲ್ಲಾಪುರ ಸಂಸ್ಥಾನದಲ್ಲಿ ಸಾಹುಮಹಾರಾಜರು 1902ರಲ್ಲಿ ಮೀಸಲಾತಿ ಜಾರಿ ಮಾಡಿದ್ದರು. ಮೈಸೂರು ಸಂಸ್ಥಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ನೇಮಿಸಿದ ಮಿಲ್ಲರ್ ಸಮಿತಿಯು 1919ರಲ್ಲಿ ನೀಡಿದ ವರದಿಯ ಆಧಾರದಲ್ಲಿ ಮೀಸಲಾತಿಯನ್ನು ತರಲಾಗಿತ್ತು. ಈ ಮೀಸಲಾತಿಯು ಸಾಮಾಜಿಕ ಅಸಮಾನತೆ ಹೋಗಲಾಡಿಸುವುದನ್ನೇ ಗುರಿಯಾಗಿಸಿಕೊಂಡಿದ್ದವು. ಭಾರತದ ಸಂವಿಧಾನ ರಚಿಸುವಾಗಲೂ ಮೀಸಲಾತಿ ಸಾಮಾಜಿಕ ಅಸಮಾನತೆಯನ್ನೇ ಗುರಿಯಾಗಿಸಿಕೊಂಡಿತ್ತು. ಪ್ರಸ್ತುತ 2019ರ ಸಂವಿಧಾನದ 103ನೇ ತಿದ್ದುಪಡಿ ಮೀಸಲಾತಿಯ ಮೂಲ ಆಶಯಕ್ಕೆ ವ್ಯತಿರಿಕ್ತವಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿ ಪಡೆಯಲು ಆರ್ಥಿಕವಾಗಿ ದುರ್ಬಲರಾಗಿರುವ ಮೇಲ್ವರ್ಗದ ಜನಾಂಗಗಳನ್ನು ಒಳಗೊಂಡು ಎಲ್ಲರೂ 'ಮೀಸಲಾತಿಯ ಮನೆ'ಗೆ ನುಗ್ಗುವ ಪೈಪೋಟಿಯಲ್ಲಿದ್ದಾರೆ. ಮೀಸಲು ಮನೆ ಇಕ್ಕಟ್ಟಾಗಿದೆ ಮತ್ತು ಮೀಸಲು ಮನೆಯ ದಾರಿಯನ್ನೂ ಮುಚ್ಚಲಾಗಿದೆ. 1990ರ ನಂತರ ಭಾರತದ ಪ್ರಭುತ್ವ ಅನುಸರಿಸುತ್ತಿರುವ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣ ನೀತಿಗಳಿಂದ ನಮ್ಮ ದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ ತಳಪಾಯವೇ ಬದಲಾಗುತ್ತಿದೆ. ಆಳುವ ವರ್ಗ ಮತ್ತು ಆಳುವ ಪಕ್ಷಗಳ ಆದ್ಯತೆಗಳು ಬದಲಾಗಿವೆ, ಮಾತ್ರವಲ್ಲ ಶಿಕ್ಷಣ, ಕೈಗಾರಿಕೆ, ಕೃಷಿ, ಸಾಮಾಜಿಕ ನ್ಯಾಯ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಭಾರತದ ಸಂವಿಧಾನದ ಆಶಯಗಳಿಗೆ ವ್ಯತಿರಿಕ್ತವಾಗಿ ಮತ್ತು ಕಾರ್ಪೊರೇಟ್ ಕಂಪನಿಗಳ ಹಿತಾಸಕ್ತಿಗೆ ಪೂರಕವಾದ ನೀತಿಗಳು ಪ್ರಭುತ್ವದಿಂದ ಜಾರಿಯಾಗುತ್ತಿವೆ. ಕೃಷಿ, ಕೈಗಾರಿಕೆ, ಸೇವಾವಲಯ, ಎಲ್ಲ ಉತ್ಪಾದನಾ ಕ್ಷೇತ್ರಗಳಲ್ಲೂ ಸರ್ಕಾರದ ಪ್ರವೇಶ ಮತ್ತು ಮಧ್ಯಸ್ಥಿಕೆಯನ್ನು ಕಾರ್ಪೊರೇಟ್ ವಲಯವು ನಿರಾಕರಿಸುತ್ತದೆ.

ಸ್ವಾತಂತ್ರ್ಯಾನಂತರ ಭಾರತದಲ್ಲಿ ಕೈಗಾರಿಕೆ, ವ್ಯಾಪಾರ, ಸೇವಾವಲಯದ ಕ್ಷೇತ್ರಗಳನ್ನು ತಮ್ಮ ನಿಯಂತ್ರಣದಲ್ಲಿಯೇ ಇಟ್ಟುಕೊಳ್ಳಬೇಕೆಂದು ಭಾರತದ ಅಂದಿನ ದೊಡ್ಡ ಬಂಡವಾಳಗಾರರು ಬಯಸಿದ್ದರು. 1944ರ 'ಟಾಟಾ–ಬಿರ್ಲಾ ಯೋಜನೆ' ಅದನ್ನು ಸ್ಪಷ್ಟಪಡಿಸಿತ್ತು. ಆದರೆ ಭಾರತ ಸರ್ಕಾರ, ಪ್ರಧಾನಿ ಜವಾಹರಲಾಲ್ ನೆಹರೂ ಅವರು ಖಾಸಗಿ ಬಂಡವಾಳಗಾರರ ಪ್ರಸ್ತಾವನೆಯನ್ನು ನಿರಾಕರಿಸಿದರು. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಉತ್ಪಾದನಾ ವಲಯದಲ್ಲಿ ಕೃಷಿ ಕ್ಷೇತ್ರಕ್ಕೆ ಆದ್ಯತೆ ಕೊಟ್ಟರೆ, ಎರಡು ಮತ್ತು ಮೂರನೇ ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಭುತ್ವ ಮಾಲೀಕತ್ವದ ಕೈಗಾರಿಕೆಗಳ ಆರಂಭಕ್ಕೆ ಆದ್ಯತೆ ಕೊಟ್ಟರು. ಪ್ರಭುತ್ವವು ಸಾರ್ವಜನಿಕ ಕೈಗಾರಿಕೆಗಳ ಆರಂಭಕ್ಕೆ ಚಾಲನೆ ಕೊಟ್ಟಿತು. ಉಕ್ಕು ಮತ್ತು ಕಬ್ಬಿಣ ಕೈಗಾರಿಕೆ, ಮೆಷಿನ್ ಟೂಲ್ಸ್, ಗಣಿಗಾರಿಕೆ, ವಿದ್ಯುಚ್ಛಕ್ತಿ, ತೈಲ, ಗ್ಯಾಸ್, ರಾಸಾಯನಿಕ, ಬೀಜ–ಗೊಬ್ಬರ ಇಂಥ ಎಲ್ಲ ವಲಯಗಳಲ್ಲಿಯೂ ಸಾರ್ವಜನಿಕ (ಪ್ರಭುತ್ವ ಮಾಲೀಕತ್ವ) ಕೈಗಾರಿಕೆಗಳನ್ನು ಆರಂಭಿಸಲಾಯಿತು.

1948ರ ಕೈಗಾರಿಕಾ ನೀತಿ ನಿರ್ಣಯದ ಪ್ರಕಾರ, ಸಾರ್ವಜನಿಕ ವಲಯವನ್ನು ಸ್ಥಿರೀಕರಿಸುವ ಯೋಜನೆ ರೂಪಿಸಲಾಯಿತು. 1949ರ ರಿಸರ್ವ್ ಬ್ಯಾಂಕ್ ರಾಷ್ಟ್ರೀಕರಣ, ವಿಮಾನಯಾನ ರಾಷ್ಟ್ರೀಕರಣ, 1953ರಲ್ಲಿ ಇಂಪೀರಿಯಲ್ ಬ್ಯಾಂಕ್ ರಾಷ್ಟ್ರೀಕರಣ, 1956ರಲ್ಲಿ ಜೀವ ವಿಮಾ ಕ್ಷೇತ್ರ ಹಾಗೂ ಚಿನ್ನದ ಗಣಿಗಳ ರಾಷ್ಟ್ರೀಕರಣ ಯೋಜನೆಗಳು ಸ್ವತಂತ್ರ ಭಾರತದ ಕೈಗಾರಿಕಾ ಕ್ಷೇತ್ರದ ಸ್ವಾವಲಂಬನೆಗೆ ಕಾರಣವಾದವು. ಪರಿಣಾಮ ಸ್ಪಷ್ಟವಾಗಿತ್ತು. 1950–51ರಲ್ಲಿ ದೇಶದಲ್ಲಿ ಖಾಸಗಿ ಬಂಡವಾಳ ₹800 ಕೋಟಿ. ಸಾರ್ವಜನಿಕ ವಲಯದ ಬಂಡವಾಳ ₹922.6 ಕೋಟಿ ಇತ್ತು. ಆದರೆ, ಒಂದು ದಶಕದಲ್ಲಿ– 1960–61ರಲ್ಲಿ ಖಾಸಗಿ ಬಂಡವಾಳ ₹1,269.7 ಕೋಟಿ ಇದ್ದರೆ, ಸಾರ್ವಜನಿಕ ವಲಯದ ಬಂಡವಾಳ ₹2,961 ಕೋಟಿಯಾಗಿತ್ತು. 1969ರಲ್ಲಿ ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಿ 8,000ದಷ್ಟಿದ್ದ ಬ್ಯಾಂಕ್ ಶಾಖೆಗಳನ್ನು ಮೂವತ್ತು ವರ್ಷಗಳಲ್ಲಿ 60,000 ಶಾಖೆಗಳಿಗೆ ಏರಿಸಲಾಯಿತು. ಬ್ಯಾಂಕ್‌ಗಳನ್ನು ಗ್ರಾಮಗಳಿಗೆ ವಿಸ್ತರಿಸಲಾಯಿತು. ಆರ್ಥಿಕ ವಲಯವನ್ನು ಒಡೆತನಕ್ಕೆ ಪಡೆದ ಪ್ರಭುತ್ವ ದೇಶದಾದ್ಯಂತ ಸೇವಾ ವಲಯ ಹಾಗೂ ಉತ್ಪಾದನಾ ವಲಯದಲ್ಲಿ ಸಾರ್ವಜನಿಕ ಬಂಡವಾಳ ಹೂಡಿತು. ಅದರ ಪರಿಣಾಮವಾಗಿ ದೇಶದ ಎಲ್ಲ ಕಡೆ ಸಾರ್ವಜನಿಕ ವಲಯದಲ್ಲಿ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗಿ ಅಲ್ಲಿ ಮೀಸಲಾತಿಯೂ ಜಾರಿಗೆ ಬಂದಿತು. ಹೀಗೆ ರಾಷ್ಟ್ರೀಕರಣ ನೀತಿಯಿಂದಾಗಿ ದೇಶದ ಆರ್ಥಿಕ ಸ್ವಾವಲಂಬನೆ ಮತ್ತು ಉದ್ಯೋಗ ಸೃಷ್ಟಿ, ಉದ್ಯೋಗದಲ್ಲಿ ಸಾಮಾಜಿಕ ನ್ಯಾಯ ಎಲ್ಲವೂ ಸಾಧ್ಯವಾಗಿ ದೇಶ ಪ್ರಗತಿಯತ್ತ ಸಾಗಿತ್ತು.

ಆದರೆ, ಈ ಎಲ್ಲ ಸಾಧನೆಗಳನ್ನೂ ಇಂದಿನ ಖಾಸಗೀಕರಣ ಉದಾರೀಕರಣ ನೀತಿ ಮಣ್ಣು ಪಾಲಾಗಿಸಿದೆ. ಖಾಸಗೀಕರಣದಿಂದ ದೇಶ ಸ್ವಾವಲಂಬನೆ ಮತ್ತು ಸಾಮಾಜಿಕ ನ್ಯಾಯವನ್ನು (ಮೀಸಲಾತಿ ವ್ಯವಸ್ಥೆ) ಕಳೆದುಕೊಳ್ಳುತ್ತಿದೆ. ಕೇಂದ್ರ ಸರ್ಕಾರ 'ಆಸ್ತಿ ನಗದೀಕರಣ ಯೋಜನೆ'ಯಲ್ಲಿ ಎಲ್ಲ ಸಾರ್ವಜನಿಕ ವಲಯದ ಕೈಗಾರಿಕೆ, ಉದ್ಯಮಗಳನ್ನು ಮಾರಾಟ ಮಾಡುತ್ತಿದೆ. ಈಗಾಗಲೇ 1991ರಿಂದ ಇಲ್ಲಿಯವರೆಗೆ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಿಂದ ಸುಮಾರು ₹11 ಲಕ್ಷ ಕೋಟಿಯಷ್ಟು ಬಂಡವಾಳ ಹಿಂಪಡೆಯಲಾಗಿದೆ. ಈಗ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಾರ್ವಜನಿಕ ವಲಯದ ಕೈಗಾರಿಕೆಗಳನ್ನು ಖಾಸಗಿಯವರಿಗೆ ಮಾರಿ ₹6 ಲಕ್ಷ ಕೋಟಿ ಸಂಗ್ರಹಿಸುವ ಯೋಜನೆ ಜಾರಿ ಮಾಡುತ್ತಿದ್ದಾರೆ. ಎಲ್ಲ ಸಾರ್ವಜನಿಕ ವಲಯದ ಕೈಗಾರಿಕೆ, ಉದ್ಯಮಗಳ ಉದ್ಯೋಗಗಳಲ್ಲಿ ಮೀಸಲಾತಿ ಮಾಯವಾಗಿ ಗುತ್ತಿಗೆ, ಹೊರಗುತ್ತಿಗೆ ಉದ್ಯೋಗ ಜಾರಿಯಾಗುತ್ತಿದೆ. ಸರ್ಕಾರಿ ಉದ್ಯೋಗಗಳಲ್ಲಿ ಎಲ್ಲ ಸೇರಿ ಅಂದಾಜು 60 ಲಕ್ಷ ಉದ್ಯೋಗಗಳಿದ್ದರೆ ಅದರಲ್ಲಿ ಶೇ 30ರಿಂದ ಶೇ 40ರಷ್ಟು ಖಾಲಿ ಹುದ್ದೆಗಳು. ಕರ್ನಾಟಕದಲ್ಲಿ ಮಂಜೂರಾದ ಸರ್ಕಾರಿ ಉದ್ಯೋಗಗಳ ಸಂಖ್ಯೆ 7,79,439 ಆಗಿದ್ದರೆ, 2,69,572 ಹುದ್ದೆಗಳು ಖಾಲಿ ಇವೆ. ಇಂಥ ಸಂದರ್ಭದಲ್ಲಿ ಸಮಾಜದ ಎಲ್ಲ ವರ್ಗದ ಜನರನ್ನು ಮೀಸಲು ಮನೆಗೆ ತಳ್ಳುವ ಉದ್ದೇಶವೇನು ಎಂಬ ಪ್ರಶ್ನೆ ಕಾಡುತ್ತದೆ.

ಖಾಸಗಿ ವಲಯದಲ್ಲಿರುವ ಉದ್ಯೋಗಗಳೂ ಅತಂತ್ರವಾಗಿವೆ. ಕೇಂದ್ರ ಸರ್ಕಾರ ತಂದ ಕಾರ್ಮಿಕ ಸಂಹಿತೆ ಕಾರ್ಮಿಕ ವರ್ಗಕ್ಕೆ ಮಾರಕವಾಗಿದೆ. ಶಿಕ್ಷಣ ಖಾಸಗೀಕರಣ, ಕೈಗಾರಿಕೆ ಖಾಸಗೀಕರಣ, ಸರ್ಕಾರಿ ಕೆಲಸದಲ್ಲಿಯೂ ಗುತ್ತಿಗೆ, ಹೊರಗುತ್ತಿಗೆ, ಖಾಸಗಿ ವಲಯದಲ್ಲಿ ಕಾಯಂ ಕೆಲಸಗಾರರಿಗಿಂತ ಗುತ್ತಿಗೆ ಕೆಲಸಗಾರರ ಸಂಖ್ಯೆಯೇ ಹೆಚ್ಚು. ಇಂಥ ಪರಿಸ್ಥಿತಿಯಲ್ಲಿ ಮೀಸಲಾತಿ, ಸಾಮಾಜಿಕ ನ್ಯಾಯ ಅರ್ಥ ಕಳೆದುಕೊಂಡಿದೆ.

ಮೀಸಲು ಮನೆಯನ್ನು ಇಕ್ಕಟ್ಟಾಗಿಸಿ ಮೀಸಲಾತಿಯ ಮಾರ್ಗವನ್ನು ಮುಚ್ಚುತ್ತಿರುವಾಗ ಮೀಸಲಾತಿ ಬಯಸುವ ಎಲ್ಲ ವರ್ಗ, ಜಾತಿಯ ಜನ ಪರಸ್ಪರ ಕಚ್ಚಾಡದೇ ಮೊದಲು ಸರ್ಕಾರದ ಖಾಸಗೀಕರಣ ನೀತಿಯ ವಿರುದ್ಧ ಮತ್ತು ಉದ್ಯೋಗ ಸೃಷ್ಟಿಗಾಗಿ ಒತ್ತಾಯಿಸಿ ಹೋರಾಟ ಮಾಡಬೇಕಾಗಿದೆ. ಭಾರತದ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಖಾಸಗೀಕರಣದ ವಿರುದ್ಧ ಕಾರ್ಮಿಕ ವಿರೋಧಿ ಕಾನೂನುಗಳ ವಿರುದ್ಧ ನಿರಂತರ ಹೋರಾಡುತ್ತಿವೆ. ಮೀಸಲಾತಿಗಾಗಿ ಹೋರಾಡುವ ಜನಸಮೂಹ ಕಾರ್ಮಿಕ ಸಂಘಟನೆಗಳ ಜೊತೆಗೂಡಿ ಸರ್ಕಾರದ ಖಾಸಗೀಕರಣ ನೀತಿಯ ವಿರುದ್ಧ ಹೋರಾಡಬೇಕಿದೆ. ಮೊದಲು ಇರುವ ಉದ್ಯೋಗಗಳು ಉಳಿಯಬೇಕು, ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗಬೇಕು. ಸಾಮಾಜಿಕ–ಆರ್ಥಿಕ ಸಮಾನತೆ ಸಾಧಿಸುವವರೆಗೆ ಸರ್ಕಾರಿ, ಸಾರ್ವಜನಿಕ ಮತ್ತು ಖಾಸಗಿ ವಲದಯಲ್ಲಿ ಮೀಸಲಾತಿಗಾಗಿ ಕೆಲಸದ ಭದ್ರತೆಗಾಗಿ ಹೋರಾಡಬೇಕಿದೆ. ಉದ್ಯೋಗ ಕ್ಷೇತ್ರವೇ ನಾಶವಾಗುತ್ತಿರುವಾಗ ಮೀಸಲಾತಿಗಾಗಿ ಪೈಪೋಟಿ ಅರ್ಥಹೀನ. ತಕ್ಷಣದಲ್ಲಿ ಎಲ್ಲ ಜಾತಿ, ವರ್ಗದ ಬಡವರು ಒಂದಾಗಿ ಸಂವಿಧಾನದ ಆಶಯ, ಸಾರ್ವಜನಿಕ ಸಂಪತ್ತಿನ ರಕ್ಷಣೆಗೆ ಹೋರಾಡಬೇಕಿದೆ.

ಲೇಖಕ: 'ಹೊಸತು' ನಿಯತಕಾಲಿಕದ ಸಂಪಾದಕ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಅಪಘಾತದಲ್ಲಿ ಗಾಯಗೊಂಡ ಬೈಕ್ ಸವಾರನನ್ನು ಆಸ್ಪತ್ರೆಗೆ ದಾಖಲಿಸದೇ ಸ್ಥಳದಿಂದ ಹೊರಟ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಅವರ ನಡೆ ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

'ಖಾಸಗಿ ವಲಯದಲ್ಲಿ ಮೀಸಲಾತಿ ಸಕಾಲ'

ಮೀಸಲಾತಿಯ ಕಾರಣದಿಂದ ವಿದ್ಯಾಭ್ಯಾಸದ ಅವಕಾಶವನ್ನು, ಉದ್ಯೋಗವನ್ನು ಪಡೆದುಕೊಂಡವರನ್ನು ಅವಮಾನಿಸುವ, ಅವರೊಳಗೊಂದು ಕೀಳರಿಮೆಯನ್ನು ಬೆಳೆಸುವ ಸಮಾಜದ ನಡುವೆಯೂ ಮತ್ತೊಮ್ಮೆ ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸಿದೆ. ಕಾನೂನಾತ್ಮಕವಾಗಿ ಈಗ ಮತ್ತಷ್ಟು ವಂಚಿತ ಸಮುದಾಯದ ಪ್ರತಿಭೆಗಳು ಮೀಸಲಾತಿಯ ಮೂಲಕ ವ್ಯವಸ್ಥೆಯೊಳಗೆ ಪ್ರವೇಶ ಪಡೆಯಬಹುದಾಗಿದೆ. ಆದರೆ ನಮ್ಮ ಸರ್ಕಾರಿ ಉದ್ಯೋಗ ಮಾರುಕಟ್ಟೆ ಹೇಗಿದೆ ಎಂದರೆ ಕ್ರೀಡಾಪಟುಗಳು ಸಿದ್ಧವಾಗಿ ನಿಂತಿದ್ದಾರೆ, ಆದರೆ ಆಡಲು ಕ್ರೀಡಾಂಗಣವೇ ಇಲ್ಲ ಎನ್ನುವ ಪರಿಸ್ಥಿತಿ ಇದೆ. ಹೀಗಾದರೆ ಅವರೆಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವುದು? ಮೀಸಲಾತಿಯನ್ನು ಹೆಚ್ಚಿಸಿದ್ದು ಸಂತೋಷದ ಸಂಗತಿಯೇ ಆದರೂ ಸಿಗುವ ಸರ್ಕಾರಿ ಉದ್ಯೋಗಗಳು ಎಲ್ಲಿವೆ? ಬಹುದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿರುವ ಖಾಸಗಿ ವಲಯದಲ್ಲಿ ಮೀಸಲಾತಿಗೆ ಅವಕಾಶವಿಲ್ಲ. ಹೀಗಿದ್ದರೆ ಮೀಸಲಾತಿ ಹೆಚ್ಚಳದಿಂದ ಏನು ಪ್ರಯೋಜನ? ಇದಕ್ಕೊಂದೇ ಪರಿಹಾರವೆಂದರೆ ಖಾಸಗಿ ಉದ್ಯೋಗ ರಂಗದಲ್ಲಿ ಮೀಸಲಾತಿಯನ್ನು ಒಂದು ಸೀಮಿತ ಅವಧಿಗೆ ಅನ್ವಯಿಸಬೇಕು. ಶಿಕ್ಷಣ ಸಂಸ್ಥೆಗಳು, ಕೈಗಾರಿಕೆಗಳು, ಐಟಿ ವಲಯವೂ ಸೇರಿದಂತೆ ಉದ್ಯೋಗ ನೇಮಕಾತಿಯಲ್ಲಿ ಸಾಮಾಜಿಕ ನ್ಯಾಯವನ್ನು ಕಟ್ಟುನಿಟ್ಟಾಗಿ ಪಾಲಿಸುವಂತಾಗಲಿ.

ಸಾಮಾಜಿಕ ನ್ಯಾಯದ ನಿರಾಕರಣೆ ಆಗುವುದನ್ನು ತಡೆಯಲು ಖಾಸಗಿ ವಲಯವೂ ಮೀಸಲಾತಿ ಎನ್ನುವ ತತ್ವದೊಳಗೆ ಬರುವಂತಾಗಬೇಕು. ಇಂತಹ ಉದ್ಯೋಗಗಳಿಗೆ ಬೇಕಾದ ತರಬೇತಿಯೂ ಸಿಗುವಂತಾಗಲಿ. ಆಗ ಮಾತ್ರ ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು ಎನ್ನುವ ಮಾತು ಕಾರ್ಯರೂಪಕ್ಕೆ ಬರಲು ಸಾಧ್ಯ. ಜತೆಗೆ ಸರ್ಕಾರಗಳ ನಿರ್ಲಕ್ಷ್ಯದಿಂದ ಭರ್ತಿಯಾಗದೆ ಉಳಿದ ಬ್ಯಾಕ್‌ಲಾಗ್ ಹುದ್ದೆಗಳನ್ನು ಕಾಲಮಿತಿಯೊಳಗೆ ಭರ್ತಿಮಾಡುವ ಗುರಿಯನ್ನು ಇರಿಸಿಕೊಂಡರೆ ಮಾತ್ರ ಮೀಸಲಾತಿ ಹೆಚ್ಚಳ ತುತ್ತು ಅನ್ನವಾಗಿ ಕೈಗೆಟುಕಬಹುದು. ಇಲ್ಲವಾದರೆ ಅದು ಕನಸಿನ ಗಂಟು. ಪರಿಣಾಮಕಾರಿಯಾದ ಅನುಷ್ಠಾನಕ್ಕಾಗಿ ತಟ್ಟೆಯ ಅನ್ನವನ್ನು ಇಲ್ಲದವರೊಂದಿಗೆ ಹಂಚಿಕೊಳ್ಳುವ ಉದಾರತೆಯ ಒಳಮೀಸಲಾತಿಯೂ ಕೂಡಲೇ ಜಾರಿಯಾಗಲಿ.

ಡಾ. ರೋಹಿಣಾಕ್ಷ ಶಿರ್ಲಾಲು, ಅಧ್ಯಕ್ಷ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್, ಕರ್ನಾಟಕ ಘಟಕ

'ಗುಲಾಮಿತನದ ಸಮಾಜ ಸೃಷ್ಟಿಸುವ ಹುನ್ನಾರ'

ಮೀಸಲಾತಿ ಎಂಬುದು ದಲಿತರ, ದಮನಿತರ, ಸಾವಿರಾರು ವರ್ಷಗಳಿಂದ ನೋವುಂಡ ಸಮುದಾಯಗಳಿಗೆ ಸಾಮಾಜಿಕ ಸ್ತರದಲ್ಲಿ ನೀಡಲಾದ ಸಮಾನತೆಯ ವ್ಯವಸ್ಥೆ. ಇದನ್ನು ವಿರೋಧಿಸಿ ಸೃಷ್ಟಿಯಾದ ಚಿಂತನೆಗಳೇ ಅಧಿಕಾರ ಹಿಡಿದಿರುವಾಗ ಮೀಸಲಾತಿ ಉಳಿಯುತ್ತದೆಯೇ? ಹೆಚ್ಚಿಸುವುದರಿಂದ ನ್ಯಾಯ ಸಿಗುತ್ತದೆ ಎನ್ನುವುದು ಹಗಲುಗನಸು. ತುಂಬಾ ಯೋಜಿತವಾಗಿ ಮೀಸಲಾತಿಯನ್ನು ನಗಣ್ಯ ಮಾಡುವ ರದ್ದು ಮಾಡುವ ಪ್ರಕ್ರಿಯೆಯ ಭಾಗವೇ ಖಾಸಗೀಕರಣ. ಸರ್ಕಾರಿ ಸ್ತರದಲ್ಲಿ ಮೊದಲಿಗೆ ಉದ್ಯೋಗಗಳನ್ನು ಗುತ್ತಿಗೆ ಆಧಾರದಲ್ಲಿ ಮಾಡಲಾಯಿತು. ಕಾಯಂ ಉದ್ಯೋಗಗಳಿಗೆ ತಿಲಾಂಜಲಿ ನೀಡಲಾಗುತ್ತಿದೆ. ಇದೆಲ್ಲವೂ ಕೊನೆಗೆ ಗುಲಾಮಿತನದ ಸಮಾಜ, ವರ್ಣಾಶ್ರಮದ ಸಮಾಜ ಸೃಷ್ಟಿಸುವ ಹುನ್ನಾರದ ಭಾಗವಷ್ಟೇ...

ಆದರ್ಶ ಹುಂಚದಕಟ್ಟೆ, ರಾಷ್ಟ್ರೀಯ ವಕ್ತಾರ, ಯುವ ಕಾಂಗ್ರೆಸ್

'ಉದ್ಯೋಗ 0, ಮೀಸಲು 100, ಉಪಯೋಗ ಏನು?'

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ದಮನಕ್ಕೆ ಒಳಗಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಮುದಾಯಗಳ ಏಳಿಗೆಯ ಆಶಯದಿಂದ ಮೀಸಲಾತಿಯನ್ನು ತರಲಾಗಿತ್ತು ಮತ್ತು ಅದನ್ನು ಎಲ್ಲರೂ ಸ್ವಾಗತಿಸಿದ್ದರು. ಈಗ ಮೀಸಲಾತಿಯನ್ನು ಎಲ್ಲ ಸಮುದಾಯಗಳಿಗೆ ವಿಸ್ತಾರ ಮಾಡಲಾಗಿದೆ. ಆದರೆ, ಅವಶ್ಯಕ ಸಂಖ್ಯೆಯಲ್ಲಿ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ ಎಂಬುದು ಇಂದಿನ ವಾಸ್ತವವಾಗಿದೆ. ಉದ್ಯೋಗಗಳೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಮಸ್ಯೆಗೆ ಮೂಲ ಕಾರಣ ಇಂದಿನ ಬಂಡವಾಳಶಾಹಿ ವ್ಯವಸ್ಥೆ. ವ್ಯವಸ್ಥೆಯು ಬಿಕ್ಕಟ್ಟಿನಲ್ಲಿ ಇರುವ ಕಾರಣ ಉದ್ಯೋಗಗಳು ಸೃಷ್ಟಿ ಆಗುವುದಿಲ್ಲ. ಅಂದರೆ, ಉದ್ಯೋಗ 0, ಮೀಸಲಾತಿ 100. ಇದರಿಂದ ಏನು ಪ್ರಯೋಜನ? ಇದು ವಾಸ್ತವ. ಇಲ್ಲಿ ಸರ್ಕಾರಗಳು ಜಾತಿ, ಉಪಜಾತಿ, ಹಲವು ಸಮುದಾಯಗಳ ಮೀಸಲಾತಿ ಎಂದು ಹೇಳಿ, ಜನರ ನಡುವೆ ಒಡಕು ತರುವ ಪ್ರಯತ್ನ ಮಾಡುತ್ತಿದೆ. ಇದು ಸರ್ಕಾರಗಳ ಒಡೆದು ಆಳುವ ನೀತಿ. ಹಾಗಾಗಿ, ಜನಸಾಮಾನ್ಯರು ಜಾತಿ, ಸಮುದಾಯಗಳ ವಿಭಜನೆಗೆ ಬಲಿಯಾಗದೆ, ಸಂಘಟಿತರಾಗಿ, ಎಲ್ಲ ಸಮುದಾಯಗಳಿಗೂ, ಪ್ರತಿಯೊಬ್ಬರಿಗೂ ಉದ್ಯೋಗ ಸಿಗುವ ವ್ಯವಸ್ಥೆಗಾಗಿ ಹೋರಾಟ ನಡೆಸಬೇಕಿದೆ. ಎಲ್ಲರಿಗೂ ಉದ್ಯೋಗ ಸಿಗುವಂತಹ ವ್ಯವಸ್ಥೆಗಾಗಿ ಎಲ್ಲರೂ ಹೋರಾಡಬೇಕು. ಅದೇ ಸಮಯದಲ್ಲಿ ತಕ್ಷಣದ ಪರಿಹಾರಕ್ಕಾಗಿ ಸರ್ಕಾರವು ಉದ್ಯೋಗವನ್ನು ಒದಗಿಸುವವರೆಗೆ ನಿರುದ್ಯೋಗ ಭತ್ಯೆಯನ್ನು ನೀಡಬೇಕು.

ಅಜಯ್ ಕಾಮತ್, ರಾಜ್ಯ ಕಾರ್ಯದರ್ಶಿ, ಎಐಡಿಎಸ್‌ಒ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ದೆಹಲಿಯಲ್ಲಿ ಕೊಳೆಗೇರಿ ನಿವಾಸಿಗಳಿಗೆ ಬಿಜೆಪಿ ಸರ್ಕಾರವು ಸುಸಜ್ಜಿತ ಮನೆಗಳನ್ನು ಒದಗಿಸಿದೆ. ಅಂತಹ ಫಲಾನುಭವಿಗಳ ಕುಟುಂಬ ಇದು ಎಂದು ಒಂದು ಚಿತ್ರವನ್ನು ದೆಹಲಿ ಬಿಜೆಪಿ ಘಟಕವು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದೆ. ಈ ಚಿತ್ರ ಇರುವ ಪೋಸ್ಟರ್ ಅನ್ನೂ ದೆಹಲಿ ಬಿಜೆಪಿ ಘಟಕ ಹಂಚಿಕೊಂಡಿದೆ. ಈ ಕುಟುಂಬದ ಚಿತ್ರ ಇರುವ ಪೋಸ್ಟರ್ ಅನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿ ಹಲವು ನಾಯಕರು ಹಂಚಿಕೊಂಡಿದ್ದಾರೆ. ಆದರೆ, ಪೋಸ್ಟರ್‌ನಲ್ಲಿ ಬಳಕೆಯಾಗಿರುವ ಚಿತ್ರವು ಸುಸಜ್ಜಿತ ಮನೆ ಯೋಜನೆಯ ಫಲಾನುಭವಿಗಳದ್ದಲ್ಲ.

✓ 'ಕೇಂದ್ರ ಸರ್ಕಾರದ ಮೂಲಕ ಕೊಳೆಗೇರಿ ನಿವಾಸಿಗಳಿಗೆ ಸುಸಜ್ಜಿತ ಮನೆಗಳನ್ನು ಒದಗಿಸಿರುವುದು ನಿಜ. ಆದರೆ, ಈ ಬಗ್ಗೆ ಪ್ರಚಾರಕ್ಕೆ ಬಳಸಿಕೊಂಡ ಪೋಸ್ಟರ್‌ನಲ್ಲಿ ಇರುವ ಚಿತ್ರವು ಯೋಜನೆಯ ಫಲಾನುಭವಿಗಳದ್ದಲ್ಲ. ಬದಲಿಗೆ ಆಸ್ಟ್ರೇಲಿಯಾ ನಿವಾಸಿ ಸರೂ ಬ್ರೀರ್ಲೆ ಅವರಿಗೆ ಸಂಬಂಧಿಸಿದ್ದು. ಸರೂ ಮೂಲತಃ ಮಧ್ಯಪ್ರದೇಶದವರು. 1989ರಲ್ಲಿ ಭಾರತೀಯ ಕುಟುಂಬದಲ್ಲಿ ಜನಿಸಿದ್ದ ಅವರನ್ನು, ಐದು ವರ್ಷಗಳ ನಂತರ ಪೋಷಕರು ಬಿಟ್ಟು ಹೋಗಿದ್ದರು. ಅನಾಥವಾಗಿದ್ದ ಸರೂ ಅವರನ್ನು ಆಸ್ಟ್ರೇಲಿಯಾದ ದಂಪತಿ ದತ್ತು ಪಡೆದಿದ್ದರು. ಸರೂ ಅವರು 2013ರಲ್ಲಿ ತಮ್ಮ ಕುಟುಂಬದವರನ್ನು ಹುಡುಕಿಕೊಂಡು ಮಧ್ಯಪ್ರದೇಶಕ್ಕೆ ಬಂದಿದ್ದರು. ತಮ್ಮ ಕುಟುಂಬದವರನ್ನು ಭೇಟಿ ಮಾಡಿ, ಫೋಟೊ ತೆಗೆಸಿಕೊಂಡಿದ್ದರು. ಇದಕ್ಕೆ ಸಂಬಂಧಿಸಿದ ವಿಶೇಷ ವರದಿಯನ್ನು 'ಹಿಂದುಸ್ತಾನ್ ಟೈಮ್ಸ್' 2013ರಲ್ಲಿ ಪ್ರಕಟಿಸಿತ್ತು. ಆ ವರದಿಯಲ್ಲಿ ಪ್ರಕಟವಾಗಿದ್ದ ಚಿತ್ರವನ್ನು ದೆಹಲಿ ಬಿಜೆಪಿ ಘಟಕವು ತನ್ನ ಪೋಸ್ಟರ್‌ನಲ್ಲಿ ಬಳಸಿಕೊಂಡಿದೆ. ಈ ಮೂಲಕ ಜನರ ಹಾದಿ ತಪ್ಪಿಸಿದೆ' ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮೂರು ಮತಗಳು

ನೀರದಿ ಬ್ರಹ್ಮ, ನೀರ್ಗಲ್ ಜೀವವೆನುತೊಂದು |
ಕ್ಷೀರವದು, ಘೃತವಿದದರೊಳಗೆನ್ನುತೊಂದು ||
ಕೀರು ಪರಮಾನ್ನವದು, ದ್ರಾಕ್ಷಿಯಿದೆನುತ್ತೊಂದು |
ಮೂರಿಂತು ಮತವಿವರ – ಮಂಕುತಿಮ್ಮ || 771 ||

ಪದ-ಅರ್ಥ: ನೀರಧಿ = ಸಮುದ್ರ, ನೀರ್ಗಲ್ = -ಮಂಜುಗಡ್ಡೆ, ಜೀವವೆನುತೊಂದು = ಜೀವ + ಎನುತ + ಒಂದು, ಘೃತವಿದದರೊಳಗೆನ್ನುತೊಂದು = ಘೃತವಿದು(ತುಪ್ಪ) + ಅದರೊಳಗೆ + ಎನ್ನುತ + ಒಂದು, ದ್ರಾಕ್ಷಿಯಿದೆನುತ್ತೊಂದು = ದ್ರಾಕ್ಷಿ + ಇದು + ಎನುತ್ತ + ಒಂದು, ಮೂರಿಂತು = ಮೂರು + ಇಂತು.

ವಾಚ್ಯಾರ್ಥ: ಬ್ರಹ್ಮ ಸಮುದ್ರ, ಮಂಜುಗಡ್ಡೆ ಜೀವ ಎನ್ನುವುದೊಂದು. ಬ್ರಹ್ಮ ಹಾಲು, ಅದರೊಳಗಿನ ತುಪ್ಪ ಜೀವವೆನ್ನುವುದು ಮತ್ತೊಂದು. ಬ್ರಹ್ಮ ಪಾಯಸದ ಪರಮಾನ್ನ, ಅದರಲ್ಲಿರುವ ದ್ರಾಕ್ಷಿ ಜೀವ ಎನ್ನುವುದು ಇನ್ನೊಂದು. ಹೀಗೆ ಮೂರು ಮತವಿವರಗಳಿವೆ.

ವಿವರಣೆ: ಬೆಂಗಳೂರಿನಿಂದ ತುಮಕೂರಿಗೆ ರಸ್ತೆ ಮಾರ್ಗವಾಗಿ ಹೊರಟರೆ, ಎಡಗಡೆಗೆ ಶಿವಗಂಗೆ ಬೆಟ್ಟ ಕಾಣುತ್ತದೆ. ಅದು ಒಂದು ನಂದಿ ಮೊಣಕಾಲೂರಿ ಕುಳಿತಂತೆ ತೋರುತ್ತದೆ. ಅದೇ ಬೆಟ್ಟ ತುಮಕೂರಿನ ಕಡೆಯಿಂದ ನೋಡಿದರೆ ಈಶ್ವರ ಲಿಂಗದಂತೆ ಭಾಸವಾಗುತ್ತದೆ. ಈ ಆಕಾರ ಭೇದಗಳಿಗೆ ಬೆಟ್ಟ ಕಾರಣವಲ್ಲ, ಅದು ನೋಡುವವನ ಸ್ಥಾನಭೇದ, ದೂರತೆ, ಸಮೀಪತೆಗಳಿಂದ ಆದದ್ದು. ಸ್ಥಾನಭೇದದಿಂದ ದರ್ಶನ ಭೇದ. ಬೆಟ್ಟದ ದರ್ಶನವೇ ಹೀಗೆ ಬೇರೆ ಬೇರೆಯಾಗಿರಬೇಕಾದರೆ ಪರವಸ್ತುವಿನ ದರ್ಶನದ ಭೇದ ಎಷ್ಟಿರಬೇಕು? ಈ ದರ್ಶನ ಭೇದವಿರುವುದು ನೋಡುವವನ ತಿಳಿವಳಿಕೆ, ನಂಬಿಕೆ, ದೃಷ್ಟಿಯ ಆಳಗಳ ಆಧಾರದ ಮೇಲೆ. ವೇದಾಂತದ ಮತಪ್ರಭೇದಗಳಲ್ಲಿ ಮೂರು ಮುಖ್ಯವಾದವು – ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ. ಈ ಮೂರು ಸಿದ್ಧಾಂತಗಳು ವೇದಾಂತಪರ್ವತ ಶ್ರೇಣಿಯ ಮೂರು ಪ್ರಮುಖ ಶಿಖರಗಳು.

ಈ ಕಗ್ಗ ತುಂಬ ಸರಳವಾದ ಆದರೆ ಸುಂದರವಾದ ಉದಾಹರಣೆಗಳೊಂದಿಗೆ ಮೂರೂ ಮತಗಳನ್ನು ಪರಿಚಯಿಸುತ್ತದೆ. ಮೊದಲನೆಯದು ನೀರು ಮತ್ತು ಮಂಜುಗಡ್ಡೆಯ ಉದಾಹರಣೆ. ಮಂಜುಗಡ್ಡೆ ನೀರಲ್ಲದೆ ಬೇರಲ್ಲ, ಆದರೆ ತೋರಿಕೆಗೆ ಮಾತ್ರ ಘನರೂಪದಲ್ಲಿದೆ. ಅದು ಕರಗಿದಾಗ ಮತ್ತೆ ನೀರಾಗಿ, ನೀರಿನೊಡನೆ ಬೆರೆತುಹೋಗುವುದು. ನೀರು ಬ್ರಹ್ಮ, ಮಂಜುಗಡ್ಡೆ ಜೀವ. ಕೊನೆಗೆ ಜೀವ ಬೆರೆಯುವುದು, ಐಕ್ಯವನ್ನು ಹೊಂದುವುದು ಬ್ರಹ್ಮದಲ್ಲೇ – ಇದೇ ಅದ್ವೈತ.

ಎರಡನೆಯ ಉದಾಹರಣೆ ಹಾಲು ಮತ್ತು ತುಪ್ಪ. ತುಪ್ಪ ಆದದ್ದು ಹಾಲಿನಿಂದಲೇ ಆದರೂ ಅದು ಮತ್ತೆ ಮರಳಿ ಹಾಲಾಗದು. ಇದು ಭೇದಗರ್ಭಿತವಾದ ಅಭೇದ. ತುಪ್ಪಕ್ಕೊಂದು ವಿಶೇಷತೆ ಇದೆ, ಇರವು ಇದೆ. ಅದು ಹಾಲನ್ನು ಮೂಲವೆಂದು ಒಪ್ಪಿದರೂ ಅದಕ್ಕೆ ಅದರದೇ ಸ್ವತಂತ್ರ ಅಸ್ತಿತ್ವ. ಇದು ಅನ್ಯೋನ್ಯ ಸ್ವಾತಂತ್ರ್ಯ. ಇದೇ ವಿಶಿಷ್ಟಾದ್ವೈತ. ಮೂರನೆಯದು ಕೀರುಪರಮಾನ್ನ ಮತ್ತು ದ್ರಾಕ್ಷಿ. ದ್ರಾಕ್ಷಿ ಪರಮಾನ್ನದಲ್ಲಿ ಬೆಂದಾಗ ಅದರದೇ ಒಂದು ಭಾಗವಾಗುತ್ತದೆ. ಪರಮಾನ್ನದ ರುಚಿಗೆ ಕಾರಣವಾಗುತ್ತದೆ. ಆದರೆ ಅದೇ ಪರಮಾನ್ನವಾಗಿ ಬಿಡುವುದಿಲ್ಲ. ಅಂತೆಯೇ ಜೀವನೆಂಬ ದ್ರಾಕ್ಷಿ, ಪರಮಾನ್ನವೆಂಬ ಬ್ರಹ್ಮನ ಹತ್ತಿರ ಹೋಗಬಹುದೇ ವಿನ: ಅವನಲ್ಲಿ ಸೇರಿ ಐಕ್ಯ ಹೊಂದಲಾರದು. ಭಕ್ತ ಭಗವಂತನ ಹತ್ತಿರ ಹೋಗಬಹುದು, ಅಪ್ಪಿಕೊಳ್ಳಬಹುದು ಆದರೆ ಅವನೇ ಭಗವಂತ ಆಗಲಾರ. ಭಗವದ್ದಾಸ್ಯವೇ ದ್ವೈತ ಚಿಂತನೆ. ಇವು ಮೂರು ಮತಗಳ ವಿವರಗಳು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಡಿಸೆಂಬರ್ 6, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ತ್ರಯೋದಶಿ ಗಂ. 06-48 ನಕ್ಷತ್ರ: ಭರಣಿ ಗಂ. 08-38 ಯೋಗ: ಶಿವ ಗಂ. 26-52, ಕರಣ: ತೈತಿಲ ಗಂ. 06-48, ವೃಶ್ಚಿಕ ಮಾಸದ 19 ನೇ ದಿನ. ರಾಹುಕಾಲ : ಮಧ್ಯಾಹ್ನ 03-00–04-30
ಸೂರ್ಯೋದಯ : 06-44 **ಸೂರ್ಯಾಸ್ತ :** 05-59
ಮುಸ್ಲಿಂ ದಿನಾಂಕ : 11 ಜುಮಾದುಲ್ಲಾವಲ್
ದಿನ ವಿಶೇಷ : ಕೃತ್ತಿಕಾ ದೀಪಂ
ಅದೃಷ್ಟ ಸಂಖ್ಯೆ : 6, 12

ಮೇಷ: ಗಣ್ಯ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಬರುವುದು. ಕೌಟುಂಬಿಕ ಸಮಸ್ಯೆಗಳಿಗೆ ನ್ಯಾಯಾಲಯದ ಮೆಟ್ಟಿಲನ್ನು ಏರುವ ವಿಚಾರಗಳು ನಡೆಯದಂತೆ ಎಚ್ಚರವಹಿಸಿ. ಕ್ರೀಡೆಗಳಲ್ಲಿ ಹೆಚ್ಚಿನ ಸಮಯ ಕಳೆಯುವಿರಿ.

ವೃಷಭ: ಮನೆಯ ಜವಾಬ್ದಾರಿಯನ್ನು ಮಗನಿಗೆ ವಹಿಸುವ ಆಲೋಚನೆಗಳು ಬರುವುದು, ಆದರೆ ಈ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ತರಹದ ತೀರ್ಮಾನ ತೆಗೆದುಕೊಳ್ಳಬೇಡಿ. ಕೈಗಾರಿಕಾ ಕ್ಷೇತ್ರದಲ್ಲಿ ಲಾಭ ಪಡೆಯುವಿರಿ.

ಮಿಥುನ: ಕೆಲಸದಲ್ಲಿ ಉಂಟಾದ ಪ್ರಮುಖ ಬದಲಾವಣೆಯು ಗಮನಕ್ಕೆ ಬರಲಿದೆ. ಕಾಲು ನೋವು ನಿವಾರಿಸಿಕೊಳ್ಳಲು ತೈಲಲೇಪನ, ಬಿಸಿನೀರಿನ ಶಾಖದಂತಹ ಮಾರ್ಗವನ್ನು ಅನುಸರಿಸುವುದು ಉಪಯೋಗಕಾರಿಯಾಗಲಿದೆ.

ಕರ್ಕಾಟಕ: ಭವಿಷ್ಯದ ಕುರಿತು ಗಂಭೀರ ಚರ್ಚೆ ನಡೆಸುವಿರಿ. ಆಪ್ತರಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ ಸ್ವ ಪ್ರಯತ್ನದಿಂದ ಕೆಲಸದಲ್ಲಿ ಮುನ್ನುಗ್ಗಿ. ಹೊಸ ಜೀವನ ಪ್ರಾರಂಭವಾಗುವುದರಿಂದ ದೇವತಾ ಕಾರ್ಯ ನಡೆಸಿ.

ಸಿಂಹ: ನಿಮ್ಮ ಪರೋಪಕಾರ ಮನೋಭಾವದಿಂದ ಯಶಸ್ಸು ಲಭಿಸಲಿದೆ. ಗೃಹ ಖರೀದಿ ಇಲ್ಲವೇ ಗೃಹ ನಿರ್ಮಾಣದಂತಹ ಕಾರ್ಯಗಳನ್ನು ಮುಂದೂಡುವುದು ಉತ್ತಮ. ಫೋಟೋ ಸ್ಟುಡಿಯೋದವರಿಗೆ ಹೆಚ್ಚಿನ ಲಾಭವಿದೆ.

ಕನ್ಯಾ: ನಿಮ್ಮ ಪ್ರಗತಿಯನ್ನು ಬಹಳಷ್ಟು ಜಾಗದಲ್ಲಿ ಪ್ರಶಂಸಿಸುತ್ತಿರುವುದರಿಂದ ಕಾರ್ಯಕ್ಷೇತ್ರದಲ್ಲಿ ಹೊಸದೊಂದು ಹುಮ್ಮಸ್ಸು ಬರುವುದರ ಜತೆಗೆ ವೃತ್ತಿಪರವಾದ ಶತ್ರುಗಳ ಸಂಖ್ಯೆಯು ಗಗನವನ್ನು ಮುಟ್ಟಲಿದೆ.

ತುಲಾ: ಆಗೊಂದು ಈಗೊಂದು ಸಲ ಅನವಶ್ಯಕವಾಗಿ ನೆರೆಹೊರೆಯವರ ಕಿರಿಕಿರಿ ತಪ್ಪದು. ಗಾಯನ ಅಥವಾ ಅಭಿನಯ ಕಲಿಯಲು ಆಸಕ್ತಿ ಉಂಟಾಗುವುದು. ಸಿಟ್ಟಿನಿಂದ ಹೊರಬರಲು ಶನೈಶ್ಚರನ ಪ್ರಾರ್ಥನೆ ಮಾಡಿ.

ವೃಶ್ಚಿಕ: ಸಹೋದ್ಯೋಗಿಗಳಲ್ಲಿ ಗೌರವಾನ್ವಿತವಾಗಿ ವರ್ತಿಸುವುದರಿಂದ ನಿಮ್ಮ ಕೆಲಸಗಳು ಸರಾಗವಾಗಿ ಸಾಗಲಿದೆ. ಹಿಂದಿನ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಗಮನ ನೀಡಿ.

ಧನು: ಕೋರ್ಟ್ ಕೆಲಸಗಳಿಗಾಗಿ ಹಿರಿಯ ಅಧಿಕಾರಿಗಳ ಸಲಹೆ ಪಡೆಯುವುದು ಅವಶ್ಯಕವೆನಿಸಲಿದೆ. ತಾಂತ್ರಿಕ ಕ್ಷೇತ್ರದಲ್ಲಿ ದುಡಿಯುವವರಿಗೆ ಅನಿರೀಕ್ಷಿತ ಹೊಸ ಉದ್ಯೋಗ ದೊರೆತು ಸಂತೋಷ. ಆತ್ಮವಿಶ್ವಾಸ ಹೆಚ್ಚಲಿದೆ.

ಮಕರ: ಬರುವ ಅವಕಾಶಗಳನ್ನು ನಿಮ್ಮತ್ತ ತಿರುಗಿಸಿಕೊಂಡು ಸದುಪಯೋಗ ಪಡೆದುಕೊಳ್ಳುವುದು ನಿಮ್ಮ ಕೈಗೆ ಬಿಟ್ಟ ವಿಷಯ. ಕೃಷಿ ಭೂಮಿಯ ಖರೀದಿ, ಮಾರಾಟದಂತಹ ವ್ಯವಹಾರದಿಂದ ಅಧಿಕ ಲಾಭವಿದೆ.

ಕುಂಭ: ಸಂಕಷ್ಟಕ್ಕೆ ಸಿಲುಕಿರುವ ನಿಮಗೆ ಅಪರಿಚಿತರಿಂದ ಸಹಾಯ ಹಸ್ತ ಪ್ರಾಪ್ತಿ. ದಾಂಪತ್ಯದಲ್ಲಿರುವ ಬಿರುಕು ಹೊಂದಾಣಿಕೆಯಿಂದ ಸರಿಯಾಗುವುದು. ಜೀರ್ಣಕ್ರಿಯೆಗೆ ಸಂಬಂಧಿಸಿದಂತೆ ಅನಾರೋಗ್ಯ ಉಂಟಾಗಬಹುದು.

ಮೀನ: ನಿಮ್ಮ ದೃಢ ನಿರ್ಧಾರದಿಂದ ನಿಮ್ಮ ಹಿಂದಿನ ಕೆಲಸಕಾರ್ಯಗಳೆಲ್ಲವು ಪೂರ್ಣಗೊಳ್ಳಲಿದೆ. ಈ ದಿನದ ಯಾವುದೇ ಕೆಲಸಗಳನ್ನು ಮುಂದು ಹಾಕದೆ ಪೂರ್ಣಗೊಳಿಸಲು ಪ್ರಯತ್ನಿಸಿ. ಹೊಸ ಗೆಳೆತನ ಬೆಳೆಸಿಕೊಳ್ಳುವಿರಿ.

ಪದಬಂಧ 5160

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಒಪ್ಪವಾಗಿ ಕಾಪಾಡುವವ ಬಂದಿದ್ದಾನಲ್ಲಾ! (5)
4. ಎಲ್ಲವನ್ನೂ ತಿಳಿದವನು (3)
5. ವರ ಮಾಡುತ್ತಿರುವ ಒತ್ತಾಯ (3)
6. ವೀಣೆಯಲ್ಲಿ ನೆಟ್ಟಿರುವ ದೃಷ್ಟಿ! (3)
7. ನೂಲು ತೆಗೆಯುವ ಸಾಧನ (3)
9. ಹತ್ತಿರಕ್ಕೆ ಹೋದಾಗ ಕಾಣಿಸಿದ್ದು ಅರಳೆ (2)
10. ಆರ್ಭಟದಲ್ಲಿನ ಕ್ರೀಡೆ (2)
12. ಔಚಿತ್ಯವನ್ನು ಮೀರಿದ ಸ್ನೇಹ (3)
14. ಮಜದಲ್ಲಿ ಕಾಲ ಕಳೆಯುತ್ತಿರುವ ಮನುಷ್ಯ (3)
15. ಜಿಪುಣ ಇಲ್ಲಿದ್ದಾನಲ್ಲಾ? (3)
16. ಸುಳಿದಾಗ ಸಿಕ್ಕಿರುವ ಸೂಕ್ಷ್ಮವಾದ ಕುರುಹು (3)
17. ರುಚಿಕಟ್ಟಾದ ಭೋಜನ (5)

ಮೇಲಿಂದ ಕೆಳಕ್ಕೆ
1. ಕೃಷ್ಣನ ಮೊಮ್ಮಗ (4)
2. ಮೃಗದ ನಡುವಳಿಕೆಯಿದು (5)
3. ಕಲ್ಲಿನಿಂದ ಬೀಸಿ ಹೊಡೆಯುವ ಸಾಧನ (3)
4. ಎಡಬಿಡದೆ ಎಂದು ಹೀಗೆನ್ನಿ (3)
8. ಕಪಾಟ ಹತ್ತಿರ ತೆರೆದ ಬಾಗಿಲು (3)
9. ಪ್ರಾತಃಕಾಲದಿಂದ ಸಂಜೆವರೆಗಿನ ಕಾಲ (3)
10. ಸಸ್ಯಗಳು ನೀಡುವ ಪ್ರಾಣವಾಯುವಿದು (5)
11. ಕೊನೆಗೆ ರಾಳವಿದ್ದಾಗಲೇ ನಡುವಣ ವಸ್ತು ಗೋಚರ! (4)
13. ಜಯ ಈ ರೀತಿ ಬಂದಿದೆ (3)
14. ಮರದೊಳಗೆ ಕಾಣಿಸಿದ ಮೊಸಳೆ (3)



5159ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆರಂಬ 4.ಸಂದೇಹ 6.ಲಾಭಬಡುಕ 7.ತಮ 9.ತಡ 10.ಸರ 11.ಗುರಿ 16.ನಯವಂಚಕ 17.ನಡುಕ 18.ವರ್ಧಂತಿ

ಮೇಲಿಂದ ಕೆಳಕ್ಕೆ:
1.ಆಯಸ್ಕಾಂತ 2.ಬಲಾಢ್ಯ 3.ತಬಲ 4.ಸಂಕಟ 5.ಹತ್ಯಾಕಾಂಡ 8.ಮಯೂರ 9.ತರಗು 10.ಸಮಾಧಾನ 12.ರಿಯಾಯಿತಿ 13.ಜನಕ 14.ಧಾವಂತ 15.ಕಕವ

ಸುಡೊಕು 5546

6		4				7		8
		5		7	1		4	
1	3			4				6
		1				9		7
			3	9	7			4
7		9				8		
5				6		4		
4					3		2	1
	6	2		8	4			5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5545 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

ಷೇರುಪೇಟೆ ವಹಿವಾಟು 34



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,696
ಇಂದಿನ ಅಂತ್ಯ	18,701
▲	5
ದಿನದ ಗರಿಷ್ಠ	18,728

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹555
12 ಮೊಟ್ಟೆಗೆ ₹72
ಮೈಸೂರು
100 ಮೊಟ್ಟೆಗೆ ₹555

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515 (1515)
ಸೋಯಾ (ರಿಫೈನ್ಡ್)	₹1240 (1250)
ಸೂರ್ಯಕಾಂತಿ (ರಿಫೈನ್ಡ್)	₹1400 (1400)
ಪಾಮೋಲಿನ್	₹940 (935)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹142
ಆರ್‌ಎಸ್‌ಎಸ್-5 ₹14
ಗುಡ್ ಲಾಟ್ ₹127

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1500-2000
ಮಧ್ಯಮ	₹1000-1500
ಸಣ್ಣ	₹200-800

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹301-687
ದ್ವಿತಳಿ (ಬಿ.ವಿ) ₹458-879

ವಿನಿಮಯ ದರ

ಡಾಲರ್	81.85	ಯೂರೊ	86.13
ಪೌಂಡ್	100.49	ಯೆನ್ (100ಕ್ಕೆ)	60

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-38000
ಹಳತು 48000-54500
ಕಾರ್ಕಳ
ಹೊಸತು 25000-37500
ಹಳತು 40000-54500
ಕುಮಟ
ಚಿಪ್ಪು 25099-32509
ಕೋಕ 16509-30119
ಫ್ಯಾಕ್ಟರಿ 11270-19200
ಹಳೆಚಾಲಿ 36019-40211
ಹೊಸಚಾಲಿ 30099-32716
ಕುಂದಾಪುರ
ಹಳೆಚಾಲಿ 53000-56000
ಹೊಸಚಾಲಿ 40000-47500

ಸಾಗರ
ಬಿಳಿಗೋಟು 22619-30300
ಚಾಲಿ 32659-37114
ಕೋಕ 13199-32100
ಕೆಂಪುಗೋಟು 30419-36299
ರಾಶಿ 38321-44261
ಸಿಪ್ಪೆಗೋಟು 12299-19200
ಶಿವಮೊಗ್ಗ
ಬೆಟ್ಟೆ 49100-50810
ಗೊರಬಲು 17850-32616
ಹೊಸತು 40039-44599
ರಾಶಿ 40039-44599
ಸರಕು 52069-76510
ಸಿದ್ದಾಪುರ
ಬಿಳಿಗೋಟು 26699-32899
ಚಾಲಿ 35519-39819
ಕೋಕ 24319-28112

ಕೆಂಪುಗೋಟು 28119-31899
ರಾಶಿ 42099-43599
ತಟ್ಟಿಬೆಟ್ಟೆ 35699-42899
ಶಿರಸಿ
ಬೆಟ್ಟೆ 37019-43210
ಬಿಳಿಗೋಟು 17786-36199
ಚಾಲಿ 31008-40808
ಕೆಂಪುಗೋಟು 22611-31069
ರಾಶಿ 38289-45919
ಯಲ್ಲಾಪುರ
ಬಿಳಿಗೋಟು 26002-35629
ಚಾಲಿ 37090-40629
ಕೋಕ 18900-29412
ಕೆಂಪುಗೋಟು 29615-33900
ರಾಶಿ 43022-50899
ತಟ್ಟಿಬೆಟ್ಟೆ 39019-42190

ಮುಂಬೈ ಧಾರಣೆ

ಶೇಂಗಾ
5–12-2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1525)
ಒಂದು ವಾರದ ಡೆಲಿವರಿ	1520 (1520)
ಸೋಯಾ ಕಚ್ಚಾ	1200 (1200)
ಪಾಮ್ ವಾರದ ಡೆಲಿವರಿ	938 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,650 (53,500)
ಬೆಳ್ಳಿ ಕೆ.ಜಿ 65,800 (65,250)

ಆವರಣದಲ್ಲಿ ಶನಿವಾರದ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹13200
ಎಸಿ	₹6720
ಆರ್‌ಪಿ	₹8500
ಆರ್‌ಸಿ	₹4530

ಹಲವು ಅನುಮೋದನೆಗಳಿಗೆ ಒಂದೇ ದಾಖಲೆ ಬಳಕೆಗೆ ಕೇಂದ್ರ ಪರಿಶೀಲನೆ

ಏಕಗವಾಕ್ಷಿ: ಪ್ಯಾನ್ ಬಳಸಿ ಅನುಮೋದನೆ

ಮುಖ್ಯಾಂಶಗಳು

- ಎನ್‌ಎಸ್‌ಡಬ್ಲ್ಯುಎಸ್ ಅಡಿ 248 ಅನುಮೋದನೆ ಲಭ್ಯ
- ಕರ್ನಾಟಕದಲ್ಲಿಯೂ ಇದರ ಪ್ರಾಯೋಗಿಕ ಪರೀಕ್ಷೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಸಚಿವಾಲಯಗಳು ಹಾಗೂ ರಾಜ್ಯ ಸರ್ಕಾರದ ಇಲಾಖೆಗಳ ಅನುಮೋದನೆಯನ್ನು ಒಂದೆಡೆ ಒದಗಿಸುವ ಏಕಗವಾಕ್ಷಿ ವ್ಯವಸ್ಥೆಯ ಪ್ರಯೋಜನ ಪಡೆಯಲು ಉದ್ದಿಮೆಗಳು ಪ್ಯಾನ್ (ಶಾಶ್ವತ ಖಾತೆ ಸಂಖ್ಯೆ) ಮಾತ್ರ ಒದಗಿಸಿದರೆ ಸಾಕು ಎಂಬ ನಿಯಮ ಜಾರಿಗೆ ತರುವ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲನೆ ನಡೆಸಿದೆ.

ಈಗ ಸರ್ಕಾರದ ಬೇರೆ ಬೇರೆ ಅನುಮೋದನೆಗಳನ್ನು ಪಡೆಯಲು ಇಪಿಎಫ್‌ಒ, ಇಎಸ್‌ಐಸಿ, ಜಿಎಸ್‌ಟಿಎನ್, ಟಿಐಎನ್, ಟಿಎಎನ್ ಮತ್ತು ಪ್ಯಾನ್ ಸೇರಿದಂತೆ 13ಕ್ಕೂ ಹೆಚ್ಚು ಗುರುತಿನ ಚೀಟಿಗಳನ್ನು ಬಳಸಲಾಗುತ್ತಿದೆ.

ಪ್ಯಾನ್ ಮಾತ್ರ ಬಳಸಿ ಅಗತ್ಯವಾದ ಎಲ್ಲ ಅನುಮೋದನೆಗಳನ್ನು ಪಡೆದುಕೊಳ್ಳುವುದನ್ನು ಸಾಧ್ಯವಾಗಿಸುವ ವಿಚಾರವಾಗಿ ಕೇಂದ್ರ ರೆವಿನ್ಯು ಇಲಾಖೆಯ ಜೊತೆ ಮಾತುಕತೆ ನಡೆಸಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

'ಸರ್ಕಾರದ ಬಳಿ ಈಗಾಗಲೇ ಇರುವ ಯಾವುದಾದರೂ ಒಂದು ದತ್ತಾಂಶ ಕೋಶವನ್ನು ಮಾತ್ರ ಬಳಸುವತ್ತ ನಾವು ಹೆಜ್ಜೆ ಇರಿಸಿದ್ದೇವೆ. ಬಹುಶಃ, ಪ್ಯಾನ್ ಆ ಉದ್ದೇಶಕ್ಕೆ ಬಳಕೆ ಆಗಬಹುದು. ಪ್ಯಾನ್ ಬಳಸಿ ಕಂಪನಿಯ ಬಗ್ಗೆ ಕೆಲವು ಮೂಲಭೂತ ವಿವರಗಳನ್ನು, ಅದರ ನಿರ್ದೇಶಕರ ಹೆಸರನ್ನು, ಕಂಪನಿಯ ವಿಳಾಸವನ್ನು ಮತ್ತು ಇತರ ಹಲವು ಮಾಹಿತಿಯನ್ನು ಪಡೆಯಬಹುದು' ಎಂದು ಗೋಯಲ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ರಾಷ್ಟ್ರೀಯ ಏಕಗವಾಕ್ಷಿ ವ್ಯವಸ್ಥೆಯು (ಎನ್‌ಎಸ್‌ಡಬ್ಲ್ಯುಎಸ್) ವಿವಿಧ ಸಚಿವಾಲಯಗಳಿಗೆ, ಇಲಾಖೆಗಳಿಗೆ ಒಂದೇ ಮಾಹಿತಿಯನ್ನು ಪ್ರತ್ಯೇಕವಾಗಿ ಸಲ್ಲಿಸಬೇಕಾದ ಅಗತ್ಯವನ್ನು ನಿವಾರಿಸುವ ಉದ್ದೇಶ ಹೊಂದಿದೆ. ಆ ಮೂಲಕ ಉದ್ಯಮ ಆರಂಭಿಸುವ ಹಾಗೂ ಉದ್ಯಮ ಮುನ್ನಡೆಸುವ ಪ್ರಕ್ರಿಯೆಯನ್ನು ಸರಳಗೊಳಿಸುವ ಉದ್ದೇಶವನ್ನು ಕೂಡ ಇದು ಹೊಂದಿದೆ.

ವ್ಯಕ್ತಿಯೊಬ್ಬರು ಪ್ಯಾನ್ ಸಂಖ್ಯೆ ನಮೂದಿಸಿ ಒಂದು ಏಕಗವಾಕ್ಷಿ ವ್ಯವಸ್ಥೆಯ ಮೂಲಕ ಒಂದು ಅರ್ಜಿ ಸಲ್ಲಿಸಿದಾಗ, ಇತರ ಪೂರಕ ಹಾಗೂ ಅಗತ್ಯ ಅರ್ಜಿಗಳು ಆ ಪ್ಯಾನ್ ಸಂಖ್ಯೆಯ ಆಧಾರದಲ್ಲಿ ಸ್ವಯಂಚಾಲಿತವಾಗಿ ಭರ್ತಿಯಾಗುವ ಸೌಲಭ್ಯ ಒದಗಿಸಲು ಸಾಧ್ಯವಾಗಲಿದೆ ಎಂದು ಗೋಯಲ್ ಹೇಳಿದ್ದಾರೆ.

ಏಕಗವಾಕ್ಷಿಯ ವ್ಯವಸ್ಥೆಯ ಅಡಿಯಲ್ಲಿ ಈಗ ಕೇಂದ್ರ ಸರ್ಕಾರಕ್ಕೆ ಸೇರಿದ 26 ಸಚಿವಾಲಯ ಹಾಗೂ ಇಲಾಖೆಗಳ 248 ಬಗೆಯ ಅನುಮೋದನೆಗಳನ್ನು ಒದಗಿಸಲಾಗುತ್ತಿದೆ. ರಾಜ್ಯ ಸರ್ಕಾರಗಳು ಕೊಡುವ ಕೆಲವು ಅನುಮೋದನೆಗಳನ್ನೂ ಈ ವ್ಯವಸ್ಥೆಯ ಅಡಿಯಲ್ಲಿ ನೀಡಲಾಗುತ್ತಿದೆ.

ಕರ್ನಾಟಕ ಸೇರಿದಂತೆ 19 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಏಕಗವಾಕ್ಷಿ ವ್ಯವಸ್ಥೆಯನ್ನು ಅಳವಡಿಸಿಕೊಂಡು, ಅದಕ್ಕೆ ಪ್ರಾಯೋಗಿಕವಾಗಿ ಚಾಲನೆ ನೀಡಿವೆ. ಗೋಯಲ್ ಅವರು ಎನ್‌ಎಸ್‌ಡಬ್ಲ್ಯುಎಸ್ ಬಗ್ಗೆ ಪರಿಶೀಲನಾ ಸಭೆ ನಡೆಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದರು.

ಪರವಾನಗಿ ನವೀಕರಣ ಸೇವೆಯನ್ನು ಕೂಡ ಈ ವ್ಯವಸ್ಥೆಯ ಅಡಿಯಲ್ಲಿ ತರಲಾಗುತ್ತದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಗ್ರಾಹಕರ ವ್ಯವಹಾರಗಳ ಸಚಿವಾಲಯ, ಆಹಾರ ಮತ್ತು ಸಾರ್ವಜನಿಕ ವಿತರಣೆ, ಜವಳಿ ಸಚಿವಾಲಯ ಆರಂಭಿಕವಾಗಿ ಈ ಸೇವೆ ಒದಗಿಸಲು ಜೊತೆಯಾಗಿವೆ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

1ನೇ ವರ್ಷದ ಪುಣ್ಯಸ್ಮರಣೆ

ಕು|| ಅನಿತಾ
(ಸಾಫ್ಟ್‌ವೇರ್ ಇಂಜಿನಿಯರ್)
ಮರಣ: 06-12-2021
ನಮ್ಮ ಮಗಳು ತೀರಿಕೊಂಡು ಇಂದಿಗೆ ಒಂದು ವರ್ಷವಾಯಿತು. ಆಕೆಯ ದೇಹವನ್ನು ಆಸ್ಪತ್ರೆಗೆ ದಾನ ಮಾಡಿರುತ್ತೇವೆ, ಹಾಗೂ ನಾರಾಯಣ ನೇತ್ರಾಲಯಕ್ಕೆ ಕಣ್ಣುಗಳನ್ನು ಸಹ ದಾನ ಮಾಡಿರುತ್ತೇವೆ. ವರ್ಷ ತುಂಬಿದ ಈ ಸಂದರ್ಭದಲ್ಲಿ ಅವರ ಪ್ರೀತಿಯ ನೆನಪುಗಳ ಸ್ಮರಣೆ.
ದುಃಖತಪ್ತರು
ತಾಯಿ – ರಾಜೇಶ್ವರಿ
ತಂದೆ – ಸಿ. ಬಸವರಾಜು
ಸ್ನೇಹಿತರು ಮತ್ತು ಬಂಧುಮಿತ್ರರು
ನಂ. 38, 3ನೇ ಅಡ್ಡರಸ್ತೆ, ಎ.ಪಿ.ಸಿ. ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು-97

1ST DEATH ANNIVERSARY



SHRI T. G. DODDAMANI
Retd. Jt. Director, Social Welfare
27 Jul 1936 - 06 Dec 2021
With fond remembrance from family

ಜನುಮ ದಿನದ ನೆನಪು

ಎಂ.ಎಸ್. ಸಂದೀಪ್, ಎಂ.ಎಸ್.
ಜನನ : 06-12-1981
ನೀ ನಮ್ಮ ಮನ-ಮನೆಯ ನಂದಾ ದೀಪ
ಬಾಳು ಬೆಳಗಿದ ಕುಲದೀಪ
ಸದಾ ನಿನ್ನ ನೆನಪಿನಲ್ಲಿ
ಉಷಾ ಮತ್ತು ಎಂ.ಕೆ. ಶಂಕರಲಿಂಗೇಗೌಡ, ಐಎಎಸ್(ನಿ)
ಇ-ಮೇಲ್: mssundeeptrust@gmail.com

ಎನ್‌ಡಿಟಿವಿ: ಅದಾನಿ ಸಮೂಹದ ಬಳಿ ಹೆಚ್ಚಿನ ಷೇರು

ಬೆಂಗಳೂರು (ರಾಯಿಟರ್ಸ್): ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹವು ಈಗ ನ್ಯೂ ಡೆಲ್ಲಿ ಟೆಲಿವಿಷನ್ ಲಿಮಿಟೆಡ್‌ನಲ್ಲಿ (ಎನ್‌ಡಿಟಿವಿ) ಶೇಕಡ 37ರಷ್ಟು ಷೇರುಗಳನ್ನು ತನ್ನದಾಗಿಸಿಕೊಂಡಿದೆ. ಈಗ ಎನ್‌ಡಿಟಿವಿಯಲ್ಲಿ ಅತಿಹೆಚ್ಚಿನ ಷೇರುಪಾಲು ಅದಾನಿ ಸಮೂಹದ ಬಳಿ ಇದೆ.

ಷೇರು ಮಾರುಕಟ್ಟೆಯಿಂದ ಒಟ್ಟು ಶೇ 26ರಷ್ಟು ಷೇರುಗಳನ್ನು ಖರೀದಿಸುವ ಉದ್ದೇಶವನ್ನು ಸಮೂಹ ಹೊಂದಿತ್ತು. ಆದರೆ ಶೇ 8.3ರಷ್ಟು ಷೇರುಗಳು ಮಾತ್ರ ಅದಕ್ಕೆ ಸಿಕ್ಕಿವೆ.

ಹಿಂದಿನ ವಾರ ಸಮೂಹವು ಎನ್‌ಡಿಟಿವಿಯ ಶೇ 29.2ರಷ್ಟು ಷೇರುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡಿತ್ತು. ಕಂಪನಿಯ ಸಂಸ್ಥಾಪಕರಾದ ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ಅವರಲ್ಲಿ ಒಟ್ಟು ಶೇ 32.3ರಷ್ಟು ಷೇರುಗಳು ಇವೆ.

ಅದಾನಿ ಸಮೂಹವು ಸೋಮವಾರಕ್ಕೆ ಕೊನೆಗೊಂಡ ಓಪನ್ ಆಫರ್ ಮೂಲಕ 7.06 ಲಕ್ಷ ಷೇರುಗಳನ್ನು ಖರೀದಿಸಿದೆ.

'ಈಗ ಅದಾನಿ ಸಮೂಹವು ಎನ್‌ಡಿಟಿವಿಯ ಅತಿದೊಡ್ಡ ಷೇರುದಾರ ಆಗಿದೆ. ಇಷ್ಟು ಪಾಲು ಹೊಂದಿದ ನಂತರ ಸಮೂಹವು ಎನ್‌ಡಿಟಿವಿ ಆಡಳಿತ ಮಂಡಳಿಯನ್ನು ಪುನರ್ ರಚಿಸಲು ಮುಂದಾಗಬಹುದು. ಮಂಡಳಿಯಲ್ಲಿ ತಮ್ಮ ಕಡೆಯ ನಿರ್ದೇಶಕರು ಇರಬೇಕು, ಈಗಿನ ಕೆಲವರು ಹೊರನಡೆಯಬೇಕು ಎಂಬ ಪ್ರಸ್ತಾವ ಇರಿಸಬಹುದು' ಎಂದು ಇನ್‌ಗವರ್ನ್ ರಿಸರ್ಚ್ ಸರ್ವಿಸಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀರಾಮ್ ಸುಬ್ರಮಣಿಯನ್ ಹೇಳಿದ್ದಾರೆ.

ಹೊಸ ವಹಿವಾಟುಗಳಲ್ಲಿ ಏರಿಕೆ: ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ

ಸೇವಾ ಚಟುವಟಿಕೆ 3 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಬೆಳವಣಿಗೆಯು ನವೆಂಬರ್‌ನಲ್ಲಿ ಮೂರು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ಬೇಡಿಕೆ ಹೆಚ್ಚಾಗುತ್ತಿರುವುದರ ಜೊತೆಗೆ ಹೊಸ ವಹಿವಾಟುಗಳಲ್ಲಿ ಏರಿಕೆ ಕಂಡುಬರುತ್ತಿರುವುದರಿಂದ ಸೇವಾ ಚಟುವಟಿಕೆಗಳಿಗೆ ವೇಗ ದೊರೆತಿದೆ ಎಂದು ಅದು ತಿಳಿಸಿದೆ.

ಸೇವಾ ವಲಯದ ಚಟುವಟಿಕೆಗಳನ್ನು ತಿಳಿಸುವ ಸೂಚ್ಯಂಕವು ಅಕ್ಟೋಬರ್‌ನಲ್ಲಿ 55.1ರಷ್ಟು ಇದ್ದಿದ್ದು ನವೆಂಬರ್‌ನಲ್ಲಿ 56.4ಕ್ಕೆ ಏರಿಕೆ ಆಗಿದೆ. ಕಾರ್ಯಾಚರಣಾ ವೆಚ್ಚ ಗರಿಷ್ಠ ಮಟ್ಟದಲ್ಲಿ ಇದ್ದರೂ ಈ ಮಟ್ಟದ ಬೆಳವಣಿಗೆ ಸಾಧ್ಯವಾಗಿದೆ. ಸತತ 16ನೇ ತಿಂಗಳಿನಲ್ಲಿಯೂ ಸೂಚ್ಯಂಕವು 50ಕ್ಕಿಂತ ಮೇಲ್ಮಟ್ಟದಲ್ಲಿ ಇದೆ.

ದೇಶಿ ಬೇಡಿಕೆ ಉತ್ತಮವಾಗಿದ್ದು, ಸೇವಾ ವಲಯದ ಕಂಪನಿಗಳು ಇದರ ಪ್ರಯೋಜನ ಪಡೆದುಕೊಳ್ಳುತ್ತಿವೆ ಎಂದು ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ.

ನೇಮಕಾತಿಯಲ್ಲಿ ಮೂರು ವರ್ಷಗಳಲ್ಲಿಯೇ ವೇಗದ ಬೆಳವಣಿಗೆ ಕಂಡುಬಂದಿದೆ. ತಯಾರಿಕೆ ಮತ್ತು ಸೇವಾ ವಲಯದ ಬೆಳವಣಿಗೆಗಳನ್ನು ತಿಳಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ಅಕ್ಟೋಬರ್‌ನಲ್ಲಿ 55.5ರಷ್ಟು ಇದ್ದಿದ್ದು ನವೆಂಬರ್‌ನಲ್ಲಿ 56.7ಕ್ಕೆ ಏರಿಕೆ ಆಗಿದೆ.

ದೇಶದ ತಯಾರಿಕಾ ವಲಯದ ಚಟುವಟಿಕೆಗಳು ನವೆಂಬರ್‌ನಲ್ಲಿ ಮೂರು ತಿಂಗಳ ಗರಿಷ್ಠ ಮಟ್ಟವನ್ನು ತಲುಪಿವೆ. ರಫ್ತು ಹೆಚ್ಚಾಗಿದ್ದು ಹಾಗೂ ಮಾರುಕಟ್ಟೆಯಲ್ಲಿ ಬೇಡಿಕೆಯು ಸ್ಥಿರವಾಗಿ ಇದ್ದಿದ್ದು ಈ ಏರಿಕೆಗೆ ಕಾರಣ ಎಂದು ಸಂಸ್ಥೆಯು ಈಚೆಗೆ ತಿಳಿಸಿದೆ.

ನೇಪಾಳ: ಹೊಸ ಸರ್ಕಾರ ರಚನೆ ಪ್ರಕ್ರಿಯೆ ಚರ್ಚಿಸಲು ಸಭೆ

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಐದು ಪಕ್ಷಗಳ ಒಕ್ಕೂಟ ನಾಯಕರು ಸೋಮವಾರ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರನ್ನು ಅವರ ಅಧಿಕೃತ ನಿವಾಸದಲ್ಲಿ ಭೇಟಿ ಮಾಡಿ ಹೊಸ ಸರ್ಕಾರ ರಚನೆಯ ಕುರಿತು ಚರ್ಚಿಸಿದರು.

ನೇಪಾಳಿ ಕಾಂಗ್ರೆಸ್‌ನ ಉಪಾಧ್ಯಕ್ಷ ಪೂರ್ಣ ಬಹದ್ದೂರ್ ಖಡ್ಕ, ಹಿರಿಯ ನಾಯಕ ರಾಮ್‌ಚಂದ್ರ ಪೌಡೆಲ್, ಸಿಪಿಎನ್ (ಮಾವೋವಾದಿ ಕೇಂದ್ರ)ದ ಅಧ್ಯಕ್ಷ ಪುಷ್ಪ ಕಮಲ್ ದಹಲ್ 'ಪ್ರಚಂಡ', ಹಿರಿಯ ಉಪಾಧ್ಯಕ್ಷ ನಾರಾಯಣ ಕಜಿ ಶ್ರೇಷ್ಠ, ಸಿಪಿಎನ್ (ಯುಎಸ್) ಅಧ್ಯಕ್ಷ ಮಾಧವ್ ನೇಪಾಳ್ ಹಾಗೂ ರಾಷ್ಟ್ರೀಯ ಜನಮೋರ್ಚಾದ ಉಪಾಧ್ಯಕ್ಷ ದುರ್ಗಾ ಪೌಡೆಲ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ಐದು ಪಕ್ಷಗಳ ಒಕ್ಕೂಟವು ಸಂಸತ್ ಚುನಾವಣೆಯಲ್ಲಿ ಒಟ್ಟು 165ರಲ್ಲಿ 90 ಸ್ಥಾನಗಳನ್ನು ಪಡೆದಿದೆ. ಪರಸ್ಪರ ತಿಳಿವಳಿಕೆ ಮತ್ತು ಸಹಕಾರದೊಂದಿಗೆ ಮುನ್ನಡೆಯುವ ಅಗತ್ಯವನ್ನು ಚುನಾವಣಾ ಫಲಿತಾಂಶ ಸೂಚಿಸಿದ್ದು, ದೇಶದ ಮುಂದಿರುವ ಸವಾಲುಗಳನ್ನು ಎದುರಿಸಲು ಪ್ರಸ್ತುತ ಒಕ್ಕೂಟವನ್ನು ಮುಂದುವರಿಸುವುದು ಅಗತ್ಯ ಎಂದು ಸಭೆಯ ಬಳಿಕ ಸಮ್ಮಿಶ್ರ ಪಕ್ಷಗಳ ನಾಯಕರು ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಉಕ್ರೇನ್ ಮೇಲೆ ಮತ್ತೆ ಕ್ಷಿಪಣಿ ದಾಳಿ ತೀವ್ರ: ನೀರು, ವಿದ್ಯುತ್ ವ್ಯತ್ಯಯ

ಕೀವ್/ಮಾಸ್ಕೊ (ಎಎಫ್‌ಪಿ/ಎಪಿ): ಉಕ್ರೇನ್ ದೇಶದ ಹಲವು ಭಾಗಗಳ ಮೇಲೆ ರಷ್ಯಾ ಸೋಮವಾರ ಕ್ಷಿಪಣಿಗಳ ದಾಳಿ ನಡೆಸಿದ್ದು, ಇಂಧನ ಮೂಲಸೌಕರ್ಯಗಳು ಹಾನಿಗೀಡಾಗಿವೆ. ಹಲವು ಭಾಗಗಳಲ್ಲಿ ಕುಡಿಯುವ ನೀರು ಮತ್ತು ವಿದ್ಯುತ್ ವ್ಯತ್ಯಯ ಎದುರಾಗಿದೆ. ದಕ್ಷಿಣದ ಝುಪೊರಿಝಿಯಾದಲ್ಲಿ ಕ್ಷಿಪಣಿ ದಾಳಿಯಿಂದ ಇಬ್ಬರು ನಾಗರಿಕರು ಮೃತಪಟ್ಟು, ಮೂವರು ಗಾಯಗೊಂಡಿದ್ದಾರೆ.

ಒಡೆಸ್ಸಾ, ಚೆರ್ಕಾಸಿ, ಕ್ರಿವಿ ರಿಹ್, ಸುಮಿ ಸೇರಿ ಹಲವೆಡೆ ಸ್ಫೋಟಗಳು ಸಂಭವಿಸಿವೆ. ಒಡೆಸಾದಲ್ಲಿ ನೀರು ಸರಬರಾಜು ಪಂಪಿಂಗ್ ಸ್ಟೇಷನ್ ಕ್ಷಿಪಣಿ ದಾಳಿಯಿಂದ ಧ್ವಂಸವಾಗಿದೆ. ಇಡೀ ನಗರಕ್ಕೆ ನೀರು ಇಲ್ಲದಂತಾಗಿದೆ. ವಾಯುದಾಳಿಯ ಎಚ್ಚರಿಕೆಗಳು ಧ್ವನಿಸಿದ್ದರಿಂದ ನಾಗರಿಕರು ಸುರಕ್ಷಿತ ನೆಲೆಗಳಲ್ಲಿ ಆಶ್ರಯ ಪಡೆದರು.

ಉಕ್ರೇನ್‌ನ ಡೊನೆಟ್‌ಸ್ಕ್ ಪ್ರದೇಶದ ಬಾಖ್ಮಟ್‌ನಲ್ಲಿ ರಷ್ಯಾ ಪಡೆಗಳ ಶೆಲ್ ದಾಳಿಗೆ ತುತ್ತಾದ ಕಟ್ಟಡಗಳು ಹೊತ್ತಿ ಉರಿದವು– ಎಎಫ್‌ಪಿ ಚಿತ್ರ

'ರಷ್ಯಾ ತನ್ನ ದಕ್ಷಿಣದ ನೆಲದಿಂದ, ಕ್ಯಾಸ್ಪಿಯನ್ ಮತ್ತು ಕಪ್ಪು ಸಮುದ್ರಗಳಲ್ಲಿ ಹಡಗುಗಳಿಂದಲೂ ಕ್ಷಿಪಣಿಗಳ ದಾಳಿ ಮಾಡಿದೆ. ಕಾರ್ಯತಂತ್ರದ ಬಾಂಬರ್ ವಿಮಾನಗಳೂ ಕ್ಷಿಪಣಿ ಪ್ರಹಾರ ನಡೆಸಿವೆ' ಎಂದು ಉಕ್ರೇನ್ ವಾಯುಪಡೆ ವಕ್ತಾರ ಯೂರಿ ಇನತ್ ತಿಳಿಸಿದ್ದಾರೆ.

ದುರಸ್ತಿಗೊಳಿಸಿ ಸಂಚಾರ ಪುನರಾರಂಭಿಸಿರುವ ಕ್ರಿಮಿಯಾ ಸಂಪರ್ಕದ ಕೆರ್ಚ್ ಸೇತುವೆಯನ್ನು ರಷ್ಯಾ ಅಧ್ಯಕ್ಷ ಪುಟಿನ್ ಇದೇ ವೇಳೆ ಪರಿಶೀಲಿಸಿದರು. ಉಕ್ರೇನ್ ಪ್ರತಿದಾಳಿಯಿಂದ ಸೇತುವೆ ತೀವ್ರ ಹಾನಿಗೀಡಾಗಿತ್ತು.

ಎವರೆಸ್ಟ್ ಏರಿದ ಭಾರತ ಮೂಲದ ಸಿಂಗಪುರ ಬಾಲಕ

ಸಿಂಗಪುರ (ಪಿಟಿಐ): ಭಾರತ ಮೂಲದ ಆರು ವರ್ಷ ವಯಸ್ಸಿನ ಬಾಲಕ ಓಂ ಮದನ್ ಗಾರ್ಗ್, ನೇಪಾಳದ ಮೌಂಟ್ ಎವರೆಸ್ಟ್ ಬೇಸ್ ಕ್ಯಾಂಪ್ ಪರ್ವತಾರೋಹಣ ಪೂರ್ಣಗೊಳಿಸಿದ ಅತ್ಯಂತ ಕಿರಿಯ ಸಿಂಗಪುರ ವ್ಯಕ್ತಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ. ಇದು ಸಿಂಗಪುರ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲಾಗಿದೆ.

ಓಂ ಮದನ್ ತಮ್ಮ ಪೋಷಕರೊಂದಿಗೆ ಕಳೆದ ಅಕ್ಟೋಬರ್‌ನಲ್ಲಿ ಪರ್ವತಾರೋಹಣ ಆರಂಭಿಸಿದ್ದರು. 10 ದಿನಗಳಲ್ಲಿ 65 ಕಿಲೋ ಮೀಟರ್ ಕ್ರಮಿಸಿ 5,364 ಮೀಟರ್ ಎತ್ತರದಲ್ಲಿರುವ ಪರ್ವತದ ದಕ್ಷಿಣದ ಬೇಸ್‌ಕ್ಯಾಂಪ್ ತಲುಪಿದ್ದರು. ಮದನ್ ಪೋಷಕರು ಮಗನಿಗೆ ಎರಡು ವರ್ಷವಿರುವಾಗಲೇ ವಿಯೆಟ್ನಾಂ, ಥಾಯ್ಲೆಂಡ್ ಮತ್ತಿತರ ದೇಶಗಳಿಗೆ ತಮ್ಮೊಂದಿಗೆ ಪ್ರವಾಸಕ್ಕೆ ಕರೆದೊಯ್ದಿದ್ದರು.

ಲಖಿಂಪುರ ಪ್ರಕರಣ: ಆಶಿಶ್ ಮಿಶ್ರಾ ಅರ್ಜಿ ವಜಾ

ಲಖಿಂಪುರ ಖೇರಿ (ಉತ್ತರ ಪ್ರದೇಶ) (ಪಿಟಿಐ): ಲಖಿಂಪುರ ಖೀರಿಯ ಹಿಂಸಾಚಾರ ಪ್ರಕರಣದಿಂದ ಕೈಬಿಡುವಂತೆ ಕೇಂದ್ರ ಸಚಿವ ಅಜಯ್ ಕುಮಾರ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಸೇರಿದಂತೆ 13 ಜನರು ಸಲ್ಲಿಸಿದ್ದ ಅರ್ಜಿಯನ್ನು ಇಲ್ಲಿನ ನ್ಯಾಯಾಲಯ ಸೋಮವಾರ ವಜಾಗಳಿಸಿದೆ. ಇದರಿಂದ ಅವರು ವಿಚಾರಣೆ ಎದುರಿಸಬೇಕಾಗಿದೆ.

'ಆರೋಪಿಗಳು ಸಲ್ಲಿಸಿದ್ದ ಅರ್ಜಿಗಳನ್ನು ವಜಾಗೊಳಿಸಿದ 1ನೇ ಹೆಚ್ಚುವರಿ ನ್ಯಾಯಾಧೀಶರು, ಆರೋಪಿಗಳಿಗೆ ಅವರ ವಿರುದ್ಧದ ಆರೋಪಗಳ ಕುರಿತು ಮಂಗಳವಾರ ವಿವರಿಸುವಂತೆ ಸೂಚಿಸಿದ್ದಾರೆ' ಎಂದು ಜಿಲ್ಲಾಡಳಿತದ ವಕೀಲರಾದ ಅರವಿಂದ್ ತ್ರಿಪಾಠಿ ಮಾಹಿತಿ ನೀಡಿದ್ದಾರೆ.

ಆಶಿಶ್ ಮಿಶ್ರಾ

ಈ ಆರೋಪಿಗಳ ವಿರುದ್ಧ ಈಗಾಗಲೇ ಚಾರ್ಜ್‌ಶೀಟ್ ಸಲ್ಲಿಕೆಯಾಗಿದೆ.

ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ಕೃಷಿ ಕಾಯ್ದೆ ರದ್ದಿಗೆ ಆಗ್ರಹಿಸಿ ಪ್ರತಿಭಟಿಸುತ್ತಿದ್ದವರ ಮೇಲೆ ಕಾರು ಹರಿಸಿ ನಾಲ್ವರು ರೈತರನ್ನು ಹತ್ಯೆ ಮಾಡಿದ ಎಂಬ ಆರೋಪ ಆಶಿಶ್ ಮೇಲಿದೆ. ಪ್ರಕರಣ ಸಂಬಂಧ ಫೆಬ್ರುವರಿಯಲ್ಲಿ ಲಖನೌ ಪೀಠದ ಅಲಹಾಬಾದ್ ಹೈಕೋರ್ಟ್ ಅವರಿಗೆ ಜಾಮೀನು ಮಂಜೂರು ಮಾಡಿತ್ತು. ಬಳಿಕ ಸುಪ್ರೀಂಕೋರ್ಟ್ ಜಾಮೀನನ್ನು ರದ್ದುಗೊಳಿಸಿತ್ತು.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ನಡೆದ ಲಖಿಂಪುರ ಖೀರಿ ಹಿಂಸಾಚಾರದಲ್ಲಿ ನಾಲ್ವರು ರೈತರು ಸೇರಿ ಒಟ್ಟು 8 ಮಂದಿ ಮೃತಪಟ್ಟಿದ್ದರು.

ಚೀನಾ: ಕೋವಿಡ್ ನಿಯಮ ಸಡಿಲ

ಬೀಜಿಂಗ್ (ಎಪಿ): ಬೀಜಿಂಗ್ ಸೇರಿದಂತೆ ಪ್ರಮುಖ ನಗರಗಳಲ್ಲಿ ಸೋಮವಾರ ವ್ಯಾಪಾರ, ವ್ಯವಹಾರ ಚಟುವಟಿಕೆ ಸಕ್ರಿಯಗೊಂಡಿದೆ. ಈ ನಗರಗಳಲ್ಲಿ ಕೋವಿಡ್ ಪರೀಕ್ಷೆ ನಿಯಮಗಳನ್ನು ಸಡಿಲಿಸಲಾಗಿದೆ. ಕಳೆದ ಒಂದು ತಿಂಗಳಿಂದ ಇದ್ದ 'ಶೂನ್ಯ' ಕೋವಿಡ್ ಕಠಿಣ ನಿಯಮಗಳನ್ನು ತಾತ್ಕಾಲಿಕವಾಗಿ ಸಡಿಲಗೊಳಿಸಲಾಗಿದೆ.

16 ನಗರಗಳಲ್ಲಿ ಸಾರ್ವಜನಿಕ ಸ್ಥಳ, ಶಾಲೆ, ಆಸ್ಪತ್ರೆ, ಹೋಟೆಲ್, ಬಾರ್, ಒಳಾಂಗಣ ಕ್ರೀಡಾಂಗಣಗಳಲ್ಲಿ ಓಡಾಡಲು ಈ ವರೆಗೆ ಇದ್ದ ಕೋವಿಡ್ ಪರೀಕ್ಷೆಯ ನಿಯಮಗಳನ್ನು ತೆಗೆದುಹಾಕಲಾಗುತ್ತಿದೆ. ಪ್ರಮುಖ ನಗರಗಳಲ್ಲಿ ಬಸ್ ಸಂಚಾರ ಆರಂಭವಾಗಿದ್ದು, ಕಳೆದ 48 ಗಂಟೆಗಳಿಂದ ಯಾವುದೇ ಕೋವಿಡ್ ಪರೀಕ್ಷೆಗೆ ಒಳಪಡದೆ ಜನ ಓಡಾಡುತ್ತಿದ್ದಾರೆ.

ಒಂದು ತಿಂಗಳಲ್ಲಿ ಇದೇ ಮೊದಲ ಬಾರಿಗೆ ಕೋವಿಡ್ ಪರೀಕ್ಷೆ ಇಲ್ಲದೇ ಜನ ಓಡಾಡುತ್ತಿದ್ದಾರೆ. ಶಾಂಘೈನಲ್ಲಿ ಮಂಗಳವಾರದಿಂದ ಈ ಕ್ರಮ ಜಾರಿಗೆ ಬರಲಿದೆ.

'ಗಾಬ್ಲಿನ್ ಮೋಡ್' ವರ್ಷದ ಪದ

ಲಂಡನ್ (ಎಪಿ): 2022ರ ವರ್ಷದ ಪದವಾಗಿ 'ಗಾಬ್ಲಿನ್ ಮೋಡ್' (goblin mode) ಪದವನ್ನು ಆನ್‌ಲೈನ್ ಮತದಾನದ ಮೂಲಕ ಜನರು ಆಯ್ಕೆ ಮಾಡಿದ್ದಾರೆ ಎಂದು ಆಕ್ಸ್‌ಫರ್ಡ್ ಡಿಕ್ಷನರೀಸ್ ಸೋಮವಾರ ಘೋಷಿಸಿದೆ.

'ಅಳುಕಿಲ್ಲದೆ ಸ್ವಹಿತಾಸಕ್ತಿಯಲ್ಲಿ ತೊಡಗಿರುವ, ಸೋಮಾರಿ, ಅಸಡ್ಡೆ ಅಥವಾ ದುರಾಸೆ ಹೊಂದಿರುವ ಮತ್ತು ಸಾಮಾಜಿಕ ಕಟ್ಟುಪಾಡು, ನಿರೀಕ್ಷೆಗಳನ್ನು ತಿರಸ್ಕರಿಸುವ' ಎಂಬ ಅರ್ಥವನ್ನು ಈ ನುಡಿಗಟ್ಟು ನೀಡುತ್ತದೆ ಎಂದು ಆಕ್ಸ್‌ಫರ್ಡ್ ಡಿಕ್ಷನರೀಸ್ ವಿವರಿಸಿದೆ.

ಇದೇ ಮೊದಲ ಬಾರಿಗೆ ವರ್ಷದ ಪದವನ್ನು ಸಾರ್ವಜನಿಕರ ಮತದ ಮೂಲಕ ಆಯ್ಕೆ ಮಾಡಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diploma ದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611224633/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel Agencies

6 ದಿನಗಳ ದುಬೈ ಶಾಪಿಂಗ್ ಫೆಸ್ಟಿವಲ್ ದುಬೈ,ಅಬುದಾಬಿ ಶಾರ್ಜಾ. 11 ದಿನಗಳ ರಾಜಸ್ಥಾನ್ ಸ್ಪೆಷಲ್. 9 ದಿನಗಳ ಗುಜರಾತ್ ಪ್ರವಾಸ. 3 ದಿನಗಳ ಅಹೋಬಿಲಂ ಪ್ರವಾಸ. ವಿವರಗಳಿಗೆ ಸಂಪರ್ಕಿಸಿ ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900080793 9880079588

Travel

ರಾಯಲ್ ರಾಜಸ್ಥಾನ್ ಪ್ರವಾಸ 14.12.2022 ರಿಂದ 11 ದಿನಗಳು. ಕೆಲವೇ ಸೀಟುಗಳಿವೆ ವಿಶೇಷ ರಿಯಾಯಿತಿ ಸಂಪರ್ಕಿಸಿ: ತತ್ವಮಸಿ ಟೂರ್ಸ್ 7795787484, 9480158233

A/C ರೂಂ ಹಾಗು A/C ಬಸ್ಸಿನಲ್ಲಿ 11.01.2023 15.02.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು 17.01.2023 08.02.2023 ದುಬೈ,ಅಬುಧಾಬಿ 5 ದಿನಗಳು. 13.12.2022 12.01.2023 ಗುಜರಾತ್ 8 ದಿನಗಳು. 13.12.2022 03.01.2023 ರಾಜಸ್ಥಾನ್ 9 ದಿನಗಳು. 17.01.2023 11.02.2023 ಕಾಶಿ,ಗಯಾ,ಅಯೋಧ್ಯ 7 ದಿನಗಳು. 04.12.2022 18.01.2023 ಕುಂಭಕೋಣಂ,ರಾಮೇಶ್ವರ 6 ದಿನಗಳು. 22.12.2022 28.12.2022 ಧರ್ಮಸ್ಥಳ ಹೊರನಾಡು 4 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು.3 9448402248 7022547922

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ.
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಯಪಾಲಕ ಅಭಿಯಂತರವರ ಕಚೇರಿ, ಕೃಭಾಜನಿನಿ, ಐಬಿಸಿ ವಿಭಾಗ ಸಂ:1 ಕೆಂಭಾವಿ
ತಾ: ಸುರಪುರ, ಜಿ: ಯಾದಗಿರಿ
ದೂರವಾಣಿ: 08443–278674 e-Mail: ee_ibcdiv1kembhavi@yahoo.com
ಸಂ: ಕೃಭಾಜನಿನಿ/ಐಬಿಸಿವಿ–1/ಪಿಬಿ/ಟೆಂಡರ/2022–23/703 ದಿನಾಂಕ:– 22.11.2022
ಅಲ್ಪಾವಧಿ ಟೆಂಡರ ಪ್ರಕಟಣೆ call-2
(ಇ–ಪ್ರಾಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ.1 ಕೆಂಭಾವಿ ಇವರು ಕರ್ನಾಟಕ ಸರಕಾರದ ಇ–ಪ್ರಾಕ್ಯೂರಮೆಂಟ್ ಪೋರ್ಟಲ್‌ನಲ್ಲಿ Roads & bridges ಅಡಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಯಾದ Construction of ayacut road from Golageri to Gubbewada from 0.00 to 9.00 km in Sindagi taluka Vijayapur district (I.No. 21846)/call-2 ಟೆಂಡರ ಮೊತ್ತ: 231.70 ಲಕ್ಷಗಳು ಇ.ಎಂ.ಡಿ ಮೊತ್ತ: 3.48 ಲಕ್ಷಗಳು percentage basis from A valid Copy of class-I registration certificate of KPWD/PWD of any other state/CPWD/KBJNL categorization certificate (Category-III & above) . ಗುತ್ತಿಗೆದಾರರಿಂದ ಟೆಂಡರನ್ನು ದ್ವಿ ಮಾತ್ರ–ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಅಹ್ವಾನಿಸಲಾಗಿದೆ.
ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್ ಸೈಟ್ http://eproc.karnataka.gov.in/eportal/index.seam link ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗಹಿಸಬಹುದು.
1) ಇ–ಪ್ರಾಕ್ಯೂರಮೆಂಟ್ http://eproc.karnataka.gov.in/eportal/index.seam link ವೆಬ್ ಸೈಟ್ ನಿಂದ ಖಾಲಿ ಟೆಂಡರ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡಿಕೊಳ್ಳುವದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ ದಿನಾಂಕ: 03–12–2022 ರಿಂದ 13–12–2022 ರ ಸಾಯಂಕಾಲ 4.30 ಗಂಟೆಯವರೆಗೆ ಸಲ್ಲಿಸುವದು. 2) ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ಸಲ್ಲಿಸಲು ಕೊನೆ ದಿನಾಂಕ: 13–12–2022 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವದು. 3) Pre-bid ಸಭೆಯನ್ನು ಮಾನ್ಯ ಮುಖ್ಯ ಇಂಜಿನೀಯರ್ ಕಾಲುವೆ ವಲಯ 2 ರಾಂಪುರ (ಪ.ಆ) ಇವರ ಕಛೇರಿಯಲ್ಲಿ ದಿನಾಂಕ : 08–12–2022 ರಂದು ನಡೆಸಲಾಗುವುದು. 4) ಕವರ-I(technical bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ: ಯಾದಗಿರಿ ಕಛೇರಿಯಲ್ಲಿ ದಿನಾಂಕ: 15–12–2022 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು. 5) ಕವರ-II(Financial bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯಲ್ಲಿ ದಿನಾಂಕ: 17–12–2022 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು. 6) ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವದು. 7) ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ. ಐಬಿಸಿ ವಿಭಾಗ ಸಂ 1
ವಾ.ಸಾ.ಸಂ.ಇ/ಯಾದಗಿರಿ/340/ಎಂ.ಸಿ.ಎ/2022–23 ಕೆಂಭಾವಿ–585216

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ
ಕ್ರ.ಸಂ:ಬಿಜಿಎಂ:ಡಿಯುಡಿಸಿ:5:ಸಿಆರ್–25:2021–22 ದಿನಾಂಕ:05–12–2022
ಅಲ್ಪಾವಧಿ ಟೆಂಡರ್ ಅಧಿಸೂಚನೆ
ಬೆಳಗಾವಿ ಜಿಲ್ಲೆಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯ ಕಾಮಗಾರಿಗಳಿಗಾಗಿ KW-4 ಡಾಕುಮೆಂಟ್ ಉಪಯೋಗಿಸಿ 1ನೇ ದರ್ಜೆ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ. (ರೂ. ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ (GST ಹೊರತುಪಡಿಸಿ)	ಇ.ಎಂ.ಡಿ ಮೊತ್ತ
1	ನಿಪ್ಪಾಣಿ ನಗರಸಭೆ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No.DMA/2022-23/RD/WORK_INDENT132220/Call-2)	1012.49	15.00

ಗುತ್ತಿಗೆದಾರರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಕಾಮಗಾರಿ ಪೂರ್ಣಗೊಳಿಸಲು ಅವಧಿ ಮಳೆಗಾಲ ಸೇರಿ	18 ತಿಂಗಳು
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	20–12–2022ರಂದು 17–00 ಘಂಟೆವರೆಗೆ
ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	21–12–2022ರಂದು 17–01 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/–ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ
DIPR/BGM/RO-NO-1321/MCA/2022-23

ಸುಪ್ರೀಂ ಕೋರ್ಟ್ ಕಳವಳ • ಆಸೆ ತೋರಿಸಿ ಮತಾಂತರಿಸುವುದು ಸಂವಿಧಾನದ ಮೂಲ ಆಶಯಕ್ಕೆ ವಿರುದ್ಧ

‘ಮತಾಂತರ ಉದ್ದೇಶದ ದಾನ ಅಪಾಯಕಾರಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ದಾನ ಹಾಗೂ ಉತ್ತಮ ಕೆಲಸಗಳು ಮತಾಂತರದ ಉದ್ದೇಶ ಒಳಗೊಂಡಿರಬಾರದು. ಮತಾಂತರಕ್ಕಾಗಿ ನಡೆಸುವ ಪ್ರಲೋಭನೆ ಅತ್ಯಂತ ಅಪಾಯಕಾರಿ’ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಕಾನೂನುಬಾಹಿರ ಮತಾಂತರ ತಡೆಗಟ್ಟಲು ಕ್ರಮ ಕೈಗೊಳ್ಳುವಂತೆ ಕೋರಿ ವಕೀಲ ಅಶ್ವಿನಿಕುಮಾರ್ ಉಪಾಧ್ಯಾಯ ಎಂಬುವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಿ.ಟಿ.ರವಿಕುಮಾರ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಇದರ ವಿಚಾರಣೆ ನಡೆಸಿತು.

‘ದಾನ–ಧರ್ಮ ಹಾಗೂ ಉತ್ತಮ ಕೆಲಸಗಳು ಸ್ವಾಗತಾರ್ಹವಾದುವು.

ಆದರೆ ಅವುಗಳ ಉದ್ದೇಶ ಏನು ಎಂಬುದನ್ನು ಮನಗಾಣಬೇಕು. ನಂಬಿಕೆ ಬೇರೆ. ಮತಾಂತರಕ್ಕಾಗಿ ಇಲ್ಲ ಸಲ್ಲದ ಆಸೆ ತೋರಿಸುವುದು ಅಪಾಯಕಾರಿ’ ಎಂದು ನ್ಯಾಯಪೀಠ ತಿಳಿಸಿದೆ.

‘ತಮಗೆ ಬೇಕಾದ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಆದರೆ ಅದು ಪ್ರಲೋಭನೆಯಿಂದ ಕೂಡಿರಬಾರದು. ನಿರ್ದಿಷ್ಟ ವ್ಯಕ್ತಿಗೆ ಸಹಾಯ ಮಾಡಬೇಕು ಎಂದು ಅನಿಸಿದರೆ ಸಹಾಯ ಮಾಡಿ. ಆದರೆ ಅದರ ಉದ್ದೇಶ ಮತಾಂತರ ಆಗಿರಬಾರದು. ಆಸೆ ತೋರಿಸುವುದು ಅಪಾಯಕಾರಿ. ಇದು ಸಂವಿಧಾನದ ಮೂಲ ಆಶಯಕ್ಕೆ ವಿರುದ್ಧವಾದುದು. ಭಾರತದಲ್ಲಿ ನೆಲೆಸಿರುವ ಪ್ರತಿಯೊಬ್ಬರೂ ದೇಶದ ಸಂಸ್ಕೃತಿ, ಸಾಮರಸ್ಯಕ್ಕೆ ಅನುಗುಣವಾಗಿಯೇ ಕಾರ್ಯನಿರ್ವಹಿಸುವುದು ಅತ್ಯಗತ್ಯ’ ಎಂದು ಹೇಳಿದೆ.

ಮತಾಂತರ ನಿಷೇಧ ಕಾಯ್ದೆಯ ಕುರಿತು ಎಲ್ಲಾ ರಾಜ್ಯಗಳಿಂದಲೂ ಮಾಹಿತಿ ಪಡೆದು ಸವಿವರವಾದ ವರದಿಯನ್ನು ಸಲ್ಲಿಸುವಂತೆ ನ್ಯಾಯಪೀಠವು ಕೇಂದ್ರ ಸರ್ಕಾರಕ್ಕೆ ಸೂಚಿಸಿತು. ಇದಕ್ಕೆ ಮತ್ತಷ್ಟು ಕಾಲಾವಕಾಶ ನೀಡಬೇಕೆಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮನವಿ ಮಾಡಿದರು.

ಬಳಿಕ ನ್ಯಾಯಪೀಠ ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿತು.

ಬಲವಂತದ ಮತಾಂತರ ತಡೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ, ಈ ವಿಚಾರದಲ್ಲಿ ಸರ್ಕಾರದ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ನ್ಯಾಯಾಲಯವು ನ. 14ರಂದು ಕೇಂದ್ರ ಸರ್ಕಾರವನ್ನು ಕೇಳಿತ್ತು. ಇದು ಗಂಭೀರ ವಿಚಾರ. ಇದರಿಂದ ದೇಶದ ಭದ್ರತೆ ಹಾಗೂ ನಾಗರಿಕರ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟಾಗುವ ಅಪಾಯವಿದೆ ಎಂದು ನ್ಯಾಯಾಲಯ ಹೇಳಿತ್ತು.

‘ಪ್ರತಿಯೊಬ್ಬರಿಗೂ ಅವರ ಧರ್ಮದ ಮೇಲೆ ಹಕ್ಕಿದೆ’

ನವದೆಹಲಿ (ಪಿಟಿಐ): ‘ಭಾರತ ಜಾತ್ಯತೀತ ರಾಷ್ಟ್ರ. ಇಲ್ಲಿ ಪ್ರತಿಯೊಬ್ಬರಿಗೂ ಅವರ ಧರ್ಮದ ಮೇಲೆ ಹಕ್ಕಿದೆ’ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿತು. ಧಾರ್ಮಿಕ ವ್ಯಕ್ತಿ ಶ್ರೀ ಶ್ರೀ ಠಾಕೂರ್ ಅನುಕುಲ್ ಚಂದ್ರ ಅವರನ್ನು ‘ಪರಮಾತ್ಮ’ ಎಂದು ಘೋಷಿಸಲು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿತು.

‘ಇದೊಂದು ಪ್ರಚಾರ ಪಡೆಯಲು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ’ ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ಪೀಠವು ಅರ್ಜಿದಾರರಿಗೆ ₹ 1 ಲಕ್ಷ ದಂಡ ವಿಧಿಸಿ ಆದೇಶಿಸಿತು.

ಅರ್ಜಿದಾರರು ಅರ್ಜಿ ಓದುವುದನ್ನು ತಡೆದ ಪೀಠವು, ‘ಇಲ್ಲಿ ಕೇಳಿ. ನಾವು ಉಪನ್ಯಾಸ ಕೇಳಲು ಕುಳಿತಿಲ್ಲ. ಇದು, ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹೇಗಾಗುತ್ತದೆ? ಯಾರಿಗೆ ಹೇಗೆ ಬೇಕೋ ಭಾವಿಸಲಿ. ಇದು, ಜಾತ್ಯತೀತ ರಾಷ್ಟ್ರ. ಇವರನ್ನೇ ಪ್ರಾರ್ಥಿಸಿ ಎಂದು ನಾಗರಿಕರಿಗೆ ಹೇಳಲಾಗದು’ ಎಂದು ತಿಳಿಸಿತು.

ನಿರ್ದಿಷ್ಟ ಧರ್ಮವನ್ನು ಪಾಲಿಸಿ ಎಂದು ನಾವು ಹೇಗೆ ಜನರಿಗೆ ಹೇಳಲು ಸಾಧ್ಯ ಎಂದು ಪೀಠವು ಅರ್ಜಿದಾರರಿಗೆ ಪ್ರಶ್ನಿಸಿತು.

‘ನಿಮಗೇ ಬೇಕಾದರೆ ‘ಪರಮಾತ್ಮ’ ಎಂದು ಭಾವಿಸಿಕೊಳ್ಳಿ. ಇನ್ನೊಬ್ಬರ ಮೇಲೆ ಅದನ್ನು ಹೇರುವುದು ಏಕೆ?’ ಎಂದು ಅರ್ಜಿದಾರರಾದ ಉಪೇಂದ್ರನಾಥ ದಲಾಯಿ ಅವರಿಗೆ ತಿಳಿಸಿ ಅರ್ಜಿಯನ್ನು ವಜಾ ಮಾಡಿತು. ಅನುಕುಲ್ ಚಂದ್ರ ಅವರು ಬಾಂಗ್ಲಾದೇಶದ ಪಬ್ನಾದಲ್ಲಿ ಸೆಪ್ಟೆಂಬರ್ 14, 1888ರಲ್ಲಿ ಜನಿಸಿದ್ದರು.

ಅಂಗವಿಕಲರ ಅನುಕೂಲಕ್ಕೆ ಸಮಿತಿ ರಚಿಸಿದ ‘ಸುಪ್ರೀಂ’

ನವದೆಹಲಿ: ಅಂಗವಿಕಲರಿಗೆ ನ್ಯಾಯಾಂಗ ಸೇವೆ ಸುಲಭವಾಗಿ ದೊರೆಯುವಂತೆ ಮಾಡುವ ಗುರಿಯೊಂದಿಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ಸಮಿತಿಯೊಂದನ್ನು ರಚಿಸಿದ್ದಾರೆ.

‘ಸುಪ್ರೀಂ ಕೋರ್ಟ್ ಕಮಿಟಿ ಆನ್ ಆ್ಯಕ್ಸೆಸಿಬಿಲಿಟಿ’ ಹೆಸರಿನ ಈ ಸಮಿತಿಗೆ ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಎಸ್.ರವೀಂದ್ರ ಭಟ್ ಮುಖ್ಯಸ್ಥರಾಗಿರಲಿದ್ದಾರೆ.

ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಕಾನೂನು ಶಾಲೆಯ (ಎನ್‌ಎಲ್‌ಯು) ಓರ್ವ ಪ್ರಾಧ್ಯಾಪಕ, ಸುಪ್ರೀಂ ಕೋರ್ಟ್ ಉದ್ಯೋಗಿಯಾಗಿರುವ ಅಂಗವಿಕಲ ವ್ಯಕ್ತಿ, ಸುಪ್ರೀಂ ಕೋರ್ಟ್‌ನ ವಕೀಲರ ಸಂಘ ನಾಮನಿರ್ದೇಶನ ಮಾಡುವ ವಕೀಲ (ಅಂಗವಿಕಲ) ಹಾಗೂ ಕೇಂದ್ರ ಸರ್ಕಾರ ನಾಮನಿರ್ದೇಶನ ಮಾಡುವ ವ್ಯಕ್ತಿಯೊಬ್ಬರು ಸಮಿತಿಯಲ್ಲಿ ಇರಲಿದ್ದಾರೆ. ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಿಯ ಅಧಿಕಾರಿಯೊಬ್ಬರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರಲಿದ್ದಾರೆ.

ಅಂಗಾಂಗ ಕಸಿಗೆ ಏಕರೂಪ ನಿಯಮ– ಪರಿಶೀಲನೆಗೆ ಸೂಚನೆ: ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಅಂಗಾಂಗಳ ದಾನ ಮತ್ತು ಕಸಿ ಸಂಬಂಧ ಎಲ್ಲ ರಾಜ್ಯಗಳಲ್ಲಿ ಏಕರೂಪ ನಿಯಮ ಜಾರಿಗೆ ತರುವ ಬಗ್ಗೆ ಪರಿಶೀಲಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠವು, ‘ಗಿಫ್ಟ್ ಆಫ್ ಲೈಫ್ ಅಡ್ವೆಂಚರ್ ಫೌಂಡೇಷನ್’ ಸಂಸ್ಥೆಯು ಅಂಗಾಂಗ ದಾನ, ಕಸಿಯಲ್ಲಿ ಏಕರೂಪ ನಿಯಮಾವಳಿ ಇಲ್ಲದೆ ಇರುವ ಬಗ್ಗೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಆಲಿಸುವಾಗ ಈ ಸೂಚನೆ ನೀಡಿದೆ.

ಬಿ.ಎಲ್. ಸಂತೋಷ್‌ಗೆ ನೋಟಿಸ್: ತಡೆಯಾಜ್ಞೆ ವಿಸ್ತರಣೆ

ಹೈದರಾಬಾದ್: ಬಿಆರ್‌ಎಸ್ ಶಾಸಕರನ್ನು ಖರೀದಿಸಲು ಯತ್ನಿಸಲಾಗಿತ್ತು ಎಂಬ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರಿಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ಜಾರಿ ಮಾಡಿದ್ದ ನೋಟಿಸ್‌ಗೆ ನೀಡಿದ್ದ ತಡೆಯಾಜ್ಞೆಯನ್ನು ತೆಲಂಗಾಣ ಹೈಕೋರ್ಟ್ ಡಿಸೆಂಬರ್ 13ರವರೆಗೆ ವಿಸ್ತರಿಸಿದೆ.

ನ್ಯಾಯಮೂರ್ತಿ ಕೆ. ಸುರೇಂದರ್ ಅವರು ತಡೆಯಾಜ್ಞೆಯನ್ನು ವಿಸ್ತರಿಸಿದ್ದಾರೆ. ನ್ಯಾಯಾಲಯವು ಈ ಹಿಂದೆ ಡಿಸೆಂಬರ್ 5ರ ವರೆಗೆ ತಡೆಯಾಜ್ಞೆ ನೀಡಿತ್ತು.

ಪುಟಾಣಿಗಳೊಂದಿಗೆ ಚಹಾ ಸವಿದ ರಾಹುಲ್

ರಾಜಸ್ಥಾನದಲ್ಲಿ ‘ಭಾರತ್ ಜೋಡೊ’ ಯಾತ್ರೆ • ಅಶೋಕ್ ಗೆಹಲೋತ್, ಸಚಿನ್ ಪೈಲಟ್ ಜೊತೆ ಹೆಜ್ಜೆ

ಝಾಲವಾಡ (ರಾಜಸ್ಥಾನ) (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ರಾಜಸ್ಥಾನದಲ್ಲಿ ಸೋಮವಾರ ಬೆಳಿಗ್ಗೆ ತಮ್ಮ 89ನೇ ದಿನದ ಭಾರತ್ ಜೋಡೊ ಯಾತ್ರೆ ಆರಂಭಿಸಿದರು. ಇಲ್ಲಿಗೆ ಸಮೀಪದ ಢಾಬಾವೊಂದರಲ್ಲಿ ಸಣ್ಣ ಮಕ್ಕಳೊಂದಿಗೆ ಚಹಾ ಸೇವಿಸಿ, ಸಂವಾದ ನಡೆಸಿದರು.

ಮಧ್ಯಪ್ರದೇಶದಲ್ಲಿ ಯಾತ್ರೆ ಪೂರ್ಣಗೊಳಿಸಿ ರಾಜಸ್ಥಾನದ ಗಡಿಯಲ್ಲಿರುವ ಝಾಲ್ರಾಪಾಟನ್ ಕಾಲಿತಲಾಯಿ ಗ್ರಾಮದಿಂದ ಬೆಳಿಗ್ಗೆ 6.10ಕ್ಕೆ ಯಾತ್ರೆ ಆರಂಭಿಸಿದ ರಾಹುಲ್ ಜತೆಗೆ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಪ್ರಭಾವಿ ನಾಯಕ ಸಚಿನ್ ಪೈಲಟ್ ಅವರು ಒಗ್ಗಟ್ಟಿನಲ್ಲಿ ಹೆಜ್ಜೆ ಹಾಕಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್, ರಾಜಸ್ಥಾನದ ಕಾಂಗ್ರೆಸ್ ಘಟಕದ ಅಧ್ಯಕ್ಷ ಗೋವಿಂದ್ ಸಿಂಗ್ ದೋತಾಸ್ರಾ, ಹಿರಿಯ ನಾಯಕ ಭನ್ವಾರ್ ಜಿತೇಂದ್ರ ಸಿಂಗ್, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರತಾಪ್ ಸಿಂಗ್ ಖಚಾರಿಯಾವಾಸ್ ಯಾತ್ರೆಯಲ್ಲಿ ಜತೆಗೂಡಿದರು.

‘ಶೌರ್ಯದ ಮಣ್ಣಿಗೆ ಭಾರತ್ ಜೋಡೋ ಯಾತ್ರಾದ ನಮನ. ಹಲವು ಚರಿತ್ರೆಯ ನೆಲೆಯಾದ ರಾಜಸ್ಥಾನವು ಮತ್ತೊಂದು ಚರಿತ್ರೆ ನಿರ್ಮಿಸುತ್ತದೆ’ ಕಾಂಗ್ರೆಸ್ ಪಕ್ಷವು ಟ್ವೀಟ್ ಮಾಡಿದೆ.

ಯಾತ್ರೆಯಲ್ಲಿ ಅಸ್ವಸ್ಥರಾದ ಮಾಜಿ ಸಂಸದ ರಘುವೀರ್ ಮೀನಾ ಅವರನ್ನು ಆಂಬುಲೆನ್ಸ್‌ನಲ್ಲಿ ಕರೆದೊಯ್ದು ಝಾಲವಾಡ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು.

ರಾಜ್ಯದಲ್ಲಿ 17 ದಿನಗಳು ಸಂಚರಿಸಲಿರುವ ಯಾತ್ರೆಯು ಏಳು ಜಿಲ್ಲೆಗಳನ್ನು ಒಟ್ಟು ಸುಮಾರು 500 ಕಿ.ಮೀ. ಹಾದು ಹೋಗಲಿದೆ. ಇದೇ 21ರಂದು ಹರಿಯಾಣವನ್ನು ಪ್ರವೇಶಿಸಲಿದೆ.

ರಾಜಸ್ಥಾನದ ಝಾಲವಾಡ ಜಿಲ್ಲೆಯಲ್ಲಿ ಸೋಮವಾರ ಭಾರತ್ ಜೋಡೊ ಯಾತ್ರೆ ವೇಳೆ ರಾಹುಲ್ ಗಾಂಧಿಯವರೊಂದಿಗೆ ಮಕ್ಕಳು ಹೆಜ್ಜೆ ಹಾಕಿದರು – ಪಿಟಿಐ ಚಿತ್ರ

ತಾಜ್‌ಮಹಲ್ ‘ಇತಿಹಾಸ’ ಸರಿ ಮಾಡಲು ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ತಾಜ್‌ಮಹಲ್ ಕುರಿತು ಇತಿಹಾಸದ ಪುಸ್ತಕಗಳಲ್ಲಿ ನಮೂದಾಗಿರುವ ‘ತಪ್ಪು ಮಾಹಿತಿ’ಗಳನ್ನು ತೆಗೆಯಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿತು.

‘ನಾವು ಇಲ್ಲಿ ಇತಿಹಾಸವನ್ನು ಕೆದಕಲು ಕುಳಿತಿಲ್ಲ’ ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ನ್ಯಾಯಪೀಠ ಹೇಳಿತು. ಈ ಸಂಬಂಧ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಮೊರೆ ಹೋಗಬಹುದು ಎಂದೂ ಅರ್ಜಿದಾರರಿಗೆ ತಿಳಿಸಿತು.

‘ಇದು, ಕೋರ್ಟ್‌ಗೆ ಸಂಬಂಧವಿಲ್ಲದ ಅರ್ಜಿ. ಇತಿಹಾಸ ಇರುವಂತೆಯೇ ಮುಂದುವರಿಯಲಿ. ಅರ್ಜಿಯನ್ನು ವಜಾ ಮಾಡಲಾಗಿದೆ. ಪೀಠವು ಈ ಕುರಿತು ಯಾವುದೇ ಅಭಿಪ್ರಾಯ ವ್ಯಕ್ತಪಡಿಸುವುದಿಲ್ಲ’ ಎಂದೂ ಹೇಳಿತು. 17ನೇ ಶತಮಾನದ ಈ ಸಂಕೀರ್ಣವನ್ನು ವಿಶ್ವ ಪಾರಂಪರಿಕ ತಾಣವಾಗಿ ಯುನೆಸ್ಕೊ ಗುರುತಿಸಿದೆ.

ಇತಿಹಾಸ ಪುಸ್ತಕಗಳು ಮತ್ತು ಪಠ್ಯಪುಸ್ತಕಗಳಲ್ಲಿ ತಾಜ್‌ಮಹಲ್ ನಿರ್ಮಾಣ ಕುರಿತು ತಪ್ಪು ಮಾಹಿತಿಗಳು ಸೇರ್ಪಡೆಯಾಗಿವೆ. ಇವುಗಳನ್ನು ತೆಗೆಯುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಸುರ್ಜೀತ್ ಸಿಂಗ್ ಯಾದವ್ ಅವರು ಅರ್ಜಿ ಸಲ್ಲಿಸಿದ್ದರು.

ಕ್ರಮ ಕೈಗೊಳ್ಳಲು ಆಯೋಗಕ್ಕೆ ಭಯವೇಕೆ: ಕಾಂಗ್ರೆಸ್

ಗುಜರಾತ್: ಮತದಾನದ ದಿನವೂ ಮೋದಿ ರೋಡ್‌ಷೋ

ನವದೆಹಲಿ (ಪಿಟಿಐ): ಗುಜರಾತ್ ವಿಧಾನಸಭೆಗೆ ಸೋಮವಾರ ನಡೆದ ಎರಡನೇ ಹಂತದ ಮತದಾನದಲ್ಲಿ ಹಕ್ಕು ಚಲಾಯಿಸಲು ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ರೋಡ್‌ಷೋ ನಡೆಸಿ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ. ಒತ್ತಡದ ಕಾರಣಕ್ಕೆ ಚುನಾವಣಾ ಆಯೋಗ ಹೆದರಿದ್ದು, ಪ್ರಧಾನಿ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ ಎಂದೂ ಟೀಕಿಸಿದೆ.

ಪ್ರಜಾಪ್ರಭುತ್ವ ಹಾಗೂ ಚುನಾವಣೆಗಳ ಕಾವಲುನಾಯಿ ಆಗಿರುವ ಚುನಾವಣಾ ಆಯೋಗವು ಕೆಲವು ವಾರಗಳಿಂದ ನೀತಿ ಸಂಹಿತೆ ಉಲ್ಲಂಘನೆ ವಿರುದ್ಧ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಆರೋಪಿಸಿದ್ದಾರೆ. ‘ಗುಜರಾತ್, ದೆಹಲಿಯಲ್ಲಿ ಹಲವು ಬಾರಿ ನಾವು ಆಯೋಗಕ್ಕೆ ದೂರು ನೀಡಿದ್ದೇವೆ. ಆಯೋಗವು ಒತ್ತಡದಲ್ಲಿ ಕೆಲಸ ಮಾಡಿದಂತೆ ತೋರುತ್ತಿದೆ’ ಎಂದು ಖೇರಾ ಹೇಳಿದ್ದಾರೆ. ಈ ವಿಚಾರದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳುವ ಬಗ್ಗೆ ಪಕ್ಷ ಸಮಾಲೋಚಿಸುತ್ತಿದೆ ಎಂದಿದ್ದಾರೆ.

‘ಪ್ರಧಾನಿಯಾದರೂ, ಸಾಮಾನ್ಯ ವ್ಯಕ್ತಿಯಾದರೂ, ಮತದ ಮೌಲ್ಯ ಒಂದೇ. ಹಕ್ಕು ಚಲಾಯಿಸಲು ಮತಗಟ್ಟೆಗೆ ಹೋಗುವಾಗ ಪ್ರಧಾನಿ ಎರಡೂವರೆ ಗಂಟೆ ರೋಡ್‌ಷೋ ನಡೆಸಲು ಹೇಗೆ ಸಾಧ್ಯ. ಪ್ರಧಾನಿ ಅವರ ಈ ನಡೆಯಲ್ಲಿ ಯಾವುದೇ ಉಲ್ಲಂಘನೆ ಕಾಣುತ್ತಿಲ್ಲ ಎಂದರೆ ಆಯೋಗದ ಮೇಲೆ ಇರುವ ಒತ್ತಡ ಎಂಥದ್ದು’ ಎಂದು ಅವರು ಪ್ರಶ್ನಿಸಿದ್ದಾರೆ.

‘ಮೋದಿ ಅವರು ಎರಡೂವರೆ ಗಂಟೆ ನಡೆಸಿದ ಖರ್ಚಿಲ್ಲದ ರೋಡ್‌ಷೋ ಅನ್ನು ಎಲ್ಲ ಟಿವಿ ಸುದ್ದಿವಾಹಿನಿಗಳು ನೇರಪ್ರಸಾರ ಮಾಡಿವೆ. ಇದು ಜಾಹೀರಾತು ಅಲ್ಲವೇ? ಬಿಜೆಪಿ ಖರ್ಚಿಗೆ ಇದನ್ನು ಸೇರಿಸುವುದಿಲ್ಲವೇ? ಇದನ್ನು ಉಚಿತವಾಗಿ ಮಾಡಿದ್ದು ಏಕೆ’ ಎಂದೂ ಅವರು ಕೇಳಿದ್ದಾರೆ.

ಚುನಾವಣೆ ವೇಳೆ ಬಿಜೆಪಿ ಹಲವು ಅಕ್ರಮಗಳನ್ನು ಎಸಗಿದ್ದರೂ ಚುನಾವಣಾ ಆಯೋಗ ಮೌನವಾಗಿದೆ ಎಂದು ಖೇರಾ ಆರೋಪಿಸಿದ್ದಾರೆ. ‘ಪಕ್ಷದ ಸದಸ್ಯರು ಬಿಜೆಪಿ ಚಿಹ್ನೆ ಇರುವ ವಾಹನಗಳಲ್ಲಿ ಜನರಿಗೆ ಮದ್ಯ ಹಂಚಿದ ವಿಡಿಯೊಗಳನ್ನು ಆಯೋಗಕ್ಕೆ ಸಲ್ಲಿಸಿದ್ದರೂ, ಗಮನ ನೀಡುತ್ತಿಲ್ಲ. ಕಾಂಗ್ರೆಸ್ ನೀಡಿದ್ದ ಯಾವ ದೂರಿಗೂ ಆಯೋಗ ಸ್ಪಂದಿಸಿಲ್ಲ’ ಎಂದು ಅವರು ಹೇಳಿದ್ದಾರೆ.

ಬಿಜೆಪಿ ಸದಸ್ಯರಿಂದ ಅಪಹರಣಕ್ಕೆ ಒಳಗಾಗಿದ್ದ ದಂತಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಹಾಗೂ ಬುಡಕಟ್ಟು ಅಭ್ಯರ್ಥಿ ಕಾಂತಿಭಾಯ್ ಖರಾಡಿ ಅವರು ಚುನಾವಣಾ ಆಯೋಗಕ್ಕೆ ಪತ್ರ ಬರೆದು, ಜೀವ ಬೆದರಿಕೆ ಇರುವ ಕಾರಣಕ್ಕೆ ಹೆಚ್ಚಿನ ಭದ್ರತೆ ಒದಗಿಸುವಂತೆ ಕೋರಿದ್ದಾರೆ ಎಂದು ಖೇರಾ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಅಹಮದಾಬಾದ್‌ನಲ್ಲಿ ಮತಗಟ್ಟೆಗೆ ರೋಡ್‌ಷೋ ಮೂಲಕ ತಲುಪಿದರು –ಪಿಟಿಐ ಚಿತ್ರ

ಮೋದಿ ಅವರು ಮತದಾನದ ದಿನವೇ ರೋಡ್‌ಷೋ ನಡೆಸಿದರೆ ಏನನ್ನು ನಿರೀಕ್ಷಿಸಲು ಸಾಧ್ಯ. ಅವರು ನೂರಕ್ಕೆ ನೂರು ಫಲಿತಾಂಶ ಪಡೆಯಬಹುದು. ಇದು ನ್ಯಾಯೋಚಿತವೇ?
ಮಮತಾ ಬ್ಯಾನರ್ಜಿ, ಟಿಎಂಸಿ ಮುಖ್ಯಸ್ಥೆ

ಗುಜರಾತ್‌ನಲ್ಲಿ ಸರ್ಕಾರ, ಬಿಜೆಪಿ, ಆಡಳಿತ, ಚುನಾವಣಾ ವ್ಯವಸ್ಥೆ ಎಲ್ಲವೂ ಒಂದೇ ಉದ್ದೇಶದಿಂದ ಕೆಲಸ ಮಾಡುತ್ತಿವೆ. ಇಂದು ಕ್ರಮ ಕೈಗೊಳ್ಳದಿದ್ದರೆ, ಪ್ರಜಾಪ್ರಭುತ್ವ ಗತಕಾಲದ ವಿಷಯ ಆಗಲಿದೆ
ಪವನ್ ಖೇರಾ, ಕಾಂಗ್ರೆಸ್ ವಕ್ತಾರ

ಜಿ- 20 ಅಧ್ಯಕ್ಷ ಸ್ಥಾನ ಹೆಮ್ಮೆಯ ವಿಷಯ: ಮೋದಿ

ನವದೆಹಲಿ: ‘ಭಾರತವು ಜಿ- 20 ರಾಷ್ಟ್ರಗಳ ಅಧ್ಯಕ್ಷ ಸ್ಥಾನ ವಹಿಸಿರುವುದು ದೇಶದ ಎಲ್ಲ ನಾಗರಿಕರಿಗೆ ಹೆಮ್ಮೆಯ ವಿಷಯ. ಜಾಗತಿಕ ಮಟ್ಟದಲ್ಲಿ ಭಾರತೀಯ ಸಂಸ್ಕೃತಿಯನ್ನು ನೆಲೆಗೊಳಿಸುವ ಅವಕಾಶ ದೊರೆತಂತಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ.

ರಾಷ್ಟ್ರ ರಾಜಧಾನಿಯಲ್ಲಿ ನಡೆದ ಬಿಜೆಪಿಯ ರಾಷ್ಟ್ರೀಯ ಪದಾಧಿಕಾರಿಗಳ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಪಕ್ಷದ ಕಾರ್ಯಕರ್ತರು ಗಡಿ ಗ್ರಾಮಗಳ ಗ್ರಾಮಸ್ಥರೊಂದಿಗೆ ನೇರ ಸಂಪರ್ಕ ಹೊಂದಿರಬೇಕು. ಪ್ರವಾಸಿಗರನ್ನು ಸೆಳೆಯುವಂತಹ ಸ್ಥಳಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಸಲಹೆ ನೀಡಿದ್ದಾರೆ.

ಆಂತರಿಕವಾಗಿ ನಡೆದ ಸಭೆಯಲ್ಲಿ ಮೋದಿ ಅವರು ಮಾಡಿರುವ ಭಾಷಣದ ವಿವರಗಳನ್ನು ಛತ್ತೀಸಗಢದ ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬಿಜೆಪಿಯ ರಾಷ್ಟ್ರೀಯ ಪದಾಧಿಕಾರಿಗಳಲ್ಲದೆ, ಬಿಜೆಪಿಯ ರಾಜ್ಯ ಘಟಕಗಳ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು (ಸಂಘಟನೆ) ಭಾಗವಹಿಸಿದ್ದರು. ಸಭೆಯಲ್ಲಿ ಮುಂಬರುವ ರಾಜ್ಯ ಚುನಾವಣೆಗಳ ಬಗ್ಗೆ ಚರ್ಚಿಸಲಾಗುವುದು ಎಂದು ಸಿಂಗ್ ಹೇಳಿದ್ದಾರೆ.

ಪ್ರಧಾನಿ ನೇತೃತ್ವದಲ್ಲಿ ಸರ್ವಪಕ್ಷಗಳ ಸಭೆ

ನವದೆಹಲಿ: ಮುಂದಿನ ವರ್ಷ ನಡೆಯಲಿರುವ ಜಿ- 20 ಶೃಂಗಸಭೆಯ ಕಾರ್ಯ ತಂತ್ರ ರೂಪಿಸಲು, ಸಹಕಾರ ಮತ್ತು ಸಲಹೆಯ ಕುರಿತು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ರಾಷ್ಟ್ರಪತಿ ಭವನದಲ್ಲಿ ಸರ್ವಪಕ್ಷಗಳ ಸಭೆ ನಡೆಯಿತು.

ಈ ಸಭೆಯಲ್ಲಿ ಪಾಲ್ಗೊಂಡಿದ್ದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ‘ಜಿ -20 ಅಧ್ಯಕ್ಷ ಸ್ಥಾನವು ಒಂದು ಪಕ್ಷದ ಕಾರ್ಯಸೂಚಿ ಪ್ರಚಾರಕ್ಕೆ ದೊರೆತ ಅವಕಾಶ ಅಲ್ಲ, ಇಡೀ ದೇಶಕ್ಕಾಗಿ ಲಭಿಸಿರುವುದು’ ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಅಭಿವೃದ್ಧಿಯನ್ನು ತಮ್ಮ ಸರ್ಕಾರದ ಬಹುದೊಡ್ಡ ಸಾಧನೆಯಾಗಿ ಜಿ-20 ಸಭೆಯಲ್ಲಿ ಬಿಂಬಿಸಿಕೊಳ್ಳಲು ಮುಂದಾಗಿರುವ ಬಿಜೆಪಿಯ ಪ್ರಯತ್ನ ತಡೆಯುವ ಸಲುವಾಗಿ ವಿರೋಧ ಪಕ್ಷಗಳ ನಾಯಕರಿಂದ ಇಂತಹ ಹೇಳಿಕೆಗಳು ಬಂದಿವೆ ಎನ್ನಲಾಗಿದೆ.

ಜ್ಞಾನವಾಪಿ: ಅರ್ಜಿ ವಿಚಾರಣೆ ಇಂದು ಮುಂದುವರಿಕೆ

ಪ್ರಯಾಗ್‌ರಾಜ್ (ಪಿಟಿಐ): ಜ್ಞಾನವಾಪಿ ಮಸೀದಿ ಆಡಳಿತ ನೋಡಿಕೊಳ್ಳುವ ಅಂಜುಮನ್ ಇಂತೆಜಾಮಿಯಾ ಮಸೀದಿ ಸಮಿತಿಯು ವಾರಾಣಸಿ ಜಿಲ್ಲಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಸಲ್ಲಿಸಿರುವ ಮರುಪರಿಶೀಲನಾ ಅರ್ಜಿಯ ವಿಚಾರಣೆಯನ್ನು ಅಲಹಾಬಾದ್ ಹೈಕೋರ್ಟ್ ಮಂಗಳವಾರವೂ ಮುಂದುವರಿಸಲಿದೆ.

ಸೋಮವಾರ ಸಂಕ್ಷಿಪ್ತ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜೆ.ಜೆ. ಮುನೀರ್ ಅವರು ಅದನ್ನು ಮಂಗಳವಾರಕ್ಕೆ ಮುಂದೂಡಿದ್ದಾರೆ.

ಕ್ರೀಡಾ ಸಾಧಕರಿಗೆ ಪ್ರಶಸ್ತಿ ಪ್ರಕಟ; ಎಂಟು ಮಂದಿಗೆ ‘ಕ್ರೀಡಾ ರತ್ನ’

ಶಿಖಾ ಗೌತಮ್, ಯಶಸ್ವಿನಿಗೆ ಏಕಲವ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡ್ಮಿಂಟನ್ ಆಟಗಾರ್ತಿ ಶಿಖಾ ಗೌತಮ್ ಮತ್ತು ಟೇಬಲ್ ಟೆನಿಸ್ ಆಟಗಾರ್ತಿ ಯಶಸ್ವಿನಿ ಘೋರ್ಪಡೆ ಸೇರಿದಂತೆ 15 ಕ್ರೀಡಾಪಟುಗಳು 2021ನೇ ಸಾಲಿನ ಏಕಲವ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕ್ರೀಡಾ ಸಾಧಕರಿಗೆ ರಾಜ್ಯ ಸರ್ಕಾರ ಕೊಡಮಾಡುವ ಪ್ರತಿಷ್ಠಿತ ಪ್ರಶಸ್ತಿಗಳನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಅವರು ಸೋಮವಾರ ಪ್ರಕಟಿಸಿದರು. ರಾಜಭವನದಲ್ಲಿ ಮಂಗಳವಾರ ಬೆಳಿಗ್ಗೆ 11ಕ್ಕೆ ನಡೆಯಲಿರುವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಬ್ಯಾಡ್ಮಿಂಟನ್ ಆಟಗಾರ್ತಿ ಎಂ.ಎಂ. ಕವನ, ಯೋಗಪಟು ಎಚ್.ಋಷಿ ಮತ್ತು ಕಬಡ್ಡಿ ಆಟಗಾರ ದರ್ಶನ್ ಒಳಗೊಂಡಂತೆ ವಿವಿಧ ಕ್ರೀಡೆಗಳಲ್ಲಿ ಸಾಧನೆ ಮಾಡಿದ ಎಂಟು ಮಂದಿಯನ್ನು ‘ಕರ್ನಾಟಕ ಕ್ರೀಡಾರತ್ನ’ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಸೈಕ್ಲಿಸ್ಟ್ ಅಲ್ಕಾ ಎನ್.ಫಡತಾರೆ ಸೇರಿದಂತೆ ಆರು ಮಂದಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗಿದೆ.

ಕ್ರೀಡಾ ಪೋಷಕ ಪ್ರಶಸ್ತಿ: ಬಿ.ಎಂ.ಎಸ್. ಮಹಿಳಾ ಕಾಲೇಜು (ಬೆಂಗಳೂರು ನಗರ ಜಿಲ್ಲೆ), ಮಂಗಳ ಫ್ರೆಂಡ್ಸ್ ಸರ್ಕಲ್ (ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ) ಮತ್ತು ನಿಟ್ಟೆ ಎಜುಕೇಷನ್ ಟ್ರಸ್ಟ್‌ಗೆ (ಉಡುಪಿ ಜಿಲ್ಲೆ) 2022ರ ಸಾಲಿನ ಕ್ರೀಡಾ ಪೋಷಕ ಸಂಸ್ಥೆಗೆ ನೀಡುವ ಪ್ರಶಸ್ತಿ ಲಭಿಸಿದೆ.

ಕ್ರೀಡೆಯಲ್ಲಿ ಉನ್ನತ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳನ್ನು ಗೌರವಿಸಲು 1992ಲ್ಲಿ ಆರಂಭಿಸಲಾದ ಏಕಲವ್ಯ ಪ್ರಶಸ್ತಿಯು ಏಕಲವ್ಯನ ಕಂಚಿನ ಪ್ರತಿಮೆ ಮತ್ತು ₹ 2 ಲಕ್ಷ ನಗದು ಬಹುಮಾನ ಒಳಗೊಂಡಿದೆ.

ಜೀವಮಾನ ಸಾಧನೆ ಪ್ರಶಸ್ತಿ ಪಡೆದವರಿಗೆ ₹ 1.50 ಲಕ್ಷ ಬಹುಮಾನ ಹಾಗೂ ಕ್ರೀಡಾ ರತ್ನ ಪ್ರಶಸ್ತಿಗೆ ತಲಾ ₹ 1 ಲಕ್ಷ ನಗದು ಬಹುಮಾನ ನೀಡಲಾಗುತ್ತದೆ. ಕ್ರೀಡಾ ಪೋಷಕ ಪ್ರಶಸ್ತಿ ವಿಜೇತ ಸಂಸ್ಥೆಗಳಿಗೆ ತಲಾ ₹ 5 ಲಕ್ಷ ನೀಡಲಾಗುತ್ತದೆ.

ಚಾರ್ವಿಗೆ ಸನ್ಮಾನ: ಜಾರ್ಜಿಯಾದಲ್ಲಿ ನಡೆದ ವಿಶ್ವ ಕೆಡೆಟ್ಸ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದ ಚಾರ್ವಿ ಅವರಿಗೆ ಇದೇ ವೇಳೆ ₹ 5 ಲಕ್ಷ ವಿಶೇಷ ನಗದು ಬಹುಮಾನ ನೀಡಿ ಗೌರವಿಸಲಾಗುತ್ತದೆ.

ಶಿಖಾ ಗೌತಮ್

ಯಶಸ್ವಿನಿ

ಪ್ರಶಸ್ತಿ ಪುರಸ್ಕೃತರು

ಏಕಲವ್ಯ

ಕ್ರೀಡಾಪಟು	ಕ್ರೀಡೆ
ಚೇತನ್ ಬಿ.	ಅಥ್ಲೆಟಿಕ್ಸ್
ಶಿಖಾ ಗೌತಮ್	ಬ್ಯಾಡ್ಮಿಂಟನ್
ಕೀರ್ತಿ ರಂಗಸ್ವಾಮಿ	ಸೈಕ್ಲಿಂಗ್
ಅದಿತ್ರಿ ವಿಕ್ರಾಂತ್ ಪಾಟೀಲ್	ಫೆನ್ಸಿಂಗ್
ಅಮೃತ್ ಮುದ್ರಾಬೆಟ್	ಜಿಮ್ನಾಸ್ಟಿಕ್
ಶೇಷೇಗೌಡ	ಹಾಕಿ
ರೇಷ್ಮಾ ಮರೂರಿ	ಟೆನಿಸ್
ಟ.ಜೆ.ಶ್ರೀಜಯ್	ಶೂಟಿಂಗ್
ತನೀಷ್ ಜಾರ್ಜ್ ಮ್ಯಾಥ್ಯೂ	ಈಜು
ಯಶಸ್ವಿನಿ ಘೋರ್ಪಡೆ	ಟೇಬಲ್ ಟೆನಿಸ್
ಹರಿಪ್ರಸಾದ್	ವಾಲಿಬಾಲ್
ಸೂರಜ್ ಸಂಜು ಅಣ್ಣಿಗೇರಿ	ಕುಸ್ತಿ
ಎಚ್.ಎಸ್. ಸಾಕ್ಷತ್	ನೆಟ್‌ಬಾಲ್
ಮನೋಜ್ ಬಿ.ಎಂ	ಬ್ಯಾಸ್ಕೆಟ್‌ಬಾಲ್
ರಾಘವೇಂದ್ರ.ಎಂ.	ಪ್ಯಾರಾ ಅಥ್ಲೆಟಿಕ್ಸ್

ಜೀವಮಾನ ಸಾಧನೆ

ಅಲ್ಕಾ ಎನ್. ಫಡತಾರೆ	ಸೈಕ್ಲಿಂಗ್
ಬಿ.ಆನಂದ್ ಕುಮಾರ್	ಪ್ಯಾರಾ ಬ್ಯಾಡ್ಮಿಂಟನ್
ಶೇಖರಪ್ಪ	ಯೋಗ
ಅಶೋಕ್ ಕೆ.ಸಿ	ವಾಲಿಬಾಲ್
ರವೀಂದ್ರ ಶೆಟ್ಟಿ	ಕಬಡ್ಡಿ
ಬಿ.ಜೆ ಅಮರನಾಥ್	ಯೋಗ

ಕ್ರೀಡಾರತ್ನ

ಕವನ ಎಂ.ಎಂ	ಬಾಲ್ ಬ್ಯಾಡ್ಮಿಂಟನ್
ಬಿ.ಗಜೇಂದ್ರ	ಗುಂಡು ಎತ್ತುವುದು
ಶ್ರೀಧರ್	ಕಂಬಳ
ರಮೇಶ್ ಮಳವಾಡ್	ಕೊಕ್ಕೊ
ವೀರಭದ್ರ ಮುಧೋಳ್	ಮಲ್ಲಕಂಬ
ಋಷಿ ಎಚ್.	ಯೋಗ
ಲೀನಾ ಅಂತೋಣಿ ಸಿದ್ಧಿ	ಮಟ್ಟಿ ಕುಸ್ತಿ
ದರ್ಶನ್	ಕಬಡ್ಡಿ

ಭಾರತದ ಆಟಗಾರರಿಗೆ ಶೇಕಡ 80 ದಂಡ

ಮೀರ್‌ಪುರ (ಪಿಟಿಐ): ಬಾಂಗ್ಲಾದೇಶ ಎದುರಿನ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ನಿಗದಿತ ಅವಧಿಯಲ್ಲಿ ಓವರ್‌ಗಳನ್ನು ಪೂರ್ಣಗೊಳಿಸದ ಭಾರತ ತಂಡದ ಆಟಗಾರರಿಗೆ ದಂಡ ವಿಧಿಸಲಾಗಿದೆ. ಭಾನುವಾರ ನಡೆದ ಪಂದ್ಯದಲ್ಲಿ ಭಾರತ 1 ವಿಕೆಟ್‌ನಿಂದ ಬಾಂಗ್ಲಾಕ್ಕೆ ಮಣಿದಿತ್ತು.

ಬಾಂಗ್ಲಾ ಇನಿಂಗ್ಸ್‌ನಲ್ಲಿ, ನಿಗದಿತ ಸಮಯ ಕೊನೆಗೊಂಡಾದ ಭಾರತ ಇನ್ನು ನಾಲ್ಕು ಓವರ್‌ಗಳನ್ನು ಬೌಲ್ ಮಾಡಬೇಕಿತ್ತು. ಹೀಗಾಗಿ ಐಸಿಸಿ ಎಲೀಟ್ ಸಮಿತಿಯ ಪಂದ್ಯ ರೆಫರಿ ರಂಜನ್ ಮದುಗಲೆ ಅವರು ಆಟಗಾರರಿಗೆ ಪಂದ್ಯಶುಲ್ಕದ ತಲಾ ಶೇಕಡ 80ರಷ್ಟು ದಂಡ ವಿಧಿಸಿದ್ದಾರೆ.

ಶಫಾಲಿಗೆ ಸಾರಥ್ಯ

ನವದೆಹಲಿ (ಪಿಟಿಐ): ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ ಅವರು ಇದೇ ಮೊದಲ ಬಾರಿಗೆ ನಡೆಯಲಿರುವ ಐಸಿಸಿ 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಜನವರಿ 14ರಿಂದ 29ರವರೆಗೆ ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಟೂರ್ನಿಗೆ ಶಫಾಲಿ ನಾಯಕತ್ವದ 15 ಮಂದಿಯ ತಂಡವನ್ನು ಅಖಿಲ ಭಾರತ ಮಹಿಳಾ ಆಯ್ಕೆ ಸಮಿತಿ ಸೋಮವಾರ ಪ್ರಕಟಿಸಿದೆ.

ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಭಾರತ ತಂಡವು ‘ಡಿ’ ಗುಂಪಿನಲ್ಲಿ ಸ್ಥಾನ ಪಡೆದಿದೆ.

ಸಂಕ್ಷಿಪ್ತ ಸುದ್ದಿ

ಎನ್.ಸಿ ಅಧ್ಯಕ್ಷರಾಗಿ ಫಾರೂಕ್ ಅಬ್ದುಲ್ಲಾ ಪುನರಾಯ್ಕೆ

ಶ್ರೀನಗರ (ಪಿಟಿಐ): ಫಾರೂಕ್ ಅಬ್ದುಲ್ಲಾ ಅವರು ಮತ್ತೊಂದು ಅವಧಿಗೆ ನ್ಯಾಷನಲ್ ಕಾನ್ಫರೆನ್ಸ್ (ಎನ್.ಸಿ) ಅಧ್ಯಕ್ಷರಾಗಿ ಸೋಮವಾರ ಪುನರಾಯ್ಕೆಯಾಗಿದ್ದಾರೆ.

ಇಲ್ಲಿನ ನಸೀಮ್ ಬಾಗ್‌ನಲ್ಲಿರುವ ಪಕ್ಷದ ಸ್ಥಾಪಕ ಶೇಖ್ ಮೊಹಮ್ಮದ್ ಅಬ್ದುಲ್ಲಾ ಅವರ ಸಮಾಧಿ ಬಳಿ ನಡೆದ ಸಭೆಯಲ್ಲಿ 85 ವರ್ಷದ ನಾಯಕನನ್ನು ಪಕ್ಷದ ಮುಖ್ಯಸ್ಥರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಫಾರೂಕ್ ಅವರು ಇತ್ತೀಚೆಗೆ ತಮ್ಮ ಆರೋಗ್ಯದ ಕಾರಣದಿಂದಾಗಿ ಹುದ್ದೆಯಿಂದ ಕೆಳಗಿಳಿಯುವ ಇಂಗಿತ ವ್ಯಕ್ತಪಡಿಸಿದ್ದರು.

‘ಲಾಲು ಪ್ರಸಾದ್‌ಗೆ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆ ಯಶಸ್ವಿ’

ಪಟ್ನಾ(ಪಿಟಿಐ): ‘ನಮ್ಮ ತಂದೆ ಲಾಲು ಪ್ರಸಾದ್ ಅವರಿಗೆ ಸಿಂಗಪುರ ಆಸ್ಪತ್ರೆಯಲ್ಲಿ ನಡೆದ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ’ ಎಂದು ಅವರ ಮಗ, ಬಿಹಾರದ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಹೇಳಿದ್ದಾರೆ.

ತಂದೆ ಮತ್ತು ಅವರಿಗೆ ಮೂತ್ರಪಿಂಡ ದಾನ ಮಾಡಿದ ಅಕ್ಕ ರೋಹಿಣಿ ಆಚಾರ್ಯ ಇಬ್ಬರೂ ಆರೋಗ್ಯವಾಗಿದ್ದಾರೆ ಎಂದು ತೇಜಸ್ವಿ ತಿಳಿಸಿದ್ದಾರೆ.

ಮೇವು ಹಗರಣದ ಹಲವು ಪ್ರಕರಣಗಳಲ್ಲಿ ಶಿಕ್ಷೆ ಅನುಭವಿಸುತ್ತಿರುವ ಲಾಲು ಪ್ರಸಾದ್ ಅವರಿಗೆ ಅನಾರೋಗ್ಯದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ನ್ಯಾಯಾಲಯವು ಜಾಮೀನು ನೀಡಿತ್ತು.

ಜೆಡಿಯು ಅಧ್ಯಕ್ಷರಾಗಿ ರಂಜನ್ ಸಿಂಗ್ ಅವಿರೋಧ ಆಯ್ಕೆ

ನವದೆಹಲಿ (ಪಿಟಿಐ): ಜೆಡಿಯು ಅಧ್ಯಕ್ಷ ರಾಜೀವ್ ರಂಜನ್ ಸಿಂಗ್ (ಲಲನ್ ಸಿಂಗ್) ಅವರು ಮತ್ತೊಂದು ಅವಧಿಗೆ ಪಕ್ಷದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಆಪ್ತರಾಗಿರುವ ಸಿಂಗ್ ಅವಿರೋಧವಾಗಿ ಆಯ್ಕೆಯಾದರು ಎಂದು ಜೆಡಿಯು ಪ್ರಧಾನ ಕಾರ್ಯದರ್ಶಿ ಅಫಾಕ್ ಅಹ್ಮದ್ ಖಾನ್ ಹೇಳಿದರು.

ವಿಚಾರಣೆಗೆ ಬೇರೆ ದಿನಾಂಕ ನಿಗದಿಗೆ ಕವಿತಾ ಮನವಿ

ಹೈದರಾಬಾದ್ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಮಂಗಳವಾರ (ಡಿಸೆಂಬರ್ 6) ವಿಚಾರಣೆಗೆ ಹಾಜರಾಗಲು ಆಗುವುದಿಲ್ಲ. ಬೇರೆ ದಿನಾಂಕ ನಿಗದಿಪಡಿಸಿ ಎಂದು ಬಿಆರ್‌ಎಸ್‌ನ ವಿಧಾನ ಪರಿಷತ್ ಸದಸ್ಯೆ ಕೆ. ಕವಿತಾ ಅವರು ಸಿಬಿಐಗೆ ಪತ್ರ ಬರೆದಿದ್ದಾರೆ.

ಅಬಕಾರಿ ನೀತಿ ಅನುಷ್ಠಾನದಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿ ವಿಚಾರಣೆಗೆ ಹಾಜರಾಗುವಂತೆ ಸಿಬಿಐ ಅವರಿಗೆ ನೋಟಿಸ್ ನೀಡಿತ್ತು. ಪೂರ್ವ ನಿರ್ಧರಿತ ಕಾರ್ಯಕ್ರಮಗಳು ಇರುವ ಕಾರಣ ಮಂಗಳವಾರ ವಿಚಾರಣೆಗೆ ಹಾಜರಾಗಲು ಸಾಧ್ಯವಿಲ್ಲ. ಡಿಸೆಂಬರ್ 11ರಿಂದ 15ರ ಒಳಗೆ (ಡಿ.13 ಬಿಟ್ಟು) ಹೈದರಾಬಾದ್‌ನ ತಮ್ಮ ನಿವಾಸದಲ್ಲಿ ವಿಚಾರಣೆಗೆ ಒಳಪಡಲು ಸಿದ್ಧವಿರುವುದಾಗಿ ತಿಳಿಸಿದ್ದಾರೆ.

ಮುಂಬೈ: ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ, ಹಲ್ಲೆ

ಮುಂಬೈ: ಇಲ್ಲಿನ ಕುರ್ಲಾ ಪ್ರದೇಶದಲ್ಲಿ ಮಹಿಳೆಯೊಬ್ಬರ ಮೇಲೆ ಮೂವರು ದುಷ್ಕರ್ಮಿಗಳು ಸಾಮೂಹಿಕ ಅತ್ಯಾಚಾರ ನಡೆಸಿ, ಹರಿತವಾದ ಆಯುಧಗಳಿಂದ ಹಲ್ಲೆ ನಡೆಸಿ, ಸಿಗರೇಟಿನಿಂದ ಸುಟ್ಟ ಘಟನೆ ನಡೆದಿದೆ.

ನ.30ರಂದು ಮಹಿಳೆ ತಮ್ಮ ಮನೆಯಲ್ಲಿ ಮಲಗಿದ್ದಾಗ ನುಗ್ಗಿದ ದುಷ್ಕರ್ಮಿಗಳು ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಮಹಾರಾಷ್ಟ್ರ ರಾಜ್ಯ ಮಹಿಳಾ ಆಯೋಗವು, ಪ್ರಕರಣದ ಶಂಕಿತರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮುಂಬೈ ಪೊಲೀಸ್ ಕಮಿಷನರ್‌ಗೆ ಪತ್ರ ಬರೆದಿದೆ.

ಕ್ರಿಕೆಟ್ ಟೆಸ್ಟ್: ಇಂಗ್ಲೆಂಡ್‌ಗೆ ಗೆಲುವು

ರಾವಲ್ಪಿಂಡಿ (ಎಎಫ್‌ಪಿ): ಹಲವು ದಾಖಲೆಗಳಿಗೆ ಕಾರಣವಾದ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಪಾಕಿಸ್ತಾನದ ವಿರುದ್ಧ 74 ರನ್‌ಗಳಿಂದ ಗೆದ್ದಿತು.

ರಾವಲ್ಪಿಂಡಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗೆಲುವಿಗೆ 343 ರನ್‌ಗಳ ಗುರಿ ಪಡೆದಿದ್ದ ಪಾಕಿಸ್ತಾನ, ಅಂತಿಮ ದಿನವಾದ ಸೋಮವಾರ 96.3 ಓವರ್‌ಗಳಲ್ಲಿ 268 ರನ್‌ಗಳಿಗೆ ಆಲೌಟಾಯಿತು.

ತಲಾ ನಾಲ್ಕು ವಿಕೆಟ್ ಪಡೆದ ಒಲೀ ರಾಬಿನ್ಸನ್ ಮತ್ತು ಜೇಮ್ಸ್ ಆ್ಯಂಡರ್ಸನ್ ಅವರು ಇಂಗ್ಲೆಂಡ್ ತಂಡಕ್ಕೆ ಸ್ಮರಣೀಯ ಗೆಲುವು ತಂದುಕೊಟ್ಟರು.

2 ವಿಕೆಟ್‌ಗಳಿಗೆ 80ರನ್‌ಗಳಿಂದ ಆಟ ಮುಂದುವರಿಸಿದ ಪಾಕಿಸ್ತಾನ ಮೊದಲ ಎರಡು ಅವಧಿಗಳಲ್ಲಿ ದಿಟ್ಟ ಹೋರಾಟ ನಡೆಸಿ ಅಚ್ಚರಿಯ ಗೆಲುವಿನ ನಿರೀಕ್ಷೆ ಮೂಡಿಸಿತ್ತು.

ಚಹಾ ವಿರಾಮದ ವೇಳೆಗೆ ಆತಿಥೇಯ ತಂಡ 5 ವಿಕೆಟ್‌ಗಳಿಗೆ 257 ರನ್ ಕಲೆಹಾಕಿತ್ತು. ಅಂತಿಮ ಅವಧಿಯಲ್ಲಿ ಐದು ವಿಕೆಟ್‌ಗಳಿಂದ 86 ರನ್ ಗಳಿಸಬೇಕಿತ್ತು. ಆ್ಯಂಡರ್ಸನ್ ಮತ್ತು ರಾಬಿನ್ಸನ್ ಅವರು ಮೊನಚಾದ ದಾಳಿ ನಡೆಸಿ ಪಾಕ್ ಗೆಲುವಿನ ಕನಸನ್ನು ನುಚ್ಚುನೂರು ಮಾಡಿದರು.

ಮೂರು ಪಂದ್ಯಗಳ ಸರಣಿಯಲ್ಲಿ ಇಂಗ್ಲೆಂಡ್ 1–0 ರಲ್ಲಿ ಮುನ್ನಡೆ ಗಳಿಸಿದೆ. ಎರಡನೇ ಟೆಸ್ಟ್ ಮುಲ್ತಾನ್‌ನಲ್ಲಿ ಡಿ.9 ರಿಂದ 13ರ ವರೆಗೆ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಇಂಗ್ಲೆಂಡ್ 657, ಪಾಕಿಸ್ತಾನ: 579. ಎರಡನೇ ಇನಿಂಗ್ಸ್: ಇಂಗ್ಲೆಂಡ್: 35.5 ಓವರ್‌ಗಳಲ್ಲಿ 7ಕ್ಕೆ264 ಡಿಕ್ಲೇರ್ಡ್, ಪಾಕಿಸ್ತಾನ 96.3 ಓವರ್‌ಗಳಲ್ಲಿ 268 (ಇಮಾಮ್ ಉಲ್ ಹಕ್ 48, ಸೌದ್ ಶಕೀಲ್ 76,ಮೊಹಮ್ಮದ್ ರಿಜ್ವಾನ್ 46, ಆಘಾ ಸಲ್ಮಾನ್ 30, ಒಲೀ ರಾಬಿನ್ಸನ್ 50ಕ್ಕೆ 4, ಜೇಮ್ಸ್ ಆ್ಯಂಡರ್ಸನ್ 36ಕ್ಕೆ 4) ಫಲಿತಾಂಶ: ಇಂಗ್ಲೆಂಡ್‌ಗೆ 74 ರನ್‌ಗಳ ಗೆಲುವು

ಇಂಗ್ಲೆಂಡ್ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ಕಬಡ್ಡಿ: ಪ್ಲೇ ಆಫ್‌ಗೆ ಪುಣೇರಿ

ಹೈದರಾಬಾದ್ (ಪಿಟಿಐ): ಪುಣೇರಿ ಪಲ್ಟನ್ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವನ್ನು 44–30 ಪಾಯಿಂಟ್ಸ್‌ಗಳಿಂದ ಮಣಿಸಿತು.

ಗಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಆಕಾಶ್ ಶಿಂಧೆ (13 ಪಾಯಿಂಟ್ಸ್) ಮತ್ತು ಮೊಹಮ್ಮದ್ ನಬಿ ಭಕ್ಷ್ (9 ಪಾಯಿಂಟ್ಸ್) ಅವರು ಪಲ್ಟನ್ ತಂಡದ ಗೆಲುವಿಗೆ ಕಾರಣರಾದರು.

ಪ್ರಥಮಾರ್ಧ ಕೊನೆಗೊಂಡಾಗ ಪುಣೆಯ ತಂಡ 19–10 ರಲ್ಲಿ ಮುನ್ನಡೆ ಗಳಿಸಿತ್ತು. ಪಟ್ನಾ ತಂಡದ ಸಚಿನ್ 10 ಪಾಯಿಂಟ್ಸ್ ತಂದಿತ್ತರು.

ದಿನದ 2ನೇ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 44–30 ರಲ್ಲಿ ಹರಿಯಾಣ ಸ್ಟೀಲರ್ಸ್ ತಂಡವನ್ನು ಸೋಲಿಸಿತು. ವಿರಾಮದ ವೇಳೆಗೆ 21–15 ರಲ್ಲಿ ಮೇಲುಗೈ ಸಾಧಿಸಿದ್ದ ಪ್ಯಾಂಥರ್ಸ್ ಪರ ಅಜಿತ್ ಅವರು 13 ಪಾಯಿಂಟ್ಸ್ ಗಳಿಸಿದರು.

ಪ್ಲೇ ಆಫ್‌ಗೆ ಅರ್ಹತೆ: 21 ಪಂದ್ಯಗಳಿಂದ 79 ಪಾಯಿಂಟ್ಸ್ ಕಲೆಹಾಕಿರುವ ಪಲ್ಟನ್, ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನ ಗಳಿಸಿ, ಪ್ಲೇ ಆಫ್‌ಗೆ ಅರ್ಹತೆ ಗಳಿಸಿದೆ. ಮೊದಲ ಸ್ಥಾನದಲ್ಲಿರುವ ಜೈಪುರ ಪಿಂಕ್ ಪ್ಯಾಂಥರ್ಸ್, ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿರುವ ಬೆಂಗಳೂರು ಬುಲ್ಸ್ ಮತ್ತು ಯು.ಪಿ. ಯೋಧಾಸ್ ತಂಡಗಳೂ ಪ್ಲೇ ಆಫ್‌ಗೆ ಅರ್ಹತೆ ಪಡೆದುಕೊಂಡಿವೆ.

ಇಂದಿನ ಪಂದ್ಯಗಳು: ಯು ಮುಂಬಾ– ದಬಾಂಗ್ ಡೆಲ್ಲಿ. ಗುಜರಾತ್ ಜೈಂಟ್ಸ್– ತೆಲುಗು ಟೈಟನ್ಸ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಜೈಪುರ	21	15	6	0	79
ಪುಣೇರಿ	21	14	5	2	79
ಬೆಂಗಳೂರು	20	12	7	1	68
ಯುಪಿ	20	11	7	2	66
ತಲೈವಾಸ್	20	9	7	4	61
ಡೆಲ್ಲಿ	20	9	10	1	55

ಇಂಗ್ಲೆಂಡ್‌ನ ಜೋರ್ಡನ್ ಹ್ಯಾಂಡರ್ಸನ್ (ಎಡ) ಅವರು ಜೂಡ್ ಬೆಲಿಂಗ್‌ಹ್ಯಾಂ ಜತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಇಂಗ್ಲೆಂಡ್‌ಗೆ ಗೆಲುವು: ಕ್ವಾರ್ಟರ್ ಫೈನಲ್‌ನಲ್ಲಿ ಫ್ರಾನ್ಸ್ ಎದುರಾಳಿ

ಹ್ಯಾರಿ ಕೇನ್ ಬಳಗಕ್ಕೆ ಸಾಟಿಯಾಗದ ಸೆನೆಗಲ್

ಅಲ್‌ಖೋರ್, ಕತಾರ್ (ರಾಯಿಟರ್ಸ್): ಸೆನೆಗಲ್ ತಂಡದ ಗೋಲ್‌ಪೋಸ್ಟ್ ಗುರಿಯಾಗಿಸಿ ದಂಡೆತ್ತಿ ಹೋದ ಇಂಗ್ಲೆಂಡ್ ತಂಡದವರು ಭರ್ಜರಿ ಗೆಲುವಿನ ಮೂಲಕ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಅಲ್ ಬೈತ್ ಕ್ರೀಡಾಂಗಣದಲ್ಲಿ ಭಾನುವಾರ ತಡ ರಾತ್ರಿ ನಡೆದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ 3–0 ಗೋಲುಗಳಿಂದ ಗೆದ್ದಿತು. ಜೋರ್ಡನ್ ಹ್ಯಾಂಡರ್ಸನ್, ನಾಯಕ ಹ್ಯಾರಿ ಕೇನ್ ಮತ್ತು ಬುಕಾಯೊ ಸಾಕಾ ಅವರು ಗೋಲು ಗಳಿಸಿ ಗೆಲುವಿಗೆ ಕಾರಣರಾದರು.

ಭಾನುವಾರ ನಡೆಯಲಿರುವ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಹಾಲಿ ಚಾಂಪಿಯನ್ ಫ್ರಾನ್ಸ್ ತಂಡವನ್ನು ಎದುರಿಸಲಿದ್ದು, ಜಿದ್ದಾಜಿದ್ದಿನ ಹೋರಾಟ ನಿರೀಕ್ಷಿಸಲಾಗಿದೆ.

ಗೋಲು ವಿವರ

ಇಂಗ್ಲೆಂಡ್–3
ಜೋರ್ಡನ್ ಹ್ಯಾಂಡರ್ಸನ್ (38ನೇ ನಿ.)
ಹ್ಯಾರಿ ಕೇನ್ (45+3 ನೇ. ನಿ.)
ಬುಕಾಯೊ ಸಾಕಾ (57ನೇ ನಿ.)

ಸೆನೆಗಲ್–0

ಇದೇ ಮೊದಲ ಬಾರಿ ಸೆನೆಗಲ್ ತಂಡವನ್ನು ಎದುರಿಸಿದ ಇಂಗ್ಲೆಂಡ್, ಅಮೋಘ ಆಟವಾಡಿತು. ಆಟದ ಮೇಲೆ ನಿಯಂತ್ರಣ ಸಾಧಿಸಲು ಇಂಗ್ಲೆಂಡ್ ಕೆಲವು ನಿಮಿಷಗಳನ್ನು ತೆಗೆದುಕೊಂಡಿತಾದರೂ, ಬಳಿಕ ಪೂರ್ಣ ಪಾರಮ್ಯ ಮೆರೆಯಿತು.

ಸೆನೆಗಲ್ ಆರಂಭದಲ್ಲಿ ಗೋಲು ಗಳಿಸುವ ಒಂದೆರಡು ಉತ್ತಮ ಪ್ರಯತ್ನಗಳನ್ನು ನಡೆಸಿದರೂ ಯಶಸ್ಸು ದೊರೆಯಲಿಲ್ಲ. ಬೊಲಾಯೆ ದಿಯಾ ಅವರು ಗುರಿಯತ್ತ ಒದ್ದ ಚೆಂಡನ್ನು ಗೋಲ್‌ಕೀಪರ್ ಜೋರ್ಡನ್ ಪಿಕ್‌ಫೋರ್ಡ್ ಸೊಗಸಾಗಿ ತಡೆದರು.

ಸತತ ಪ್ರಯತ್ನದ ಬಳಿಕ ಇಂಗ್ಲೆಂಡ್ 38ನೇ ನಿಮಿಷದಲ್ಲಿ ಮುನ್ನಡೆ ಗಳಿಸಿತು. ಫಿಲ್ ಫಾಡೆನ್ ನೀಡಿದ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡ ಜೂಡ್ ಬೆಲಿಂಗ್‌ಹ್ಯಾಂ, ಅದನ್ನು ಜೋರ್ಡನ್ ಹ್ಯಾಂಡರ್ಸನ್ ಅವರತ್ತ ಕ್ರಾಸ್ ಮಾಡಿದರು. ಗೋಲ್ ಪೋಸ್ಟ್ ಬಳಿಯಲ್ಲೇ ಇದ್ದ ಜೋರ್ಡನ್ ಗುರಿ ಸೇರಿಸಿದರು.



ಹ್ಯಾರಿ ಕೇನ್

ಮೊದಲಾರ್ಧದ ಇಂಜುರಿ ಅವಧಿಯಲ್ಲಿ ಹ್ಯಾರಿ ಕೇನ್ ಗೋಲು ಗಳಿಸಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. ಟೂರ್ನಿಯಲ್ಲಿ ಅವರು ಗಳಿಸಿದ ಮೊದಲ ಗೋಲು ಇದು. ಇಂಗ್ಲೆಂಡ್ ಪರ ಅತ್ಯಧಿಕ ಗೋಲು ಗಳಿಸಿರುವ ವೇಯ್ನ್ ರೂನಿ (53 ಗೋಲು) ದಾಖಲೆಯನ್ನು ಸರಿಗಟ್ಟಲು ಕೇನ್ ಅವರಿಗೆ ಇನ್ನೊಂದು ಗೋಲು ಬೇಕು.

ಎರಡು ಗೋಲುಗಳ ಮುನ್ನಡೆ ಸಾಧಿಸಿದ ಇಂಗ್ಲೆಂಡ್ ಎರಡನೇ ಅವಧಿಯಲ್ಲಿ ಆತ್ಮವಿಶ್ವಾಸದೊಂದಿಗೆ ಆಡಿತು. ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದರೂ, ಆಗಿಂದಾಗ್ಗೆ ಗೋಲು ಗಳಿಸುವ ಪ್ರಯತ್ನವನ್ನೂ ನಡೆಸಿತು. 57ನೇ ನಿಮಿಷದಲ್ಲಿ ಬುಕಾಯೊ ಅವರು ಗೋಲು ಗಳಿಸಿ, ಸೆನೆಗಲ್ ತಂಡದ ಮರುಹೋರಾಟದ ಎಲ್ಲ ಸಾಧ್ಯತೆಗಳನ್ನೂ ದೂರ ಮಾಡಿದರು.

ಮನೆ ದರೋಡೆ: ತವರಿಗೆ ಸ್ಟರ್ಲಿಂಗ್

ದೋಹಾ (ಎಪಿ): ಇಂಗ್ಲೆಂಡ್‌ನ ಫಾರ್ವರ್ಡ್ ಆಟಗಾರ ರಹೀಂ ಸ್ಟರ್ಲಿಂಗ್ ಅವರು ತಂಡವನ್ನು ತೊರೆದು ತವರಿಗೆ ವಾಪಸಾಗಿದ್ದಾರೆ. ಶನಿವಾರ ರಾತ್ರಿ ಸರೆಯಲ್ಲಿರುವ ಅವರ ಮನೆಗೆ ದರೋಡೆಕೋರರು ನುಗ್ಗಿದ ಘಟನೆ ನಡೆದಿತ್ತು. ಈ ವೇಳೆ ಪತ್ನಿ ಮತ್ತು ಮೂವರು ಮಕ್ಕಳು ಮನೆಯಲ್ಲಿದ್ದರು. ಸಂಕಷ್ಟದ ಸಮಯದಲ್ಲಿ ಕುಟುಂಬ ಸದಸ್ಯರ ಜತೆ ಇರುವ ಉದ್ದೇಶದಿಂದ ಅವರು ತವರಿಗೆ ಮರಳಿದ್ದಾರೆ. ಇದರಿಂದ ಸೆನೆಗಲ್ ವಿರುದ್ಧದ ಪಂದ್ಯದಲ್ಲಿ ಆಡಲಿಲ್ಲ.

ಶೂಟೌಟ್‌ನಲ್ಲಿ ಜಪಾನ್ ತಂಡ 'ಔಟ್'

ಕ್ವಾರ್ಟರ್‌ಗೆ ಕ್ರೊವೇಷ್ಯಾ

ದೋಹಾ (ಎಎಫ್‌ಪಿ): ಪೆನಾಲ್ಟಿ ಶೂಟೌಟ್‌ನಲ್ಲಿ ಜಪಾನ್ ತಂಡವನ್ನು ಮಣಿಸಿದ ಕ್ರೊವೇಷ್ಯಾ ತಂಡವು ಫಿಫಾ ವಿಶ್ವಕಪ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿತು.

ಸೋಮವಾರ ಅಲ್ ಜನೂಬ್ ಕ್ರೀಡಾಂಗಣದಲ್ಲಿ ನಡೆದ 16ರ ಘಟ್ಟದ ಹಣಾಹಣಿಯಲ್ಲಿ ಕ್ರೊವೇಷ್ಯಾ 3–1ರಿಂದ ಜಪಾನ್ ತಂಡದ ವಿರುದ್ಧ ಗೆದ್ದಿತು.

ನಿಗದಿತ ಮತ್ತು ಹೆಚ್ಚುವರಿ ಅವಧಿಯಲ್ಲಿ ಉಭಯ ತಂಡಗಳು 1–1ರಿಂದ ಸಮಬಲ ಸಾಧಿಸಿದ್ದವು. ಜಪಾನ್ ತಂಡಕ್ಕಾಗಿ ಡೈಜೆನ್ ಮಯಡಾ 43ನೇ ನಿಮಿಷ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಕ್ರೊವೇಷ್ಯಾದ ಇವಾನ್ ಪೆರಿಸಿಚ್ 55ನೇ ನಿಮಿಷದಲ್ಲಿ ಹೆಡರ್ ಮೂಲಕ ಸಮಬಲದ ಗೋಲು ದಾಖಲಿಸಿದರು.

ಕ್ರೊವೇಷ್ಯಾ ಆಟಗಾರರ ಗೆಲುವಿನ ಸಂಭ್ರಮ– ಎಎಫ್‌ಪಿ ಚಿತ್ರ

ಶೂಟೌಟ್‌ನಲ್ಲಿ ಜಪಾನ್‌ನ ತಕುಮಿ ಮಿನಾಮಿನೊ, ಕವರೊ ಮಿಟೊಮಾ ಮತ್ತು ಮಯಾ ಯೋಶಿದಾ ಗೋಲುಗಳನ್ನು ತಡೆದ ಕ್ರೊವೇಷ್ಯಾದ ಗೋಲ್‌ಕೀಪರ್ ಡಾಮ್ನಿಕ್ ಕಿವಾಕೊವಿಚ್ ಗೆಲುವಿನ ರೂವಾರಿಯಾದರು. ಶೂಟೌಟ್‌ನಲ್ಲಿ ಕ್ರೊವೇಷ್ಯಾದ ನಿಕೊಲಾ ಲಾಸಿಚ್, ಮಾರ್ಸೆಲೊ ಬ್ರೊಜೊವಿಚ್ ಮತ್ತು ಮರಿಯೊ ಪೆಸಲಿಚ್ ಚೆಂಡನ್ನು ಗುರಿ ಸೇರಿಸಿದರು. ಜಪಾನ್ ಪರ ತಕುಮಾ ಅಸಾನೊ ಮಾತ್ರ ಯಶಸ್ವಿಯಾದರು. ಇದೇ ಮೊದಲ ಬಾರಿ ಕ್ವಾರ್ಟರ್‌ಫೈನಲ್ ಪ್ರವೇಶಿಸುವ ಜಪಾನ್ ಆಸೆ ಈಡೇರಲಿಲ್ಲ.

ಕ್ರೊವೇಷ್ಯಾ ತಂಡವು ಎಂಟರಘಟ್ಟದಲ್ಲಿ ಬ್ರೆಜಿಲ್ ಅಥವಾ ದಕ್ಷಿಣ ಕೊರಿಯಾವನ್ನು ಎದುರಿಸಲಿದೆ.

ಸ್ಪೇನ್– ಮೊರೊಕ್ಕೊ ಪೈಪೋಟಿ

ದೋಹಾ (ರಾಯಿಟರ್ಸ್): ಬಲಿಷ್ಠ ಬೆಲ್ಜಿಯಂ ತಂಡವನ್ನು ಮಣಿಸಿ ಆತ್ಮವಿಶ್ವಾಸದಲ್ಲಿರುವ ಮೊರೊಕ್ಕೊ, ವಿಶ್ವಕಪ್ ಟೂರ್ನಿಯ 16ರ ಘಟ್ಟದ ಪಂದ್ಯದಲ್ಲಿ ಮಂಗಳವಾರ ಸ್ಪೇನ್ ಸವಾಲಿಗೆ ಸಜ್ಜಾಗಿದೆ.

ಗುಂಪುಹಂತದಲ್ಲಿ ಬೆಲ್ಜಿಯಂ ಮತ್ತು ಕೆನಡಾ ತಂಡಗಳಿಗೆ ಆಘಾತ ನೀಡಿದ್ದ ಮೊರೊಕ್ಕೊ, ಕ್ರೊವೇಷ್ಯಾದೊಂದಿಗೆ ಡ್ರಾ ಸಾಧಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದೊಂದಿಗೆ ಪ್ರೀಕ್ವಾರ್ಟರ್ ಪ್ರವೇಶಿಸಿದೆ. 1986ರ ನಂತರ ಇದೇ ಮೊದಲ ಬಾರಿಗೆ ಮೊರೊಕ್ಕೊ 16ರ ಘಟ್ಟ ತಲುಪಿದೆ.

ಎಜುಕೇಶನ್ ಸಿಟಿ ಕ್ರೀಡಾಂಗಣದಲ್ಲಿ ಮೊರೊಕ್ಕೊ– ಸ್ಪೇನ್ ಪೈಪೋಟಿ ನಡೆಯಲಿದೆ.

'ವಿಶ್ವದ ಪ್ರಮುಖ ತಂಡಗಳಲ್ಲಿ ಒಂದೆನಿಸಿರುವ ಸ್ಪೇನ್ ವಿರುದ್ಧ ಆಡುವುದು ದೊಡ್ಡ ಸವಾಲು. ನಮ್ಮದೇ ಆದ ತಂತ್ರಗಳಿವೆ. ಸ್ಪೇನ್ ಎದುರು ಗೆದ್ದರೆ ಅದೊಂದು ದೊಡ್ಡ ಅಚ್ಚರಿ' ಎಂದು ಮೊರೊಕ್ಕೊ ತಂಡದ ಮುಖ್ಯ ಕೋಚ್ ವಾಲಿದ್ ರೆಗ್ರಾಗಿ ಹೇಳಿದ್ದಾರೆ.

2010ರ ಆವೃತ್ತಿಯಲ್ಲಿ ಸ್ಪೇನ್ ತಂಡವು 1–0ಯಿಂದ ನೆದರ್ಲೆಂಡ್ಸ್ ಎದುರು ಗೆದ್ದು ಚಾಂಪಿಯನ್ ಆಗಿತ್ತು.

ಫಿಫಾ ವಿಶ್ವ ರ‍್ಯಾಂಕಿಂಗ್

ಸ್ಪೇನ್	ಮೊರೊಕ್ಕೊ
7	22

ಇಂದಿನ ಪಂದ್ಯ
(ಪ್ರೀಕ್ವಾರ್ಟರ್ ಫೈನಲ್)

Vs	ಮೊರೊಕ್ಕೊ – ಸ್ಪೇನ್	ರಾತ್ರಿ 8.30
Vs	ಪೋರ್ಚುಗಲ್ – ಸ್ವಿಟ್ಜರ್ಲೆಂಡ್	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನಿಮಾ ಆ್ಯಪ್

ಇಲ್ಲಿಯೂ ಟ್ರೋಫಿ ಜಯಿಸುವ ನೆಚ್ಚಿನ ತಂಡಗಳಲ್ಲಿ ಒಂದೆನಿಸಿದ್ದು, ಉಭಯ ತಂಡಗಳ ಮಧ್ಯೆ ತೀವ್ರ ಪೈಪೋಟಿ ನಡೆಯಬಹುದು.

ಸ್ಪೇನ್ ಮತ್ತು ಮೊರೊಕ್ಕೊ ಮೂರು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಮುಖಾಮುಖಿಯಾಗಿದ್ದು, ಸ್ಪೇನ್ ಎರಡರಲ್ಲಿ ಜಯ ಸಾಧಿಸಿದೆ. ಒಂದು ಪಂದ್ಯ ಡ್ರಾ ಆಗಿದೆ.

ಕತಾರ್ ಕ್ರೀಡಾಂಗಣದಲ್ಲಿ ರಾರಾಜಿಸಿದ ಪುನೀತ್ ಫೋಟೊ

ಬೆಂಗಳೂರು: ಫಿಫಾ ವಿಶ್ವಕಪ್ ನಡೆಯುತ್ತಿರುವ ಕತಾರ್‌ನ ಕ್ರೀಡಾಂಗಣದಲ್ಲಿ ಕರ್ನಾಟಕದ ಫುಟ್‌ಬಾಲ್ ಪ್ರೇಮಿಯೊಬ್ಬರು ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಫೋಟೊ ಪ್ರದರ್ಶಿಸಿ ಅಭಿಮಾನ ಮೆರೆದಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರು ತಾಲ್ಲೂಕಿನ ಕಬಕದ ನಿವಾಸಿ ಖಾಲಿದ್ ಎಂಬವರು 'ಸ್ಟೇಡಿಯಂ 974'ನಲ್ಲಿ ಶನಿವಾರ ನಡೆದ ಸರ್ಬಿಯಾ– ಸ್ವಿಟ್ಜರ್ಲೆಂಡ್ ನಡುವಣ ಕೊನೆಯ ಲೀಗ್ ಪಂದ್ಯದಲ್ಲಿ ಪುನೀತ್ ಚಿತ್ರ ಪ್ರದರ್ಶಿಸಿದ್ದಾರೆ.

'ನಾನು ಪುನೀತ್ ರಾಜ್‌ಕುಮಾರ್ ಅಭಿಮಾನಿ. ಅವರ ಸಮಾಜಮುಖಿ ಕೆಲಸಗಳಿಂದ ಪ್ರಭಾವಿತನಾಗಿದ್ದೇನೆ. ಹೀಗಾಗಿ ವಿಶ್ವಕಪ್ ಟೂರ್ನಿಯ ಪಂದ್ಯದ ವೇಳೆ ಕ್ರೀಡಾಂಗಣದಲ್ಲಿ ಅವರ ಫೋಟೊ ಪ್ರದರ್ಶಿಸಿದೆ' ಎಂದು ಕತಾರ್‌ನಲ್ಲಿ ಉದ್ಯೋಗಿಯಾಗಿರುವ ಖಾಲಿದ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಪುನೀತ್ ರಾಜ್‌ಕುಮಾರ್ ಅವರ ಫೋಟೊ ಪ್ರದರ್ಶಿಸಿದ ಖಾಲಿದ್

ಪೋರ್ಚುಗಲ್‌ಗೆ ಸ್ವಿಟ್ಜರ್ಲೆಂಡ್ ಸವಾಲು

ದೋಹಾ (ಎಪಿ): ಪೋರ್ಚುಗಲ್ ತಂಡವನ್ನು ವಿಶ್ವ ಚಾಂಪಿಯನ್ ಆಗಿಸುವ ಕನಸು ಹೊತ್ತಿರುವ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಮಂಗಳವಾರ ಸ್ವಿಟ್ಜರ್ಲೆಂಡ್ ತಂಡಕ್ಕೆ ಸವಾಲಾಗುವ ನಿರೀಕ್ಷೆಯಿದೆ.

ಇಲ್ಲಿಯ ಲುಸೈಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಸ್ವಿಟ್ಜರ್ಲೆಂಡ್– ಪೋರ್ಚುಗಲ್ ಮುಖಾಮುಖಿಯಾಗಲಿವೆ.

ಐದು ವಿಶ್ವಕಪ್ ಟೂರ್ನಿಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರ ಎಂಬ ದಾಖಲೆ ಬರೆದಿರುವ ರೊನಾಲ್ಡೊ, ಈ ಪಂದ್ಯದಲ್ಲಿ ಮೋಡಿ ಮಾಡುವ ನಿರೀಕ್ಷೆಯಿದೆ.

ದಕ್ಷಿಣ ಕೊರಿಯಾ ಎದುರಿನ ಪಂದ್ಯಕ್ಕೆ ವಿಶ್ರಾಂತಿ ಪಡೆದಿದ್ದ ಪೋರ್ಚುಗಲ್‌ನ ಪ್ರಮುಖ ಆಟಗಾರರಾದ ಬ್ರೂನೊ ಫರ್ನಾಂಡಿಸ್, ಬರ್ನಾರ್ಡೊ ಸಿಲ್ವಾ ಮತ್ತು ರುಬೆನ್ ಡಿಯಾಸ್ ಈ ಹಣಾಹಣಿಗೆ ಸಜ್ಜಾಗಿದ್ದಾರೆ. 2006ರ ಆವೃತ್ತಿಯಲ್ಲಿ ಪೋರ್ಚುಗಲ್ ಸೆಮಿಫೈನಲ್ ತಲುಪಿತ್ತು. ಅದನ್ನು ಹೊರತುಪಡಿಸಿ ಯಾವುದೇ ಆವೃತ್ತಿಗಳಲ್ಲಿ ತಂಡವು 16ರ ಘಟ್ಟದ ತಡೆ ದಾಟಿಲ್ಲ. ಹೀಗಾಗಿ ಈ ಟೂರ್ನಿಯಲ್ಲಿ ಮುನ್ನಡೆಯುವ ಛಲದಲ್ಲಿದೆ.

ಮುಖಾಮುಖಿ ಪಂದ್ಯಗಳು	25
ಸ್ವಿಟ್ಜರ್ಲೆಂಡ್ ಗೆಲುವು	11
ಪೋರ್ಚುಗಲ್ ಜಯ	9
ಡ್ರಾ	5
ವಿಶ್ವ ರ‍್ಯಾಂಕಿಂಗ್	
ಪೋರ್ಚುಗಲ್	9
ಸ್ವಿಟ್ಜರ್ಲೆಂಡ್	15

ರೊನಾಲ್ಡೊ

ಸ್ವಿಟ್ಜರ್ಲೆಂಡ್ ತಂಡಕ್ಕೆ ಬ್ರೀಲ್ ಎಂಬೊಲೊ ಅವರ ಬಲವಿದೆ. ಗುಂಪು ಹಂತದಲ್ಲಿ ಎರಡು ಗೋಲು ಗಳಿಸಿರುವ ಅವರು ತಂಡದ ಪ್ರಮುಖ ಆಟಗಾರನಾಗಿ ಹೊರಹೊಮ್ಮಿದ್ದಾರೆ. ಶಾಕಿರಿ ಕೂಡ ಮಿಂಚಬಲ್ಲರು. 1954ರ ಬಳಿಕ ಎಂಟರಘಟ್ಟ ತಲುಪುವ ತವಕದಲ್ಲಿ ಸ್ವಿಸ್ ತಂಡವಿದೆ. ಹೀಗಾಗಿ ಉಭಯ ತಂಡಗಳ ಮಧ್ಯೆ ಜಿದ್ದಾಜಿದ್ದಿ ಪೈಪೋಟಿ ನಿರೀಕ್ಷಿಸಬಹುದು.

ಧನುಷ್ ಮಿಂಚು: ಕರ್ನಾಟಕಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಮೈಸೂರು: ಧನುಷ್ ಗೌಡ ಮಿಂಚಿನ ಬೌಲಿಂಗ್ ದಾಳಿಯ (33ಕ್ಕೆ 5) ಬಲದಿಂದ ಕರ್ನಾಟಕ ತಂಡದವರು ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಜಮ್ಮು ಮತ್ತು ಕಾಶ್ಮೀರದ ವಿರುದ್ಧ ಇನಿಂಗ್ಸ್ ಹಾಗೂ 145 ರನ್‌ಗಳಿಂದ ಗೆದ್ದರು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಮೂರನೇ ದಿನವಾದ ಸೋಮವಾರ ಭೋಜನ ವಿರಾಮಕ್ಕೂ ಮೊದಲೇ ಜಮ್ಮು ಮತ್ತು ಕಾಶ್ಮೀರ ತಂಡ 44.2 ಓವರ್‌ಗಳಲ್ಲಿ 149 ರನ್‌ಗೆ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಜಮ್ಮು ಮತ್ತು ಕಾಶ್ಮೀರ 86; ಕೆಎಸ್‌ಸಿಎ: 105 ಓವರ್‌ಗಳಲ್ಲಿ 380. ಎರಡನೇ ಇನಿಂಗ್ಸ್: ಜಮ್ಮು ಮತ್ತು ಕಾಶ್ಮೀರ 149 (ರಣ್‌ಜೋತ್ ಸಿಂಗ್ 43, ಆರ್.ಧನುಷ್ ಗೌಡ 33ಕ್ಕೆ 5, ಮೊಹಸಿನ್ ಖಾನ್ 18ಕ್ಕೆ 2).

ಸೇಂಟ್ ಪಾಲ್ಸ್ ಸ್ಕೂಲ್‌ನ ಎಂ.ಅಜಯ್ ಅವರು ರವಿಶಂಕರ್ ವಿದ್ಯಾಮಂದಿರ ತಂಡದ ಅಭಿಜಿತ್ ಆವರನ್ನು ಔಟ್ ಮಾಡಲು ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ರವಿಶಂಕರ ವಿದ್ಯಾಮಂದಿರಕ್ಕೆ ಗೆಲುವು

ಬೆಂಗಳೂರು: ರವಿಶಂಕರ ವಿದ್ಯಾ ಮಂದಿರ ತಂಡ ಇಲ್ಲಿ ಆರಂಭವಾದ ಸಿಬಿಎಸ್‌ಸಿ ಶಾಲೆಗಳ ಕ್ಲಸ್ಟರ್–8 ಕೊಕ್ಕೊ ಟೂರ್ನಿಯಲ್ಲಿ ಜಯ ಸಾಧಿಸಿತು.

ಚಂದ್ರಾ ಲೇಔಟ್‌ನ ಸಿದ್ದಗಂಗಾ ಹಿರಿಯ ಪ್ರಾಥಮಿಕ ಶಾಲೆ ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ರವಿಶಂಕರ ವಿದ್ಯಾಮಂದಿರ ತಂಡ 4 ಪಾಯಿಂಟ್ಸ್‌ನಿಂದ ಸೇಂಟ್ ಪಾಲ್ಸ್ ಸ್ಕೂಲ್ ತಂಡವನ್ನು ಮಣಿಸಿತು.

ಬಾಲಕರ ವಿಭಾಗದ ಇನ್ನೊಂದು ಪಂದ್ಯದಲ್ಲಿ ಮಂಗಳೂರಿನ ಭುವನ ಜ್ಯೋತಿ ಸ್ಕೂಲ್ 6 ಪಾಯಿಂಟ್ಸ್‌ಗಳಿಂದ ಹಾಸನ ಪಬ್ಲಿಕ್ ಶಾಲೆ ವಿರುದ್ಧ ಗೆದ್ದರೆ, ಬಾಲಕಿಯರ ವಿಭಾಗದಲ್ಲಿ ರವಿಶಂಕರ ವಿದ್ಯಾಮಂದಿರ 3 ಪಾಯಿಂಟ್ಸ್‌ಗಳಿಂದ ಕೆ.ಕೆ.ಶಿಕ್ಷಣ ಸಂಸ್ಥೆ ವಿರುದ್ಧ ಗೆದ್ದಿತು.

ಬಿಎಂಆರ್‌ಜಿ ಟೈಗರ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಆರ್‌ಜಿ ಟೈಗರ್ಸ್ ತಂಡವು ಕೆನರಾ ಯೂನಿಯನ್ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಕೆನರಾ ಯೂನಿಯನ್ ಬ್ಯಾಡ್ಮಿಂಟನ್ ಲೀಗ್ (ಸಿಯುಬಿಎಲ್) ಮೂರನೇ ಆವೃತ್ತಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ.

ಶನಿವಾರ ಇಲ್ಲಿನ ಪ್ರಕಾಶ್ ಕೋರ್ಟ್‌ನಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಬಿಎಂಆರ್‌ಜಿ ಟೈಗರ್ಸ್ ತಂಡ 3-0 ಅಂತರದಲ್ಲಿ ಕಾರ್ಪ್ ಡೈಮ್ ತಂಡವನ್ನು ಸೋಲಿಸಿತು. ಬಿ.ಆರ್. ಶ್ರೀಧರ ಮಾಲೀಕತ್ವದ ಬಿಎಂಆರ್‌ಜಿ ಟೈಗರ್ಸ್ ತಂಡದ ಶಂತನು ಮತ್ತು ಪ್ರದೀಪ್ ಮೊದಲ ಗೇಮ್‌ನಲ್ಲಿ 21-14, 21-14ರಿಂದ ಕಾರ್ಪ್ ಡೈಮ್‌ನ ವೆಂಕಟ್ ಮತ್ತು ಸಾತ್ವಿಕ್ ಅವರನ್ನು ಸೋಲಿಸಿದರು.

ಎರಡನೇ ಗೇಮ್‌ನಲ್ಲಿ ಗ್ಲೆನ್ ಮತ್ತು ಭಾಸ್ಕರ್ 21-11, 21-15ರಿಂದ ಅಜಿತ್ ಮತ್ತು ದಿನು ಅವರನ್ನು ಮಣಿಸಿದರು. ಮೂರನೇ ಗೇಮ್‌ನಲ್ಲಿ ದಯಾನಂದ್ ಮತ್ತು ಆಯುಷ್ 21-15, 21-18ರಿಂದ ನಿರಂಜನ್ ಮತ್ತು ನರಸಿಂಹನ್ ವಿರುದ್ಧ ಗೆದ್ದರು.

ಪ್ರಶಸ್ತಿಯೊಂದಿಗೆ ಬಿಎಂಆರ್‌ಜಿ ಟೈಗರ್ಸ್ ತಂಡ